ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸ್ಪೀಡೇ ನನ್ನ ಶಕ್ತಿ!
ಮನೆ - ಆಫೀಸ್ ನಿಭಾಯಿಸುವ ಪವರ್ ಇರೋದು ನಮಗೆ ಮಾತ್ರ!

VISHWAVANI TV SPECIAL SUBSCRIBE ಮಾಡಿ
ವಿಶ್ವವಾಣಿ TV SPECIAL | R. ಕನ್ನಡ
ರಿಪಬ್ಲಿಕ್ ಕನ್ನಡ ಸಂಪಾದಕಿ ಶೋಭಾ ಮಳವಳ್ಳಿ
EXCLUSIVE INTERVIEW

ಸೊಂಪಾದ ಪುಟಗಳು

ಓದದವರಿಗೇನ್ ಗೊತ್ತು ಪುಸ್ತಕ ಪಸರಿಸುವ ಪರಿಮಳ!

ಶಿಶಿರಕಾಲ
ಶಿಶಿರ್ ಹೆಗಡೆ 6

ಕಾಡಿನ ನಡುವೆ ಕಟ್ಟಿಕೊಂಡ ಬದುಕು!

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಸೋಲು ಎಂಬುದು ಯಶಸ್ಸಿನ ವಿರುದ್ಧ ಪದವಲ್ಲ. ಅದು ಯಶಸ್ಸಿನ ಭಾಗವೇ. ಸೋಲನ್ನು ಪಕ್ಕಕ್ಕಿಟ್ಟು ಯಶಸ್ಸನ್ನು ನೋಡಬಾರದು. ಯಶಸ್ಸಿನೊಳಗೆ ಸೋಲೂ ಸಹ ಇದೆ ಎಂಬುದನ್ನು ಅರ್ಥ ಮಾಡಿಕೊಂಡರೆ, ಸೋತಾಗ ಬೇಸರವಾಗುವುದಿಲ್ಲ.

ವಕ್ರತುಂಡೋಕ್ತಿ

ಜೀನ್ಸ್ ಕರೆಕ್ಟ್ ಆಗಿ ಫಿಟ್ ಆಗುವ ಒಂದು ಸಮಸ್ಯೆ ಅಂದ್ರೆ, ಅದನ್ನು ಬಿಚ್ಚಬೇಕು ಎಂದು ಅನಿಸದಿರುವುದು.

ಸಮ-ಸಮಾಜದ ನಿರ್ಮಾಣವೇ ಸಲೀಂ ಗುರಿ

ನೂತನ ಡಿಜಿ-ಐಜಿಪಿ ಸಲೀಂ ಅವರ ವಿಶೇಷ ಸಂದರ್ಶನ

40 ಲಕ್ಷ ರು. ರನ್ಯಾ ಕ್ರೆಡಿಟ್ ಕಾರ್ಡ್ ಮೊತ್ತ ಸಿದ್ದಾರ್ಥ ಸಂಸ್ಥೆಯಿಂದ ಪಾವತಿ?

ಇಡಿ ದಾಳಿ ವಿರುದ್ಧ ಕಾಂಗ್ರೆಸ್ ನಾಯಕರ ಆಕ್ರೋಶ, ಡಿಸಿಎಂ, ಸಚಿವರಿಂದ ಭೇಟಿ

ಪರಂ ಪರ ನಿಂತ ಕೈ ಪಡೆ

ಬೆಂಗಳೂರು: ಗೃಹ ಸಚಿವ ಡಾ.ಜಿ. ಪರಮೇಶ್ವರ ಒಡೆತನ ಸಿದ್ದಾರ್ಥ ಶಿಕ್ಷಣ ಸಂಸ್ಥೆ ಮೇಲಿನ ಇಡಿ ದಾಳಿ ರಾಜಕೀಯ ತಿರುವು ಪಡೆದಿದ್ದು, ರಾಜ್ಯ ಕಾಂಗ್ರೆಸ್ ನಾಯಕರು ಪರಂ ಬೆಂಬಲಕ್ಕೆ ನಿಂತಿದ್ದು, ದಲಿತ ನಾಯಕನ ಮೇಲೆ ರಾಜಕೀಯ ಪ್ರೇರಿತ ದಾಳಿ ಎಂದು ವಾಗ್ದಾಳಿ ನಡೆಸಿದ್ದಾರೆ.

ಪರಮೇಶ್ವರ ಒಡೆತನದ ಸಂಸ್ಥೆಯ ಮೇಲಿನ ದಾಳಿಯನ್ನು 'ದಲಿತ ನಾಯಕನ' ಮೇಲಿನ ದಾಳಿ ಎಂದು ವ್ಯಾಖ್ಯಾನಿಸಿರುವ ಕಾಂಗ್ರೆಸ್ ನಾಯಕರು, ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಇದರ ಜತೆಜತೆಗೆ ಗೃಹ ಸಚಿವ ಪರಮೇಶ್ವರ ನಿವಾಸಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು, ಶಾಸಕರು ಭೇಟಿ ನೀಡಿ ಬೆಂಬಲಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಪರಮೇಶ್ವರ ಅವರು, ಪ್ರಕರಣದ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ನಾಯಕರು ಪ್ರಕರಣವನ್ನು ರಾಜಕೀಯ ಪ್ರೇರಿತ ಎಂದು ಟೀಕಿಸಿದ್ದಾರೆ. ಆದರೆ ಪರಮೇಶ್ವರ ಅವರು, ಇಡಿ ಅಧಿಕಾರಿಗಳಿಗೆ ಎಲ್ಲ ರೀತಿಯ ಸಹಕಾರ ನೀಡುವಂತೆ ಸೂಚನೆ ನೀಡಲಾಗಿದೆ. ದೇಶದ ಕಾನೂನಿನ ಮೇಲೆ ನಂಬಿಕೆಯಿದೆ. ಸದ್ಯಕ್ಕೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎನ್ನುವ ಮೂಲಕ ಮೌನಕ್ಕೆ ಶರಣರಾಗಿದ್ದಾರೆ.

ತನಿಖೆಗೆ ಸಹಕಾರ

ಇಡಿ ದಾಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ, ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಸಿದ್ದಾರ್ಥ ಶಿಕ್ಷಣ ಸಂಸ್ಥೆಯ ಕಾಲೇಜುಗಳಿಗೆ ಭೇಟಿ ನೀಡಿ ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದು, ಏನೇ ದಾಖಲೆಗಳನ್ನು ಕೇಳಿದರು ಕೊಡುವಂತೆ ಸೂಚಿಸಿದ್ದೇನೆ. ಮೊದಲಿನಿಂದಲೂ ನಾನು ಕಾನೂನಿಗೆ ಗೌರವ ನೀಡುತ್ತ ಬಂದಿರುವವನು. ಈ ದೇಶದ ಕಾನೂನು ಎಲ್ಲರಿಗೂ ಒಂದೇ. ದೊಡ್ಡವರಿಗೊಂದು ಕಾನೂನು, ಸಣ್ಣವರಿಗೊಂದು ರೀತಿಯ ಕಾನೂನು ಮಾಡಿಲ್ಲ. ಕಾನೂನನ್ನು ಗೌರವಿಸುವಂತವನು ನಾನು. ಆದ್ದರಿಂದ ಯಾವುದೇ ರೀತಿಯ ಸಂದರ್ಭದಲ್ಲಿಯೂ ಕೂಡ ಕಾನೂನನ್ನು ಗೌರವಿಸುತ್ತೇನೆ. ಎಲ್ಲ ರೀತಿಯ ಸಹಕಾರವನ್ನು ಸಂಸ್ಥೆ ನೀಡುತ್ತದೆ ಎಂದು ಹೇಳಿದರು. → 4

ಸುಮಾರು 60 ವರ್ಷಗಳಿಂದಲೂ ಸಿದ್ಧಾರ್ಥ ಸಂಸ್ಥೆ ನಡೆಯುತ್ತಿದೆ. 35 ವರ್ಷಗಳಲ್ಲಿ 40 ಸಾವಿರ ಎಂಜಿನಿಯರ್‌ಗಳು, 10 ಸಾವಿರ ವೈದ್ಯರು ಹೊರ ಬಂದಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ನಮ್ಮದು ಒಂದು ಅಳಿಲು ಸೇವೆಯಿದೆ. ಮಾಜಿ ಶಾಸಕ ಶಫಿ ಅಹ್ಮದ್ ತಮ್ಮ ಬಳಿ ಬಂದು ಎಚ್‌ಎಂಎಸ್ ಶಿಕ್ಷಣ ಸಂಸ್ಥೆ ನಷ್ಟದಲ್ಲಿದೆ. ಮುಚ್ಚಿ ಬಿಡುವ ಸ್ಥಿತಿಯಲ್ಲಿದೆ. ಅದನ್ನು ನೀವು ತೆಗೆದುಕೊಂಡು ಮುನ್ನಡೆಸಿ ಎಂದು ಕೇಳಿಕೊಂಡರು. ಅದರಂತೆ ನಾವು ಅದನ್ನು ಖರೀದಿಸಿ ಪುನಶ್ಚೇತನಗೊಳಿಸಲು ಕ್ರಮ ಕೈಗೊಂಡಿದ್ದೇವೆ.

– **ಡಾ.ಜಿ ಪರಮೇಶ್ವರ,** ಗೃಹ ಸಚಿವ

ಪರಮೇಶ್ವರ್ ಒಡೆತನದ ಶಿಕ್ಷಣ ಸಂಸ್ಥೆ ಮೇಲಿನ ಇಡಿ ದಾಳಿಗೂ ರನ್ಯಾರಾವ್ ಪ್ರಕರಣಕ್ಕೂ ಸಂಬಂಧ ಕಲ್ಪಿಸಲಾಗುತ್ತಿದೆ. ನಾವು ಸಾರ್ವಜನಿಕ ಜೀವನದಲ್ಲಿದ್ದು ಬೇಕಾದಷ್ಟು ಜನ ಟ್ರಸ್ಟ್ ನಡೆಸುತ್ತಾರೆ. ರನ್ಯಾಗೆ 15 ರಿಂದ 25 ಲಕ್ಷ ರು. ನೀಡಿದ್ದಾರಂತೆ. ಆಕೆಯ ಮದುವೆಗೆ ಗಿಫ್ಟ್ ಮಾಡಿರಬಹುದು. ನಾನು ಅವರ ಬಳಿ ಮಾತಾಡಿದ್ದೇನೆ. ಪರಮೇಶ್ವರ್‌ರಂತಹ ಪ್ರಭಾವಿ ವ್ಯಕ್ತಿ ಬೇರೆಯವರಿಗೆ ಸ್ಮಗ್ಲಿಂಗ್ ಮಾಡಲು ಹೇಳಲು ಸಾಧ್ಯವೇ?

– **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ರನ್ಯಾ ಕ್ರೆಡಿಟ್ ಕಾರ್ಡ್ ಪಾವತಿ?

ಕೆಲ ದಿನಗಳ ಹಿಂದೆ ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ರನ್ಯಾ ರಾವ್ ಪ್ರಕರಣದಲ್ಲಿ ಪರಮೇಶ್ವರ ಅವರ ಒಡೆತನದ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಹೆಸರು ಮತ್ತೊಮ್ಮೆ ಸಿಲುಕಿದ್ದು, ರನ್ಯಾ ರಾವ್ ಅವರ 40 ಲಕ್ಷ ರು. ಮೊತ್ತದ ಕ್ರೆಡಿಟ್ ಕಾರ್ಡ್ ಬಿಲ್ ಅನ್ನು ಸಿದ್ಧಾರ್ಥ ಟ್ರಸ್ಟ್ ಪಾವತಿಸಿದೆ ಎನ್ನುವ ಆರೋಪ ಕೇಳಿ ಬಂದಿದೆ. ಈ ಹಿನ್ನೆಲೆಯಲ್ಲಿಯೇ ಇಡಿ ದಾಳಿ ನಡೆದಿದೆ ಎನ್ನುವ ಮಾತುಗಳು ಕೇಳಿಬಂದಿದೆ. ಈ ಬಗ್ಗೆ ಅಡ್ಡಗೋಡೆಯ ಮೇಲೆ ದೀಪವಿಟ್ಟಿರುವ ಗೃಹ ಸಚಿವ ಪರಮೇಶ್ವರ ಅವರು, ರನ್ಯಾರಾವ್ ಅವರ ಕ್ರೆಡಿಟ್ ಕಾರ್ಡ್ ಬಿಲ್ ಪಾವತಿಸಿರುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಎಂಬ ಇಡಿ ಪತ್ರಿಕಾ ಹೇಳಿಕೆ ಬಗ್ಗೆ ನನಗೆ ಮಾಹಿತಿ ಇಲ್ಲ. ಇದರ ಬಗ್ಗೆ ಈ ಹಂತದಲ್ಲಿ ನಾನು ಪ್ರತಿಕ್ರಿಯಿಸುವುದಿಲ್ಲ. ಮೊದಲು ತನಿಖೆ ಮುಗಿಯಲಿ, ವರದಿ ಬರಲಿ. ಅದಕ್ಕೂ ಮುನ್ನ ಅನಗತ್ಯವಾಗಿ ನಾನು ಹೇಳಿಕೆ ನೀಡುವುದಿಲ್ಲ ಎಂದರು.

ಭಾರತದ ಸಂವಿಧಾನ ಮತ್ತು ಅಹಿಂದ ಸಮುದಾಯಗಳ ನಾಯಕರ ಮೇಲೆ ದೇಶಾದ್ಯಂತ ನಡೆಯುತ್ತಿರುವ ನಿರಂತರ ದಾಳಿ ಒಂದು ರೀತಿ ರೂಢಿಯಾಗಿಬಿಟ್ಟಿದೆ. ತುಮಕೂರು ಗ್ರಾಮೀಣ ಭಾಗದಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಲು ಆರಂಭಿಸಿದ, ಪರಮೇಶ್ವರ ಅವರು ನಡೆಸುತ್ತಿರುವ ಸಿದ್ಧಾರ್ಥ ತಾಂತ್ರಿಕ ವಿದ್ಯಾಲಯ 46 ವರ್ಷಗಳ ಹಿಂದೆ ಆರಂಭವಾಗಿದೆ. ಸಿದ್ಧಾರ್ಥ ಮೆಡಿಕಲ್ ಕಾಲೇಜು 28 ವರ್ಷಗಳ ಹಿಂದೆ ಆರಂಭವಾಗಿದೆ. ಸಂಸ್ಥೆ ಶುರುವಾದ 46 ವರ್ಷಗಳ ನಂತರ ಮೋದಿ ಸರಕಾರ ಈಗ ತಪ್ಪನ್ನು ಹುಡುಕುತ್ತಿರುವುದು ನಿಜಕ್ಕೂ ಆಶ್ಚರ್ಯ. ತುಳಿತಕ್ಕೊಳಗಾದವರ ಪರವಾದ ಗಟ್ಟಿ ಧ್ವನಿಯಾದವರನ್ನು ಕುಗ್ಗಿಸುವ ಒಂದು ಭಾಗ.

– **ರಣದೀಪ್ ಸಿಂಗ್ ಸುರ್ಜೇವಾಲ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

ರಾಮನಗರ ಜಿಲ್ಲೆಗೆ ಬೆಂಗಳೂರು ದಕ್ಷಿಣ ಜಿಲ್ಲೆ ನಾಮಕರಣಕ್ಕೆ 2ನೇ ಬಾರಿ ಸಂಪುಟ ನಿರ್ಣಯ

ರಾಮನಗರ ಹೆಸರು ಬದಲಿಗೆ ಬಿಡದ ಪಟ್ಟು

ಬೆಂಗಳೂರು: ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರದ ನಡುವಿನ ತಿಕ್ಕಾಟ ಮತ್ತೊಂದು ಸ್ತರ ತಲುಪಿದ್ದು, ಇದೀಗ ಕೇಂದ್ರ ಗೃಹ ಇಲಾಖೆ ತಿರಸ್ಕರಿಸಿದ್ದ ರಾಮನಗರ ಜಿಲ್ಲೆಯ ಹೆಸರು ಬದಲಾವಣೆಯನ್ನು 'ಚಾಲೆಂಜ್' ಮಾಡಿ ಹೆಸರು ಬದಲಾವಣೆಗೆ ಸಂಪುಟದಲ್ಲಿ ರಾಜ್ಯ ಸರಕಾರ ಅನುಮೋದನೆ ನೀಡಿದೆ.



ರಾಜ್ಯ ಸರಕಾರ ಕೆಲ ತಿಂಗಳ ಹಿಂದೆ ರಾಮ ನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ಮರುನಾಮಕರಣ ಮಾಡಲು ನಿರಾಕ್ಷೇಪಣಾ ಪತ್ರ ಕೋರಿತ್ತು. ಆದರೆ ಈ ಪ್ರಸ್ತಾವನೆಯನ್ನು ಕೇಂದ್ರ ಸರಕಾರ ತಿರಸ್ಕರಿಸಿತ್ತು. ಆದರೀಗ ಭಾರತ ಸಂವಿಧಾನದ 7ನೇ ಪರಿಚ್ಛೇದವು ಒಕ್ಕೂಟ ಪಟ್ಟಿಯಲ್ಲಿ ಬರುವ ವಿವಿಧ ವಿಷಯಗಳ ಬಗ್ಗೆ ವಿವರಿಸುತ್ತದೆ. ಅದರ ಅಡಿಯಲ್ಲಿ, ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯನ್ನಾಗಿ ಮರು ನಾಮಕರಣ ಮಾಡಿ, ರಾಮನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಘೋಷಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಬಗ್ಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದ್ದು, ಇನ್ನುಮುಂದೆ ಈ ಜಿಲ್ಲೆಯು ಬೆಂಗಳೂರು ದಕ್ಷಿಣ ಜಿಲ್ಲೆಯಾಗಲಿದೆ. ರಾಮ ನಗರ ಜಿಲ್ಲಾ ಕೇಂದ್ರವಾಗಿಯೇ ಮುಂದುವರಿಯಲಿದೆ. ಕೇವಲ ಜಿಲ್ಲೆಯ ಹೆಸರನ್ನು ಮಾತ್ರ ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಲಾಗಿದೆ. ಈ ಹಿಂದೆ ಇದು ಬೆಂಗಳೂರು ಜಿಲ್ಲೆಯಾಗಿತ್ತು. ಆಡಳಿತಾತ್ಮಕ ದೃಷ್ಟಿಯಿಂದ ಈ ಹೆಸರನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಸಂಪುಟ ಇತರ ನಿರ್ಣಯಗಳು

- ಬುಕರ್ ಪ್ರಶಸ್ತಿ ಪಡೆದ ಲೇಖಕಿ ಬಾನು ಮುಷ್ತಾಕ್‌ಗೆ ಬಿಡಿಎದಲ್ಲಿ ಜಿ ಕೆಟಗರಿ ನಿವೇಶನ ನೀಡಲು ಒಪ್ಪಿಗೆ
- ಬೆಂಗಳೂರು ಮೆಟ್ರೋ ರೈಲು ಹಂತ-2 ಯೋಜನೆಯ 40,425.02 ಕೋಟಿ ರು.ಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ
- ಹಲವು ಐಎಎಸ್ ಹಾಗೂ ಹಿರಿಯ ಅಧಿಕಾರಿಗಳ ವಿರುದ್ಧದ ಪ್ರಕರಣ ಕೈಬಿಡಲು ಸಂಪುಟ ಒಪ್ಪಿಗೆ
- ಅಮಾನತಾಗಿರುವ ಬಿಜೆಪಿ ಶಾಸಕರ ಜತೆ ಮೇ25ಕ್ಕೆ ಸ್ಪೀಕರ್, ಸಿಎಂ ಸಿದ್ದರಾಮಯ್ಯ ಸಮ್ಮುಖ ಸಭೆ



ಗ್ರಾ.ಪಂ ವಿದ್ಯುತ್ ಬಿಲ್‌ನ ಬಡ್ಡಿ ಮನ್ನಾ: ರಾಜ್ಯದ ಎಲ್ಲ ಎಸ್ಕಾಂಗಳಲ್ಲಿ ಗ್ರಾಮ ಪಂಚಾಯಿತಿಗಳು ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಬಿಲ್‌ನ ಬಡ್ಡಿ ಮನ್ನಾ ಮಾಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಗ್ರಾಮ ಪಂಚಾಯತಿ, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಕುಡಿಯುವ ನೀರು ಮತ್ತು ಬೀದಿ ದೀಪ ಸ್ಥಾವರಗಳಿಗೆ ವಿದ್ಯುತ್ ಸರಬರಾಜು ಮಾಡುತ್ತಿವೆ. → 4

ನಾಡಿದ್ದು ಮುಂಗಾರು ಪ್ರವೇಶ ಎಲ್ಲೆಡೆ ವ್ಯಾಪಕ ಮಳೆ ನಿರೀಕ್ಷೆ

ದೆಹಲಿ: ನೈಋತ್ಯ ಮುಂಗಾರು ಮೇ 27ರ ಬದಲು ಮೇ 24-25ರಂದು ಭಾರತವನ್ನು ತಲುಪುವ ನಿರೀಕ್ಷೆಯಿದ್ದು, ದೇಶಾದ್ಯಂತ ಗುಡುಗು, ಮಿಂಚು ಸಹಿತ ಮಳೆಯಾಗಲಿದೆ ಎಂದು ಹವಮಾನ ಇಲಾಖೆ ತಿಳಿಸಿದೆ.

ಮುಂದಿನ ಐದು ದಿನಗಳವರೆಗೆ ಕರ್ನಾಟಕ ಸೇರಿ ದೇಶದ ಹಲವು ಜಿಲ್ಲೆಗಳಲ್ಲಿ ಬಿಸಿಗಾಳಿ, ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಇಲಾಖೆ ಎಚ್ಚರಿಕೆ ನೀಡಿದೆ. ವಾಯುವ್ಯ ಭಾರತದಲ್ಲಿ ತೀವ್ರ ಶಾಖದ ಅಲೆಗಳ ಪರಿಸ್ಥಿತಿಗಳು, ಧೂಳಿನ ಬಿರುಗಾಳಿಗಳು ಮತ್ತು ರಾತ್ರಿ ವೇಳೆ ಬಿಸಿಯ ಹವಾಮಾನದ ಬಗ್ಗೆ ಎಚ್ಚರಿಕೆ ನೀಡಲಾಗಿದೆ. ಪಶ್ಚಿಮ ಕರಾವಳಿಯಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದ್ದರೆ, ಪೂರ್ವ ಮತ್ತು ಮಧ್ಯ ಭಾರತದಲ್ಲಿ ಗುಡುಗು ಸಹಿತ ಮಳೆ, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯ ಮುನ್ಸೂಚನೆ ನೀಡಿದೆ. ಮುಂದಿನ ಮೂರು ದಿನಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗೋವಾ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು ಮತ್ತು ಪುದುಚೇರಿಯಲ್ಲಿ ಗುಡುಗು, ಮಿಂಚು ಸಹಿತ ಭಾರೀ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ. ಈ ವರ್ಷ ಮೊದಲ ಬಾರಿಗೆ, ಮೇ ತಿಂಗಳಲ್ಲಿ ವಾಯುವ್ಯ ಭಾರತ ತೀವ್ರ ಸೆಖೆಯ ಬದಲು ವ್ಯಾಪಕ ಮಳೆ ಕಾಣುತ್ತಿದೆ.

15 ಸಾವಿರ ಹುದ್ದೆ ಭರ್ತಿಗೆ ಶಿಫಾರಸು

ಬೆಂಗಳೂರು: ರಾಜ್ಯ ಸರಕಾರದ 15ಸಾವಿರ ಕ್ಕೂ ಹೆಚ್ಚು ಆಯಕಟ್ಟಿನ ಹುದ್ದೆಗಳು ಖಾಲಿಯಿದ್ದು, 23 ಇಲಾಖೆಯ 15 ಸಾವಿರ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡುವಂತೆ ಆಡಳಿತ ಸುಧಾರಣಾ ಆಯೋಗ ಸರಕಾರಕ್ಕೆ ಶಿಫಾರಸು ಮಾಡಿದೆ.

ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ನೇತೃತ್ವದಲ್ಲಿ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಂಟನೇ ವರದಿಯನ್ನು ಸಲ್ಲಿಸಿದೆ. ಈ ವರದಿಯಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ ಉಲ್ಲೇಖಿಸಿರುವ ಆಯೋಗ, ದೇವಾಲಯಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಶಿಫಾರಸು ಮಾಡಿದೆ.

ತ.ನಾ. ಮದ್ಯ ಉದ್ಯಮದ ವಿರುದ್ಧ ಹಣ ವರ್ಗಾವಣೆ ತನಿಖೆಗೆ ತಡೆ

ಇಡಿ ನಡೆಗೆ ಸುಪ್ರೀಂ ಆಕ್ರೋಶ

ದೆಹಲಿ: ತಮಿಳುನಾಡು ಸರ್ಕಾರ ಸ್ವಾಮ್ಯದ ಮದ್ಯ ಚಿಲ್ಲರೆ ಉದ್ಯಮ ಟ್ಯಾಸ್ಮ್ಯಾಕ್ ವಿರುದ್ಧ ಜಾರಿ ನಿರ್ದೇಶನಾಲಯ ನಡೆಸುತ್ತಿದ್ದ ಹಣ ಅಕ್ರಮ ವರ್ಗಾವಣೆ ತನಿಖೆಗೆ ಸುಪ್ರೀಂ ಕೋರ್ಟ್ ಗುರುವಾರ ತಡೆ ನೀಡಿದ್ದು, ಪ್ರಕರಣ ವಿಚಾರಣೆಯಲ್ಲಿ ತನಿಖಾ ಸಂಸ್ಥೆ ಎಲ್ಲಾ ಮಿತಿಗಳನ್ನು ಮೀರಿದೆ ಎಂದು ಛೀಮಾರಿ ಹಾಕಿದೆ.

ಸರಕಾರಿ ಸ್ವಾಮ್ಯದ ಸಂಸ್ಥೆಯ ವಿರುದ್ಧ ಕ್ರಮ ಕೈಗೊಂಡು ನಂತರ ದಾಳಿ ಆರಂಭಿಸಿದ ಜಾರಿ ನಿರ್ದೇಶನಾಲಯ ಕ್ರಮವನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಬಿ.ಆರ್ ಗವಾಯಿ ಮತ್ತು ನ್ಯಾಯಮೂರ್ತಿ ಆಗಸ್ಟಿನ್ ಜಾರ್ಜ್ ಮಸಿಹ್ ಅವರನ್ನೊಳಗೊಂಡ ನ್ಯಾಯಪೀಠವು ಆಕ್ಷೇಪಿಸಿದೆ.

ಇತ್ತೀಚಿನ ದಾಳಿಗಳನ್ನು ಪ್ರಶ್ನಿಸಿ ತಮಿಳುನಾಡು ಸರಕಾರ ಮತ್ತು ತಮಿಳುನಾಡು ರಾಜ್ಯ ಮಾರ್ಕೆಟಿಂಗ್ ಕಾರ್ಪೊರೇಷನ್ ಸಲ್ಲಿಸಿದ ಅರ್ಜಿಗಳ ಮೇರೆಗೆ ನ್ಯಾಯಪೀಠವು ಇಡಿಗೆ ನೋಟಿಸ್ ನೀಡಿ ನಿರ್ದಿಷ್ಟ ದಿನಾಂಕವನ್ನು ನಿಗದಿಪಡಿಸದೆ ರಜೆಯ ನಂತರ ಮುಂದಿನ ವಿಚಾರಣೆಗೆ ನಿಗದಿಪಡಿಸಿದೆ. ಇಡಿಯ ಕ್ರಮಗಳು ಫೆಡರಲ್ ರಚನೆಯನ್ನು ಉಲ್ಲಂಘಿಸಿವೆ. ಟ್ಯಾಸ್ಮ್ಯಾಕ್ ವಿರುದ್ಧದ ತನಿಖೆಗೆ ಅನುಮತಿ ನೀಡಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. 2014ರಿಂದ ಮದ್ಯದಂಗಡಿ ಪರವಾನಗಿಗಳ ಹಂಚಿಕೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಇಡಿ 40 ಕ್ಕೂ ಹೆಚ್ಚು ಎಫ್‌ಐಆರ್‌ಗಳನ್ನು ದಾಖಲಿಸಿದೆ.

ವಕ್ಫ್: ಮಧ್ಯಂತರ ಆದೇಶ ಮೀಸಲು

ದೆಹಲಿ: ವಕ್ಫ್ ತಿದ್ದುಪಡಿ ಕಾಯ್ದೆ 2025 ರ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸಿರುವ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಪೀಠವು ವಕ್ಫ್ ಆಸ್ತಿಗಳನ್ನು ಡಿನೋಟಿಫೈ ಮಾಡುವ ಅಧಿಕಾರ ಸೇರಿದಂತೆ ಮೂರು ಪ್ರಮುಖ ವಿಷಯಗಳ ಮೇಲೆ ಮಧ್ಯಂತರ ತೀರ್ಪನ್ನು ಕಾದಿರಿಸಿದೆ.

ವಕ್ಫ್ ಬೈಯೂಸರ್ ಅಥವಾ ವಕ್ಫ್ ಬೈ ಡೀಡ್ ಎಂದು ಘೋಷಿಸಿದ ಆಸ್ತಿಗಳನ್ನು ರದ್ದುಪಡಿಸುವ ಅಧಿಕಾರ ಸೇರಿದಂತೆ ಮೂರು ವಿಷಯಗಳ ಕುರಿತು ತನ್ನ ಮಧ್ಯಂತರ ಆದೇಶಗಳನ್ನು ಸುಪ್ರೀಂಕೋರ್ಟ್ ಕಾಯ್ದಿರಿಸಿದೆ. ಕೇಂದ್ರ ಸರ್ಕಾರವು ಈ ಕಾಯಿದೆಯನ್ನು ಬಲವಾಗಿ ಸಮರ್ಥಿಸಿಕೊಂಡಿದೆ.

ಸಿಂದೂರದ ಬಲ ಅರ್ಥ ಮಾಡಿಸಿದ್ದೇವೆ: ಪ್ರಧಾನಿ

ಬಿಕಾನೇರ್: ಸಿಂಧೂರವು ಗನ್‌ಪೌಡರ್ ಆದಾಗ ಏನಾಗುತ್ತದೆ ಎಂಬುದನ್ನು ಇದೀಗ ನಮ್ಮ ದೇಶದ ಶತ್ರುಗಳು ತಿಳಿದುಕೊಂಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದು, ಪಾಕಿಸ್ತಾನವು ಮಂಡಿಯೂರ ಬೇಕಾದಷ್ಟು ಶೌರ್ಯವನ್ನು ತೋರಿಸಿದ್ದಕ್ಕಾಗಿ ಭಾರತದ ಸಶಸ್ತ್ರ ಪಡೆಗಳನ್ನು ಗುರುವಾರ ಶ್ಲಾಘಿಸಿದ್ದಾರೆ. 'ಆಪರೇಷನ್ ಸಿಂಧೂರ' ನಂತರ ಮೊದಲ ಬಾರಿಗೆ ರಾಜಸ್ಥಾನಕ್ಕೆ ಭೇಟಿ ನೀಡಿದ ಪ್ರಧಾನಿ, 'ನಾವು 22 ನಿಮಿಷಗಳಲ್ಲಿ ಒಂಬತ್ತು ದೊಡ್ಡ ಭಯೋತ್ಪಾದಕ ನೆಲೆಗಳನ್ನು ನಾಶಪಡಿಸಿದ್ದೇವೆ' ಎಂದು ಹೇಳಿದರು.



ಫನ್‌ತರಂಗ

– ರಘುಪತಿ ಶೃಂಗೇರಿ –

ಮೈಸೂರು ಸ್ಯಾಂಡಲ್ ಸೋಪ್‌ಗೆ ತಮನ್ನಾ ಭಾಟಿಯಾ ರಾಯಭಾರಿ, 6.20 ಕೋಟಿ ಸಂಭಾವನೆ



ತಮನ್ನಾ ಜತೆ 6.2 ಕೋಟಿ ರು. ಮೊತ್ತದ ಜಾಹೀರಾತು ಒಪ್ಪಂದ, ನೆಟ್ಟಿಗರ ಆಕ್ರೋಶ

ಮೈಸೂರು ಗಂಧದ ಸೋಪಿಗೆ ಮಿಲ್ಕಿ ಬ್ಯೂಟಿ ರೂಪದರ್ಶಿ

ಬೆಂಗಳೂರು: ಕರ್ನಾಟಕ ಸೋಪ್ಸ್ ಆ್ಯಂಡ್ ಡಿಟರ್ಜೆಂಟ್ಸ್‌ಗೆ ಬಾಲಿವುಡ್ ನಟಿ ತಮನ್ನಾ ಭಾಟಿಯಾರನ್ನು ರಾಯಭಾರಿಯನ್ನಾಗಿ ನೇಮಿಸಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ. ಇದು ಮಾರುಕಟ್ಟೆಯ ತಂತ್ರಗಾರಿಕೆಯೆಂದು ಸರಕಾರ ಸಮರ್ಥಿಸಿಕೊಂಡಿದ್ದರೆ, ಕರ್ನಾಟಕ ಮೂಲದ ಇಲ್ಲವೇ ಕನ್ನಡದ ನಟ-ನಟಿಯರನ್ನೇ ರಾಯಭಾರಿಯನ್ನಾಗಿ ನೇಮಿಸಬೇಕಿತ್ತು ಎಂಬ ವಾದ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಪ್ರಮಾಣದಲ್ಲಿ ಶುರುವಾಗಿದೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ತನ್ನ ಪ್ರಸಿದ್ಧ ಮೈಸೂರು ಸ್ಯಾಂಡಲ್ ಸೋಪ್ ಉತ್ಪನ್ನಕ್ಕೆ ಎರಡು ವರ್ಷಗಳ ಅವಧಿಗೆ ತಮನ್ನಾ ಭಾಟಿಯಾ ಅವರನ್ನು ರಾಯಭಾರಿಯನ್ನಾಗಿ ನೇಮಿಸಿದ್ದು, ಇದಕ್ಕಾಗಿ 6.2 ಕೋಟಿ ರು. ನೀಡಲು ತೀರ್ಮಾನಿಸಿದೆ. ಈ ಆದೇಶದ ಪ್ರತಿ ಹೊರ ಬೀಳುತ್ತಿದ್ದಂತೆ ಸಾಮಾಜಿಕ ಜಾಲತಾಣದಲ್ಲಿ ಪರ-ವಿರೋಧ ವಾದಗಳು ಗರಿಗೆದರಿವೆ. ತಮನ್ನಾ ಭಾಟಿಯಾ ದಕ್ಷಿಣೋತ್ತರ ಚಿತ್ರರಂಗದಲ್ಲಿ ಸಾಕಷ್ಟು ಜನಪ್ರಿಯತೆ ಗಳಿಸಿದ್ದಾರೆ. ಜತೆಗೆ ಗ್ಲಾಮರಸ್ ಕೂಡ ಆಗಿ ಕಾಣುತ್ತಾರೆ. ಆದ್ದರಿಂದ ಅವರನ್ನು ಆಯ್ಕೆ ಮಾಡಲಾಗಿದೆ ಎನ್ನುವ ಮಾತುಗಳಿದ್ದರೂ, 6.2 ಕೋಟಿ ಸಂಭಾವನೆ ನೀಡಿ ನೇಮಕ ಮಾಡಿಕೊಳ್ಳುವ ಅಗತ್ಯವಿತ್ತೇ? ಕನ್ನಡ ಮೂಲದ ಕಲಾವಿದರು ಯಾರೂ ಸಿಗಲಿಲ್ಲವಾ ಎಂದು ನೆಟ್ಟಿಗರು ಪ್ರಶ್ನಿಸುತ್ತಿದ್ದಾರೆ.

ಮೈಸೂರು ಸ್ಯಾಂಡಲ್ ಕರ್ನಾಟಕದೊಳಗೆ ಉತ್ತಮ ಬ್ರ್ಯಾಂಡ್ ಹೊಂದಿದೆ. ಕರ್ನಾಟಕ ದಾಚೆಗಿನ ಮಾರುಕಟ್ಟೆಗಳಲ್ಲಿ ಸ್ಪರ್ಧೆ ನೀಡುವುದು ನಮ್ಮ ಗುರಿ. ಆದ್ದರಿಂದ ಇದು ವಿವಿಧ ಮಾರ್ಕೆಟಿಂಗ್ ತಜ್ಞರೊಂದಿಗೆ ಸಮಾಲೋಚಿಸಿದ ನಂತರ ಸಾರ್ವಜನಿಕ ಉದ್ದಿಮೆ ಮಂಡಳಿಯ ಸ್ವತಂತ್ರ ಕಾರ್ಯತಂತ್ರದ ನಿರ್ಧಾರವಾಗಿದೆ.

– **ಎಂ.ಬಿ.ಪಾಟೀಲ್,** ಬೃಹತ್ ಕೈಗಾರಿಕಾ ಸಚಿವ

ಎಂ.ಬಿ.ಪಾಟೀಲ್ ಸಮರ್ಥನೆ → 4

ತಮನ್ನಾ ಆಯ್ಕೆಗೆ ನಿಗಮದ ಸಮರ್ಥನೆ

- ಮೈಸೂರು ಸ್ಯಾಂಡಲ್ ಮಾರಾಟದಲ್ಲಿ ರಾಜ್ಯದ ಪಾಲು ಶೇ.18ರಷ್ಟಿದ್ದು, ಹೊರರಾಜ್ಯದ್ದು ಉಳಿದ ಪಾಲು
- ತಮನ್ನಾಗೆ ಸಾಮಾಜಿಕ ಜಾಲತಾಣದಲ್ಲಿ 2.8 ಕೋಟಿ ಫಾಲೋವರ್ಸ್
- ದೀಪಿಕಾ, ರಶ್ಮಿಕಾ ಮಂದಣ್ಣ, ಪೂಜಾ ಹೆಗಡೆಗಿಂತ ಹೆಚ್ಚಿನ ಆನ್‌ಲೈನ್ ವರ್ಚಸ್ಸು



ಕೈ ಕೊಟ್ಟಿದ್ದ ಧೋನಿ!

ಮೈಸೂರು ಸ್ಯಾಂಡಲ್ ಸೋಪ್ ರಾಯಭಾರಿಯಾಗಿ 2006ರಲ್ಲಿ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಜತೆ ಒಪ್ಪಂದಕ್ಕೆ ಸಹಿ ಮಾಡಲಾಗಿತ್ತು. ಆದರೆ ಸಮಯದ ಅಭಾವದಿಂದ ಧೋನಿ ಜಾಹೀರಾತು ಶೂಟಿಂಗ್‌ಗೆ ಬಂದಿರಲಿಲ್ಲ. ನಂತರ ಕೆಎಸ್‌ಡಿಎಲ್ ಧೋನಿ ವಿರುದ್ಧ ನ್ಯಾಯಾಲಯದ ಮೊರೆ ಹೋಗಿತ್ತು. ಆನಂತರ ಈ ಒಪ್ಪಂದ ರದ್ದಾಗಿತ್ತು.

ಅರಮನೆ ಮೈದಾನ ಭೂವಿವಾದ: ಸರಕಾರಕ್ಕೆ ಹಿನ್ನಡೆ

ಮೈಸೂರು ರಾಜಮನೆತನಕ್ಕೆ 3,400 ಕೋಟಿ ರೂ. ಟಿಡಿಆರ್ ವರ್ಗಾವಣೆಗೆ ಸುಪ್ರೀಂ ಆದೇಶ

ಬೆಂಗಳೂರು: ರಾಜ್ಯ ಸರಕಾರ ಹಾಗೂ ಮೈಸೂರು ರಾಜ ವಂಶಸ್ಥರ ನಡುವಿನ ಕಾನೂನು ಸಮರದಲ್ಲಿ ರಾಜ್ಯ ಸರಕಾರಕ್ಕೆ ಭಾರಿ ಹಿನ್ನಡೆಯಾಗಿದ್ದು, ಬೆಂಗಳೂರಿನ ಅರಮನೆ ಮೈದಾನದ 3400 ಕೋಟಿ ರು. ಟಿಡಿಆರ್ ಅನ್ನು ನೀಡಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

90ರ ದಶಕದಲ್ಲಿ ರಸ್ತೆಗಳ ಅಗಲೀಕರಣಕ್ಕಾಗಿ ಕರ್ನಾಟಕ ಸರಕಾರದ ವತಿಯಿಂದ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಅರಮನೆ ಮೈದಾನದ ಭಾಗಕ್ಕೆ ಅನುಗುಣವಾಗಿ 3,400 ಕೋಟಿ ರು. ಮೊತ್ತದ ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ಗಳನ್ನು ಮೈಸೂರು ಸಂಸ್ಥಾನದ ಮಾಜಿ ಮಹಾರಾಜ ಶ್ರೀಕಂಠದತ್ತ ಒಡೆಯರ್ ಅವರ ಕಾನೂನುಬದ್ಧ ವಾರಸುದಾರರಿಗೆ ನೀಡಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ.

ಈ ಸಂಬಂಧ ಕರ್ನಾಟಕ ಸರಕಾರ ಸಲ್ಲಿಸಿದ್ದ ಎಲ್ಲಾ ಆಕ್ಷೇಪಣೆಗಳನ್ನು ತಳ್ಳಿಹಾಕಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಅರವಿಂದ್ ಕುಮಾರ್ ಅವರ ಸುಪ್ರೀಂಕೋರ್ಟ್ ನ್ಯಾಯಪೀಠ, ರಾಜವಂಶಸ್ಥ ದಿವಂಗತ ಶ್ರೀಕಂಠದತ್ತ ಒಡೆಯರ್ ಉತ್ತರಾಧಿಕಾರಿಗಳು ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದ ಇತರರಿಗೆ ತಾತ್ಕಾಲಿ ಟಿಡಿಆರ್ ಪರಿಹಾರ ಮೊತ್ತವನ್ನು ನೀಡಬೇಕೆಂದು ಸೂಚಿಸಿತು. ಈ ಮೂಲಕ ಬೆಂಗಳೂರು ಅರಮನೆ ಮೈದಾನದ ಭೂ ವಿವಾದ ಪ್ರಕರಣದಲ್ಲಿ ರಾಜ್ಯ ಸರಕಾರಕ್ಕೆ ಭಾರಿ ಹಿನ್ನಡೆ ಆಗಿದೆ.

ಒಂದು ವಾರದೊಳಗೆ ಟಿಡಿಆರ್ ವರ್ಗಾಯಿಸುವಂತೆ ಈ ಹಿಂದೆ ನ್ಯಾಯಪೀಠ ರಾಜ್ಯ ಸರಕಾರಕ್ಕೆ ಸೂಚನೆ ನೀಡಿತ್ತು. ಅದರಂತೆ ಬರೋಬ್ಬರಿ 3400 ಕೋಟಿ ರು. ಮೊತ್ತದ ಟಿಡಿಆರ್ ಅನ್ನು ರಾಜ್ಯ ಸರಕಾರವು ಸುಪ್ರೀಂಕೋರ್ಟ್ ರಿಜಿಸ್ಟ್ರಾರ್ ಮುಂದೆ ಠೇವಣಿ ಇಟ್ಟು ಅಂತಿಮ ತೀರ್ಪು ಬರುವ ತನಕ ಈ ಟಿಡಿಆರ್‌ಗಳನ್ನು ರಾಜಮನೆತನಕ್ಕೆ ನೀಡಬಾರದು ಎಂದು ಮಧ್ಯಂತರ ಅರ್ಜಿಯಲ್ಲಿ ಮನವಿ ಮಾಡಿತ್ತು. ಇದನ್ನು ರಾಜಮನೆತನದ ಪರ ವಕೀಲರು ವಿರೋಧಿಸಿದ್ದರು. ಇದೀಗ ಅಂತಿಮವಾಗಿ ರಾಜಮನೆತನಕ್ಕೆ ಟಿಡಿಆರ್ ನೀಡುವಂತೆ ಸುಪ್ರೀಂಕೋರ್ಟ್ ರಾಜ್ಯ ಸರಕಾರಕ್ಕೆ ಸೂಚಿಸಿದೆ. → 4

ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಅಂಕೋಲಾ: ಕೊಂಕಣಿ ಖಾರ್ವಿ ಸಮಾಜದ ನೌಕರರ ಸಂಘದ ವತಿಯಿಂದ ಖಾರ್ವಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತೃತೀಯ ವರ್ಷದ ಪ್ರತಿಭಾ ಪುರಸ್ಕಾರ ನೀಡುವ ಕಾರ್ಯಕ್ರಮವು ಮೇ. 25ರಂದು ಬೆಳಿಗ್ಗೆ 10.30ಕ್ಕೆ ಅವರ್ಸಾದ ಕಾತ್ಯಾಯನಿ ಬಾಣೇಶ್ವರ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಈ ವರ್ಷ ಪಿಯುಸಿಯಲ್ಲಿ ಪ್ರತ್ಯೇಕವಾಗಿ ಕಲಾ ವಿಭಾಗದಲ್ಲಿ ಮೂರು ವಿದ್ಯಾರ್ಥಿಗಳಿಗೆ, ವಾಣಿಜ್ಯ ವಿಭಾಗದಲ್ಲಿ ಮೂರು ವಿದ್ಯಾರ್ಥಿಗಳಿಗೆ ಮತ್ತು ವಿಜ್ಞಾನ ವಿಭಾಗದಲ್ಲಿ ಮೂರು ವಿದ್ಯಾರ್ಥಿಗಳಿಗೆ ತಾಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದ 5 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಸಾಧಕರನ್ನು ಮತ್ತು ನಿವೃತ್ತ ನೌಕರರನ್ನು ಸನ್ಮಾನಿಸಿ ಗೌರವಿಸಲಾಗುವುದು. ಈ ಕಾರ್ಯಕ್ರಮಕ್ಕೆ ಸಮಾಜದ ಹಿತೈಷಿಗಳು ಭಾಗವಹಿಸಬೇಕೆಂದು ಖಾರ್ವಿ ಸಮಾಜದ ನೌಕರರ ಸಂಘದ ಅಧ್ಯಕ್ಷ ಜಿ.ಆರ್. ತಾಂಡೇಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 28ರಂದು ಸಾರಿಗೆ ಅದಾಲತ್

ಕಾರವಾರ: ಕಾರವಾರ ವ್ಯಾಪ್ತಿಯಲ್ಲಿರುವ ವಾಹನ ಮಾಲೀಕರು, ಚಾಲಕರು ಹಾಗೂ ಸಾರಿಗೆ ಇಲಾಖೆಯ ಸೇವೆ ಪಡೆಯುತ್ತಿರುವ ಸಾರ್ವಜನಿಕರಿಗೆ ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿಯಲ್ಲಿ ಮೇ 28 ರಂದು ಮಧ್ಯಾಹ್ನ 12 ಗಂಟೆಗೆ ಸಾರಿಗೆ ಅದಾಲತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮ ದಲ್ಲಿ ಸೇವಾ ನ್ಯೂನತೆ ಮತ್ತು ಇನ್ನಿತರ ಸಮಸ್ಯೆಗಳಿದ್ದರೆ ಸಾರ್ವಜನಿಕರು ಖುದ್ದಾಗಿ ಹಾಜರಾಗಿ ಪರಿಹರಿಸಿಕೊಳ್ಳುವಂತೆ ಹಾಗೂ ಕಾರ್ಯಕ್ರಮದ ಸದುಪಯೋಗ ಪಡೆಯುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಜಾನ್ ಬಿ ಮಿಸ್ಕಿತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂಇಎಸ್ ಐಟಿಐ ಕ್ಯಾಂಪಸ್ ಸಂದರ್ಶನ

ಶಿರಸಿ: ಇಲ್ಲಿನ ಎಂಇಎಸ್ ಐಟಿಐ ಕಾಲೇಜಿನಲ್ಲಿ ಮೇ 26ರ ಸೋಮವಾರ ಬೆಳಿಗ್ಗೆ 10 ಗಂಟೆಗೆ, TRIPHASE TECHNOLOGIES (P) LTD ಈ ಬೆಂಗಳೂರು ಇವರು ಕ್ಯಾಂಪಸ್ ಸಂದರ್ಶನ ಆಯೋಜಿಸಿದೆ. ಐ.ಟಿ.ಐ. (ಇಲೆಕ್ಟ್ರೀಷಿಯನ್, ಇಲೆಕ್ಟ್ರಾನಿಕ್ಸ್ ಮೆಕ್ಯಾನಿಕ್) ಹಾಗೂ ಡಿಪ್ಲೋಮಾ ಇಂಜಿನಿಯರಿಂಗ್ ಪಾಸಾದ ಹಾಗೂ ಅಂತಿಮ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ / ಅಭ್ಯರ್ಥಿಗಳ ಆಯ್ಕೆಯ ಕುರಿತು ಕ್ಯಾಂಪಸ್ ಸಂದರ್ಶನವನ್ನು ಏರ್ಪಡಿಸಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ರೆಸ್ಯೂಮ್, ವಿದ್ಯಾರ್ಹತೆಯ ದಾಖಲಾತಿಗಳ ಪ್ರತಿ, ಪಾಸ್‌ಪೋರ್ಟ ಸೈಜ್ ಫೋಟೋ ಹಾಗೂ ಆಧಾರ ಕಾರ್ಡ ಪ್ರತಿಯೊಂದಿಗೆ ಸಂದರ್ಶನದಲ್ಲಿ ಪಾಲ್ಗೊಳ್ಳಬಹು ದಾಗಿದೆ ಎಂದು ಐ.ಟಿ.ಐ. ಪ್ರಾಚಾರ್ಯ ಗಣೇಶ ಭಟ್ಟ ಇವರು ತಿಳಿಸಿದ್ದಾರೆ. ಸಂದರ್ಶನವು ಲಿಖಿತ ಪರೀಕ್ಷೆ ಹಾಗೂ ಟೆಕ್ನಿಕಲ್ ರೌಂಡ್‌ಗಳನ್ನು ಒಳಗೊಂಡಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :9008048202 / 9480349201 / 9986122582 /9611047006 ಗೆ ಸಂಪರ್ಕಿಸಬಹುದಾಗಿದೆ.

ಮೇ 27ರಂದು ನಿಧಿ ಆಪ್ಕೆ ನಿಕಟ್

ಕಾರವಾರ: ಕ್ಷೇತ್ರೀಯ ಭವಿಷ್ಯನಿಧಿ ಕಾರ್ಯಾಲಯ ಹುಬ್ಬಳ್ಳಿ ವತಿಯಿಂದ ಮೇ 27 ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಶಿರಸಿಯ ತೋಟಗಾರ್ಸ್ ಎಸ್.ಎಸ್.ಎಚ್ ಕಡ್ವೆ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ನಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪಿಂಚಣಿದಾರರು, ಚಂದಾದಾರರು, ಉದ್ಯೋಗದಾತರು ಹಾಗೂ ಕಾರ್ಮಿಕ ಸಂಘಟನೆಯವರು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಅಚ್ಛೇ ದಿನ್ ಎಲ್ಲಿದೆ ಎನ್ನುವವರು ತಮ್ಮ ಕನ್ನಡಕ ತೆಗೆದು ನೋಡಲಿ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ

ಅಮೃತ ಭಾರತ್ ರೈಲ್ವೆ ಸ್ಟೇಷನ್ ಲೋಕಾರ್ಪಣೆ

ಗದಗ: ಕರ್ನಾಟಕದ ರೈಲ್ವೆ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ 2025-26ರಲ್ಲಿ 7600 ಕೋಟಿ ರು. ಅನುದಾನ ಒದಗಿಸಿದ್ದಾರೆ. ಕಳೆದೊಂದು ದಶಕದಲ್ಲಿ ಪ್ರತಿ ವರ್ಷ ಕರ್ನಾಟಕಕ್ಕೆ 7 ಸಾವಿರ ಕೋಟಿ ರು.ಗೂ ಹೆಚ್ಚು ಅನುದಾನ ಒದಗಿಸಿದ್ದು, ಸದ್ಯ 51 ಸಾವಿರ ಕೋಟಿ ರು. ಕಾಮಗಾರಿ ಪ್ರಗತಿಯಲ್ಲಿದೆ. ಅಚ್ಚೇ ದಿನ್ ಎಲ್ಲಿದೆ ಎನ್ನುವವರು ತಮ್ಮ ಕನ್ನಡಕ ತೆಗೆದು ನೋಡಲಿ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಿಎಂ ಸಿದ್ದರಾಮಯ್ಯಗೆ ಪರೋಕ್ಷವಾಗಿ ಟೀಕಿಸಿದರು.

ಗುರುವಾರ ಅಮೃತ ಭಾರತ್ ರೈಲ್ವೆ ಸ್ಟೇಷನ್ ಯೋಜನೆಯಡಿ 23.24 ಕೋಟಿ ರು. ವೆಚ್ಚದಲ್ಲಿ ಪುನರಾಭಿವೃದ್ಧಿ ಕಂಡ ಗದಗ ರೈಲ್ವೆ ನಿಲ್ದಾಣ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಯುಪಿಎ ಸರಕಾರದ ಅವಧಿಯಲ್ಲಿ ಕರ್ನಾಟಕದ ರೈಲ್ವೆ ಯೋಜನೆಗಳಿಗೆ 800 ಕೋಟಿ ರು. ಬಿಡುಗಡೆಯಾಗಿತ್ತು. ಅಂದಿನ ರೈಲ್ವೆ ಸಚಿವರಾಗಿದ್ದ ಮುನಿಯಪ್ಪ, ಬಜೆಟ್ ಭಾಷಣದ ಮಧ್ಯದಲ್ಲಿಯೇ ಕರ್ನಾಟಕಕ್ಕೆ ಹೆಚ್ಚು ಅನುದಾನ ಕೊಟ್ಟಿರುವುದಾಗಿ ಹೇಳಿದ್ದರು. ಆದರೆ ಮೋದಿ ಸರಕಾರ ಪ್ರತಿ ವರ್ಷ 7 ಸಾವಿರ ಕೋಟಿ ರು. ನೀಡುವ ಮೂಲಕ ಅತ್ಯಂತ ಗರಿಷ್ಠ ಅನುದಾನ ಒದಗಿಸಿ ರಾಜ್ಯದ ರೈಲ್ವೆ ಯೋಜನೆಗೆ ವೇಗ ನೀಡಿದೆ ಎಂದರು.

ರೈಲ್ವೆಗಳ ವಿದ್ಯುದ್ದೀಕರಣದಿಂದ ವಿದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದ ಡಿಸೇಲ್ ಮೇಲಿನ ಅವಲಂಬನೆ ಹಾಗೂ ವಾಯು ಮಾಲಿನ್ಯ ಕಡಿಮೆಯಾಗಲು ಕಾರಣವಾಗಿದೆ. ಸದ್ಯ ದೇಶದ 99

ಗದಗದಲ್ಲಿ ಅಮೃತ ಭಾರತ್ ರೈಲ್ವೆ ಸ್ಟೇಷನ್ ಲೋಕಾರ್ಪಣೆ ಕಾರ್ಯವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಉದ್ಘಾಟಿಸಿದರು.

ಪ್ರತಿಶತ ರೈಲುಗಳು ವಿದ್ಯುತ್‌ನಿಂದ ಓಡುತ್ತಿದ್ದು, ಈ ಪೈಕಿ ಶೇ. 50 ರಷ್ಟು ಕಲ್ಲಿದ್ದಲು ಮೂಲಕ ಉತ್ಪತ್ತಿಯಾಗುವ ವಿದ್ಯುತ್ ಬಳಕೆ ಮಾಡಲಾಗುತ್ತಿದ್ದರೆ, ಇನ್ನುಳಿದ ಶೇ.50 ರಷ್ಟು ವಿದ್ಯುತ್‌ನ್ನು ಸೋಲಾರ್, ಪವನ ವಿದ್ಯುತ್ ನಿಂದ ಪಡೆದು 640 ಕೋಟಿ ಲೀಟರ್ ಡೀಸೆಲ್ ಉಳಿತಾಯ ಮಾಡಿದ್ದೇವೆ ಎಂದರು.

ಕರ್ನಾಟಕದಲ್ಲಿ 1659 ಕಿ.ಮೀ. ಹೊಸ ರೈಲ್ವೆ ಮಾರ್ಗ ಅನುಷ್ಠಾನಗೊಳಿಸಲಾಗುತ್ತಿದ್ದು, ಇದು ಶ್ರೀಲಂಕಾದ ಒಟ್ಟು ರೈಲ್ವೆ ಜಾಲಕ್ಕಿಂತ ಹೆಚ್ಚಾಗಿದೆ. ಅದೇ ರೀತಿ ರೈಲ್ವೆ ಸುರಕ್ಷಾ ಕ್ಷೇತ್ರಕ್ಕೂ ಆದ್ಯತೆ ನೀಡಿದ್ದು, ಒಟ್ಟಾರೆ 1,16,514 ಕೋಟಿ ರೂ. ವ್ಯಯ ಮಾಡಲಾಗುತ್ತಿದೆ. ಗಂಟೆಗೆ 130 ಕಿ.ಮೀ. ವೇಗದಲ್ಲಿ ವಂದೇ ಭಾರತ್ ರೈಲುಗಳು ಓಡಾಡುತ್ತಿರುವುದು ದೇಶ ಪ್ರಗತಿ ಪಥದಲ್ಲಿ ಸಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದರು.

ಸಂಸದ ಬಸವರಾಜ ಬೊಮ್ಮಾಯಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿ, ಗದಗ ರೈಲ್ವೆ ನಿಲ್ದಾಣದ ಪುನರ್ ಅಭಿವೃದ್ಧಿ ಈ ಭಾಗದ ಕೈಗಾರಿಕೆ, ವಾಣಿಜ್ಯ ಮತ್ತು ಪ್ರವಾಸೋದ್ಯಮಕ್ಕೆ ಬಲ ತುಂಬಿದೆ. 1884 ರಲ್ಲಿ ಆರಂಭವಾದ ಗದಗ ರೈಲ್ವೆ ನಿಲ್ದಾಣಕ್ಕೆ ಭವ್ಯ ಇತಿಹಾಸವಿದೆ. ಇಂಥ ನಿಲ್ದಾಣವನ್ನು ಅಭಿವೃದ್ಧಿ ಮಾಡಿರುವುದು ಸಂತಸ ತಂದಿದೆ ಎಂದ ಅವರು, ರೈಲ್ವೆ ನಿಲ್ದಾಣದ ಅಭಿವೃದ್ಧಿ ಜತೆಗೆ ಗದಗ- ವಾಡಿ,

ಗದಗ-ಯಲವಗಿ ರೈಲ್ವೆ ಮಾರ್ಗ ಅನುಷ್ಠಾನಕ್ಕೆ ಆದ್ಯತೆ ನೀಡಲಾಗುವುದು. ಪ್ರಧಾನಿ ನರೇಂದ್ರ ಮೋದಿ ಅವರು ರೈಲ್ವೆ ಜೊತೆಗೆ ರಸ್ತೆ ಅಭಿವೃದ್ಧಿಗೂ ಆದ್ಯತೆ ನೀಡಿರುವುದು ವಿಕಸಿತ ಭಾರತಕ್ಕೆ ಸಾಕ್ಷಿಯಾಗಿದೆ ಎಂದರು.

ನೈರುತ್ಯ ರೈಲ್ವೆ ವಲಯದ ಪ್ರಧಾನ ವಾಣಿಜ್ಯ ವ್ಯವಸ್ಥಾಪಕ ಎಸ್.ಪಿ. ಶಾಸ್ತ್ರೀ ಮಾತನಾಡಿ , ನೈರುತ್ಯ ರೈಲ್ವೆ ವಲಯದಲ್ಲಿ ಗದಗ ರೈಲ್ವೆ ನಿಲ್ದಾಣ ಅತ್ಯಂತ ಪ್ರಮುಖವಾಗಿದೆ. ಪ್ರತಿನಿತ್ಯ ಸರಾಸರಿ 4 ಸಾವಿರ ಜನ ಸಂಚಾರ ಮಾಡುತ್ತಾರೆ. ಅಂದಾಜು 5 ಲಕ್ಷ ರೂ. ಆದಾಯವಿದೆ. ಒಟ್ಟು 23.24 ಕೋಟಿ ರು. ವೆಚ್ಚದಲ್ಲಿ ರೈಲ್ವೆ ನಿಲ್ದಾಣ ಪುನರಾಭಿವೃದ್ಧಿ ಆಗಿದೆ ಎಂದರು.

ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು ಸಾನ್ನಿಧ್ಯ ವಹಿಸಿದ್ದರು. ನರಗುಂದ ಶಾಸಕ ಸಿ.ಸಿ. ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ, ಜಿಲ್ಲಾಧಿಕಾರಿ ಶ್ರೀಧರ, ಮುಖಂಡರಾದ ಜಿ.ಕೆ. ಆದಾಪ್ಪಗೌಡ, ವಿಎಚ್. ಹಿರೇಗೌಡರ, ತಾತನಗೌಡ ಪಾಟೀಲ, ಎಸ್.ಪಿ. ಸಂಶಿಮಠ, ಸಂಗಮೇಶ ದುಂದೂರ, ಬಿಜೆಪಿ ಜಿಲ್ಲಾಧ್ಯಕ್ಷ ರಾಜು ಕುರುಡಗಿ ಇತರರು ಉಪಸ್ಥಿತರಿದ್ದರು.

ಅಮೃತ ಭಾರತ್ ರೈಲ್ವೆ ಸ್ಟೇಷನ್ ಹಾಗೂ ಆಪರೇಷನ್ ಸಿಂಧೂರ ವಿಷಯವಾಗಿ ಶಾಲಾ ಮಕ್ಕಳಿಗಾಗಿ ರೈಲ್ವೆ ಇಲಾಖೆ ಏರ್ಪಡಿಸಿದ್ದ ವಿವಿಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ನಡೆಯಿತು.

> 2014 ರಲ್ಲಿ ದೇಶದಲ್ಲಿ 21-22 ಸಾವಿರ ಕಿ.ಮೀ. ರೈಲ್ವೆ ಮಾರ್ಗ ವಿದ್ಯುದ್ದೀಕರಣ ಆಗಿತ್ತು. ಸದ್ಯ 69 ಸಾವಿರ ಕಿ.ಮಿ. ಮಾರ್ಗವನ್ನು ವಿದ್ಯುದ್ದೀಕರಣ ಮಾಡಲಾಗಿದೆ. ಕೇವಲ ದಶಕದ ಅವಧಿಯಲ್ಲಿ 40 ಸಾವಿರ ಕಿ.ಮೀ. ವಿದ್ಯುದ್ದೀಕರಣ ಮಾಡಿರುವುದು ದಾಖಲೆ ಮಾತ್ರವಲ್ಲದೇ ಜಗತ್ತಿನಲ್ಲಿಯೇ ರೈಲ್ವೆ ಮಾರ್ಗ ವಿದ್ಯುದ್ದೀಕರಣ ಹೊಂದಿದ ರಾಷ್ಟ್ರಗಳಲ್ಲಿ ಭಾರತ 2ನೇ ಸ್ಥಾನದಲ್ಲಿದೆ.
>
> -ಪ್ರಲ್ಹಾದ ಜೋಶಿ, ಸಚಿವ

ರಕ್ಷಣೆಗೆ 7 ಲಕ್ಷ ಕೋಟಿ ರು.

ದೇಶದ ಭದ್ರತೆ ಹಿತದೃಷ್ಟಿಯಿಂದ ರಕ್ಷಣಾ ಇಲಾಖೆಗೆ ವಾರ್ಷಿಕ 7 ಲಕ್ಷ ಕೋಟಿ ರು. ಒದಗಿಸಲಾಗಿದೆ. ಆ ಕಾರಣಕ್ಕಾಗಿಯೇ ಪಹಲ್ಗಾಂ ದಾಳಿಗೆ ಪ್ರತಿಕಾರವಾಗಿ ಆಪರೇಷನ್ ಸಿಂಧೂರ್ ಯಶಸ್ವಿಯಾಯಿತು. ಭವಿಷ್ಯದಲ್ಲಿ ಭಯೋತ್ಪಾದನೆ ನಡೆದರೆ, ಅದನ್ನು ಯುದ್ಧವೆಂದು ಪರಿಗಣಿಸಿ ಪಾಕಿಸ್ತಾನಕ್ಕೆ ತಕ್ಕ ಪ್ರತ್ಯುತ್ತರ ನೀಡಲಾಗುತ್ತದೆ ಎಂದು ಪ್ರಲ್ಹಾದ ಜೋಶಿ ಹೇಳಿದರು.

ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್‌ರಿಗೆ ಮನವಿ ಸಲ್ಲಿಸಿದ ರೂಪಾಲಿ ನಾಯ್ಕ

ಪ್ರವಾಸೋದ್ಯಮ ಇನ್ನಷ್ಟು ಅಭಿವೃದ್ಧಿಗೊಳಿಸಿ

ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್‌ರಿಗೆ ಮನವಿ ಸಲ್ಲಿಸಿದ ರೂಪಾಲಿ ನಾಯ್ಕ

ಕಾರವಾರ: ರಾಜ್ಯದಲ್ಲಿ ನೈಸರ್ಗಿಕವಾಗಿ ಅತ್ಯಂತ ಶ್ರೀಮಂತ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಜಿಲ್ಲೆಯ ಕಾರವಾರ-ಅಂಕೋಲಾ ಕ್ಷೇತ್ರದಲ್ಲಿ ಪ್ರವಾಸೋದ್ಯಮವನ್ನು ಸಮಗ್ರವಾಗಿ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವಂತೆ ಕೇಂದ್ರ, ಸಂಸ್ಕೃತಿ, ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ವಿನಂತಿಸಿಕೊಂಡರು.

ಅವರು ಗೋಕರ್ಣಕ್ಕೆ ಆಗಮಿಸಿದ ಕೇಂದ್ರ ಸಚಿವ ಗಜೇಂದ್ರ ಸಿಂಗ್ ಅವರೊಂದಿಗೆ ಮಾತನಾಡಿ, ಉತ್ತರಕನ್ನಡ ಜಿಲ್ಲೆಯು ನೈಸರ್ಗಿಕ, ಪೌರಾಣಿಕ, ಐತಿಹಾಸಿಕ ಹಾಗೂ ಪ್ರವಾಸಿ ತಾಣಗಳಿಂದಾಗಿ ರಾಜ್ಯದೆಲ್ಲೆಡೆ ಗುರುತಿಸಿಕೊಂಡಿದೆ. ಕಡಲ ತೀರಗಳ ನಾಡಾಗಿರುವ ಉತ್ತರಕನ್ನಡ ಜಿಲ್ಲೆಯ ಪ್ರವಾಸಿ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಬೇಕಿದೆ. ಕಾರವಾರ-ಅಂಕೋಲಾ ತಾಲೂಕಿನ ಸುಂದರ ಕರಾವಳಿಯಲ್ಲಿ ಅನೇಕ ಆಕರ್ಷಕ ಕಡಲತೀರಗಳಿವೆ. ಈ ಕಡಲತೀರಗಳನ್ನು ಅಭಿವೃದ್ಧಿಪ ಡಿಸಿದರೆ, ಪ್ರವಾಸಿಗರ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆಯಾಗಲಿದೆ. ಪಂಚಲಿಂಗ ಕ್ಷೇತ್ರಗಳಾದ ಗೋಕರ್ಣ ಮಹಾಬಲೇಶ್ವರ, ಕಾರವಾರದ ಶೆಜ್ಜೇಶ್ವರ, ಗುಣವಂತೇಶ್ವರ ಹಾಗೂ ಧಾರೇಶ್ವರಗಳನ್ನು ಅಭಿವೃದ್ಧಿಪಡಿಸಿದರೆ, ಧಾರ್ಮಿಕ ಪ್ರವಾಸೋದ್ಯಮ ಬೆಳೆಯಲಿದೆ. ಇದರ ಜೊತೆಗೆ, ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ಶ್ರೀ ಕ್ಷೇತ್ರ ಯಾಣದ ಅಭಿವೃದ್ಧಿಯು ಜಿಲ್ಲೆಯ ಪ್ರವಾಸೋದ್ಯಮಕ್ಕೆ ಇನ್ನಷ್ಟು ಗರಿಮೆ ನೀಡಲಿದೆ.

ಮೊಘಲರ ದೌರ್ಜನ್ಯದ ವಿರುದ್ಧ ಸಿಡಿದೆದ್ದು ಹಿಂದವಿ ಸಾಮ್ರಾಜ್ಯವನ್ನು ಸ್ಥಾಪಿಸಿದ ಹಿಂದೂ ಹೃದಯಸ್ಪರ್ಶಿ ಶಿವಾಜಿ ಮಹಾರಾಜರೊಂದಿಗೆ ಕಾರವಾರ ಅವಿನಾಭಾವ ಸಂಬಂಧವನ್ನು ಹೊಂದಿದೆ. ಶಿವಾಜಿ ಮಹಾರಾಜರು 1665 ಮತ್ತು 1673 ರಲ್ಲಿ ಎರಡು ಬಾರಿ ಕಾರವಾರಕ್ಕೆ ಭೇಟಿ ನೀಡಿದ್ದರು. ಅಲ್ಲಿ ಭವಾನಿ ದೇವಿಯನ್ನೂ ಪ್ರತಿಷ್ಠಾಪಿಸಲಾಗಿತ್ತು. ಅಲ್ಲಿ ದುರ್ಗಾದೇವಿ ಮಂದಿರ ತಲೆ ಎತ್ತಿ ಪೂಜಿಸಲಾಗುತ್ತಿದೆ. ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಸ್ಥಾಪಿಸಿ, ಆ ಐತಿಹಾಸಿಕ ಸ್ಥಳವನ್ನು ಸ್ಮಾರಕವಾಗಿ ನಿರ್ಮಿಸಿದರೆ, ಒಂದೆಡೆ ಪ್ರವಾಸೋದ್ಯಮವನ್ನು ಉತ್ತೇಜಿಸಿದಂತಾಗಲಿದೆ, ಮತ್ತೊಂದೆಡೆ ಅದು ಹಿಂದುತ್ವದ ರಕ್ಷಕ ಶಿವಾಜಿ ಮಹಾರಾಜರ ಆಶಯಗಳನ್ನು ಈಡೇರಿಸಿದಂತಾಗಲಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ತಾಲೂಕಿನ ಕಡವಾಡ ಗ್ರಾಮದ ನಂದವಾಳದಲ್ಲಿ ಸೋಂದಾ ಅರಸರಾಜಾ ಸದಾಶಿವ ನಾಯಕ ಅವರ ಸ್ವಾತಂತ್ರ್ಯ ಹೋರಾಟದ ಸ್ಮರಣಾರ್ಥ ನಾವು ಕಳೆದ 10 ವರ್ಷಗಳಿಂದ ವಿಜಯ ದಿವಸ್ ಆಚರಿಸಿ ಧ್ವಜಾರೋಹಣ ಸಮಾರಂಭ ನಡೆಸುತ್ತಿದ್ದೇವೆ. ಫೆಬ್ರವರಿ 26, 1725 ರಂದು, ಸೋದೆಯರಾಜ ಸದಾಶಿವ ರಾಯ, ಭಾರತದಲ್ಲಿ ಮೊದಲ ಬಾರಿಗೆ ಬ್ರಿಟಿಷರನ್ನು ಸೋಲಿಸಿ ಅವರ ಧ್ವಜವನ್ನು ಕೆಳಗಿಳಿಸಿ ಭಗವಾಧ್ವಜವನ್ನು ಹಾರಿಸಿದರು. ಅವರ ಸ್ಮರಣಾರ್ಥ ಒಂದು ಸ್ಮಾರಕವನ್ನು ನಿರ್ಮಿಸಿದಲ್ಲಿ ಭವಿಷ್ಯದ ಪೀಳಿಗೆಗೆ ಇಲ್ಲಿನ ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳಿಸಿದಂತಾಗಲಿದೆ.

ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಿಂದ ಈ ಪ್ರದೇಶದ ಆರ್ಥಿಕ ಚಟುವಟಿಕೆಯೂ ಹೆಚ್ಚಲಿದೆ. ಸರ್ಕಾರಕ್ಕೂ ಆದಾಯ ಬರಲಿದೆ. ಈ ಎಲ್ಲ ಕಾರಣಗಳಿಂದ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ರೂಪಾಲಿ ಎಸ್.ನಾಯ್ಕ ಆಗ್ರಹಿಸಿದರು. ಈ ಸಂದರ್ಭದಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕೂಲಿಕಾರರಿಗೆ ಸ್ಥಳದಲ್ಲೇ ಆರೋಗ್ಯ ತಪಾಸಣೆ

ಕಾರವಾರ: ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಒಳಗೊಳ್ಳದ ಕುಟುಂಬಗಳನ್ನು ಗುರುತಿಸಿ ಅಕುಶಲ ಕೆಲಸಕ್ಕಾಗಿ ನೋಂದಾಯಿಸುವ ದೃಷ್ಟಿಯಿಂದ ಹಮ್ಮಿಕೊಂಡ ದುಡಿಯೋಣ ಬಾಕಾರ್ಯಕ್ರಮ ದಲ್ಲಿ ದುಡಿಯುವ ಕೈಗಳು ಕೆಲಸದ ಭರದಲ್ಲಿ ಆರೋಗ್ಯ ನಿರ್ಲಕ್ಷಿಸುತ್ತಾರೆ ಎಂಬ ಉದ್ದೇಶದಿಂದ ಉದ್ಯೋಗ ಖಾತ್ರಿ ಯೋಜನೆಯಡಿ ದುಡಿಯುವ ಕೂಲಿಕಾರರಿಗಾಗಿ ಆರೋಗ್ಯ ತಪಾಸಣಾ ಶಿಬಿರವನ್ನು ಬುಧವಾರ ಸಿದ್ದಾಪುರ ತಾಲೂಕಿನ ಕಾನಗೋಡ ಗ್ರಾಮ ಪಂಚಾಯತ್ ನಲ್ಲಿ ನರೇಗಾದಡಿ ಕಾಲುವೆ ಕೆಲಸ ಸಂಧರ್ಭದಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ಆರೋಗ್ಯ ತಪಾಸಣೆ ನಡೆಸಿ ಬಿಪಿ, ಶುಗರ್, ನೆಗಡಿ, ಜ್ವರ ಪರೀಕ್ಷಿಸುವ ಮೂಲಕ ಎನ್‌ಸಿಡಿ ಕ್ಯಾಂಪ್ ನಡೆಸಲಾಯಿತು. ನರೇಗಾ ಸಹಾಯಕ ನಿರ್ದೇಶಕಿ ವಿದ್ಯಾ ದೇಸಾಯಿ ಮಾತನಾಡಿ, ನರೇಗಾದಡಿ ಸಿಗುವ ಸೌವಲತ್ತುಗಳು, ಕೂಲಿಕಾರರ ದಿನಗೂಲಿ 349ರೂ ನಿಂದ 370ಕ್ಕೆ ಏರಿಕೆಯಾಗಿರುವುದು, ಮಹಿಳಾ ಕೂಲಿಕಾರರ ಭಾಗವಹಿಸುವಿಕೆ ಹೆಚ್ಚಿಸುವುದು, ಕೆಲಸದಲ್ಲಿನ ವಿನಾಯಿತಿ, ಯೋಜನೆಯಡಿ ಸಿಗುವ ಸಹಾಯಧನದ ಬಳಕೆ, ಮಹಿಳೆಯರಿಗೆ ಇರುವ ಸೌವಲತ್ತುಗಳು, ಎನ್‌ಎನ್‌ಎಂಎಸ್ ಹಾಜರಾತಿ ಇತ್ಯಾದಿ ವಿಷಯಗಳ ಕುರಿತು ತಿಳಿಸಿದರು. ಉದ್ಯೋಗ ಖಾತ್ರಿಯಡಿ ಬಚ್ಚಲುಗುಂಡಿ, ಎರೆಹುಳು ತೊಟ್ಟಿ, ಕುರಿ, ಕೋಳಿ ಶೆಡ್, ದನದ ಕೊಟ್ಟಿಗೆ, ತೋಟಗಾರಿಕಾ ಬೆಳೆಗಳಿಗೆ ಸಹಾಯಧನ ಪಡೆದು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬಹುದು ಎಂಬುದನ್ನು ತಿಳಿಸಿದರು. ಹಾಗೂ ವರ್ಷದಲ್ಲಿ ಕುಟುಂಬವೊಂದಕ್ಕೆ 100ದಿನಗಳ ಕೆಲಸ ಖಾತ್ರಿ, ಗಂಡು ಹೆಣ್ಣಿಗೆ ಸಮಾನ ಕೂಲಿ, ಮಹಿಳೆಯರಿಗೆ ಹೆಚ್ಚಿನ ಆದ್ಯತೆ, ಹಿರಿಯ ನಾಗರಿಕರು, ವಿಶೇಷ ಚೇತನರು, ಗರ್ಭಿಣಿ, ಬಾಂಣಂತಿಯರಿಗೆ ಶೇ.50 ರಷ್ಟು ಕೆಲಸದಲ್ಲಿ ವಿನಾಯಿತಿ ಇತರ ವಿಷಯಗಳ ಕುರಿತು ಅರಿವು ಮೂಡಿಸಲಾಯಿತು. ಇನ್ನೂ ನರೇಗಾ ಕೂಲಿಕಾರರನ್ನು ಕಖಒಒಳ್ಗ ಮತ್ತು ಕಖಖಳ್ಗ ಉಳಿತಾಯ ಯೋಜನೆಯ ಸದುಪಯೋಗ ಪಡೆಯುವಂತೆ ತಿಳಿಸಿದರು. ಈ ವೇಳೆ ಕೆಲವು ಕೂಲಿಕಾರರಿಗೆ ಉದ್ಯೋಗ ಚೀಟಿ ನೀಡಿ ಕೆಲಸಕ್ಕೆ ಆಹ್ವಾನ ನೀಡಲಾಯಿತು. ನವೀಕರಣ ಹಾಗೂ ಹೊಸ ಉದ್ಯೋಗ ಚೀಟಿ ಪಡೆಯುವುದು ಸೇರಿದಂತೆ ಉದ್ಯೋಗ ಚೀಟಿಯಲ್ಲಿ ಮರಣ ಹೊಂದಿದವರು ಹಾಗೂ ಮದುವೆಯಾಗಿ ಬೇರೆ ಊರಿಗೆ ಹೋಗಿರುವವರ ಹೆಸರು ರದ್ದು ಮಾಡುವುದು ಕಡ್ಡಾಯ ಎಂಬುದನ್ನು ತಿಳಿಸಿದರು.

ಶಿರಸಿ-ಹಾವೇರಿ ಹೆದ್ದಾರಿ ಕಾಮಗಾರಿಗೆ ಗ್ರೀನ್ ಸಿಗ್ನಲ್

ಹಾನಗಲ್: 766 ಇ ಸಾಗರಮಾಲಾ ಯೋಜನೆಯಡಿ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಬೇಕಾದ ಶಿರಸಿ-ಹಾವೇರಿ ಹೆದ್ದಾರಿಯ ಕಾಮಗಾರಿಗೆ ಅರಣ್ಯ ಇಲಾಖೆ ಗ್ರೀನ್ ಸಿಗ್ನಲ್ ನೀಡಿದ್ದು, ಏಳೆಂಟು ತಿಂಗಳ ನಂತರ ಕಾಮಗಾರಿ ನಡೆಸಲು ಅನುಮತಿ ಸಿಕ್ಕಿರುವುದರಿಂದ ಪ್ರಯಾಣಿಕರು ನಿಟ್ಟುಸಿರು ಬಿಟ್ಟಿದ್ದಾರೆ.

ಶಿರಸಿ-ಹಾವೇರಿ ಹೆದ್ದಾರಿ ಶಿರಸಿ ವ್ಯಾಪ್ತಿಯಲ್ಲಿ 28 ಹೆಕ್ಟರ್ ಹಾಗೂ ಹಾವೇರಿ ವ್ಯಾಪ್ತಿಯಲ್ಲಿ 2 ಹೆಕ್ಟರ್ ಅರಣ್ಯ ಜಾಗದಲ್ಲಿ ಹಾಯ್ದು ಹೋಗಿದೆ. ಅಗಲೀಕರಣ ಸಂದರ್ಭದಲ್ಲಿ ಮರಗಳ ಕಟಿಂಗ್ ಮಾಡಬೇಕಾಗಿದೆ. ಅದಕ್ಕೀಗ ಅನುಮತಿ ಸಿಕ್ಕಿದೆ. ಅರಣ್ಯ ಇಲಾಖೆಯ ಅನುಮತಿ ಪಡೆಯದೇ ರಸ್ತೆ ಅಗೆದು ಹಾಕಲಾಗಿತ್ತು. ಇದರಿಂದ ಸಂಚಾರ ಸಂಚಕಾರ ತಂದೊದಗಿತ್ತು. ಈ ಕುರಿತಂತೆ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಹಾವೇರಿ ಜಿಪಂ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕರನ್ನು ಶಾಸಕ ಶ್ರೀನಿವಾಸ ಮಾನೆ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದರು.

> ಶಿರಸಿ-ಹಾವೇರಿ ಹೆದ್ದಾರಿ ಕಾಮಗಾರಿ ಕುರಿತು ಹಲವು ಬಾರಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಹಿರಿಯ ಅಧಿಕಾರಿಗಳ ಗಮನ ಸೆಳೆಯಲಾಗಿತ್ತು. ಕಾಮಗಾರಿ ಕೈಗೊಳ್ಳಲು ಅರಣ್ಯ ಇಲಾಖೆ ಅನುಮತಿ ನೀಡಿದೆ. ಈ ಭಾಗದ ಜನತೆಯ ಸಮಸ್ಯೆಗೆ ಸ್ಪಂದಿಸಿ ಅಧಿಕಾರಿಗಳು ಬೇಗನೇ ಕಾಮಗಾರಿ ಪೂರ್ಣಗೊಳಿಸಬೇಕಿದೆ.
>
> -ಶ್ರೀನಿವಾಸ ಮಾನೆ, ಶಾಸಕ

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಕಳೆದ ಸೆಪ್ಟೆಂಬರ್‌ನಲ್ಲಿ ಅರಣ್ಯ ಇಲಾಖೆಗೆ 17 ಕೋಟಿ ರು. ಭರಿಸಿದೆ. ಜತೆಯಲ್ಲಿ ಹೆದ್ದಾರಿಗೆ ಹೋಗುವ ಅರಣ್ಯ ಜಾಗದ ಬದಲು ಕಂದಾಯ ಇಲಾಖೆ ಅರಣ್ಯ ಇಲಾಖೆಗೆ ಅರಣ್ಯ ಬೆಳೆಸಲು ಪ್ರತ್ಯೇಕ ಜಾಗ ನೀಡಬೇಕೆನ್ನುವ ನಿಯಮದ ಹಿನ್ನೆಲೆಯಲ್ಲಿ ವಿಜಯಪುರದಲ್ಲಿ 50 ಎಕರೆ ನೀಡಿದೆ. ಈ ಎಲ್ಲ ಪ್ರಕ್ರಿಯೆಗಳ ನಂತರವೇ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಗ್ರೀನ್ ಸಿಗ್ನಲ್ ಸಿಕ್ಕಿದೆ.

32 ಕಿ.ಮೀ. ಕೆಲಸ ಬಾಕಿ ಇರುವುದರಿಂದ ಕಳೆದ 2 ವರ್ಷಗಳಿಂದ ಶಿರಸಿ-ಹಾವೇರಿ ರಸ್ತೆಯಲ್ಲಿ ಓಡಾಡಲು ಹಿಂದೇಟು ಹಾಕುವಂತಾಗಿತ್ತು. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಿಂದ ಕರಾವಳಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಸಂಪರ್ಕ ಕಲ್ಪಿಸಲು ಇದೇ ಮಾರ್ಗದಲ್ಲಿ ಪ್ರಯಾಣ ಬೆಳೆಸಬೇಕಾದ ಅನಿವಾರ್ಯತೆಯ ಹಿನ್ನೆಲೆಯಲ್ಲಿ ವಾಹನ ದಟ್ಟಣೆ ಹೆಚ್ಚಿರುವ ಕಾರಣ ಪ್ರಯಾಣಿಕರ ಗೋಳು ಹೇಳತೀರದ್ದಾಗಿತ್ತು. ಶಾಸಕ ಶ್ರೀನಿವಾಸ ಮಾನೆ ಸೇರಿದಂತೆ ಶಿರಸಿ, ಹಾವೇರಿ ಭಾಗದ ಹಲವು ಜನಪ್ರತಿನಿಧಿಗಳ ಪ್ರಯತ್ನದ ಕಾರಣದಿಂದ ಹೆದ್ದಾರಿ ನಿರ್ಮಾಣ ಕಾಮಗಾರಿಗೆ ಅನುಮತಿ ಸಿಕ್ಕಿದೆ. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಇನ್ನಾದರೂ ವಿಶೇಷ ಮುತುವರ್ಜಿ ವಹಿಸಿ ಕಾಮಗಾರಿ ಪೂರ್ಣಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎನ್ನುವುದು ಈ ಭಾಗದ ಜನತೆಯ ಒಕ್ಕೊರಲಿನ ಅಭಿಪ್ರಾಯವಾಗಿದೆ.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಾವೇರಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಕ್ಕೆ ಪಿಯುಸಿ, ಐಟಿಐ ಮತ್ತು ಡಿಪ್ಲೋಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಜೂ.20 ರೊಳಗಾಗಿ ವೆಬ್‌ಸೈಟ್ https://shp.karnataka.gov.in/ bcwd ನಲ್ಲಿ ಅರ್ಜಿ ಸಲ್ಲಿಸಬೇಕು. ಪ್ರವರ್ಗ-1, ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ 2.50 ಲಕ್ಷ ರು.ದೊಳಗೆ ಹಾಗೂ ಪ್ರವರ್ಗ-2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರ ಆದಾಯ 1ಲಕ್ಷ ರು.ದೊಳಗಿರಬೇಕು. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https:// bcwd.karnataka.gov.in ನಲ್ಲಿ ನೋಡಬಹುದು.

Crl.Misc.No.167/2024
ಮೆ॥ 2ನೇ ಅಧಿಕ ದಿವಾಣಿ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಧಾರವಾಡ
ಅರ್ಜಿದಾರ : ಶ್ರೀ ಜುಮ್ಮಾ ಪೀರು ದೌಲಿವಾಲೆ
ವಿರುದ್ಧ
ಎದುರುದಾರರು : ಜನನ ಮತ್ತು ಮರಣಗಳ ರಜಿಸ್ಟ್ರರ್, ಧಾರವಾಡ
ಆದೇಶ 5 ನಿಯಮ 20(1-ಎ) ಸಿ.ಪಿ.ಸಿ. ಕೆಳಗೆ ನೋಟಿಸು.
ಇದರಲ್ಲಿ ಅರ್ಜಿದಾರ ತನ್ನ ತಂದೆಯವರಾದ ಪೀರು ಜುಮ್ಮಾ ದೌಲಿವಾಲೆ ಇವರು ದಿನಾಂಕ: 16-02-1986 ರಂದು ಗೌಳಿಗಲ್ಲಿ, ಮಾಳಮಡ್ಡಿ, ಧಾರವಾಡದಲ್ಲಿ ಮರಣ ಹೊಂದಿದ್ದು ಇರುತ್ತದೆ. ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಈ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಯಾರದಾದರೂ ತಂಟೆ ವ ತಕರಾರು ಇದ್ದಲ್ಲಿ ತಾವಾಗಲಿ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರ ದಿನಾಂಕ: 30-06-2025 ರಂದು ಮುಂಜಾನೆ 11.00 ಘಂಟೆಗೆ ಹಾಜರಾಗಿ ತಕರಾರು ಮಂಡಿಸಲು ಹಾಜರಾಗಬೇಕು, ಒಂದು ವೇಳೆ ಗೈರು ಹಾಜರ ಆದಲ್ಲಿ ಸದರ ಪ್ರಕರಣವನ್ನು ಏಕತರ್ಫಿ ಆಗಿ ನಿಕಾಲಿ ಮಾಡುತ್ತಾರೆ ತಿಳಿಯಿರಿ ಅಂತಾ ಕೊಟ್ಟ ನೋಟಿಸ್.
ಈ ಹೊತ್ತು ದಿನಾಂಕ: 22-05-2025 ರಂದು ನಮ್ಮ ಸಹಿ ವ ಕೋರ್ಟಿನ ಮೊಹರು ಮಾಡಿ ಕೊಡಲ್ಪಟ್ಟಿತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಧಾರವಾಡ 22-5-2025
ಮೆ॥ 2ನೇ ಅಧಿಕ ದಿವಾಣಿ ಮತ್ತು ಜೆ.ಎಮ್.ಎಫ್.ಸಿ 2 ನ್ಯಾಯಾಲಯ ಧಾರವಾಡ
ಸಹಿ/- ನವೀನ ಹೆಚ್.ಟಿ.
ಅರ್ಜಿದಾರ ಪರ ವಕೀಲರು
Court Seal

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ

ಕಾರವಾರ: ಉತ್ತರಕನ್ನಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಪಿ.ಯು.ಸಿ., ಐ.ಟಿ.ಐ. ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಮಾತ್ರ) ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ 2025-26ನೇ ಸಾಲಿಗೆ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದ ವಿಳಾಸ https://shp.karnataka.gov.in/bcwd ಆನ್‌ಲೈನ್ ಮೂಲಕ ಜೂನ್ 20 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ: ಪ್ರವರ್ಗ-1, ಎಸ್.ಸಿ. ಎಸ್.ಟಿ. ರೂ. 2,50,000/- ಮತ್ತು ಪ್ರವರ್ಗ-2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ರೂ. 1,00,000 ಒಳಗಿರಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ನ್ನು ನೋಡಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwd.helpline@gmali.com ಇ-ಮೇಲ್ ಮುಖಾಂತರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು.

ಕ್ಷೇತ್ರದ ನಂಟು ಬಿಡದ ಬಿ.ಸಿ.ಪಾಟೀಲರು

ಹಿರೇಕೆರೂರು: ಸ್ನೇಹ ಪರ ನಡುವಳಿಕೆ ಪರೋಪಕಾರದ ಮನೋವೃತ್ತಿ ಬಿ.ಸಿ.ಪಾಟಿಲ ಅವರನ್ನು ಎತ್ತರಕ್ಕೆ ಒಯ್ದಿದೆ.ಅಧಿಕಾರ ಇಲ್ಲದಿದ್ದರೂ ಕ್ಷೇತ್ರದ ಜನತೆಯ ಜತೆ ಇದ್ದು ಪ್ರಿತಿ ಗಳಿಸಿದ್ದಾರೆ. ಕುರುಕ್ಷೇತ್ರದಲ್ಲಿ ಕೌರವ ಒಬ್ಬ ಜನ ವಿಲನ್ ಆದರೆ ಹಿರೇಕೆರೂರ ಕ್ಷೇತ್ರದಲ್ಲಿ ಕೌರವ ಬಿ.ಸಿ.ಪಾಟೀಲ ಆಧುನಿಕ ಭಗೀರಥರಾಗಿದ್ದಾರೆ ಎಂದು ಮಾಜಿ ಸಚಿವ ಪ್ರಮೋದ ಮದ್ವರಾಜ ಹೇಳಿದರು.

ರಷ್ಯಾ ದೇಶದ ರಾಜಧಾನಿ ಮಾಸ್ಕೋದಲ್ಲಿ ನಡೆದ ಪ್ರತಿಷ್ಠಿತ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಪ್ರಶಸ್ತಿಯನ್ನು ಮಾಜಿ ಸಚಿವ ಬಿ.ಸಿ.ಪಾಟೀಲ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ಹಿರೇಕೆರೂರು ಹಾಗೂ ರಟ್ಟಿಹಳ್ಳಿ ತಾಲೂಕಿನ ನಾಗರಿಕರಿಂದ ಪಟ್ಟಣದ ಗುರುಭವನದಲ್ಲಿ ನಡೆದ ಅಭಿವೃದ್ಧಿ ಹರಿಕಾರನಿಗೊಂದು ಅಭಿನಂದನೆ ಕಾರ್ಯಕ್ರಮ ಉದ್ಘಾಟಿಸಿದರು.

ರಟ್ಟೀಹಳ್ಳಿ ಕಬ್ಬಿಣಕಂತಿ ಮಠದ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ತಾಲೂಕಿಗೆ ಬಿ.ಸಿ.ಪಾಟೀಲ ಅವರು ಮಾಡಿದ ಸೇವೆ ಇತ್ತೀಚಿನ ದಿನಗಳಲ್ಲಿ ಎಲ್ಲರ ನೆನಪಗೆ ಬರುತ್ತಿದೆ. ಸಮಾಜದಲ್ಲಿ ಶ್ರೇಷ್ಠ ಕಲಾವಿದನಾಗಿ. ದಕ್ಷ ಅಧಿಕಾರಿಯಾಗಿ ಶ್ರೇಷ್ಠ ಜನನಾಯಕನಾಗಿ ಇಂದು ಹೊರಹೊಮ್ಮಿ ಗ್ಲೋಬಲ್ ಅಚೀವರ್ ಅವಾರ್ಡ್ ಪಡೆದಿದ್ದಾರೆ ಎಂದರು.

ತಿಪ್ಪಯಿಕೊಪ್ಪ ಶ್ರೀಗುರುಮೂಖಪ್ಪ ಶಿವಯೋಗಿಗಳ ಮಠದ ಮಹಾಂತ ಸ್ವಾಮೀಜಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾಜಿ ಸಚಿವ ಬಿ.ಸಿ.ಪಾಟೀಲ, ನಾನು ನನ್ನ ಕ್ಷೇತ್ರದ ಜನರಿಗೆ ಮಾಡಿದ ಅಭಿವೃದ್ಧಿಯನ್ನು ಗುರುತಿಸಿ ವಿಶ್ವವಾಣ ಪತ್ರಿಕೆ ಗ್ಲೋಬಲ್ ಅಚೀವರ್ ಅವಾರ್ಡ್ ನೀಡಿ ಗೌರವಿಸಿ ಇನ್ನು ಕ್ರೇತ್ರದ ಜನರ ಸೇವೆ ಮಾಡಲು ಹೆಚ್ಚಿನ ಜವಾಬ್ದಾರಿ ನೀಡಿದೆ. ಇಂದು ತಾವೆಲ್ಲರೂ ನಾನು ಅಧಿಕಾರದಲದಲ್ಲಿ ಇಲ್ಲದಿದ್ದರೂ ನನ್ನ ಅಭಿನಂದಿಸುವ ಮೂಲಕ ಅಭೂತಪೂರ್ವ ಪ್ರೀತಿ ತೋರಿಸಿದ್ದೀರಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ನ್ಯಾಯವಾದಿ ಎನ್.ಜಿ.ಬಣಕಾರ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಪಾಲಾಕ್ಷಗೌಡ ಪಾಟೀಲ, ಜಿ.ಶಿವನಗೌಡ್ರ, ಎಸ್.ಎಸ್.ಪಾಟೀಲ, ಡಿ.ಎಮ್.ಸಾಲಿ, ರವಿಶಂಕರ ಬಾಳಿಕಾಯಿ, ಜಿ.ಪಿ.ಪ್ರಕಾಶಗೌಡ್ರ, ಆರ್.ಎನ್, ಗಂಗೋಳ, ಜಗದೀಶ ದೊಡ್ಡಗೌಡ್ರ, ಶಿವಕುಮಾರ ತಿಪ್ಪಶೆಟ್ಟಿ, ದೇವರಾಜ ನಾಗಣ್ಣನವರ, ಪರಮೇಶಪ್ಪ ಹಲಗೇರಿ, ಮಂಜುನಾಥ ಚಲವಾದಿ ಹಾಗೂ ಬಿ.ಸಿ.ಪಾಟೀಲ ಅಭಿಮಾನಿಗಳು ಇದ್ದರು.

ಪಟ್ಟಣದ ಗುರುಭವನದಲ್ಲಿ ನಡೆದ ಅಭಿವೃದ್ಧಿ ಹರಿಕಾರನಿಗೊಂದು ಅಭಿನಂದನಾ ಕಾರ್ಯಕ್ರಮವನ್ನು ಮಾಜಿ ಸಚಿವ ಪ್ರಮೋದ ಮದ್ವರಾಜ ಉದ್ಘಾಟಿಸಿದರು.

> ಬಿ.ಸಿ.ಪಾಟೀಲರು ಪೊಲೀಸ್ ಇಲಾಖೆ, ಚಿತ್ರರಂಗ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತಮ್ಮದೇ ಸೇವೆ ಸಲ್ಲಿಸುತ್ತಾ ಬಂದಿದ್ದು ಅವರು ಸಾಧನೆಯ ಉತ್ತುಂಗಕ್ಕೆ ಏರಲು ಮತ್ತು ಹಿರೇಕೆರೂರ ಕ್ಷೇತ್ರದ ಜನರ ಪ್ರೀತಿ, ವಿಶ್ವಾಸ ಗಳಿಸಲು ಸಾಧ್ಯವಾಗಿದೆ. ಅಲ್ಲದೇ ರಾಜ್ಯದ ರಾಜಕೀಯದಲ್ಲು ಮೂರು ಪಕ್ಷಗಳಿಂದ ಶಾಸಕರಾಗಿರುವ ಹೆಗ್ಗಳಿಕೆ ಸಹ ಅವರಿಗೆ ಇದೆ.
>
> -ಪ್ರಮೋದ ಮದ್ವರಾಜ, ಮಾಜಿ ಸಚಿವ

ಸಮಾಚಾರ ಸಣ್ಣದಲ್ಲ

ಉಪಚುನಾವಣೆ: 25ಕ್ಕೆ ಸಂತೆ- ಜಾತ್ರೆ ನಿಷೇಧ

ಕೊಪ್ಪಳ: ಜಿಲ್ಲೆಯ ಎರಡು ಗ್ರಾ.ಪಂ ನಲ್ಲಿ ವಿವಿಧ ಕಾರಣಕ್ಕೆ ತೆರವಾಗಿರುವ ಸದಸ್ಯ ಸ್ಥಾನಕ್ಕೆ ಮೇ 25 ರಂದು ಉಪ ಚುನಾವಣೆ ನಡೆಯಲಿದ್ದು, ಮುಕ್ತ, ನ್ಯಾಯ ಸಮ್ಮತ ಹಾಗೂ ಶಾಂತಿಯುತ ಮತದಾನ ಪ್ರಕ್ರಿಯೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಸಂಬಂಧಿಸಿದ ಗ್ರಾಪಂ ವ್ಯಾಪ್ತಿಯ ಸಂತೆ-ಜಾತ್ರೆ ರದ್ದುಪಡಿಸಿ ಜಿಲ್ಲಾಧಿಕಾರಿ ನಲಿನ್ ಅತುಲ್ ಆದೇಶಿಸಿದ್ದಾರೆ. ಕೊಪ್ಪಳ ತಾಲೂಕು ಕವಲೂರು ಗ್ರಾಪಂ ಹಾಗೂ ಯಲಬುರ್ಗಾ ತಾಲೂಕು ಗಾಣದಾಳ ಗ್ರಾಪಂನಲ್ಲಿ ತೆರವಾದ ಸದಸ್ಯ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಚುನಾವಣೆ ದಿನ ಸಂಬಂಧಿಸಿದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಸಂತೆ-ಜಾತ್ರೆ ನಡೆಸಬಾರದು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಶಸ್ತ್ರಾಸ್ತ್ರ ಠೇವಣಿಗೆ ಜಿಲ್ಲಾಧಿಕಾರಿ ಸೂಚನೆ

ಕೊಪ್ಪಳ: ತಾಲೂಕಿನ ಕವಲೂರು ಗ್ರಾಪಂ ಹಾಗೂ ಯಲಬುರ್ಗಾ ತಾಲೂಕಿನ ಗಾಣದಾಳ ಗ್ರಾಪಂನ ಸದಸ್ಯ ಸ್ಥಾನಕ್ಕೆ ಮೇ 25 ರಂದು ಚುನಾವಣೆ ನಡೆಯಲಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಪೊಲೀಸ್ ಠಾಣೆಗೆ ಠೇವಣಿ ಮಾಡುವಂತೆ ಜಿಲ್ಲಾಧಿಕಾರಿ ನಲಿನ್ ಅತುಲ್ ಆದೇಶಿಸಿದ್ದಾರೆ. ಸಂಬಂಧಿಸಿದ ಗ್ರಾಪಂ ವ್ಯಾಪ್ತಿಯ ರೈತರು, ಗಣ್ಯವ್ಯಕ್ತಿಗಳು ಹಾಗೂ ಇತರರು ಹೊಂದಿರುವ ಪರವಾನಗಿ ಹೊಂದಿದ ಶಸ್ತ್ರಾಸ್ತ್ರ ಠೇವಣಿ ಮಾಡಬೇಕು. ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಠೇವಣಿ ಮಾಡುವ ಅವಶ್ಯಕವಿದೆ ಎಂದು ಡಿಸಿ ತಿಳಿಸಿದ್ದಾರೆ. ಉಪ ಚುನಾವಣೆ ನೀತಿ ಸಂಹಿತೆ ಅವಧಿ ಮುಗಿದ ನಂತರ ನಿಯಮಾನುಸಾರ ಪರವಾನಿಗೆದಾರರ ವಶಕ್ಕೆ ನೀಡಲು ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಈ ಆದೇಶವು ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಆರ್ ಬಿಐ ನಿಂದ ಮಾನ್ಯತೆ ಪಡೆದಿರುವ ಬ್ಯಾಂಕ್ ಗಡ ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಕೊಪ್ಪಳ: ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗ ವ್ಯಾಪ್ತಿಯ 110 ಕೆ.ವಿ ಬೆಟಗೇರಿ ಸ್ಟೇಷನ್ ಹಾಗೂ 33 ಕೆ.ವಿ ಅಳವಂಡಿ ನಿರ್ವಹಣೆ ಕಾಮಗಾರಿ ಹಿನ್ನೆಲೆ ಸ್ಟೇಶನ್ ವ್ಯಾಪ್ತಿಯ ಗ್ರಾಮದಲ್ಲಿ ಮೇ. 23 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆ ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಎಫ್-1 ಮೋರನಾಳ, ಎಫ್-2 ಬೋಚನಹಳ್ಳಿ, ಎಫ್-3 ಹನಕುಂಟಿ, ಎಫ್-4 ಬೆಟಗೇರಿ ವಾಟರ್ ಸಪ್ಲೈ, ಎಫ್-5 ತಿಗರಿ, ಎಫ್-6 ಬೆಟಗೇರಿ, ಎಫ್-7 ನೀರಲಗಿ, ಎಫ್-8 ಕಾತರಕಿ, ಎಫ್-9 ಡಂಬ್ರಳ್ಳಿ, ಎಫ್-10 ಮತ್ತೂರು, ಎಫ್-11 ಬಿಸರಹಳ್ಳಿ, ಎಫ್-1 ಭೈರಾಪೂರ, ಎಫ್-2 ಅಳವಂಡಿ, ಎಫ್-3 ಹಲವಾಗಲಿ, ಎಫ್-4 ಬೆಳಗಟ್ಟಿ, ಎಫ್-5 ಕವಲೂರ ಹಾಗೂ ಎಫ್-6 ಹೈದರ ನಗರಗಳ 11 ಕೆ.ವಿ ಮತ್ತು 33 ಕೆ.ವಿ ಲೈನ್ ನಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ನಿರ್ವಹಣೆ ಕೆಲಸ ಬೇಗ ಮುಗಿದರೆ ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. ಆದ್ದರಿಂದ ಸಾರ್ವಜನಿಕರು ವಿದ್ಯುತ್ ದುರಸ್ಥಿ ಕೆಲಸ-ಕಾರ್ಯ ಮಾಡಬಾರದು ಎಂದು ಸೂಚಿಸಲಾಗಿದೆ. ಒಂದು ವೇಳೆ ವಿದ್ಯುತ್ ಅಘಘಾತ ಸಂಭವಿಸಿದ್ದಲ್ಲಿ ಕಂಪನಿ ಜವಾಬ್ದಾರರಾಗಿರುವುದಿಲ್ಲ ಎಂದು ಜೆಸ್ಕಾಂ ಕೊಪ್ಪಳ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧಿಕಾರಿಗಳ ದಾಳಿ, ಪಡಿತರ ಅಕ್ಕಿ ವಶ

ಸಿಂಧನೂರು: ಆಹಾರ ಇಲಾಖೆ ಅಧಿಕಾರಿಗಳು ನ್ಯಾಯಬೆಲೆ ಅಂಗಡಿ ಮುಂದೆ ಅಕ್ರಮವಾಗಿ ಅಕ್ಕಿ ಖರೀದಿ ಮಾಡುವವರ ಮೇಲೆ ದಾಳಿ ಮಾಡಿ ಪಡಿತರ ಅಕ್ಕಿ ವಶಪಡಿಸಿಕೊಂಡ ಘಟನೆ ಬುಧವಾರ ಬೆಳಿಗ್ಗೆ ನಗರದ ಪಿಡಬ್ಲ್ಯೂಡಿ ಕ್ಯಾಂಪ್‌ನಲ್ಲಿ ನಡೆದಿದೆ.ನಗರದ ಪಿಡಬ್ಲ್ಯೂಡಿ ಕ್ಯಾಂಪ್‌ನಲ್ಲಿ ಕೆ. ಗೋಪಾಲರಾವ್ ನ್ಯಾಯಬೆಲೆ ಅಂಗಡಿ ಸಂಖ್ಯೆ -134 ಮುಂದೆ ಅಕ್ರಮವಾಗಿ ಅಕ್ಕಿ ಖರೀದಿ ಮಾಡುವ ಕುರಿತು ಸಾರ್ವಜನಿಕರ ದೂರಿನ ಮೇರೆಗೆ ಬುಧವಾರ ಆಹಾರ ಇಲಾಖೆ ನಿರೀಕ್ಷಕ ಹನಮೇಶ ನಾಯಕ ದಿಢೀರನೇ ಭೇಟಿ ನೀಡಿ ಅಕ್ರಮವಾಗಿ ಖರೀದಿ ಮಾಡುತ್ತಿದ್ದವರಿಂದ ಪಡಿತರ ಅಕ್ಕಿ ವಶಪಡಿಸಿಕೊಂಡು ಇನ್ನು ಮುಂದೆ ಈ ರೀತಿ ಆಗದಂತೆ ಅಂಗಡಿ ಸಂಚಾಲಕರಿಗೆ ಎಚ್ಚರಿಕೆ ನೀಡಿದರು.ಆಹಾರ ನಿರೀಕ್ಷಕ ಹನಮೇಶ ನಾಯಕ ಅವರು ಮಹಿಳೆಯಿಂದ ಅಕ್ಕಿ ಚೀಲ ವಶಪಡಿಸಿಕೊಂಡಿದ್ದು ಇದನ್ನು ನೋಡಿದ ಕೆಲವರು ಅಕ್ಕಿ ಚೀಲಗಳ ಸಮೇತ ಓಡಿ ಹೋದ ದೃಶ್ಯ ಕಂಡು ಬಂದಿತು. ಈ ಕುರಿತು ಯಾವುದೇ ದೂರು ದಾಖಲಾಗಿಲ್ಲ.

ವಿರಾಮ
ಪ್ರತಿ ಭಾನುವಾರ

{ಥಾವರ್‌ಚಂದ್ ಗೆಹ್ಲೋಟ್} ರಾಜ್ಯಪಾಲ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಭಾರತ ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ಸುವರ್ಣ ಯುಗವನ್ನೇ ಕಾಣುತ್ತಿದೆ. ಂದಾಜು 17.1 ಕೋಟಿ ರು. ವೆಚ್ಚದಲ್ಲಿ ವಿಶ್ವ ದರ್ಜೆಯ ಸೌಲಭ್ಯಗಳಿರುವಂತೆ ರೈಲು ನಿಲ್ದಾಣಗಳನ್ನು ಪುನರಾಭಿವೃದ್ಧಿಪಡಿಸಿದ್ದಾರೆ. ಇದು ನನಗೆ ವಿಶೇಷ ಸಂತಸ ತಂದಿದೆ.

ದೇಶದ 103 ರೈಲು ನಿಲ್ದಾಣಗಳಿಗೆ ವೀಡಿಯೊ ಕಾನ್ಫರೆನ್ಸ್: ಪ್ರಧಾನಿ ಚಾಲನೆ

ಅಮೃತ ಭಾರತ ರೈಲ್ವೇ ನಿಲ್ದಾಣ ಲೋಕಾರ್ಪಣೆ

ಕೊಪ್ಪಳ: ಅಮೃತ ಭಾರತ ನಿಲ್ದಾಣ ಯೋಜನೆಯಡಿ ಪುನರಾಭಿವೃದ್ಧಿಗೊಂಡ, ಜಿಲ್ಲೆಯ ಮುನಿರಾಬಾದ್ ಸೇರಿ ದೇಶದ 103 ರೈಲ್ವೇ ನಿಲ್ದಾಣ ಮತ್ತು ಇತರೇ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಚಾಲನೆ ನೀಡಿದರು. ಪ್ರಧಾನ ಮಂತ್ರಿ, ರಾಜಸ್ಥಾನದ ಬಿಕಾನೆರದಿಂದ ವೀಡಿಯೊ ಕಾನ್ಫರೆನ್ಸ್ ಮೂಲಕ ಎಲ್ಲ ಯೋಜನೆ ಉದ್ಘಾಟನೆ ಮಾಡಿದರು.

> ಅಮೃತ ಭಾರತ ಸ್ಟೇಷನ್ ಯೋಜನೆ ಅಡಿಯಲ್ಲಿ ಪುನರಾಭಿವೃದ್ಧಿಗೊಂಡ ರೈಲು ನಿಲ್ದಾಣಗಳು ತುಂಭಾ ಸುಂದರವಾಗಿವೆ. ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಹಲವಾರು ಸೌಲಭ್ಯ ಒದಗಿಸಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಹಲವಾರು ಐತಿಹಾಸಿಕ ಪ್ರವಾಸಿ ಸ್ಥಳಗಳು ಇರುವುದರಿಂದ ಇಲ್ಲಿಗೆ ಬರುವ ಪ್ರವಾಸಿಗರಿಗೂ ರೈಲು ಸಾರಿಗೆಯಿಂದ ತುಂಬಾ ಅನುಕೂಲವಾಗಲಿದೆ.
>
> -ಹೇಮಲತ ನಾಯಕ, ಶಾಸಕಿ

ಮುನಿರಾಬಾದ್ ರೈಲ್ವೇ ನಿಲ್ದಾಣದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಸದ ಕೆ.ರಾಜಶೇಖರ ಹಿಟ್ನಾಳ ಮಾತನಾಡಿ, ಬಡವರಿಗೆ ಕಡಿಮೆ ದರದಲ್ಲಿ ಸಾರಿಗೆ ಸೇವೆ ಒದಗಿಸುವ ವ್ಯವಸ್ಥೆ ರೈಲ್ವೆ ಇಲಾಖೆಯದ್ದು. ಸಾರ್ವಜನಿಕರಿಗೆ ಅನುಕೂಲ ವಾಗುವ ರೀತಿ ಕಡಿಮೆ ದರದಲ್ಲಿ ದೇಶಾದ್ಯಂತ ಪ್ರಯಾಣ ಮಾಡಲು ರೈಲ್ವೆ ವಲಯ ಒಂದು ಜನಸ್ನೇಹಿ. ಇಂತಹ ರೈಲ್ವೆ ಇಲಾಖೆಯಲ್ಲಿ ರೈಲು ನಿಲ್ದಾಣ ಉನ್ನತೀಕರಿಸಿ, ಎಲ್ಲ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡುವಂತಹ ಕೆಲಸ ಕೇಂದ್ರ ಸರಕಾರ ಮಾಡುತ್ತಿದೆ ಎಂದು ತಿಳಿಸಿದರು.

ಕೊಪ್ಪಳ ತಾಲೂಕಿ ಮುನಿರಾಬಾದ್ ರೈಲ್ವೇ ನಿಲ್ದಾಣದ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಇದರ ಭಾಗವಾಗಿ ಮುನಿರಾಬಾದ್ ರೈಲ್ವೆ ನಿಲ್ದಾಣ ಅಮೃತ ಭಾರತ ನಿಲ್ದಾಣ ಯೋಜನೆಯಡಿ ಪುನರಾಭಿವೃದ್ಧಿಪಡಿಸಿ ರೂ. 18.40 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿ ಲೋಕಾರ್ಪಣೆ ಮಾಡಲಾಗಿದೆ. ಇದರಿಂದ ಶ್ರೀ ಹುಲಿಗೆಮ್ಮ ದೇವಿ ಸ್ಥಾನದ ದರ್ಶನ ಕ್ಕಾಗಿ ಬರುವ ಭಕ್ತಾಧಿಗಳಿಗೆ ತುಂಬಾ ಅನುಕೂಲ ವಾಗಿದೆ. ಮುನಿರಾಬಾದ್ ನಿಲ್ದಾಣ ವಿಶ್ವ ದರ್ಜೆಯ ಸೌಲಭ್ಯದೊಂದಿಗೆ ಪುನರಾಭಿವೃದ್ಧಿ ಮಾಡಲಾಗಿದೆ. ಉತ್ತಮ ಪಾರ್ಕಿಂಗ್, ನಿರೀಕ್ಷಣಾ ಕೊಠಡಿ, ಜಲ ಸಂರಕ್ಷಣೆ, ಸೌರಶಕ್ತಿ, ಹಸಿರು ಸ್ಥಳ ಮತ್ತು ಇತರೇ ಮೂಲ ಸೌಲಭ್ಯಗಳ ವ್ಯವಸ್ಥೆ ಹೊಂದಿದೆ ಎಂದರು.

ನಮ್ಮ ಭಾಗದಲ್ಲಿ ಬಹಳಷ್ಟು ರೈಲ್ವೆ ಯೋಜನೆಗಳು ಆಗಬೇಕಿದ್ದು, ಇದಕ್ಕಾಗಿ ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುನಿರಾಬಾದ್ ರೈಲು ನಿಲ್ದಾಣಕ್ಕೆ ಶ್ರೀ ಹುಲಿಗೆಮ್ಮ ದೇವಿ ತಾಯಿಯ ಹೆಸರಿಡುವಂತೆ ಹಲವಾರು ಜನರು ಮನವಿ ಮಾಡಿದ್ದಾರೆ. ಈಗಾಗಲೇ ಸಿಎಂಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೊಪ್ಪಳ ನಗರದ ಸ್ವಾಮಿವಿವೇಕಾನಂದ ಶಾಲೆಯ ಹತ್ತಿರದ ರೈಲ್ವೆ ಲೈನ್ ಬಳಿಯ ಸೇತುವೆಯ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು. ಹಿಟ್ನಾಳ್ ಕ್ರಾಸ್ ಎಲ್.ಸಿ ಸಂಖ್ಯೆ-17ಕ್ಕೆ ಟೆಂಡರ್ ಆಗಿದ್ದು, ಶೀಘ್ರದಲ್ಲಿಯೇ ಅಡಿಗಲ್ಲು ಹಾಕಲಾಗು ವುದು. ಮುನಿರಾಬಾದ್ ರೈಲು ನಿಲ್ದಾಣದಲ್ಲಿ ನಿಲ್ಲದ ಟ್ರೈನ್‌ಗಳ ನಿಲುಗಡೆಗೆ ಸಾರ್ವಜನಿಕರು ಮನವಿ ಮಾಡಿದ್ದು, ಇದಕ್ಕೆ ಕ್ರಮ ವಹಿಸಲಾಗುವುದು ಎಂದು ಹೇಳಿದರು. ಕೊಪ್ಪಳ ಕೆ.ರಾಘವೇಂದ್ರ ಹಿಟ್ನಾಳ ಮಾತನಾಡಿ, ಜಿಲ್ಲೆಯಲ್ಲಿ ರೈಲ್ವೆಯ ಹೊಸ-ಹೊಸ ಮಾರ್ಗಗಳಿಂದ ಜನರಿಗೆ ವಿವಿಧ ಊರು ಪ್ರಯಾಣಕ್ಕೆ ಅನುಕೂಲ ವಾಗುತ್ತಿದೆ. ಮುಂಬರುವ ದಿನಮಾನ ನಮ್ಮ ಜಿಲ್ಲೆಯ ಲ್ಲಿ ಟ್ರಂಕ್ ರೂಟ್ ವ್ಯವಸ್ಥೆಯಾಗಲಿದೆ. ಮುನಿರಾಬಾ ದ್ ರೈಲು ನಿಲ್ದಾಣದ ಅಭಿವೃದ್ಧಿಯಿಂದ ಶ್ರೀಹುಲಿ ಗೆಮ್ಮ ದೇವಿಯ ಜಾತ್ರೆ ಸಮಯದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಬರುವ ಭಕ್ತರಿಗೆ ಹಾಗೂ ಇಲ್ಲಿನ ಸುತ್ತು-ಮುತ್ತಲಿನ ಪ್ರವಾಸಿತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೂ ತುಂಬ ಅನುಕೂಲ ವಾಗಲಿದೆ ಎಂದರು. ಶಾಸಕಿ ಹೇಮಲತಾ ನಾಯಕ ಮಾತನಾಡಿ, ಮುನಿರಾಬಾದ್ ರೈಲು ನಿಲ್ದಾಣ ಹೆಚ್ಚು ಜನದಟ್ಟಣೆ ಇರುವ ನಿಲ್ದಾಣವಾಗಿದೆ. ಹುಲಿಗೆಮ್ಮ ದೇವಿ ದೇವಸ್ಥಾನ ಇರುವುದರಿಂದ ಇಲ್ಲಿಗೆ ಲಕ್ಷ್ಯಾಂತರ ಭಕ್ತರು ಬರುತ್ತಾರೆ ಹಾಗಾಗಿ ಮುನಿರಾಬಾದ್ ರೈಲು ನಿಲ್ದಾಣಕ್ಕೆ ಹುಲಿಗೆಮ್ಮ ದೇವಿ ರೈಲು ನಿಲ್ದಾಣ ಎಂದು ನಾಮಕರಣ ಮಾಡಬೇಕು. ಅಮೃತ ಭಾರತ ಸ್ಟೇಷನ್ ಅಡಿ ಪುರಾಭಿವೃದ್ಧಿ ಪಡಿಸಲಾದ ಮುನಿರಾಬಾದ್ ರೈಲು ನಿಲ್ದಾಣ ಸೇರಿದಂತೆ ದೇಶದ 103 ರೈಲು ನಿಲ್ದಾಣಗಳನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳು ಇಂದು ಉದ್ಘಾಟನೆ ನೆರವೇರಿಸುತ್ತಿರುವುದು ನಮಗೆ ಸಂತಸ ತಂದಿದೆ ಎಂದರು. ನೈಋತ್ಯ ರೈಲ್ವೆ ವತಿಯಿಂದ ಶಾಲಾ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಾಗಿದ್ದ ಪ್ರಬಂಧ, ಚರ್ಚಾ ಹಾಗೂ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ, ಹುಲಿಗಿ ಗ್ರಾಪಂ ಅಧ್ಯಕ್ಷೆ ನಿಲಮ್ಮ ಸಿದ್ದಪ್ಪ ಗುಂಗಾಡಿ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಮಾಜಿ ಶಾಸಕರಾದ ಬಸಬವರಾ ದಢೇಸೂಗೂರು, ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ ಪ್ರಾಧಿಕಾರದ ಇಒ ಎಂ.ಎಚ್ .ಪ್ರಕಾಶರಾವ್, ನೈಋತ್ಯ ರೈಲ್ವೆ ವಲಯ ಹುಬ್ಬಳ್ಳಿಯ ವಿಭಾಗಿಯ ವ್ಯವಸ್ಥಾಪಕ ಡಾ. ಅನೂಪ್ ಅಳ್ವಾ ಇದ್ದರು.

> ಅಂಜಾದ್ರಿಯಿಂದ ಅಯೋಧ್ಯೆಗೆ ವಿಶೇಷ ರೈಲು ಓಡಿಸಬೇಕೆಂಬುದು ಇಲ್ಲಿನ ಬಹುಜನರ ಬೇಡಿಕೆ. ಇದಕ್ಕಾಗಿ ರೈಲ್ವೆ ಮಂತ್ರಿಗಳಿಗೆ ಮನವಿ ಮಾಡಲಾಗಿದೆ ಎಂದರು. ಕೊಪ್ಪಳ ಜಿಲ್ಲೆಯ ರೈಲ್ವೆ ಅಭಿವೃದ್ಧಿಯಲ್ಲಿ ಹಿಂದಿನ ಸಂಸದರಾದ ಕರಡಿ ಸಂಗಣ್ಣನವರ ಪರಿಶ್ರಮವೂ ಇದೆ. ಹೊಸ ರೈಲು ಮಾರ್ಗಗಳಾದ ಗಂಗಾವತಿ -ಬಾಗಲ ಕೋಟೆ ಲೈನ್‌ಗೆ ರೂ. 950 ಕೋಟಿ ಹಾಗೂ ಗಂಗಾವತಿ-ದರೋಜಿ ಲೈನ್‌ಗೆ ರೂ. 402 ಕೋಟಿಗಳ ಅನುದಾ ನವನ್ನು ನೀಡಲು ರೈಲ್ವೆ ಇಲಾಖೆಯ ರಾಜ್ಯ ಸಚಿವರಾದ ವಿ.ಸೋಮಣ್ಣನವರಿಗೆ ಮನವಿ ಮಾಡಿದ್ದು, ಈ ವರ್ಷ ಒಂದು ಮತ್ತು ಮುಂದಿನ ವರ್ಷ ಮತ್ತೊಂದು ಕಾಮಗಾರಿಗೆ ಅನುಮೋದನೆ ನೀಡುವುದಾಗಿ ಸಚಿವರು ಭರವಸೆಯನ್ನು ನೀಡಿದ್ದಾರೆ.
>
> -ರಾಜಶೇಖರ್ ಹಿಟ್ನಾಳ , ಸಂಸದ

ಮಸ್ಕಿ: ಫಲಾನುಭವಿಗಳ ಪಟ್ಟಿ ರದ್ದು ಪಡಿಸಲು ಪ್ರತಿಭಟನೆ



ನಾನಾ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಲೇಖಾನ ಗ್ರಾಪಂ. ವ್ಯಾಪ್ತಿಯ ಹಳ್ಳಿ ಜನರು ಮಸ್ಕಿಯಲ್ಲಿ ಪ್ರತಿಭಟನೆ ನಡೆಸಿದರು.

ಮಸ್ಕಿ: ತಾಲೂಕಿನ ತಲೇಖಾನ ಗ್ರಾ.ಪಂಗೆ 260 ಮನೆಗಳು ಮಂಜೂರಾಗಿದ್ದು, ಗ್ರಾ.ಪಂ ಅಧ್ಯಕ್ಷ, ಪಿಡಿಓ ಅವರು ಸೇರಿ ಗ್ರಾಮ ಸಭೆ ನಡೆಸದೆ, ಫಲಾನುಭವಿಗಳ ಆಯ್ಕೆ ಮಾಡಿರುವ ಪಟ್ಟಿಯನ್ನು ರದ್ದು ಪಡಿಸಲು ಆಗ್ರಹಿಸಿ ತಲೇಖಾನ ಗ್ರಾ.ಪಂ ವ್ಯಾಪ್ತಿಯ ಹಳ್ಳಿ ಜನರು ಪಟ್ಟಣದ ಹಳೆ ಬಸ್ ನಿಲ್ದಾಣ ಬಳಿಯ ಅಂಬೇಡ್ಕರ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಪ್ರತಾಪ ಗೌಡ ಪಾಟೀಲ್ ಮಾತನಾಡಿ, ತಲೇಖಾನ ಗ್ರಾಪಂ. ನಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ. 260 ಮನೆ ಗಳ ಫಲಾನುಭವಿಗಳ ಬಳಿ ಹಣ ಪಡೆದು ಮನೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ಆರೋಪಿಸಿದರು. ಮಸ್ಕಿ ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ, ಮಂಡಲ ಅಧ್ಯಕ್ಷ ಶರಣಯ್ಯ ಸೊಪ್ಪಿ ಮಠ, ಲಿಂಗಪ್ಪ ಚೌಹ್ವಾಣ, ಮೌನೇಶ ರಾಥೋಡ್ ಮಾತನಾಡಿದರು.

ಅಭಿವೃದ್ಧಿ ಬಗ್ಗೆ ಅಂಕೆ ಸಂಖ್ಯೆ ಚರ್ಚೆಗೆ ಸಿದ್ದ: ಮಾಜಿ ಶಾಸಕ

ಲಿಂಗಸೂಗೂರು: ಸ್ಥಳೀಯ ಶಾಸಕರು ಅಭಿವೃದ್ಧಿ ಬಗ್ಗೆ ಮಾಹಿತಿ ಪಡೆದು ಮಾತನಾಡಬೇಕು, ಶೂನ್ಯ ಸಾಧನೆ ಎಂದು ಸರಕಾರದ ಮೇಲೆ ಸುಳ್ಳು ಆರೋಪ ಮಾಡುವ ಮೊದಲು ರಾಜ್ಯದಲ್ಲಿ ಮತ್ತು ಕ್ಷೇತ್ರದಲ್ಲಿ ಆಗಿರುವ ಕೆಲಸಗಳ ಬಗ್ಗೆ ಅರಿತುಕೊಳ್ಳಬೇಕು ಎಂದು ಮಾಜಿ ಶಾಸಕ ಡಿ.ಎಸ್ ಹೂಲಗೇರಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ಅನ್ನಭಾಗ್ಯ 3,35,935 ಕುಟುಂಬ ಸದಸ್ಯರು ಯೋಜನೆಯ ಸದುಪಯೋಗ ಪಡೆಯುತ್ತಿದ್ದಾರೆ. ಎಪ್ರಿಲ್ 2025 ರವರೆಗೆ ಉಚಿತ ಪ್ರತಿ ವ್ಯಕ್ತಿಗೆ 10 ಕೆಜಿ ಯಂತೆ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿಯನ್ನು ವಿತರಣೆ ಮಾಡಲಾಗಿದೆ. ಆದರು ಶಾಸಕರು ಶೂನ್ಯ ಸಾಧನೆ ಎಂದು ಹೇಳಿರುವುದು ಅವರಿಗೆ ಮಾಹಿತಿ ಕೊರತೆ ಇದೆ. ಸುಮಾರು 80 ಕೋಟಿ ಅನುದಾನವನ್ನು ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರಕಾರ ಕೊಟ್ಟಿದೆ ಆದರೆ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೆ ತಮಗೆ ಬೇಕಿದಲ್ಲಿ ಯಾವುದೇ ಟೆಂಡರ್ ಕರಿಯದೆ ಕಳಪೆ ಸಿಸಿ ರಸ್ತೆ ಕಾಮಗಾರಿಗೆ ಖರ್ಚು ಮಾಡುತ್ತಿದ್ದಾರೆ. ಇದರ ಬಗ್ಗೆ ತನಿಖಾ ತಂಡ ತನಿಖೆ ಮಾಡುವುದಿದೆ.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷ ಅಮರೇಶ ಹಿರೇಹೆಸರೂರು, ತಾಲ್ಲೂಕ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವೆಂಕಟೇಶ ಗುತ್ತೆದಾರ, ಪುರಸಭಾ ಅಧ್ಯಕ್ಷ ಬಾಬುರೆಡ್ಡಿ ಮುನ್ನೂರು, ಪುರಸಭಾ ಸದಸ್ಯರಾದ ಮಹ್ಮದ್ ರಫೀ, ಸಂಜೀವಪ್ಪ ಚಲುವಾದಿ ಸಂಜೀವನಕುಮಾರ, ಯುವ ಕಾಂಗ್ರೆಸ್ ಅಧ್ಯಕ್ಷ ಸಂತೋಷ ಸೊಪ್ಪಿಮಠ, ಮೌನೇಶ ಪೂಜಾರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಡಿ.ಎಸ್ ಹೂಲಗೇರಿ ಮಾತನಾಡಿದರು.

> ನನ್ನ ಅವಧಿಯಲ್ಲಿ ಕೋರ್ಟ್, ಸಬ್ ರಿಜಿಸ್ಟರ್, ತಾಯಿ ಮಕ್ಕಳ ಆಸ್ಪತ್ರೆ ಸೇರಿದಂತೆ ಅಮೃತ ಯೋಜನೆಗೆ 94 ಕೋಟಿ ಅನುದಾನ ತಂದಿದ್ದು ನಾನು ಆದರೆ ಅವುಗಳನ್ನು ಉದ್ಘಾಟನೆ ಮಾಡುತ್ತಾ ಪೂಜೆಗಳನ್ನು ಮಾಡುತ್ತಿರುವುದು ಈಗಿನ ಶಾಸಕರು, ಕ್ಷೇತ್ರಕ್ಕೆ ಅನುದಾನ ಕೊಟ್ಟರು ಸರಕಾರದ ಮೇಲೆ ಸುಳ್ಳು ಆರೋಪ ಮಾಡುತ್ತಿರುವುದು ತಮ್ಮ ಇಚ್ಛಾಶಕ್ತಿ ಕೊರತೆ ತೋರಿಸುತ್ತಿದೆ. ಅಭಿವೃದ್ಧಿಯಲ್ಲಿ ಅಂಕಿ ಸಂಖ್ಯೆಯೊಂದಿಗೆ ಚರ್ಚೆಗೆ ಸಿದ್ದನಿದ್ದೇನೆ, ನೀವು ಬನ್ನಿ ಅಭಿವೃದ್ಧಿ ಬಗ್ಗೆ ಚರ್ಚಿಸೋಣ, ಅದನ್ನು ಬಿಟ್ಟು ಕುಡಿಯಲು ನೀರು ಕೇಳಿದ ಸಾರ್ವಜನಿಕರಿಗೆ ಮನೆಗೆ ಬಂದು ಕೇಳಬೇಕು ಎಂದು ಹೇಳುವ ನೀವು ಜನರ ಸೇವಕ ಎಂಬುದನ್ನು ಮರೆತಿದ್ದೀರಿ, ಜನರೆ ಹೇಳುತ್ತಾರೆ ಸರಕಾರದ ಸಾಧನೆ ಏನು ಎಂಬುದು ನಿಮ್ಮ ಸುಳ್ಳು ಆರೋಪಗಳನ್ನು ಯಾರು ನಂಬುವುದಿಲ್ಲ.
>
> -ಡಿ.ಎಸ್ ಹೂಲಗೇರಿ, ಮಾಜಿ ಶಾಸಕ

ಮಳೆ ಹಾನಿಗೆ ಪರಿಹಾರ ನೀಡಲು ಮಾಜಿ ಸಚಿವ ರೇವಣ್ಣ ಆಗ್ರಹ

ರಾಯಚೂರು: ರಾಜ್ಯದಲ್ಲಿ ಮಳೆಯಿಂದ ಅನೇಕ ಅವಾಂತರಗಳು ಸೃಷ್ಟಿಯಾಗಿವೆ. ಜಿಲ್ಲೆಯಲ್ಲಿಯೇ ಒಂದು ಲಕ್ಷ ಎಕರೆ ಭತ್ತ ಬೆಳೆ ಹಾನಿಯಾ ಗಿದೆ. ಬೆಳೆ ಹಾನಿಗೆ ಸರಕಾರ ಕೂಡಲೇ ಪರಿಹಾರ ಬಿಡುಗ ಡೆ ಮಾಡಬೇಕೆಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಒತ್ತಾಯಿಸಿದರು. ನಗರದ ಪ್ರವಾಸಿ ಮಂದಿರದ ಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಕಾಂಗ್ರೆಸ್ ಸರಕಾರ ಎರಡು ವರ್ಷದ ಅವಧಿ ಯಲ್ಲಿ ಗ್ಯಾರಂಟಿ ಯೋಜನೆ ಕೊಟ್ಟಿರುವದಾಗಿ ಹೇಳುತ್ತ ಲೇ ಮತ್ತೊಂದು ಕೈಯಿಂದ ಕಸಿದು ಕೊಳ್ಳುವ ಕೆಲಸ ಮಾಡುತ್ತಿದೆ. ಜನರ ಆಕ್ರೋಶ ಇದೆಯೋ ಇಲ್ಲವೋ ಎಂಬುದು ಕಾಲವೇ ಉತ್ತರಿಸುತ್ತದೆ. ಅಕಾಲಿ ಕ ಮಳೆ ಯಿಂದ ಬೆಳೆ ಹಾನಿಯಾಗಿದ್ದು, ಇದರಿಂ ದ ರೈತರು ಭತ್ತ ಬೆಳೆಯುವದನ್ನೇ ಕೈ ಬಿಡುವ ಪರಸ್ಥಿತಿ ನಿರ್ಮಾ ಣವಾಗಿದೆ. ಭತ್ತಕ್ಕೆ ಬೆಲೆ ಕುಸಿತು ,ಖರೀದಿ ನಡೆಯದೇ ಇರುವದರಿಂದ ರೈತರು ಭತ್ತ ಕೃಷಿ ಲಾಭ ದಾಯಕವಲ್ಲ ಎನ್ನುವ ತೀರ್ಮಾನಕ್ಕೆ ಬರುತ್ತಿದ್ದಾರೆ. ರಾಜ್ಯ ಸರಕಾರ ಕೂಡಲೇ ಮಧ್ಯ ಪ್ರವೇ ಶ ಮಾಡಿ ಪರಿಹಾರ ನೀಡಬೇಕು ಎಂದರು.

> ಗ್ರೇಟರ್ ಬೆಂಗಳೂರು ಮಾಡುತ್ತಾರೋ ಇನ್ನೇನೋ ಮಾಡುತ್ತಾರೋ ಮಾಡಲಿ, ಜನರ ಸಂಕಷ್ಟಕ್ಕೆ ಮೊದಲು ಸ್ಪಂದಿಸುವ ಕೆಲಸ ಸರಕಾರ ಮಾಡಬೇಕು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವ ಹೇಳಿಕೆ ಪ್ರತಿಕ್ರಿಯಿಸುವಷ್ಟು ದೊಡ್ಡವನಲ್ಲ ಎಂದರು. ರೇವಣ್ಣನವನ್ನು ಯಾರು ಕುಗ್ಗಿಸುವದಕ್ಕೆ ಆಗುವುದಿಲ್ಲ. ದೇವರು, ಜನತೆ ಮಾತ್ರ ಕುಗ್ಗಿಸಬಹುದು. ಕಾಲ ಬರುತ್ತೆ ಎಲ್ಲವನ್ನು ರಾಜ್ಯದ ಜನತೆ ಮುಂದೆ ಸವಿಸ್ತಾರವಾಗಿ ಹೇಳುವೆ. ಪಕ್ಷದ ಕಾರ್ಯಕರ್ತರೊಂದಿಗೆ ಚರ್ಚಿಸಿ ರೈತರ ಸಂಕಷ್ಟದ ಕುರಿತು ಮಾಹಿತಿ ಪಡೆದಿರುವುದಾಗಿ ಹೇಳಿದರು.
>
> -ರೇವಣ್ಣ , ಮಾಜಿ ಸಚಿವ

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ ಎನ್.ಶಿವಶಂಕರ ವಕೀಲ, ಲಕ್ಷ್ಮೀಪತಿ ಗಾಣಧಾಳ, ನರಸಿಂಹ ನಾಯಕ, ಹಂಪಯ್ಯ ನಾಯಕ, ನಾಗರಾಜ, ದುಳ್ಳಯ್ಯ ನಾಯಕ, ಆದಿರಾಜ, ಸುಧಾಕರಗೌಡ ಇದ್ದರು.

ಹೈ.ಕ ಜನಾಂದೋಲನ ಕೇಂದ್ರದಿಂದ ಮೇ 24,25ರಂದು ಚಿಂತನ ಮಂಥನ

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಕೇಂದ್ರದ ಅಧ್ಯಕ್ಷ ಬಿ.ಬಸವರಾಜ ಮಾತನಾಡಿದರು.

ರಾಯಚೂರು: ಹೈದ್ರಾಬಾದ ಕರ್ನಾಟಕ ಜನಾಂದೋಲನ ಕೇಂದ್ರದಿಂದ ಮೇ 24 ಮತ್ತು 25 ರಂದು ನಗರದ ಕೃಷಿ ವಿಶ್ವ ವಿದ್ಯಾಲಯ ಸಭಾಂಗ ಣದಲ್ಲಿ ವರ್ತಮಾನ ಸಂದರ್ಭದ ರಾಜಕಾರಣ, ತತ್ವ ಸಿದ್ಧಾಂತಗಳ ಕುರಿತು ಚಿಂತನ ಮಂಥನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕೇಂದ್ರದ ಅಧ್ಯಕ್ಷ ಬಿ.ಬಸವರಾಜ ಹೇಳಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಎರಡು ದಿನ ಐದು ವಿಚಾರ ಗೋಷ್ಠಿಗಳು ನಡೆಯಲಿ ದ್ದು, ಮೇ 24 ರಂದು ಬೆಳಿಗ್ಗೆ 9.30 ಕ್ಕೆ ಮೊದಲ ಗೋಷ್ಠಿ ಡಾ.ಬಿ.ಆರ್.ಅಂಬೇಡ್ಕರ್ ಬರೆದ ಸಂವಿಧಾನ ಮತ್ತು ಬಯಸಿದ್ದ ಸಂವಿಧಾನ ಕುರಿತು ಹಿರಿಯ ಚಿಂತಕ ಶಿವಸುಂದರ ವಿಷಯ ಮಂಡಿಸಲಿದ್ದಾರೆ. ಅಧ್ಯಕ್ಷತೆಯನ್ನು ವಿದ್ಯಾನಿಧಿ ಕಾಲೇಜಿನ ಪ್ರಾಚಾರ್ಯ ಡಾ.ಚಂದ್ರಗೀರೀಶ ವಹಿಸಲಿದ್ದಾರೆ. ಮಧ್ಯಾಹ್ನ 12.15 ಕ್ಕೆ ಸಂವಿಧಾನ ಸಶಕ್ತೀಕರಣ ಸವಾಲುಗಳು ಮತ್ತು ಸಾಧ್ಯತೆಗಳ ವಿಷಯವಾಗಿ ಸಿಪಿಐ (ಎಂ) ರಾಜ್ಯ ಕಾಯದರ್ಶಿ ಡಾ.ಕೆ.ಪ್ರಕಾಶ ವಿಷಯ ಮಂಡಿಸಲಿದ್ದಾರೆ. ಅಧ್ಯಕ್ಷತೆಯನ್ನು ಕಾರ್ಮಿಕ ಸಂಘಟನಾ ಜಂಟಿ ಕ್ರಿಯಾ ಸಮಿತಿ ಕಾರ್ಯದರ್ಶಿ ಜೆ.ವಿ.ಭಟ್ ವಹಿಸಲಿದ್ದಾರೆ. ನಂತರ ವರ್ತಮಾನ ಸಂದರ್ಭದಲ್ಲಿ ಗಾಂಧಿವಾದದ ಸ್ಥಾನ ಮಾನ ಸ್ಥಿತಿಗತಿ ಕುರಿತು ಕೆಆರ್‌ಎಸ್ ಸಂಸ್ಥಾಪಕ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ವಿಷಯ ಮಂಡಿಸಲಿದ್ದಾರೆ. ಬೆಳಗಾವಿಯ ದೀಲಿಜ್ ಕಾಮತ್ ಅಧ್ಯಕ್ಷತೆಯ ವಹಿಸಲಿದ್ದಾರೆ.

ಮೇ.25 ರಂದು ಭಾರತದ ಪರಿಕಲ್ಪನೆ, ವ್ಯವಸ್ಥೆ ಮತ್ತು ಜನ ಬದುಕಿನ ವೈವ್ಯರು ವಿಷಯವಾಗಿ ಸಾಮಾಜಿಕ ಕಾರ್ಯ ಕರ್ತರ ದೀಲಿಜ್ ಕಾಮತ್ ವಿಷಯ ಮಂಡಿಸಲಿದ್ದಾರೆ. ಅಧ್ಯಕ್ಷತೆಯನ್ನು ಸರ್ವೋದಯ ಪಕ್ಷದ ಅಧ್ಯಕ್ಷ ಚಾಮರಸ ಮಾಲಿಪಾಟೀಲ್ ವಹಿಸಿಕೊಳ್ಳಲಿದ್ದಾರೆ. ಹೈದ್ರಾಬಾದ ಕರ್ನಾಟಕ ಶೈಕ್ಷಣಿಕ ಸ್ಥಿತಿಗತಿ ಮತ್ತು ಕಥೆವ್ಯಥೆ ವಿಷಯವಾಗಿ ಭಾರತಜ್ಞಾನ ವಿಜ್ಞಾನ ಸಮಿತಿಯ ಚೇಗರೆಡ್ಡಿ , ಸೈಯದ್ ಹಫಿಜುಲ್ಲಾ ವಿಷಯ ಮಂಡಿಸಲಿದ್ದು, ಸಾಹಿತಿ ವೀರಹನುಮಾನ ಅಧ್ಯಕ್ಷತೆ ವಹಿಸಲಿದ್ದಾರೆ. ಎಲ್ಲಾ ಗೋಷ್ಠಿಗಳಲ್ಲಿ ಸಹ ಸಂವಾದಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಾನವೆಸ್ಲಿ, ಡಾ.ಶಾರದಾ ಹುಲಿನಾಯಕ, ಲಕ್ಷ್ಮಣರಾವ್, ಬೂದೆಪ್ಪ, ಸಂಜಯ ಕುಷ್ಟಗಿ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದ ಮಂಗ

ಬಾಗಲಕೋಟೆ: ಮಂಗವೊಂದು ಪಶು ಆಸ್ಪತ್ರೆಗೆ ಬಂದು ತನಗೆ ಆದ ತೊಂದರೆ ವೈದ್ಯರಿಗೆ ಹೇಳುವ ಮೂಲಕ ಅದಕ್ಕೆ ಚಿಕಿತ್ಸೆ ಪಡೆದ ಘಟನೆ ಜಿಲ್ಲೆಯ ಇಳಕಲ್ಲ ತಾಲೂಕಿನ ಗುಡೂರ ಎಸ್.ಸಿ ಗ್ರಾಮದಲ್ಲಿ ನಡೆದಿದೆ. ಗುಡೂರಿ ಎಸ್.ಸಿ ಗ್ರಾಮದ ಪಶು ಆಸ್ಪತ್ರೆಗೆ ಆಗಮಿಸಿದ ಮಂಗವು ತನ್ನ ಗುದದ್ವಾರದ ಕಡೆ ಕೈ ಮಾಡಿ ತನಗಾದ ನೋವನ್ನು ಕೈ ಸನ್ನೆ ಮೂಲಕ ವೈದ್ಯರಿಗೆ ತೋರಿಸಿದೆ. ಇದನ್ನು ಗಮನಿಸಿದ ಪಶುವೈದ್ಯಕೀಯ ಪರಿವೀಕ್ಷಕ ಜಿ.ಜಿ.ಬಿಲ್ಲೋರ ಅವರು ಮಂಗ ಹೇಳಿರುವುದನ್ನು ನೋಡಿ, ಅದಕ್ಕೆ ಚಿಕಿತ್ಸೆ ನೀಡಿದ್ದಾರೆ. ವೈದ್ಯರು ಚಿಕಿತ್ಸೆ ನೀಡಿದ ಬಳಿಕ ಅಲ್ಲಿಂದ ಹೊರಟು ಹೋಗಿದೆ. ಕಪಿರಾಯನ ಈ ಘಟನೆ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಪೈಪ್‌ಗಳು ಉರುಳಿ ಕಾರ್ಮಿಕರ ಸಾವು

ಕುಷ್ಟಗಿ: ನಗರದ ಕೈಗಾರಿಕಾ ಪ್ರದೇಶದಲ್ಲಿ, ಲಾರಿಯಲ್ಲಿದ್ದ ಪ್ಲಾಸ್ಟಿಕ್ ಪೈಪ್ ಇಳಿಸುವಾಗ ನಡೆದ ಅವಘಡದಲ್ಲಿ ಇಬ್ಬರು ಕಾರ್ಮಿಕರು ಗುರುವಾರ ಮೃತಪಟ್ಟು, ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಇಳಕಲ್ ತಾಲೂಕು ತೊಂಡಿಹಾಳ ಗ್ರಾಮದ ಬೀರಪ್ಪ ಇಟ್ಲಾಪೂರ (18), ಕನಕಗಿರಿ ತಾಲೂಕು ಒಬಳ ಬಂಡಿ ಗ್ರಾಮದ ಶರಣಪ್ಪ ತಂದಿ ಶಿವಪ್ಪ ಗಡಾದ (28) ಸ್ಥಳದಲ್ಲೇ ಮೃತಪಟ್ಟ ಕಾರ್ಮಿಕರು. ವಿಜಯಪುರದ ರಾಜು ರಾಠೋಡ ಎಂಬ ಕಾರ್ಮಿಕನ ಸ್ಥಿತಿ ಚಿಂತಾಜನಕವಾಗಿದೆ. ಅಮೃತ ಯೋಜನೆಯಲ್ಲಿ ಪಟ್ಟಣದ ವಿವಿಧ ವಾರ್ಡುಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ಸಲುವಾಗಿ ಕೊಳವೆಗಳನ್ನು ಬೆಂಗಳೂರಿನಿಂದ ತರಿಸಲಾಗಿತ್ತು. ಪಟ್ಟಣದ ಸರಕಾರಿ ಕೈಗಾರಿಕಾ ಪ್ರದೇಶದ ಗ್ರಾನೈಟ್ ಫ್ಯಾಕ್ಟರಿ ಆವರಣದಲ್ಲಿ ಲಾರಿಯಲ್ಲಿದ್ದ ಕೊಳವೆ ಗಳನ್ನು ಇಳಿಸುವಾಗ ಈ ಅವಘಡ ಸಂಭವಿಸಿದೆ.

ಖಾಸಗಿ ಬಸ್‌ಡಿಕ್ಕಿ: ತಾಯಿ-ಮಗು ಸಾವು

ಶಿವಮೊಗ್ಗ: ಖಾಸಗಿ ಬಸ್ ಹಾಗೂ ಸ್ಕೂಟರ್ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಸ್ಥಳದಲ್ಲೇ ತಾಯಿ-ಮಗು ಸಾವನ್ನಪ್ಪಿದ ದಾರುಣ ಘಟನೆ ನಡೆದಿದೆ. ಶಿವಮೊಗ್ಗ ಜಿಲ್ಲೆಯ ಕೋಣೆಹೊಸೂರು-ತುಪ್ಪೂರು ಬಳಿ ದುರಂತ ಸಂಭವಿಸಿದ್ದು, ಸ್ಕೂಟರ್‌ನಲ್ಲಿದ್ದ ಅಸ್ಮಾ ಭಾನು (30), 3 ವರ್ಷದ ಮಗು ಮೊಹ್ಮದ್ ಖಬೀರ್ ಮೃತಪಟ್ಟಿದ್ದಾರೆ. ಗಂಡ-ಹೆಂಡತಿ, ಇಬ್ಬರು ಮಕ್ಕಳು ಸ್ಕೂಟರ್‌ನಲ್ಲಿ ತರೀಕೆರೆಯ ಬುಕ್ಕಂಬೂದಿಯಿಂದ ಸಾಗರಕ್ಕೆ ಪ್ರಯಾಣ ಮಾಡುತ್ತಿದ್ದರು. ಈ ವೇಳೆ ಹಿಂಬದಿಯಿಂದ ಸ್ಕೂಟರ್‌ಗೆ ಖಾಸಗಿ ಬಸ್ ಡಿಕ್ಕಿ ಹೊಡೆದಿದೆ. ಸ್ಥಳದಲ್ಲೇ ತಾಯಿ-ಮಗು ಉಸಿರು ಚೆಲ್ಲಿದ್ದಾರೆ. ಗಂಡ ಖಲಂದರ್, 6 ವರ್ಷದ ಇನ್ನೊಬ್ಬ ಮಗನಿಗೆ ಗಂಭೀರ ಗಾಯಗಳಾಗಿದ್ದು, ಮೆಗ್ಗಾನ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಐದೂ ನಗರಗಳಿಂದ 14,200 ಬಸ್ ಗಳಿಗೆ ಬೇಡಿಕೆ | ದೇಶದಲ್ಲಿ 10900 ಬಸ್‌ಗಳ ಹಂಚಿಕೆಗೆ ಕ್ರಮ

ರಾಜ್ಯಕ್ಕೆ 4500 ಎಲೆಕ್ಟ್ರಿಕ್ ಬಸ್ ಹಂಚಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಸರಕಾರ ಪಿಎಂ ಇ-ಡ್ರೈವ್ ಯೋಜನೆಯಲ್ಲಿ ಕರ್ನಾಟಕಕ್ಕೆ ಸಿಂಹಪಾಲು ದೊರೆಕಿದ್ದು, ಮೊದಲ ಹಂತದಲ್ಲಿ 4500 ಎಲೆಕ್ಟ್ರಿಕ್ ಬಸ್‌ಗಳನ್ನು ಹಂಚಿಕೆ ಮಾಡಲು ಕೇಂದ್ರ ಬೃಹತ್ ಕೈಗಾರಿಕಾ ಇಲಾಖೆ ತೀರ್ಮಾನಿಸಿದೆ.

ದೆಹಲಿಯಲ್ಲಿ ಬೃಹತ್ ಕೈಗಾರಿಕೆ ಸಚಿವಾಲಯದಲ್ಲಿ ಎಲೆಕ್ಟ್ರಿಕ್ ಬಸ್ ಹಂಚಿಕೆಯ ಸಂಬಂಧ ಕರ್ನಾಟಕ, ತೆಲಂಗಾಣ, ಗುಜರಾತ್ ಹಾಗೂ ದೆಹಲಿ ರಾಜ್ಯಗಳ ಅಧಿಕಾರಿಗಳ ಜತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಬೆಂಗಳೂರು ನಗರಕ್ಕೆ 4500 ಬಸ್‌ಗಳನ್ನು ನೀಡುವ ಭರವಸೆ ನೀಡಿದ್ದಾರೆ.

ಎಲೆಕ್ಟ್ರಿಕ್ ಬಸ್ ಬಳಕೆ ಹಾಗೂ ಅವುಗಳ ನಿರ್ವಹಣೆಗೆ ಅಗತ್ಯವಾದ ಪೂರಕ ಮೂಲಸೌಕರ್ಯವನ್ನು ಒದಗಿಸಬೇಕು. ಮಾಲಿನ್ಯರಹಿತ ಸಮೂಹ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವುದು ರಾಷ್ಟ್ರೀಯ ಅಗತ್ಯ. ಬಸ್ ಹಂಚಿಕೆಯಲ್ಲಿ ಬೇಡಿಕೆ, ಜನಸಂಖ್ಯೆ ಹಾಗೂ ಹಳೆಯ ಬಸ್‌ಗಳ ವಿಲೇವಾರಿ ಅಂಶಗಳನ್ನು ಪರಿಗಣಿಸಲಾಗಿದೆ ಎಂದು ಅವರು ಹೇಳಿದರು.

ಕರ್ನಾಟಕಕ್ಕೆ 4500 ಬಸ್ ಹಂಚಿಕೆ: ಕರ್ನಾಟಕದ ಪರವಾಗಿ ಸಭೆಯಲ್ಲಿ ಹಾಜರಿದ್ದ ಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್.ವಿ.ಪ್ರಸಾದ್, ಬಿಎಂಟಿಸಿಗೆ 7,000 ಎಲೆಕ್ಟ್ರಿಕ್ ಬಸ್‌ಗಳಿಗೆ ಬೇಡಿಕೆ ಸಲ್ಲಿಸಿದರು. ಕೆಲ ದಿನಗಳ ಹಿಂದೆ ದೆಹಲಿಯಲ್ಲಿ ಸಚಿವರನ್ನು ಭೇಟಿಯಾಗಿದ್ದ ರಾಜ್ಯದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಬೇಡಿಕೆ ಸಲ್ಲಿಸಿದರು. ಈ ಬೇಡಿಕೆ ಹಾಗೂ ಜನಸಂಖ್ಯೆಯನ್ನು ಪರಿಗಣಿಸಿ ಮೊದಲ ಹಂತದಲ್ಲಿಯೇ ಬಿಎಂಟಿಸಿಗೆ 4,500 ಬಸ್ ಗಳನ್ನು ಒದಗಿಸುವ ಭರವಸೆ ನೀಡಿದ್ದಾರೆ.

ಬೆಂಗಳೂರು ಹೊರತುಪಡಿಸಿ, ದೆಹಲಿ ಸಾರಿಗೆ ಸಂಸ್ಥೆಗೆ 2800 ಬಸ್‌ಗಳಿಗೆ ಬೇಡಿಕೆ ಇಟ್ಟಿದ್ದು, ಅಷ್ಟೂ ಬಸ್‌ಗಳನ್ನು ಒದಗಿಸುವ ಭರವಸೆಯನ್ನು ಎಚ್‌ಡಿಕೆ ನೀಡಿದ್ದಾರೆ. ದೇಶದ ಇತರೆ ನಗರಗಳಿಗೆ ಹೋಲಿಸಿದರೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಜನಸಂಖ್ಯೆ ಅಧಿಕವಾಗಿದೆ. ಜತೆಗೆ ಇನ್ನೂ ಕೆಲ ಅಂಶಗಳನ್ನು ಪರಿಗಣಿಸಿ ಬೇಡಿಕೆ ಇಟ್ಟಿರುವಷ್ಟೂ ಸಂಖ್ಯೆಯ ಬಸ್ ಗಳನ್ನು ಹಂಚಿಕೆ ಮಾಡುವಂತೆ ಕೇಂದ್ರ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಉಳಿದಂತೆ ಸೂರತ್ ನಗರ ಸಾರಿಗೆ ಸಂಸ್ಥೆ 600 ಬಸ್‌ಗಳಿಗೆ ಬೇಡಿಕೆ ಇಟ್ಟಿದ್ದು, ಅಷ್ಟೂ ಬಸ್ ಗಳನ್ನು ಹಂಚಿಕೆ ಮಾಡುವ ಭರವಸೆ ನೀಡಲಾಗಿದೆ. ಅಹಮದಾಬಾದ್ ನಗರಕ್ಕೆ 1000 ಬಸ್ ಗಳನ್ನು ಕೇಳಲಾಗಿದ್ದು, ಅಷ್ಟೂ ಬಸ್ ಗಳನ್ನೂ ಹಂಚಿಕೆ ಮಾಡುವುದಕ್ಕೆ ಸಚಿವರು ಒಪ್ಪಿಗೆ ನೀಡಿದರು. ತೆಲಂಗಾಣದ ರಾಜಧಾನಿ ಹೈದರಾಬಾದ್ ನಗರ ಸಾರಿಗೆ ಸಂಸ್ಥೆ 2800 ವಿದ್ಯುತ್ ಚಾಲಿತ ಬಸ್ ಗಳಿಗೆ ಬೇಡಿಕೆ ಇಟ್ಟಿತ್ತು, ಆ ಪೈಕಿ 2000 ಬಸ್ ಗಳನ್ನು ಹಂಚಿಕೆ ಮಾಡುವ ಬಗ್ಗೆ ಸಚಿವರು ಭರವಸೆ ನೀಡಿದರು.

ದೆಹಲಿಯಲ್ಲಿ ಬೃಹತ್ ಕೈಗಾರಿಕೆ ಸಚಿವಾಲಯದಲ್ಲಿ ಎಲೆಕ್ಟ್ರಿಕ್ ಬಸ್ ಹಂಚಿಕೆಯ ಸಂಬಂಧ ಕರ್ನಾಟಕ, ತೆಲಂಗಾಣ, ಗುಜರಾತ್ ಹಾಗೂ ದೆಹಲಿ ರಾಜ್ಯಗಳ ಅಧಿಕಾರಿಗಳ ಜತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಭೆ ನಡೆಸಿದರು.

ಸಾರಿಗೆ ಡಿಪೋಗಳನ್ನು ಮೇಲ್ದರ್ಜೆಗೇರಿಸಲು ಸೂಚನೆ

ಐದೂ ನಗರಗಳಿಂದ 14,200 ಬಸ್ ಗಳಿಗೆ ಬೇಡಿಕೆ ಬಂದಿತ್ತು. ಆ ಪೈಕಿ 10,900 ಬಸ್ ಗಳನ್ನು ಮೊದಲ ಹಂತದಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಎಲೆಕ್ಟ್ರಿಕ್ ಬಸ್ ಗಳನ್ನು ಹಂಚಿಕೆ ಮಾಡುವ ಮುನ್ನ ಐದೂ ನಗರಗಳ ಸಾರಿಗೆ ಸಂಸ್ಥೆಗಳು ಡಿಪೋಗಳಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವುದು ಸೇರಿದಂತೆ ಅಗತ್ಯ ವಾದ ಮೂಲಸೌಕರ್ಯವನ್ನು ಸಿದ್ಧ ಮಾಡಿಟ್ಟುಕೊಳ್ಳಬೇಕು. ಈಗಾಗಲೇ ಅಸ್ತಿತ್ವದಲ್ಲಿರುವ ಡಿಪೋಗಳನ್ನು ಮೇಲ್ದರ್ಜೆಗೆ ಏರಿಸುವುದು ಹಾಗೂ ಅಗತ್ಯವಾದರೆ ಹೊಸ ಡಿಪೋಗಳನ್ನು ಸ್ಥಾಪಿಸುವ ಬಗ್ಗೆ ತ್ವರಿತಗತಿಯಲ್ಲಿ ಕ್ರಮ ವಹಿಸಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರಿಗೆ ಸಿಕ್ಕಿದ್ದೆಷ್ಟು?

- ಬಿಎಂಟಿಸಿ ಒಟ್ಟು ಬೇಡಿಕೆಯ ಮೂರನೇ ಎರಡರಷ್ಟು (67%) ಬಸ್ ಗಳ ಬೇಡಿಕೆ ಪೂರೈಕೆ
- ಹಂಚಿಕೆ ಮಾಡುತ್ತಿರುವ 10,900 ಬಸ್ ಗಳಲ್ಲಿ 4,500 ಬಸ್‌ಗಳು ಬೆಂಗಳೂರಿಗೆ
- ಮೊದಲ ಹಂತದಲ್ಲಿ ಉದ್ಯಾನ ನಗರಿಗೆ ಸಿಂಹಪಾಲು
- ಬೆಂಗಳೂರು ಹೆಚ್ಚು ಜನಸಂಖ್ಯೆಯುಳ್ಳ ನಗರ ಎಂದು ಪರಿಗಣನೆ
- ಸುಮಾರು 800 ಕಿ ಮಿ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ ಕಾರ್ಯಾಚರಣೆ ನಡೆಸುತ್ತಿದೆ. ಈ ಅಂಶವನ್ನು ಪರಿಗಣಿಸಲಾಗಿದೆ.

ಮಾಲಿನ್ಯರಹಿತ ಸಮೂಹ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವುದು ರಾಷ್ಟ್ರೀಯ ಅಗತ್ಯ. ಈ ಕಾರಣಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು ಈ ಯೋಜನೆಗೆ ಹೆಚ್ಚು ಒತ್ತು ನೀಡಿದ್ದು, ಅವರ ಮಾರ್ಗದರ್ಶನದಲ್ಲಿ ಗುರಿ ಸಾಧಿಸುತ್ತೇವೆ.

-ಎಚ್.ಡಿ. ಕುಮಾರಸ್ವಾಮಿ,
ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರು

ಸಿದ್ದರಾಮಯ್ಯನವರಿಗೆ ಮರೆವು ಜಾಸ್ತಿಯಾಗಿದೆ

ಬಾಗಲಕೋಟೆ: ಸಿಎಂ ಸಿದ್ದರಾಮಯ್ಯ ಅವರಿಗೆ ಚೇರ್ ಉಳಿಸಿಕೊಳ್ಳುವುದು ಸಾಕಾಗಿದೆ. ಸಿದ್ದರಾಮಯ್ಯ ಹಾಗೂ ನಾವೆಲ್ಲ ಒಂದೇ ಟೀಂನಲ್ಲಿದ್ದವರು. ಇಗ ಅವರು ಹಳೇ ಸಿದ್ದರಾಮಯ್ಯವಾಗಿಲ್ಲ ಎಂದು ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವರಿಗೆ ಮರೆವು ಹೆಚ್ಚಾಗಿದೆ. ಅವರು ಏನು ಮಾತನಾಡುತ್ತಾರೋ ಅವರಿಗೆ ಗೊತ್ತಿಲ್ಲ. ಏನಾದರೂ ಕೇಳಿದರೆ ಹಾಂ ಅಂತಾರೆ ಎಂದು ವ್ಯಂಗ್ಯ ಮಾಡಿದರು. ಮರೆವಿನಲ್ಲಿ ಇನ್ಯಾರನ್ನೋ ತೃಪ್ತಿ ಪಡಿಸಲು ಹೋಗಿ. ನನ್ನ ಎಲ್ಲಿ ತೆಗೆದು ಬಿಡುತ್ತಾರೋ ಎಂದು ಏನೇನೊ ಮಾತನಾಡುತ್ತಿದ್ದಾರೆ. ನಾನು ಸಿದ್ದರಾಮಯ್ಯ ಅವರನ್ನು ತುಂಬಾ ಹತ್ತಿರದಿಂದ ನೋಡಿ ದ್ದೇನೆ. ಅವತ್ತಿನ ಸಿದ್ದರಾಮಯ್ಯನೆ ಬೇರೆ ಇವತ್ತಿನ ಸಿದ್ದರಾ ಮಯ್ಯನೆ ಬೇರೆ ಎಂದು ಪುನರುಚ್ಚರಿಸಿದರು. ನಾವೆಲ್ಲ ಈ ದೇಶದ ಮಣ್ಣಿನ ಮಕ್ಕಳು. ಭಾರತ ದೇಶಕ್ಕೆ ಸಣ್ಣ ಅಪಚಾರ ಮಾಡಿದರು ಭಾರತಾಂಬೆ ಸುಮ್ಮನೆ ಬಿಡುವುದಿಲ್ಲ ಸುಟ್ಟು ಹೋಗ್ತಿರಾ. ಪ್ರಧಾನಿ ಮೋದಿ ಆಪರೇಷನ್ ಸಿಂದೂರ ವಿಚಾರದಲ್ಲಿ ಕೈಗೊಂಡ ತೀರ್ಮಾನಕ್ಕೆ ತಲೆ ಬಾಗಬೇಕು ಎಂದರು.

ಆಪರೇಷನ್ ಸಿಂದೂರ ಎಚ್ಚರಿಕೆಯ ಗಂಟೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ಪಾಕಿಸ್ತಾನ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಖರ್ಗೆ ಸಾಹೇಬರು ಈ ರಾಷ್ಟ್ರದ ಒಬ್ಬ ನಾಯಕ. ಅವರಿಗೆ ಏನು ಮಾತಾಡಬೇಕು ಎನುವುದು ಅರ್ಥವಾಗಿಲ್ಲ, ನಿರಾಶರಾಗಿದ್ದಾರೆ. ಖರ್ಗೆ ಅವರ ಭಾವನೆ ಈ ತರಹ ಇದೆ ಅಂದಾಗ ಇದು ಒಳ್ಳೆಯದಲ್ಲ. ಯಾರನ್ನು ತೃಪ್ತಿ ಪಡಿಸಲು ಈ ಮಾತು ಹೇಳಿದ್ದಾರೋ ಗೊತ್ತಿಲ್ಲ. ದೇಶ ಇದ್ದರೆ ನಾವು. ಇಲ್ಲದಿದ್ದರೆ ನಿಮ್ಮ ತಾಯಿ ಮತ್ತು ತಂಗಿಯ ಸಜೀವ ದಹನವನ್ನು ನೀವು ನಿಮ್ಮ ತಂದೆ ಮರದ ಹಿಂದೆ ನಿಂತು ನೋಡಿದ ಸಂದರ್ಭ ನೆನಪಿಸಿಕೊಳ್ಳಿ. ಪಾಕಿಸ್ತಾನ ಹೆಸರು ಕೂಡ ನಿಮ್ಮ ಬಾಯಲ್ಲಿ ಬರಬಾರದು. ಆಪರೇಷನ್ ಸಿಂದೂರ ಉಗ್ರಗಾಮಿಗಳಿಗೆ ಎಚ್ಚರಿಕೆಯ ಗಂಟೆ ಎಂದರು.

ಪತ್ನಿಯನ್ನು ಬಿಟ್ಟು ಸನ್ಯಾಸದ ದಾರಿ ಹಿಡಿದ ದಿಲೀಪ್‌ಕುಮಾರ್

ಆಸ್ತಿ ತ್ಯಜಿಸಿ ಜೈನ ದೀಕ್ಷೆ ಪಡೆದ ಉದ್ಯಮಿ

ಯಾದಗಿರಿ: ಇಂದಿನ ದಿನಮಾನಗಳಲ್ಲಿ ಎಲ್ಲರೂ ಐಷಾರಾಮಿ ಜೀವನ, ಸಂಪತ್ತು ಜೀವನ ಬಯಸುವುದು ಸಾಮಾನ್ಯ ಹಾಗೆಯೇ ಅದಕ್ಕಾಗಿ ನಾನಾ ಕಸರತ್ತು ಮಾಡುತ್ತಾರೆ. ಬಯಸುತ್ತಾ ಆದರೆ, ಇಲ್ಲೊಬ್ಬ ಶತಕೋಟಿ ಆಸ್ತಿಯ ಒಡೆಯ ವೈಭೋಗದ ಜೀವನ ಸೇರಿ ತನ್ನೆಲ್ಲಾದನ್ನು ತ್ಯಜಿಸಿ ಜೈನ ಮುನಿ ದೀಕ್ಷೆ ಪಡೆದುಕೊಂಡಿದ್ದಾರೆ.

ಯಾದಗಿರಿ ತಾಲೂಕಿನ ಸೈದಾಪುರ ಪಟ್ಟಣದ ಉದ್ಯಮಿ ದಿಲೀಪ್ ಕುಮಾರ್ ದೋಖಾ ಎನ್ನುವರೇ ನೂರು ಕೋಟಿ ಆಸ್ತಿ, ಐಷಾರಾಮಿ ಬಂಗಲೆ, ಕಾರು ಹಾಗೂ ಪತ್ನಿ ಮಕ್ಕಳನ್ನ ಬಿಟ್ಟು ಜೈನ ಮುನಿಯಾಗಲು ಹೊರಟಿದ್ದಾರೆ. 55 ವರ್ಷದ ದಿಲೀಪ್ ಕುಮಾರ್ ದೋಖಾ ಅವರು ಮದುವೆಯಾಗಿ ಮೂರು ಮಕ್ಕಳ ಹೆಣ್ಣು ತಂದೆ ಕೂಡಾ ಆಗಿದ್ದಾರೆ. ಇದೀಗ ಮೂರು ಮಕ್ಕಳ ಮದುವೆ ಮಾಡಿ ತಮ್ಮ ಪತ್ನಿಯನ್ನು ಬಿಟ್ಟು ಸನ್ಮಾರ್ಗದ ದಾರಿ ಹಿಡಿದಿದ್ದಾರೆ. ಕಳೆದ 12 ವರ್ಷಗಳಿಂದ ಅಮೆರಿಕದಲ್ಲಿ ಮೆಡಿಸಿನ್ ಉತ್ಪಾದನಾ ವ್ಯವಹಾರ ಮಾಡುತ್ತಿದ್ದರು. ಬೆಂಗಳೂರಿನಲ್ಲೂ ಆಸ್ತಿ ಹೊಂದಿದ್ದಾರೆ ಎನ್ನಲಾಗಿದೆ.

ಜೈನ್ ದೀಕ್ಷೆ ಪಡೆದ ಉದ್ಯಮಿ ದಿಲೀಪ್ ಕುಮಾರ್ ದೋಖಾ ಅವರಿಗೆ ಸಾರೋಟದಲ್ಲಿ ಮೆರವಣಿಗೆ ಮಾಡುವ ಮೂಲಕ ಬೀಳ್ಕೊಡಲಾಯಿತು.

ಪಟ್ಟಣದಲ್ಲಿ ಅದ್ದೂರಿ ಮೆರವಣಿಗೆ

ಜೈನ ದೀಕ್ಷೆ ಪಡೆದಿರುವ ದಿಲೀಪ್ ಅವರಿಗೆ ಸಂಬಂಧಿಕರು, ಸ್ನೇಹಿತರು ಸಾರೋಟದಲ್ಲಿ ಸೈದಾಪುರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿ ಮೆರವಣಿಗೆ ಮಾಡುವ ಮೂಲಕ ಬೀಳ್ಕೊಡುಗೆ ನೀಡಿದ್ದಾರೆ. ಇನ್ನು ಪತಿಯ ಈ ನಿರ್ಧಾರದಿಂದ ದಿಲೀಪ್ ಪತ್ನಿ ಕಣ್ಣೀರು ಹಾಕುತ್ತಾ ಒಬ್ಬಂಟಿ ಮಾಡಿ ಹೋಗಿದ್ದಾರೆ ಎಂದು ಅಳಲು ತೋಡಿಕೊಂಡಿದ್ದಾರೆ.

ರಾಜ್ಯ ಸರಕಾರದ ನಿರ್ಧಾರಕ್ಕೆ ಆಕ್ಷೇಪ: ಕೋರ್ಟ್ ಮೆಟ್ಟಿಲೇರಿದ ರೈತರು

ಬೃಂದಾವನ ಗಾರ್ಡನ್‌ಗೆ ಹೊಸ ರೂಪ

ಬೆಂಗಳೂರು: ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜಸಾಗರ ಅಣೆಕಟ್ಟೆಯ ಬೃಂದಾವನ ಉದ್ಯಾನವನ್ನು ಡಿಸ್ನಿ ಮಾದರಿಯಲ್ಲಿ ಸಮಗ್ರವಾಗಿ ಅಭಿವೃದ್ಧಿಪಡಿಸುವ ರಾಜ್ಯ ಸರಕಾರದ ನಿರ್ಧಾರಕ್ಕೆ ರೈತರು ಆಕ್ಷೇಪ ವ್ಯಕ್ತಪಡಿಸಿದ್ದು, ನ್ಯಾಯಾಲಯದ ಮೆಟ್ಟಿಲೇರಿದ್ದಾರೆ.

ಟೆಂಡರ್ ಪ್ರಶ್ನಿಸಿ ಮಂಡ್ಯ ತಾಲೂಕಿನ ಗೋಪಾಲಪುರ ಗ್ರಾಮದ ಕೃಷಿಕ ಕೆ ಬೋರಯ್ಯ ಸೇರಿದಂತೆ ಒಟ್ಟು ಐವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಬಿ ಎಂ ಶ್ಯಾಮ್ ಪ್ರಸಾಸಾದ್ ಮತ್ತು ಕೆ ವಿ ಅರವಿಂದ್ ಅವರ ನೇತೃತ್ವದ ರಜಾಕಾಲೀನ ವಿಭಾಗೀಯ ಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲರು, ಉದ್ದೇಶಿತ ಮನೋರಂಜನಾ ಪಾರ್ಕ್‌ನಿಂದ ಕೆಆರ್‌ಎಸ್ ಅಣೆಕಟ್ಟೆಯ ಸುರಕ್ಷತೆಗೆ ತೀವ್ರ ಧಕ್ಕೆ ಉಂಟಾಗಲಿದೆ. ಸುತ್ತಮುತ್ತಲಿನ ಫಲವತ್ತಾದ 198 ಎಕರೆ ಕೃಷಿ ಜಮೀನನ್ನು ಇದಕ್ಕಾಗಿ ವಶಪಡಿಸಿಕೊಂಡರೆ ಇಲ್ಲಿರುವ ಜೀವವೈವಿಧ್ಯ ಮತ್ತು ಪರಿಸರ ಸಂರಕ್ಷಣೆಗೆ ಇನ್ನಿಲ್ಲದ ಹಾನಿಯಾಗಲಿದೆ.

ಅಭಿವೃದ್ಧಿಯ ಹೆಸರಿನಲ್ಲಿ ವ್ಯಾಪಕವಾದ ವಾಣಿಜ್ಯ ಚಟುವಟಿಕೆಗಳಿಗೆ ಇಂಬು ನೀಡುವ ಮೂಲಕ ಸುತ್ತಲಿನ ಪರಿಸರದ ಅಸಮತೋಲನಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ' ಎಂದು ಹೇಳಿದರು.

ಅಮ್ಯೂಸ್‌ಮೆಂಟ್ ಮತ್ತು ಥೀಮ್ ಪಾರ್ಕ್ ನಿರ್ಮಾಣದಿಂದ ರಾಜ್ಯದ ಪ್ರತಿಷ್ಠೆಯ ಸಂಕೇತವಾಗಿರುವ ಮತ್ತು ಕೋಟ್ಯಂತರ ರೈತರ ಜೀವನಾಡಿಯಾದ ಕೆಆರ್‌ಎಸ್ ಅಣೆಕಟ್ಟೆಗೆ ಧಕ್ಕೆ ಉಂಟಾಗಲಿದೆ. ಹಾಗಾಗಿ, ಕೋರ್ಟ್ ನೀಡುವ ಮುಂದಿನ ಆದೇಶದ ವರೆಗೆ ಟೆಂಡರ್ ಅಧಿಸೂಚನೆಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳಿಗೆ ತಡೆ ನೀಡಬೇಕೆಂದು ಮನವಿ ಮಾಡಿದರು.

ಜೂ.9ಕ್ಕೆ ವಿಚಾರಣೆ ಮುಂದೂಡಿಕೆ

ಈ ಮನವಿಯನ್ನು ಪುರಸ್ಕರಿಸಿದ ನ್ಯಾಯಪೀಠ, ಟೆಂಡರ್ ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಯ ರೂಪುರೇಷೆಗಳೇನು ಎಂಬುದನ್ನು ಮುಂದಿನ ವಿಚಾರಣೆಯಲ್ಲಿ ಕೋರ್ಟ್‌ಗೆ ವಿಶದಪಡಿಸಿ' ಎಂದು ರಾಜ್ಯ ಸರಕಾರದ ಪರ ವಕೀಲರಿಗೆ ಮೌಖಿಕವಾಗಿ ನಿರ್ದೇಶಿಸಿತು. ಅಂತೆಯೇ, ಕೇಂದ್ರ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ, ರಾಷ್ಟ್ರೀಯ ಅಣೆಕಟ್ಟೆ ಸುರಕ್ಷಾ ಪ್ರಾಧಿಕಾರದ ಅಧ್ಯಕ್ಷ ಮತ್ತು ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಒಟ್ಟು 17 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿ ವಿಚಾರಣೆಯನ್ನು ಜೂನ್ 9ಕ್ಕೆ ಮುಂದೂಡಿತು.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 26096832/26096910 Email: purchase@kmf.coop
ಸಂ. ಕಹಾಮ/ಖರೀದಿ/NPFP/ಇ-ಪ್ರೊಕ್./ಟೆಂಡರ್-788/2025 ದಿನಾಂಕ: 19.05.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು ನಂದಿನಿ ಪ್ಯಾಕೇಜಿಂಗ್ ಫಿಲಂ ಘಟಕಕ್ಕೆ ಅವಶ್ಯವಿರುವ Master Batch (White Master Batch) & PPA (Polymer Processing Aid) ಅರೆವಾರ್ಷಿಕ ಅವಧಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಇ-ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 05.06.2025 ರಂದು 03.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಚೆಮ್ ಫೈನಾನ್ಸ್ ಲಿ.
No.19, KCD Complex, 3rd Cross, Mission Road, Bangalore-27. Tel: 22221066, 22221115
GOLD AUCTION NOTICE
ಸಾಲಗಾರರು ಮತ್ತು ಸಾರ್ವಜನಿಕರು, ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ದಿನಾಂಕ 10-06-2025 ರಂದು ಮಿಷನ್ ರಸ್ತೆ ಶಾಖೆಯಲ್ಲಿ (ಮುಖ್ಯ ಕಚೇರಿ) ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನಾಭರಣಗಳ ಹರಾಜು ಮಾಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.
ಮಿಷನ್ ರಸ್ತೆ ಶಾಖೆ
CFL-14109,14110,14111.
ತಿಪ್ಪಸಂದ್ರ : TIP-5999.

ತಮನ್ನಾ ಭಾಟಿಯಾ ಆಯ್ಕೆಗೆ ಎಂಬಿಪಾ ಸಮರ್ಥನೆ

ಬೆಂಗಳೂರು: ತಮನ್ನಾ ಭಾಟಿಯಾ ಅವರ ಆಯ್ಕೆಯನ್ನು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಸಮರ್ಥಿಸಿಕೊಂಡಿದ್ದಾರೆ. ಭಾಟಿಯಾ ಅವರ ವರ್ಚಸ್ಸು, ಡಿಜಿಟಲ್ ಪ್ರಸ್ತುತಿ ಮತ್ತು ಯುವಜನರೊಂದಿಗೆ ಅವರ ಸಂಪರ್ಕಗಳನ್ನು ಮಾತ್ರ ಪರಿಗಣಿಸಲಾಗಿದೆ. ಕೆಎಸ್‌ಡಿಎಲ್ ಕಳೆದ ಸಾಲಿನಲ್ಲಿ 1,785 ಕೋಟಿ ರುಪಾಯಿ ವಹಿವಾಟು ನಡೆಸಿದೆ. ಇದರಲ್ಲಿ ಕರ್ನಾಟಕದ ಪಾಲು ಶೇ.18ರಷ್ಟಿದೆ. ಉಳಿದದ್ದು ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರದಿಂದ ಬಂದಿದೆ. ಸಂಸ್ಥೆಯ ವಹಿವಾಟನ್ನು 2030ರ ವೇಳೆಗೆ 5,000 ಕೋಟಿ ರುಪಾಯಿಗೆ ಕೊಂಡೊಯ್ಯುವ ಗುರಿ ಇಟ್ಟುಕೊಂಡು ಈಗ ದಾಪುಗಾಲು ಹಾಕುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಮಾರುಕಟ್ಟೆ ತಂತ್ರವೇ ಮುಖ್ಯವಾಗುತ್ತದೆ. ಇದು ಮಾರುಕಟ್ಟೆ ಪರಿಣತರ ಸಮಿತಿಯ ತೀರ್ಮಾನವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ನಾವು ದೀಪಿಕಾ ಪಡುಕೋಣೆ, ರಶ್ಮಿಕಾ ಮಂದಣ್ಣ, ಪೂಜಾ ಹೆಗಡೆ, ಕಿಯಾರಾ ಅಡ್ವಾಣಿ ಅವರನ್ನೂ ಪರಿಗಣಿಸಿ ನೋಡಿದೆವು. ಆದರೆ ತಮನ್ನಾ ಅವರು ಡಿಜಿಟಲ್ ಲೋಕದಲ್ಲಿ 2.8 ಕೋಟಿ ಫಾಲೋವರ್ಸ್ ಹೊಂದಿದ್ದು, ಉಳಿದವರಿಗಿಂತ ಮುಂದಿದ್ದಾರೆ. ಜತೆಗೆ ಅವರು ಅಖಿಲ ಭಾರತ ಮಟ್ಟದ ವರ್ಚಸ್ಸು ಹೊಂದಿದ್ದಾರೆ. ಹೀಗಾಗಿ ಅವರನ್ನೇ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿಕೊಳ್ಳಲಾಗಿದೆ. ಇದು ಕೆಎಸ್‌ಡಿಎಲ್ ಸಂಸ್ಥೆಗೆ ನಾವು ತರುತ್ತಿರುವ ಸಮಗ್ರ ಪರಿವರ್ತನೆಯಲ್ಲಿ ಕೇವಲ ಒಂದು ಅಂಶವಷ್ಟೆ ಎಂದು ಅವರು ವಿವರಿಸಿದ್ದಾರೆ.

ಕೆಎಸ್‌ಡಿಎಲ್ ಉದ್ಯೋಗಿಗಳು ಕನ್ನಡಿಗರೇ ಆಗಿದ್ದಾರೆ. ಬರುವ ಲಾಭಾಂಶದಲ್ಲಿ ಶೇ.30ರಷ್ಟನ್ನು ಸರಕಾರಕ್ಕೆ ಕೊಡಲಾಗುತ್ತಿದೆ. ಈಗ ಯೂರೋಪ್ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಮಾರುಕಟ್ಟೆ ವಿಸ್ತರಣೆ ಮಾಡಲಾಗುತ್ತಿದೆ. ಇವುಗಳ ಭಾಗವಾಗಿ 435 ವಿತರಕರನ್ನು ಹೊಸದಾಗಿ ನೇಮಿಸಿಕೊಳ್ಳಲಾಗಿದೆ. ಜತೆಗೆ ಇ-ಕಾಮರ್ಸ್ ಮೂಲಕ 500 ಕೋಟಿ ರುಪಾಯಿ ವಹಿವಾಟು ನಡೆಸುವ ಮತ್ತು ರಫ್ತಿನಿಂದ 150 ಕೋಟಿ ಗಳಿಸುವ ಗುರಿ ಹೊಂದಿದ್ದೇವೆ. ಆದ್ದರಿಂದ ಇಂತಹ ಮಾರುಕಟ್ಟೆ ತಂತ್ರ ಅಗತ್ಯ ಎಂದಿದ್ದಾರೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1
ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು
ಕೆ.ಪಿ.ಪಿ. ಪೋರ್ಟ್‌ಲ್ ಟೆಂಡರ್ ಪ್ರಕಟಣೆ ಸಂಖ್ಯೆ
02/2025-26 ದಿನಾಂಕ: 21.05.2025
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ನೊಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ 02 ಸಂಖ್ಯೆಯ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ ಪಿ ಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್ ಗಿಟ್ಟ ಮೊತ್ತ ರೂ. ಕನಿಷ್ಠ 205.70, ಗರಿಷ್ಠ 334.83 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ ಇರುತ್ತದೆ. ಕೆ ಪಿ ಪಿ ಪೋರ್ಟಲ್‌ನಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 22.05.2025 ರಂದು ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ 30.05.2025 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್ ನಿಗಧಿತ ನಮೂನೆಗಳನ್ನು https://kppp.karnataka.gov.in/ ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಅನ್ನು ದಿನಾಂಕ 31.05.2025 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ,ಗೊರೂರು ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/- ಎಕ್ಸಿಕ್ಯೂಟಿವ್ ಇಂಜಿನಿಯರ್,
ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು
ವಾಸಾಸಂಇ/ಹಿಸನಿ/ಹಾಸನ/125/ಕೆಎಸ್‌ಎಂಸಿಎ/2025-26

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937
ಸಂ:05/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/JJM-support AE&JE ಹೊರಗುತ್ತಿಗೆ/ಟೆಂಡರ್/2025-26/420 ದಿನಾಂಕ: 19.05.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05/2025-26
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಂಕ್ಯುಮೆಂಟ್ ಸೇವೆಗಳಿಗೆ ನಿಬಂಧನೆಗೊಳಪಟ್ಟಂತೆ, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮತ್ತು ಉಪ ವಿಭಾಗ ಚಿ. ನಾ. ಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮಧುಗಿರಿ, ಪಾವಗಡ, ಶಿರಾ, ತಿಪಟೂರು, ತುಮಕೂರು ಮತ್ತು ತುರುವೇಕೆರೆ ತಾಲ್ಲೂಕುಗಳ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಪಡೆಯಲು ದ್ವಿ ಲಕೋಟೆ ಪದ್ದತಿ ಟೆಂಡರ್ ಕರೆಯಲಾಗಿದೆ.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in/) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಅ) ಟೆಂಡರ್‌ನ ಮೊತ್ತ ರೂ.69.30ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,38,600/- ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : 28-05-2025 ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ ದಿನಾಂಕ: 23-05-2025 ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ &ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29-05-2025 ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 31-05-2025 ಬೆಳಿಗ್ಗೆ 11.00 ಘಂಟೆಯ ನಂತರ.
ಸಹಿ/-ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ&ನೈ ಇಲಾಖೆ, ತುಮಕೂರು ವಿಭಾಗ, ತುಮಕೂರು
DIPR/TMK/92/KSMCA/2025-26

ರಾಜಮನೆತನಕ್ಕೆ 3,400 ಕೋಟಿ ರು. ಟಿಡಿಆರ್

ಮೊದಲಪುಟದಿಂದ

ಏನಿದು ಪ್ರಕರಣ?: 2019ರಲ್ಲಿ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಕಾಂಗ್ರೆಸ್ ಮೈತ್ರಿಸರಕಾರ ಬಳ್ಳಾರಿ-ಜಯಮಹಲ್ ರಸ್ತೆ ವಿಸ್ತರಣೆಗಾಗಿ ಅರಮನೆ ಭೂಮಿ ವಶಕ್ಕೆ ನಿರ್ಧರಿಸಿ 15.36 ಎಕರೆ ಜಮೀನು ಭೂಸ್ವಾಧೀನಕ್ಕೆ ಆದೇಶ ಹೊರಡಿಸಿತ್ತು. ಬಳಿಕ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ 2022ರ ಸೆಪ್ಟೆಂಬರ್‌ನಲ್ಲಿ ಆದೇಶ ಹೊರಡಿಸಿ, ಎರಡೂ ಕಡೆಯ ರಸ್ತೆ ವಿಸ್ತರಣೆ ಯೋಜನೆಯನ್ನು ಕೈಬಿಟ್ಟಿತ್ತು. ಈ ನಡುವೆ ಸುಪ್ರೀಂಕೋರ್ಟ್ ವಿಚಾರಣೆ ಸಂದರ್ಭದಲ್ಲಿ ಬಿಬಿಎಂಪಿ ಆಯುಕ್ತರೊಬ್ಬರು ಟಿಡಿಆರ್ ಹಕ್ಕುಗಳ ವರ್ಗಾವಣೆ ಪ್ರಸ್ತಾಪ ಮುಂದಿಟ್ಟಿದ್ದರು. ಇದರಂತೆ ಎಕರೆಗೆ 200 ಕೋಟಿ ರುಪಾಯಿಯಂತೆ 3,400 ಕೋಟಿ ಟಿಡಿಆರ್ ಪರಿಹಾರ ನೀಡುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ಆದರೆ ಸಿದ್ದರಾಮಯ್ಯ ಸರಕಾರ ದುಬಾರಿ ಮೊತ್ತದ ಟಿಡಿಆರ್ ನೀಡಲು ಒಪ್ಪದೆ ರಸ್ತೆ ಅಗಲೀಕರಣ ಪ್ರಸ್ತಾಪವನ್ನು ಕೈಬಿಟ್ಟು ಸುಗ್ರೀವಾಜ್ಞೆ ಹೊರಡಿಸಿತ್ತು. ಈ ಸುಗ್ರೀವಾಜ್ಞೆ ಮತ್ತು ಪರಿಹಾರ ನೀಡದ ಕ್ರಮ ಪ್ರಶ್ನಿಸಿ ರಾಜಮನೆತನ ರಾಜ್ಯ ಸರಕಾರದ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿತ್ತು. ರಾಜ್ಯ ಸರಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್, ಜಮೀನನ್ನೂ ಸಂಪೂರ್ಣವಾಗಿ ಬಳಸಿಕೊಂಡಿಲ್ಲ, ಬಳಸಿಕೊಳ್ಳದ ಜಮೀನಿಗೆ ಟಿಡಿಆರ್ ನೀಡುವುದಾದರೂ ಹೇಗೆ ಎಂದು ವಾದ ಮಂಡಿಸಿದ್ದರು. ಈ ವಾದ ತಿರಸ್ಕರಿಸಿರುವ ಸುಪ್ರೀಂಕೋರ್ಟ್ ಟಿಡಿಆರ್ ವರ್ಗಾಯಿಸಲು ಮಧ್ಯಂತರ ಆದೇಶ ಹೊರಡಿಸಿದೆ.

ರಾಮನಗರ ಹೆಸರು ಬದಲಿಗೆ ಬಿಡದ ಪಟ್ಟು

ಮೊದಲಪುಟದಿಂದ

ಆದರೆ, ವಿದ್ಯುತ್ ಶುಲ್ಕವನ್ನು ಗ್ರಾಮ ಪಂಚಾಯತಿಗಳು ಪಾವತಿ ಮಾಡಿಲ್ಲ. ಎಲ್ಲ ಗ್ರಾಮ ಪಂಚಾಯತಿಗಳ ಒಟ್ಟು ವಿದ್ಯುತ್ ಶುಲ್ಕವು 2024ರ ಮಾರ್ಚ್ ಅಂತ್ಯದ ವೇಳೆಗೆ 6,509 ಕೋಟಿ ರು. ಬಾಕಿ ಉಳಿದಿದೆ. ಅದರಲ್ಲಿ, ಅಸಲು ಮೊತ್ತ 5,257.70 ಕೋಟಿ ರು. ಇದೆ. ಬಡ್ಡಿ ಮೊತ್ತವು 1,350 ಕೋಟಿಯಿದ್ದು, ಆ ಬಡ್ಡಿ ಮೊತ್ತವನ್ನು ಮನ್ನಾ ಮಾಡಲು ಸಂಪುಟ ಅನುಮೋದನೆ ನೀಡಿದೆ.

ಜಾತಿ ಗಣತಿ ಅಪೂರ್ಣ: ಸಚಿವ ಸಂಪುಟ ಸಭೆಯಲ್ಲಿ ಹಿಂದುಳಿದ ವರ್ಗದ ಆಯೋಗ ನೀಡಿರುವ ಜಾತಿ ಗಣತಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದ್ದರೂ, ಯಾವುದೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಈ ಬಗ್ಗೆ ಮಾತನಾಡಿರುವ ಎಚ್.ಕೆ.ಪಾಟೀಲ್, ಹಿಂದುಳಿದ ವರ್ಗಗಳ ಆಯೋಗ ಮಾಡಿದ್ದ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ದತ್ತಾಂಶದ ವಿಚಾರ, ಸಂಪುಟದಲ್ಲಿ ಈ ಬಗ್ಗೆ ಚರ್ಚೆ ನಡೆಯಿತು. ಕ್ಯಾಬಿನೆಟ್ ಸಚಿವರಲ್ಲಿ ಸಿಎಂ ಲಿಖಿತ ಅಭಿಪ್ರಾಯವನ್ನು ಕೇಳಿದ್ದು, ಬಹುತೇಕರು ಅಭಿಪ್ರಾಯ ಕೊಟ್ಟಿದ್ದಾರೆ. ಈ ಬಗ್ಗೆ ಚರ್ಚೆ ನಡೆದಿದೆ. ಆದರೆ ಅದು ಅಪೂರ್ಣವಾಗಿದೆ. ಆದ್ದರಿಂದ ಮುಂದಿನ ಸಂಪುಟ ಸಭೆಗಳಲ್ಲಿ ಈ ಬಗ್ಗೆ ಚರ್ಚೆ ಮಾಡಿ ನಿರ್ಧಾರಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಪರಂ ಪರ ನಿಂತ ಕೈಪಡೆ

ಮೊದಲಪುಟದಿಂದ

ಸಂಸ್ಥೆಯ ಕಾಲೇಜುಗಳ ಮೇಲೆ ಇ.ಡಿ. ಅಧಿಕಾರಿಗಳ ಭೇಟಿ ನನ್ನ ವೈಯಕ್ತಿಕ ವಿಚಾರವಲ್ಲ. ಸಂಸ್ಥೆಯು ಎಲ್ಲ ರೀತಿಯ ಸಹಕಾರ ಕೊಡುತ್ತದೆ. ಇ.ಡಿ.ಯವರು ಮುಂದೆ ಏನು ಪ್ರಶ್ನೆ ಕೇಳುತ್ತಾರೆ ಅದೆಲ್ಲದ್ದಕ್ಕೂ ಸಹಕರಿಸುತ್ತೇವೆ. ಇ.ಡಿ. ತನಿಖೆಯಲ್ಲಿ ಏನು ಬರುತ್ತದೆ ಅದೇ ಮುಖ್ಯ. ಅಲ್ಲಿಯವರೆಗೂ ಊಹಾಪೋಹ ಅಷ್ಟೇ. ಊಹಾಪೋಹಾ ವರದಿ ಮಾಡುವುದಕ್ಕಿಂತ, ಸ್ಪಷ್ಟ ವರದಿ ಬಂದಾಗ ಮಾಡಿದರೆ ಒಳ್ಳೆಯದು ಎಂದು ಮನವಿ ಮಾಡುತ್ತೇನೆ. ಇ.ಡಿ.ಯವರು ಏನು ಬೇಕಾದರು ಪರಿಶೀಲನೆ ಮಾಡಲಿ. ಎಲ್ಲ ರೀತಿಯ ಸಹಕಾರ ಕೊಡುತ್ತೇವೆ. ಅವರು ಸಂಸ್ಥೆಗೆ ಮಾಹಿತಿ ನೀಡಬೇಕಲ್ಲವೇ? ಅದಾದ ನಂತರ ತಿಳಿಸೋಣ. ಅಲ್ಲಿಯವರೆಗೂ ಯಾವುದರ ಬಗ್ಗೆಯೂ ಪ್ರತಿಕ್ರಿಯಿಸುವುದಿಲ್ಲ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ನರೇಗಾ ಸ್ಥಳದಲ್ಲಿ ಕಾರ್ಮಿಕ ಸಾವು

ದಾವಣಗೆರೆ: ಕೆಲಸಕ್ಕೆ ಹೋದ ವೇಳೆ ನರೇಗಾ ಕೂಲಿ ಕಾರ್ಮಿಕನೊಬ್ಬ ರಕ್ತ ವಾಂತಿ ಮಾಡಿ ಮೃತಪಪಟ್ಟ ಘಟನೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಪಲ್ಲಾಗಟ್ಟೆಯಲ್ಲಿ ಗುರುವಾರ ಬೆಳಗ್ಗೆ ನಡೆದಿದೆ. ಕೆಂಚಪ್ಪ (42) ಮೃತ ದುರ್ದೈವಿ. ಪಲ್ಲಾಗಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರುಕುಂಟೆ ಕೆರೆಯಲ್ಲಿ ಕೆಲಸ ಮಾಡುತ್ತಿದ್ದ ವೇಳೆ ದುರಂತ ನಡೆದಿದೆ. ನರೇಗಾ ಕೆಲಸಕ್ಕೆ ತೆರಳಿದ್ದ ಮೃತ ಕೆಂಚಪ್ಪ ಎಂದಿನಂತೆ ಕೆಲಸ ಕೈಗೊಂಡಿದ್ದರು. ಈ ವೇಳೆ ಏಕಾಏಕಿ ರಕ್ತವಾಂತಿ ಮಾಡಿ ಕೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಬಿಳಿಚೋಡು ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೆ ಮೃತದೇಹ ರವಾನೆ ಮಾಡಲಾಗಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಒಳ ಮೀಸಲು ಜಾರಿ ಜೂ.ನಲ್ಲೇ ಆಗಲಿ

ವಿಜಯಪುರ: ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗ ವರದಿ ನೀಡಿದ ತಕ್ಷಣವೇ ಸರಕಾರ ಸ್ವೀಕರಿಸಬೇಕು ಹಾಗೂ ಜೂನ್‌ನಲ್ಲೇ ಒಳ ಮೀಸಲಾತಿ ಜಾರಿ ಮಾಡಲೇಬೇಕು ಎಂದು ಮಾಜಿ ಸಚಿವ ಎಚ್. ಆಂಜನೇಯ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸುಪ್ರೀಂ ಕೋರ್ಟ್ ಆದೇಶದ ಬಳಿಕ ಪರಿಶಿಷ್ಟ ಜಾತಿಯಲ್ಲಿರುವ ಎಲ್ಲ ಸಮಾಜಗಳು ಒಳ ಮೀಸಲಾತಿಗೆ ಒಪ್ಪಿವೆ. ಮುಖ್ಯಮಂತ್ರಿ ಅವರೂ ಈಗಾಗಲೇ ಒಳ ಮೀಸಲಾತಿ ಜಾರಿಗೆ ಒಪ್ಪಿದ್ದಾರೆ. ಒಳ ಮೀಸಲಾತಿ ಜಾರಿ ಆಗುವವರೆಗೂ ಯಾವುದೇ ಹೊಸ ಹುದ್ದೆಗಳಿಗೆ ಭರ್ತಿ ಮಾಡುವಂತಿಲ್ಲ ಎಂದು ಸರಕಾರದ ಮೇಲೆ ಒತ್ತಡ ತರಲಾಗಿದೆ ಎಂದು ಹೇಳಿದರು. ಸಮೀಕ್ಷೆಯಲ್ಲಿ ಮೊಬೈಲ್ ಆ್ಯಪ್ ಬಳಸಲಾಗುತ್ತಿದ್ದು, ಒಂದಷ್ಟು ತಾಂತ್ರಿಕ ಸಮಸ್ಯೆ ಎದುರಾಗಿದೆ. ಅದನ್ನು ಈಗಾಗಲೇ ಸರಿಪಡಿಸಿ, ಸಮೀಕ್ಷೆ ಸುವ್ಯವಸ್ಥಿತವಾಗಿ ಸಾಗಿದೆ ಎಂದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕಲಬುರಗಿ**

ಸಮಸ್ಯೆಯೇನು..?

- ಕಲಬುರಗಿ ನಗರದಲ್ಲಿನ ಸೇಡಂ ರಸ್ತೆ ಹತ್ತಿರದ ಎನ್ ಜಿಒ ಕಾಲೋನಿ ವಾರ್ಡ್ ನಂ.48ರಲ್ಲಿ ಚರಂಡಿ ನೀರಿನಿಂದ ಕೆಟ್ಟ ವಾಸನೆ ಹಾಗೂ ನಗರ ವಾಸಿಗಳಿಗೆ ತೊಂದರೆ ಆಗುತ್ತಿರುವ ಬಗ್ಗೆ.
- **ಪರಿಹಾರ:** ಕಲಬುರಗಿ ನಗರದಲ್ಲಿನ ಸೇಡಂ ರಸ್ತೆ ಹತ್ತಿರದ ಎನ್‌ಜಿಒ ಕಾಲೋನಿ ವಾರ್ಡ್ ನಂ.48ರಲ್ಲಿ ಸದರಿ ಒಳ ಚರಂಡಿ ಕಾಮಗಾರಿ ನಡೆಯುತ್ತಿದ್ದು, ಶೀಘ್ರ ಮುಕ್ತಾಯವಾಗಲಿದೆ.

ವಿಶ್ವವಾಣಿ ಕ್ಲಬ್ ಹೌಸ್
23.05.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಶಂಕರನಾರಾಯಣ ಅಡಿಗ
ವಿಷಯ
ಚಂದ್ರಹಾಸ ಚರಿತ್ರೆ
vishwavani.news

ಟ್ವೀಟೂ-ಖಾರಾ

ಆರ್.ಅಶೋಕ, ಪ್ರತಿಪಕ್ಷ ನಾಯಕ

ಚಂದಾಪುರದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ಅಧಿಕಾರಿಯೊಬ್ಬರು ಗ್ರಾಹಕರೊಂದಿಗೆ ಕನ್ನಡ ಮಾತನಾಡಲು ನಿರಾಕರಿಸಿರಿರುವ ಘಟನೆ ಅತ್ಯಂತ ಖೇದಕರ. ಬ್ಯಾಂಕಿನ ಸಿಬ್ಬಂದಿಗಳು, ಅಧಿಕಾರಿಗಳು ಗ್ರಾಹಕರೊಂದಿಗೆ ಸ್ಥಳೀಯ ಭಾಷೆಯಲ್ಲಿ ವ್ಯವಹರಿಸಬೇಕು ಎಂದು ಅಪೇಕ್ಷೆ ಪಡುವುದು ಖಂಡಿತ ತಪ್ಪಲ್ಲ. ಹೊರರಾಜ್ಯಗಳಿಂದ ಸೇವೆ ಸಲ್ಲಿಸಲು ಬಂದಿರುವ ಪರಭಾಷಿಕ ಸಿಬ್ಬಂದಿಗಳು ಈ ವಾಸ್ತವತೆಯನ್ನು ಅರ್ಥ ಮಾಡಿಕೊಂಡು ಸ್ಥಳೀಯ ಗ್ರಾಹಕರ ಅಗತ್ಯಗಳಿಗೆ ಸ್ಪಂದಿಸಬೇಕು, ದಿನನಿತ್ಯದ ವ್ಯವಹಾರಕ್ಕೆ ಬೇಕಾದ ಸಾಮಾನ್ಯ ಪದಗಳು, ಸಣ್ಣ ಪುಟ್ಟ ಸಾಲುಗಳನ್ನದರೂ ಕಲಿಯಲು ಪ್ರಯತ್ನಿಸಬೇಕು. ಅದು ಬಿಟ್ಟು ನಾನು ಕನ್ನಡ ಮಾತಾಡುವುದಿಲ್ಲ ಎಂದು ಅಗೌರವ ತೋರುವ ವರ್ತನೆ ಸುತಾರಾಂ ಒಪ್ಪುವಂಥದಲ್ಲ. ಈ ಕುರಿತು ಬ್ಯಾಂಕಿನ ಮುಖ್ಯಸ್ಥರು, ಕೇಂದ್ರ ಹಣಕಾಸು ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕು.

ಕುಶಾಲ್ ಹರುವೇಗೌಡ

ಎಲ್ಲಾ ಇತ್ಯರ್ಥ ಆದಮೇಲೆ ಬಂದಿದ್ದಾರೆ ಸಾಮ್ರಾಟ್.

ಸಮ-ಸಮಾಜದ ನಿರ್ಮಾಣವೇ ಸಲೀಂ ಗುರಿ

ಸ್ವಾಸ್ಥ್ಯ ಕೆಡಿಸುವವರಿಗೆ ಖಡಕ್ ಎಚ್ಚರಿಕೆ

ಪಾರದರ್ಶಕತೆ ಕಾಪಾಡಿಕೊಳ್ಳಿ: ತ್ವರಿತ ನ್ಯಾಯದಾನಕ್ಕೆ ಆದ್ಯತೆ
ಸೈಬರ್ ಅಪರಾಧ ತಡೆಗೆ ಅತ್ಯಾಧುನಿಕ ಟೀಂ ರಚನೆ

ನಾಡಿನ ನಾಡಿಮಿಡಿತ ಅರಿತಿರುವ ಜನಸಾಮಾನ್ಯರಲ್ಲಿ ನಮ್ಮವ ಎಂಬ ಭಾವನೆ ಇರುವ ಕನ್ನಡಿಗ ಎಂ.ಎ.ಸಲೀಂ ಅವರು ರಾಜ್ಯದ 43 ನೇ ಪೊಲೀಸ್ ಮಹಾನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಡಿಜಿ-ಐಜಿಪಿ ಹುದ್ದೆಯ ಮೊದಲ ದಿನದ ಕಾರ್ಯಭಾರ ಒತ್ತಡದ ನಡುವೆಯೂ ವಿಶ್ವವಾಣಿಗೆ ನೀಡಿರುವ ಸಂದರ್ಶನದಲ್ಲಿ ರಾಷ್ಟ್ರವಿರೋಧಿ ಮತ್ತು ಸಮಾಜಘಾತುಕ ಶಕ್ತಿಗಳ ನಿರ್ಮೂಲನೆಗೆ ಕಟ್ಟಿಬದ್ಧ ಎಂದಿರುವ ಅವರು, ರಾಜ್ಯದ ಕಾನೂನು ಸುವ್ಯವಸ್ಥೆ ಕಾಯ್ದು ಶಾಂತಿ ಮತ್ತು ಸೌಹಾರ್ದತೆ ಕಾಪಾಡಲು ಹೆಚ್ಚಿನ ಸಮಯ ಮೀಸಲಿಡುವ ವಾಗ್ದಾನದೊಂದಿಗೆ ತಮ್ಮ ಜಾತ್ಯತೀತ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಸಂದರ್ಶನ: ಧ್ಯಾನ್ ಪೂಣಚ್ಚ

- **ನೀವು ಜನಸಾಮಾನ್ಯರ ಪೊಲೀಸ್, ನಿಮ್ಮ ಅಪಾರ ನಿರೀಕ್ಷೆ ಇದೆ. ಏನನ್ನುತ್ತೀರಿ ?**

ಎಲ್ಲರ ನಿರೀಕ್ಷೆಯಂತೆ ಹಾರ್ಡ್‌ವರ್ಕ್ ಮಾಡಬೇಕಿದೆ. ಆಶೋತ್ತರಗಳಿಗೆ ಸ್ಪಂದಿಸಿ ಕೆಲಸ ಮಾಡಬೇಕಿದೆ. ಪೊಲೀಸರ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು ಮೊದಲ ಆದ್ಯತೆಯಾಗಿದ್ದು, ಅಂತಹ ವ್ಯವಸ್ಥೆ ನಿರ್ಮಾಣ ಮಾಡಬೇಕಿದೆ.

- **ರಾಜ್ಯ ಹಾಗೂ ನಗರದ ಟ್ರಾಫಿಕ್ ಸಮಸ್ಯೆ ಬಗೆಹರಿಸಲು ಕ್ರಮಗಳೇನು ?**

ಸೇವಾವಧಿಯಲ್ಲಿ ಸಂಚಾರ ಸಮಸ್ಯೆಗಳ ಬಗ್ಗೆ ಸಾಕಷ್ಟು ಪ್ರಯೋಗ ಮಾಡಿ ಜಾರಿಗೆ ತರಲಾಗಿದೆ. ಸಂಚಾರಿ ಒತ್ತಡವನ್ನು ನಿವಾರಿಸಲು ಮತ್ತು ರಸ್ತೆ ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳಲು ಹಲವು ಯೋಜನೆಯನ್ನು ಮುಂದಿನ ದಿನಗಳಲ್ಲಿ ಹಂತಹಂತವಾಗಿ ಕೈಗೊಳ್ಳಲಾಗುತ್ತದೆ. ನಗರದ ಸಂಚಾರದ ಸಮಸ್ಯೆ ನಿವಾರಿಸುವುದು ಹಾಗೂ ರಸ್ತೆ ಸುರಕ್ಷತೆ ಬಗ್ಗೆ ಉಪಕ್ರಮಗಳನ್ನು ಆಯಾ ಸಮಯಕ್ಕೆ ತಕ್ಕಂತೆ ರೂಪಿಸಿ ಅತ್ಯಾಧುನಿಕ ಉಪಕರಣಗಳನ್ನು ಬಳಸಿಕೊಂಡು ವಿನೂತನ ರೀತಿಯಲ್ಲಿ ಸಮಸ್ಯೆ ಬಗೆಹರಿಸಲು ಶ್ರಮಿಸಲಾಗುವುದು.

- **ರಾಜ್ಯಕ್ಕೆ ಯಾವುದಾದರೂ ಬೆದರಿಕೆಗಳಿವೆಯೇ ? ಮುಂದಿರುವ ಸವಾಲುಗಳೇನು ?**

ರಾಜ್ಯದಲ್ಲಿ ಹಲವು ಸವಾಲುಗಳಿದ್ದರೂ, ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ಬೆದರಿಕೆ ಇಲ್ಲವೇ ಅಶಾಂತಿ ಸೃಷ್ಟಿಯ ವಿಚಾರ ಸದ್ಯಕ್ಕೆ ಅಪ್ರಸ್ತುತ. ಈ ಬಗ್ಗೆ ಕೆಲ ಅಧ್ಯಯನ ನಡೆಸಬೇಕಿದ್ದು, ಮುಂದಿನ ದಿನಗಳಲ್ಲಿ ಎಲ್ಲ ವಿಚಾರಗಳ ಬಗ್ಗೆ ಆದ್ಯತೆ ನೀಡಿ ಶಾಂತಿ ಸುವ್ಯವಸ್ಥೆಯಿಂದ ರಾಜ್ಯದ ಪೊಲೀಸ್ ಪಡೆ ಮುನ್ನಡೆಯಬೇಕಿದೆ.

- **ಸಹೋದ್ಯೋಗಿಗಳಿಗೆ ತಮ್ಮ ಸಲಹೆ ಹಾಗೂ ಆದೇಶಗಳೇನು?**

ತಮ್ಮ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಿ ಎನ್ನುವುದು ಸಲಹೆ. ಅದರಂತೆ ನಮ್ಮ ಮೇಲೆ ನಂಬಿಕೆ ಬರುವಂತೆ ಹಾಗೂ ನ್ಯಾಯದ ಭರವಸೆ ಸಾಮಾನ್ಯರಲ್ಲಿ ಸೃಷ್ಟಿಯಾಗಲು ಕ್ರಮ ವಹಿಸಲಾಗುವುದು. ನೊಂದವರ ಪರವಾಗಿ ಠಾಣೆಯಲ್ಲೇ ನ್ಯಾಯ ಸಿಕ್ಕುವ ವಾತಾವರಣ ನಿರ್ಮಿಸಲಾಗುವುದು. ಹಾಗೇ ನಮ್ಮವರ ಕಲ್ಯಾಣಕ್ಕೂ ಕ್ರಮ ವಹಿಸಲಾಗುತ್ತದೆ.

- **ಇಲಾಖೆಯ ನೇಮಕಾತಿ ಗ್ರಹಣ ಬಗೆಹರಿಯಬಹುದೆ ?**

ನೇಮಕಾತಿ ವಿಚಾರ ಸರಕಾರದ ಮಟ್ಟದಲ್ಲಿ ಸಾಕಷ್ಟು ನಡೆಯುತ್ತಿದೆ. ಹೀಗಿದ್ದರೂ ಇಲಾಖೆಯಲ್ಲಿನ ನೇಮಕಾತಿ, ಕೆಲ ತಾಂತ್ರಿಕ ಲೋಪದೋಷಗಳ ಬಗ್ಗೆಯೂ ಗಮನ ಹರಿಸಬೇಕಿದ್ದು, ಶೀಘ್ರದಲ್ಲಿ ಸಮಸ್ಯೆ ಬಗೆಹರಿಸಿ ಹುದ್ದೆಗಳ ಭರ್ತಿಗೆ ಕ್ರಮ ವಹಿಸಲಾಗುತ್ತದೆ.

- **ಹೆಚ್ಚುತ್ತಿರುವ ಸೈಬರ್ ಅಪರಾಧ ಮುಕ್ತಿ ಕಾಣಬಹುದೇ ?**

ಸೈಬರ್ ಅಪರಾಧ ಸದ್ಯಕ್ಕೆ ನಿಲ್ಲುವಂತದ್ದಲ್ಲ. ನಮ್ಮ ರಾಜ್ಯ ಸೈಬರ್ ಅಪರಾಧ ತಡೆಗಟ್ಟುವಲ್ಲಿ ದೇಶದಲ್ಲಿ ಮುಂದಿದೆ. ಹೀಗಿದ್ದರೂ, ನ್ಯಾಯಾಧೀಶರು, ಕೋರ್ಟ್ ಹಾಗೂ ಪೊಲೀಸ್ ಅಧಿಕಾರಿಗಳು ಸೇರಿದಂತೆ ವಿವಿಧ ಸ್ಥರದ ತರಬೇತಿ ನೀಡಲಾಗುತ್ತಿದೆ. ಅತ್ಯಾಧುನಿಕ ಉಪಕರಣ ಅಳವಡಿಸಿಕೊಂಡು ರಾಜ್ಯ ಹಾಗೂ ವಿದೇಶಿ ಅಪರಾಧಗಳನ್ನು ಬೇಧಿಸಲು ನಮ್ಮ ತಂಡವನ್ನು ಸಜ್ಜುಗೊಳಿಸಬೇಕಾಗಿದ್ದು, ಕೆಲ ದಿನಗಳಲ್ಲೇ ಬಲಿಷ್ಠವಾದ ಸೈಬರ್ ತಂಡ ಕಟ್ಟಿ ಕ್ರಿಮಿನಲ್‌ಗಳಿಗಿಂತ ಮುಂದಿರುವ ಹೊಸ ಸೈಬರ್ ಅಪರಾಧ ನಿಯಂತ್ರಣ ಟೀಂ ಕಟ್ಟಲು ಯೋಜನೆ ಸಿದ್ಧಪಡಿಸಲಾಗುತ್ತದೆ.

ಜಾಲತಾಣಗಳ ವಿಚಾರಕ್ಕೂ ಕೆಲವೊಂದು ನಿಯಮ ಬಿಗಿ ಮಾಡಬೇಕಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿರುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ವಹಿಸಲಾಗುತ್ತದೆ. ಸುಳ್ಳು ಸುದ್ದಿ ಹರಡುವಿಕೆ, ಡ್ರಗ್ಸ್ ಮಾರಾಟ ಕಡಿವಾಣಕ್ಕೆ ಕಠಿಣ ಕ್ರಮ ಕೈಗೊಂಡು ಸಮ-ಸಮಾಜ ನಿರ್ಮಾಣವೇ ನಮ್ಮ ಗುರಿಯಾಗಿದೆ.

– ಎಂ.ಎ ಸಲೀಂ, ಪೊಲೀಸ್ ಮಹಾನಿರ್ದೇಶಕ

- **ಮಕ್ಕಳ ಮೇಲಿನ ಅಪರಾಧ ಚಟುವಟಿಕೆ ಹೆಚ್ಚುತ್ತಿದೆ. ಇದರ ನಿಗ್ರಹಕ್ಕೆ ಕಾರ್ಯಸೂಚಿಗಳೇನು ?**

ಮಹಿಳೆ ಮತ್ತು ಮಕ್ಕಳ ವಿಚಾರ ಸಂಬಂಧ ಈಗ ಪ್ರಕರಣಗಳು ಹೆಚ್ಚಿದಂತೆ ದೂರುಗಳೂ ಹೆಚ್ಚಾಗಿ ದಾಖಲಾಗುತ್ತಿದೆ. ಇದು ಉತ್ತಮ ಬೆಳವಣಿಗೆ. ಉದಾ: ಹೆಚ್ಚಿನ ಪೋಕ್ಸೊ ಪ್ರಕರಣಗಳು ಹೊರಬರುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಾಗಿದೆ. ಮೊದಲೆಲ್ಲ ಇದು ಗಮನಕ್ಕೆ ಬರುತ್ತಿರಲಿಲ್ಲ. ಹೀಗಾಗಿ ಸುರಕ್ಷತೆಯ ಸಮಸ್ಯೆಯಾಗುತ್ತಿತ್ತು. ಈಗ ದೂರು ದಾಖಲಾಗುತ್ತಿರುವುದರಿಂದ ಅಪರಾಧಕ್ಕೆ ಕಡಿವಾಣ ಹಾಕಲು ಸಹಾಯವಾಗುತ್ತಿದೆ. ಅಲ್ಲದೆ ತನಿಖೆಯು ಹಲವು ಆಯಾಮಗಳಲ್ಲಿ ನಡೆದು ಸಂತ್ರಸ್ತರಿಗೆ ನ್ಯಾಯ ದೊರಕುತ್ತಿದೆ. ಸಮಾಜದ ದುರ್ಬಲ ವರ್ಗದವರಲ್ಲಿ ಈ ಸಂಬಂಧ ಇಲಾಖೆ ಭರವಸೆ ಮೂಡಿಸುವ ಕೆಲಸ ನಡೆಯುತ್ತದೆ.

- **ನೂತನ ಯೋಜನೆಗಳೇನು ?**

ರಾಜ್ಯದಲ್ಲಿ ಸೌಹಾರ್ದತೆ ಮುಖ್ಯ. ಇಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದೇ ನಮ್ಮ ಮೊದಲ ಆದ್ಯತೆ. ಅದು ನಿರಂತರವಾಗಿರುವಂತೆ ಶಾಂತಿ ಸಹಬಾಳ್ವೆಯಿಂದ ಇರುವಂತೆ ಇಲಾಖೆಯನ್ನು ಸಂಯೋಜಿಸಲಾಗುವುದು.

- **ಇಲಾಖೆಯ ಬಲವರ್ಧನೆ ಹಾಗೂ ಜನಸ್ನೇಹಿಯಾಗಿ ಮಾಡಲು ಸಾಧ್ಯವಿದೆಯೇ?**

ನೋಡಿ, ಇಲಾಖೆಯಲ್ಲಿನ ಸಿಬ್ಬಂದಿ, ಅಧಿಕಾರಿಗಳ ಸೇವೆ ನಾವು ಜನಸ್ನೇಹಿಯಾಗಿಯೇ ಇರುತ್ತದೆ. ಕಾನೂನಡಿಯೇ ಕೆಲಸ ಮಾಡಲು ನಿಯಮಗಳಿವೆ. ಅಪರಾಧ ವಿಚಾರಗಳಿಗೆ ಆಯಾ ಮಾನದಂಡಗಳಂತೆಯೇ ಕರ್ತವ್ಯವೂ ಮಾಡಬೇಕಿದೆ. ಹೀಗಿದ್ದರೂ ಪೊಲೀಸರು ಸಮುದಾಯದ ಸಹಭಾಗಿತ್ವ ಅಳವಡಿಸಿಕೊಳ್ಳಲು ಕ್ರಮ ವಹಿಸಲಾಗುತ್ತದೆ. ಜನರೂ ಕೂಡ ತಮ್ಮ ಕರ್ತವ್ಯ ಮಾಡಬೇಕಿದೆ. ಅದರಂತೆ ನಮ್ಮ ಸಿಬ್ಬಂದಿ, ಅಧಿಕಾರಿಗಳಿಗೂ ಕೂಡ ಉತ್ತಮ ಕೆಲಸದ ವಾತಾವರಣ ನಿರ್ಮಿಸಬೇಕಿದೆ. ಕ್ಷೇಮಾಭಿವೃದ್ಧಿಗೆ ಸರಕಾರದ ಯೋಜನೆಗಳಿದ್ದರೂ ಮತ್ತಷ್ಟು ಸುಧಾರಣೆ ತರಬೇಕಿದೆ. ಒಟ್ಟಿನಲ್ಲಿ ಕಮ್ಯೂನಿಟಿ ಪೊಲೀಸಿಂಗ್‌ಗೆ ಹೆಚ್ಚಿನ ಆದ್ಯತೆ ನೀಡುವಂತೆ ಶ್ರಮಿಸಲಾಗುತ್ತದೆ.

ರಾಜ್ಯದ ನೂತನ ಪೊಲೀಸ್ ಮಹಾನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಹಿರಿಯ ಐಪಿಎಸ್ ಅಧಿಕಾರಿ ಸಲೀಂ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದಿಸಿದರು. ಪೊಲೀಸ್ ಮಹಾ ನಿರ್ದೇಶಕರಾಗಿ ಸೇವೆಯಿಂದ ನಿವೃತ್ತರಾದ ಅಲೋಕ್ ಮೋಹನ್ ಅವರಿಗೆ ಮುಖ್ಯಮಂತ್ರಿಗಳು ಶುಭ ಹಾರೈಸಿದರು. ಈ ವೇಳೆ ಗೃಹ ಸಚಿವ ಡಾ. ಜಿ. ಪರಮೇಶ್ವರ ಹಾಜರಿದ್ದರು.

ರಾಜ್ಯದ ನೂತನ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ.ಸಲೀಂ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸದಾಶಿವ ನಗರದ ನಿವಾಸದಲ್ಲಿ ಗುರುವಾರ ಭೇಟಿ ಮಾಡಿದರು.

ಹೆಸರು ಬದಲಾದರೆ ಬಿಜೆಪಿಗೇನು ಸಮಸ್ಯೆ?

ಬೆಂಗಳೂರು: ರಾಮನಗರ ಜಿಲ್ಲೆಯ ಹೆಸರನ್ನು ಬದಲಾಯಿಸಿದರೆ ಬಿಜೆಪಿಯವರಿಗೆ ಏಕೆ ಹೊಟ್ಟೆ ಉರಿ ಎಂಬುದು ಗೊತ್ತಾಗುತ್ತಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಮನಗರ ಹೆಸರನ್ನು ಬೆಂಗಳೂರು ದಕ್ಷಿಣ ಎಂದು ಬದಲಾವಣೆ ಮಾಡುವ ಬಗ್ಗೆ ಈ ಹಿಂದೆಯೇ ಸಚಿವ ಸಂಪುಟದಲ್ಲಿ ಚರ್ಚೆಯಾಗಿತ್ತು. ಮತ್ತೆ ಚರ್ಚೆಗೆ ಬಂದಿದೆ. ಉತ್ತರಪ್ರದೇಶ ಮತ್ತು ದೆಹಲಿಯಲ್ಲಿ ಈ ರೀತಿಯಲ್ಲಿಯೇ ಬಿಜೆಪಿಯವರು ಅನೇಕ ನಗರ, ಜಿಲ್ಲೆಗಳ ಹೆಸರನ್ನು ಬದಲಾಯಿಸಿದ್ದಾರೆ. ಹೀಗಿರುವಾಗ ರಾಮನಗರದ ಹೆಸರು ಬದಲಾಯಿಸಿದರೆ ಸಮಸ್ಯೆ ಯೇನು? ರಾಮನಗರ ಹೆಸರು ಬದಲಾವಣೆ ಮಾಡಲು ಬಿಜೆಪಿಯವರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಅಡ್ಡಿಪಡಿಸುತ್ತಿದ್ದಾರೆ ಎಂದು ಟೀಕಿಸಿದರು. ಜಿಲ್ಲೆಯ ಹೆಸರು ಬದಲಾವಣೆ ಮಾಡಿದರೆ ಲ್ಯಾಂಡ್ ಮಾಫಿಯಾ ಆಗುತ್ತದೆಯೇ? ಅರ್ಥವಿರದ ಮಾತುಗಳನ್ನು ಆಡುತ್ತಾರೆ. ಪ್ರತಿಪಕ್ಷದಲ್ಲಿರುವವರು ಬುದ್ಧಿವಂತರಿದ್ದಾರೆ. ಆದರೆ ಸಾಮಾನ್ಯ ಜ್ಞಾನವನ್ನು ಬಳಸುತ್ತಿಲ್ಲ ಎಂದು ವ್ಯಂಗ್ಯವಾಡಿದರು.

ಹೆಸರು ಬದಲಾವಣೆ ತಿರಸ್ಕರಿಸಿದ್ದರೂ, ಸಂಪುಟದಲ್ಲಿ ಅನುಮೋದನೆ | ಮೆಟ್ರೋ ಫೇಸ್ 2 ಯೋಜನಾ ವೆಚ್ಚ 40,424 ಕೋಟಿಗೆ ಅನುಮೋದನೆ | ಕಸ ವಿಲೇವಾರಿಗೆ 4,790 ಕೋಟಿ ಮೊತ್ತದಲ್ಲಿ 33 ಪ್ಯಾಕೇಜ್: ಡಿಸಿಎಂ

ರಾಮನಗರವೇ ಜಿಲ್ಲಾ ಕೇಂದ್ರ, ಆದ್ರೆ ಹೆಸರು ಮಾತ್ರ ಬೆಂಗಳೂರು ದಕ್ಷಿಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದ್ದು, ಇನ್ನುಮುಂದೆ ಈ ಜಿಲ್ಲೆಯು ಬೆಂಗಳೂರು ದಕ್ಷಿಣ ಎಂದು ಕರೆಯಲ್ಪಡುತ್ತದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮನಗರ ಜಿಲ್ಲಾ ಕೇಂದ್ರವಾಗಿಯೇ ಮುಂದುವರಿ ಯಲಿದೆ. ಕೇವಲ ಜಿಲ್ಲೆಯ ಹೆಸರನ್ನು ಮಾತ್ರ ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಲಾಗಿದೆ.

ಈ ಹಿಂದೆ ಇದು ಬೆಂಗಳೂರು ಜಿಲ್ಲೆಯಾಗಿತ್ತು. ಆಡಳಿತಾತ್ಮಕ ದೃಷ್ಟಿಯಿಂದ ಈ ಹೆಸರನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈಗ ಮರುನಾಮಕರಣ ಮಾಡುತ್ತಿರುವ ವಿಚಾರವನ್ನು ತಿಳಿಸಲು ಸಂತೋಷವಾಗುತ್ತಿದೆ ಎಂದು ತಿಳಿಸಿದರು.

ರಾಮನಗರ ಜಿಲ್ಲೆ ಮರುನಾಮಕರಣಕ್ಕೆ ಯಾವುದೇ ಆರ್ಥಿಕ ಸಮಸ್ಯೆ ಇರುವುದಿಲ್ಲ. ನಮ್ಮದು ಮೊದಲು ಬೆಂಗಳೂರು ಜಿಲ್ಲೆಯಾಗಿತ್ತು. ನಾನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿದ್ದೆ. ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ, ರಾಮನಗರ, ಕನಕಪುರ, ಮಾಗಡಿ ಇವೆಲ್ಲವೂ ಬೆಂಗಳೂರಿನ ಭಾಗವಾಗಿತ್ತು. ಆ ಹೆಸರನ್ನು ಉಳಿಸಿಕೊಳ್ಳುವ ಕೆಲಸ ಮಾಡುತ್ತಿದ್ದೇವೆ. ಹೀಗಾಗಿ ಈ ಜಿಲ್ಲೆಯನ್ನು ಕಾನೂನು ಚೌಕಟ್ಟಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ತೀರ್ಮಾನಿಸಿದೆ ಎಂದು ತಿಳಿಸಿದರು.

ಕೇಂದ್ರ ಸರಕಾರದ ವಿರೋಧಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಈ ವಿಚಾರದಲ್ಲಿ ಕೇಂದ್ರ ಸರಕಾರಕ್ಕೆ ಯಾವುದೇ ಅಧಿಕಾರ ಇರುವುದಿಲ್ಲ. ಅವರಿಗೆ ಮಾಹಿತಿ ನೀಡುವ ಉದ್ದೇಶದಿಂದ ಅವರಿಗೆ ಪ್ರಸ್ತಾವನೆ ಕಳುಹಿಸಿದ್ದೆವು. ಆದರೆ ಕೆಲವರು ರಾಜಕೀಯ ಮಾಡುವ ಪ್ರಯತ್ನ ಮಾಡಿದರು. ಇದು ರಾಜ್ಯಕ್ಕೆ ಸಂಬಂಧಿಸಿದ ವಿಚಾರ. ಇದು ನಮ್ಮ ಹಕ್ಕು. ಗದಗ, ಚಾಮರಾಜನಗರ ಜಿಲ್ಲೆ ಸೇರಿದಂತೆ ಬೇರೆ ಜಿಲ್ಲೆಗಳನ್ನು ಮಾಡಿದ್ದೇವೆ. ರಾಮನಗರ ಜಿಲ್ಲೆ ಎಂದು ಮಾಡಿದಾಗ ಕೇಂದ್ರವನ್ನು ಕೇಳಿರಲಿಲ್ಲ. ಇನ್ನುಮುಂದೆ ಎಲ್ಲಾ ದಾಖಲೆಗಳಲ್ಲೂ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಬದಲಾವಣೆಯಾಗಲಿದೆ. ನನ್ನನ್ನು ನೀವೆಲ್ಲರೂ ಬೆಂಗಳೂರು ದಕ್ಷಿಣ ಜಿಲ್ಲೆಯವನು ಎಂದು ಕರೆಯಬೇಕು ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಅನೇಕ ಸಂಘ ಸಂಸ್ಥೆಗಳು, ದೇವಾಲಯಗಳು ಬಿಡಿಎ ವ್ಯಾಪ್ತಿಯಲ್ಲಿ ನಿವೇಶನ ತೆಗೆದುಕೊಂಡಿದ್ದು, ಅವರಿಗೆ ಒನ್ ಟೈಮ್ ಇನ್ವೆಸ್ಟ್ ಬೆನಿಫಿಟ್ ನೀಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿದ್ದೇವೆ. 120 ದಿನಗಳ ಒಳಗಾಗಿ ಅವರು ಬಾಕಿ ಇರುವ ತೆರಿಗೆ ಪಾವತಿಸಿದರೆ ಬಡ್ಡಿ ಮನ್ನಾ ಮಾಡಲಾಗುವುದು ಎಂದು ತಿಳಿಸಿದರು.

ಕಸ ವಿಲೇವಾರಿಗೆ 33 ಪ್ಯಾಕೇಜ್: ಈ ಹಿಂದೆ ಬಿಜೆಪಿ ಅವಧಿಯಲ್ಲಿ ಕಸ ವಿಲೇವಾರಿಗೆ 98 ಪ್ಯಾಕೇಜ್ ಟೆಂಡರ್ ಕರೆಯಲಾಗಿತ್ತು. ಈ ವಿಚಾರವಾಗಿ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದು, ನ್ಯಾಯಾಲಯ ಅವರ ಅರ್ಜಿಯನ್ನು ವಜಾಗೊಳಿಸಿ, ಮುಂದಿನ ನಾಲ್ಕು ತಿಂಗಳಲ್ಲಿ ಈ ಟೆಂಡರ್ ಬಗ್ಗೆ ಅಂತಿಮ ತೀರ್ಮಾನ ಮಾಡುವಂತೆ ತೀರ್ಪು ನೀಡಿದೆ. ನಾವು ಪ್ರತಿ ಕ್ಷೇತ್ರದಲ್ಲೂ ಒಂದೊಂದು ಪ್ಯಾಕೇಜ್ ಮಾಡಲು ಮುಂದಾಗಿದ್ದು, ದೊಡ್ಡ ಕ್ಷೇತ್ರಗಳಲ್ಲಿ ಎರಡು ಪ್ಯಾಕೇಜ್ ಸೇರಿದಂತೆ 33 ಪ್ಯಾಕೇಜ್ ಮೂಲಕ ಕಸ ವಿಲೇವಾರಿ ಮಾಡಲಾಗುವುದು. ಈ ಕುರಿತ ಟೆಂಡರ್ ಶೀಘ್ರವೇ ಕರೆಯಲಾಗುವುದು. ಇದಕ್ಕಾಗಿ 7 ವರ್ಷಗಳ ಅವಧಿಗೆ 4,790 ಕೋಟಿ ವೆಚ್ಚದಲ್ಲಿ ಕಸ ವಿಲೇವಾರಿ ಯೋಜನೆ ಮಾಡಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಇನ್ನು ಕೆಪಿಎಸ್‌ಸಿ 2011ರ ನೇಮಕ ಅಕ್ರಮಕ್ಕೆ ಸಂಬಂಧಿಸಿದಂತೆ ಅಂದಿನ ಅಧ್ಯಕ್ಷರು, ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಒಪ್ಪಿಸದಿರುವ ಬಗ್ಗೆ ಸಚಿವ ಸಂಪುಟ ತೀರ್ಮಾನಿಸ ಲಾಗಿದೆ. ಈ ವಿಷಯವನ್ನು ಮುಕ್ತಾಯಗೊಳಿಸಲು ಸಚಿವ ಸಂಪುಟ ತೀರ್ಮಾನಿಸಿದೆ ಎಂದು ಹೇಳಿದರು.

ಸಚಿವ ಸಂಪುಟ ಸಭೆಯಲ್ಲಿ ಟನಲ್ ವಿಚಾರವಾಗಿ ಟೆಂಡರ್‌ಕರೆಯುವ ವಿಚಾರವಾಗಿ ಚರ್ಚೆ ಮಾಡಲಾಗಿದೆ. ಹೈಬ್ರಿಡ್ ಮಾದರಿಯಲ್ಲಿ ಮಾಡಬೇಕೇ ಅಥವಾ ಬೇಡವೇ ಎಂಬುದನ್ನು ಸಿಎಂ ಜತೆ ತಾಂತ್ರಿಕ ಅಂಶ ಚರ್ಚಿಸಿ ತೀರ್ಮಾನ ಮಾಡುತ್ತೇವೆ. ಈ ಟೆಂಡರ್ ಜಾಗತಿಕ ಟೆಂಡರ್ ಆಗಿರಲಿದೆ. ಮೆಟ್ರೋ ವಿಚಾರವಾಗಿ ಎರಡನೇ ಹಂತದ ಮೆಟ್ರೋ ಯೋಜನೆಗೆ ಅಂದಾಜು ವೆಚ್ಚ 40,424 ಕೋಟಿಗೆ ಅನುಮತಿ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಾರಂಭ ಮಾಡುತ್ತಿದ್ದೇವೆ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಂಪುಟದ ಪ್ರಮುಖ ನಿರ್ಣಯ

- ನಿವೃತ್ತ ಐಎಎಸ್ ಅಧಿಕಾರಿ ಭರತ್ ಲಾಲ್ ಮೀನಾ, ಪಿ.ಬಿ.ರಾಮಮೂರ್ತಿ ವಿರುದ್ಧದ ಲೋಕಾಯುಕ್ತ ಮಾಡಿರುವ ಇಲಾಖಾ ವಿಚಾರಣೆಯು ಶಿಫಾರಸನ್ನು ಕೈಬಿಡಲು ತೀರ್ಮಾನ.
- ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕಕ್ಕೆ ಅನುಮೋದನೆ
- ಕರ್ನಾಟಕ ಗೃಹ ಮಂಡಳಿ ವತಿಯಿಂದ ಕೆಂಗೇರಿ ಬಂಡೇಮಠ ಬಡಾವಣೆಯಲ್ಲಿ ಬಹುಮಹಡಿ ವಸತಿ ಸಮುಚ್ಚಯಗಳನ್ನು ನಿರ್ಮಿಸಲು 2,180 ಮೊತ್ತದ ಕೋಟಿಗಳ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ.
- ಸೂಲಿಬೆಲೆ ಮತ್ತು ನಂದಗುಡಿ ಹೋಬಳಿಗಳ 59 ಕೆರೆಗಳಿಗೆ ಎಚ್‌ಎನ್ ವ್ಯಾಲಿ ಯೋಜನೆಯಿಂದ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಏತ ನೀರಾವರಿ ಮೂಲಕ ತುಂಬಿಸುವ 140 ಕೋಟಿ ರು.ಗಳ ಅಂದಾಜು ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.
- ಮಾಲೂರು ಹಾಗೂ ಮದ್ದೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಒಪ್ಪಿಗೆ.
- ರಾಮನಗರ ಜಿಲ್ಲೆ, ಕನಕಪುರ ನಗರ ವ್ಯಾಪ್ತಿಯಲ್ಲಿನ ಅರ್ಕಾವತಿ ನದಿ ದಂಡ ಅಭಿವೃದ್ಧಿ ಯೋಜನೆಯಲ್ಲಿ ಅರ್ಕಾವತಿ ಜಲಾಶಯ ಯೋಜನೆಯ ಕಾಮಗಾರಿಯನ್ನು 120 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ದೊರೆತಿದೆ.

ಶಾಸಕರ ಅಮಾನತು; 25ಕ್ಕೆ ಸಭೆ

ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಿಜೆಪಿ ಅನರ್ಹ ಶಾಸಕರ ಕುರಿತಾಗಿ ವಿಷಯ ಪ್ರಸ್ತಾಪಿಸಿದ್ದಾರೆ. ಮೇ 25ರಂದು ಸಭೆ ಕರೆಯಲು ತೀರ್ಮಾನಿಸಲಾಗಿದೆ. ಮೇ 25ರಂದು ಸಂಜೆ 5 ಗಂಟೆಗೆ ವಿಧಾನಸೌಧದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸಭೆ ನಡೆಯಲಿದೆ. ಸಭೆಯಲ್ಲಿ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಹಾಗೂ ಶಾಸಕರು ಭಾಗಿಯಾಗಲಿದ್ದಾರೆ. ಅಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಎಚ್. ಕೆ.ಪಾಟೀಲ್ ಸ್ಪಷ್ಟಪಡಿಸಿದರು.

ಇಂದಿನಿಂದ ಮುಡಾ ಕಾಯಿದೆ ಜಾರಿಗೆ

ಮುಡಾ ಪ್ರಾಧಿಕಾರ ಶುಕ್ರವಾರದಿಂದ ಜಾರಿಗೆ ಬರಲಿದ್ದು, ಇದಕ್ಕೆ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಇದೇ ರೀತಿ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 2024ರ ವ್ಯಾಪ್ತಿಗೆ ಬರುವ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 4-ಬಿ ರಲ್ಲಿನ ಅವಕಾಶದಂತೆ ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾತಿಯಿಂದ ಹೊರತುಪಡಿಸಲು ಸರಕಾರವು ಪರಿಶೀಲಿ ಸುತ್ತಿರುವ ಬಗ್ಗೆ ಹಾಗೂ ಅಗತ್ಯವಿದ್ದಲ್ಲಿ, ಸದರಿ ಪ್ರದೇಶವನ್ನು ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರತುಪಡಿಸಲು ಕಾಯ್ದೆಗೆ ಸೂಕ್ತ ತಿದ್ದುಪಡಿಯನ್ನು ತರಲು ಮುಂದಿನ ಅಧಿವೇಶನದಲ್ಲಿ ಕ್ರಮ ಕೈಗೊಳ್ಳಲಾ ಗುವುದೆಂದು ರಾಜ್ಯಪಾಲರ ಅವಗಾಹನೆಗೆ ತರಲಾಗಿರುವ ಅಂಶವನ್ನು ಅನುಮೋದಿಸಲು ಸಚಿವ ಸಂಪುಟ ನಿರ್ಧರಿಸಿದೆ.

ವಿಶ್ವವಾಣಿ

ಸಂಪಾದಕೀಯ

ನಕಾರಾತ್ಮಕ ಶಕ್ತಿಗಳ ನಿವಾರಣೆಯಾಗಲಿ

ದುಷ್ಟಶಿಕ್ಷಣೆ, ಶಿಷ್ಟರಕ್ಷಣೆ'- ಇದು ಯಾವುದೇ ಆಳುಗ ವ್ಯವಸ್ಥೆಯ ಅನುಗಾಲದ ಆಶಯವಾಗಿರಬೇಕು. ಹಾಗಿದ್ದಾಗ ಮಾತ್ರವೇ ಭಯಮುಕ್ತ, ಆರೋಗ್ಯವಂತ ಮತ್ತು ಕ್ರಿಯಾಶೀಲ ಸಮಾಜದ ನಿರ್ಮಾಣವಾಗಲು ಸಾಧ್ಯ. ಯಾವಾಗ ನೋಡಿದರೂ ಜೀವವನ್ನು ಅಂಗೆಯಲ್ಲೇ ಇಟ್ಟುಕೊಂಡು ದಿನದೂಡುವಂಥ ದುಸ್ಥಿತಿ ಸಮಾಜದಲ್ಲಿ ಮಡುಗಟ್ಟಿದ್ದರೆ, ಅದಕ್ಕಿಂತ ದುರಂತ ಮತ್ತೊಂದಿಲ್ಲ. ಉಗ್ರವಾದವನ್ನು ಮತ್ತು ನಕ್ಸಲ್‌ವಾದವನ್ನು ನಿರಂತರ ಪೋಷಿಸಿಕೊಂಡೇ ಬಂದಿರುವ ಕುತ್ಸಿತ ಶಕ್ತಿಗಳು ಇದನ್ನು ಇನ್ನಾದರೂ ಅರ್ಥಮಾಡಿಕೊಂಡರೆ ಒಳಿತು. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪೈಶಾಚಿಕ ಕೃತ್ಯವನ್ನು ಮೆರೆದ ಉಗ್ರರು, ಅದಕ್ಕೆ ಪ್ರತಿಯಾಗಿ ಭಾರತ ಕೈಗೊಂಡ 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯಿಂದಾಗಿ ಎಷ್ಟರ ಮಟ್ಟಿಗೆ ಪೆಟ್ಟು ತಿನ್ನಬೇಕಾಯಿತು ಎಂಬುದು ಈಗಾಗಲೇ ಜಗಜ್ಜಾಹೀರು. ಈಗ ನಕ್ಸಲರ ಸರದಿ. ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆಯದೆ ಪ್ರತ್ಯೇಕವಾಗಿದ್ದುಕೊಂಡು, ಅನಪೇಕ್ಷಿತ ಚಟುವಟಿಕೆಗಳಲ್ಲಿ ತೊಡಗುವ ನಕ್ಸಲರಿಗೆ ಬಿಸಿಮುಟ್ಟಿಸುವ ಕೆಲಸ ಶುರುವಾಗಿದೆ. ಛತ್ತೀಸ್‌ಗಢದಲ್ಲಿ ಮೊನ್ನೆ ನಡೆದ ಕಾರ್ಯಾಚರಣೆಯಲ್ಲಿ 30 ಮಂದಿ ನಕ್ಸಲರು ಹತರಾಗಿದ್ದು ಇದಕ್ಕೆ ತಾಜಾ ಉದಾಹರಣೆ. ಈ ಭೂಮಿಯ ಮೇಲೆ, ಸಮಸ್ಯೆಗಳೇ ಇಲ್ಲದ ಸಮಾಜವಿಲ್ಲ ಅಥವಾ ಸವಾಲನ್ನೇ ಎದುರಿಸದ ವ್ಯಕ್ತಿಯಿಲ್ಲ. ಆಳುಗ ವ್ಯವಸ್ಥೆಯ ಮುಂದೆ ಅಂಥ ಸಮಸ್ಯೆ/ಸವಾಲನ್ನು ವ್ಯಕ್ತಪಡಿಸಿ ಪರಿಹರಿಸಿಕೊಳ್ಳಲು ಯಥೋಚಿತ ಮಾರ್ಗಗಳಿವೆ. ಆದರೆ ಇಂಥ ಮಾರ್ಗವನ್ನು ನೆಚ್ಚುವ ಬದಲು, ಅತಿರೇಕದ ಹೆಜ್ಜೆಯನ್ನಿಟ್ಟರೆ ಪರಿಣಾಮ ಏನಾಗುತ್ತದೆ ಎಂಬುದಕ್ಕೆ ನಕ್ಸಲರಿಗೆ ಮೊನ್ನೆ ಒದಗಿದ ಸ್ಥಿತಿಯೇ ಸಾಕ್ಷಿ. ಉಗ್ರವಾದವೇ ಇರಲಿ, ನಕ್ಸಲ್‌ವಾದವೇ ಇರಲಿ ಅಂತರಾಳದಲ್ಲಿ ಸದಾಶಯವನ್ನು ಹೊಂದಿರುವಂಥವಲ್ಲ; ಅಲ್ಲಿರುವುದು 'ಪುಡಿಗಟ್ಟುವ' ಮನೋಧರ್ಮವೇ ವಿನಾ 'ಕಟ್ಟುವ' ಚಿತ್ತಸ್ಥಿತಿಯಲ್ಲ. ಹೀಗಾದಾಗ ಅವಕ್ಕೆ ಅಂತಿಮವಾಗಿ ಒದಗುವ ಸ್ಥಿತಿಯೂ ಅಂಥದೇ ಆಗಿರುತ್ತದೆ. ಈ ಸರಳ ಮತ್ತು ಸಾರ್ವಕಾಲಿಕ ಸತ್ಯವನ್ನು ಅರಿತರೆ ಒಂದಿಡೀ ವಿಶ್ವವೇ ಶಾಂತಿ-ನೆಮ್ಮದಿಗಳ ಆಡುಂಬೊಲ ಆಗಬಲ್ಲದು. ಆದರೆ ಈ ಸತ್ಯವನ್ನು ಅರ್ಥಮಾಡಿಕೊಳ್ಳುವುದೇ ಕೆಲವರಿಗೆ ಸಮಸ್ಯೆಯಾಗಿಬಿಟ್ಟಿದೆ!

ಸೊಂಪಾದಕೀಯ

ಎಲ್ಲಿದೆ ಗ್ಯಾರಂಟಿ?

ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರಕಾರ ತನ್ನ ಸಾಧನಾ ಸಮಾವೇಶ ಮಾಡಿದೆ. ಕಳೆದ ಬಾರಿ ಬಿಜೆಪಿಯನ್ನು ಮಟ್ಟ ಹಾಕಿ ಅಸ್ತಿತ್ವಕ್ಕೆ ಬಂದ ತಮ್ಮ ಸರಕಾರ ಯಶಸ್ವಿಯಾಗಿದೆ ಅಂತ ಎಲ್ಲಾ ಕಡೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ. ಈ ಸಾಧನೆಗೆ ತನ್ನ ಗ್ಯಾರಂಟಿಗಳನ್ನ ಸಾಧನವಾಗಿ ಬಳಸಿಕೊಂಡಿದೆ. ತಾನು ಕೊಟ್ಟ ಗ್ಯಾರಂಟಿಗಳಿಂದ ಕರ್ನಾಟಕ ರಾಜ್ಯದ ಜನರ ಜೀವನವೇ ಬದಲಾಗಿದೆ ಎಂದು ಘಂಟಾಘೋಷವಾಗಿ ಹೇಳಿಕೊಳ್ಳುತ್ತಿದೆ. ಆದರೆ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಈಗ ಮಳೆಯದೇ ಹಾವಳಿ. ಎಲ್ಲಾ ಕಡೆ ನೀರು ತುಂಬಿಕೊಂಡು ಜನರ ಜೀವಕ್ಕೆ, ಜೀವನಕ್ಕೆ ಗ್ಯಾರಂಟಿ ಇಲ್ಲ ಎನ್ನುವಂತಾಗಿದೆ. ಇಂಥ ಸಮಯದಲ್ಲಿ ಕಾಂಗ್ರೆಸ್ ಸರಕಾರ ತನ್ನ ಗ್ಯಾರಂಟಿ ಗಳನ್ನು ಹೇಳಿಕೊಳ್ಳುತ್ತಿರುವುದು ರಾಜಕೀಯ ವಿರೋಧಿಗಳಷ್ಟೇ ಎಲ್ಲ ಜನಸಾಮಾನ್ಯರಿಗೆ ಕೂಡಾ ಅಸಮಾಧಾನ ತಂದಿದೆ. ಆದರೆ ಏನು ಮಾಡೋದು ರಾಜಕೀಯದಲ್ಲಿ ಎಲ್ಲದಕ್ಕೂ ಸಮಾಧಾನ ಉಂಟು. ದಿನಾ ಸಾಯ್ತಾರೆ ಅಂತ ಅಳೋಕಾಗಲ್ಲ ಅನ್ನೋದು ರಾಜಕೀಯಕ್ಕೆ ತುಂಬಾ ಒಪ್ಪುವಂಥ ವಿಷಯ. ಮಳೆ ಬಂದು ಯಾರೋ ಸತ್ರು, ಮಳೆ ಬಂದು ಏನೋ ಆಯಿತು ಅಂತ ನಮ್ಮ ಸರಕಾರದ ಸಾಧನಾ ಸಮಾವೇಶವನ್ನು ನಿಲ್ಲಿಸೋಕಾ ಗುತ್ತಾ ಅನ್ನೋ ಧೋರಣೆ ಕಾಂಗ್ರೆಸ್‌ನದ್ದು. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಎಲ್ಲಾ ಹಿರಿಯ ನಾಯಕರು ತಮ್ಮ ಗ್ಯಾರಂಟಿಗಳನ್ನು ತೋರಿಸಿ ತಮ್ಮ ಬೆನ್ನನ್ನು ತಟ್ಟಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಆದರೆ ಬೆಂಗಳೂರಿನಲ್ಲಿ ಮಳೆ ಬಂದು ಜನಸಾಮಾನ್ಯರ ಬೆನ್ನೆಲುಬು ಮುರಿದಂತೆ ಆಗಿರುವುದು ಮಾತ್ರ ಅವರ ಲೆಕ್ಕದಲ್ಲಿ ಏನೂ ಅಲ್ಲ. ಅಧಿಕಾರದ ಯಶಸ್ಸಿನಲ್ಲಿ ಮುಳುಗಿಹೋಗಿರುವ ಅವರಿಗೆ ಭಾರಿ ಮಳೆಯಲ್ಲಿ ಮುಳುಗಿಹೋಗಿರುವ ಜನಸಾಮಾನ್ಯರ ಕಷ್ಟ ಅರ್ಥ ಆಗುತ್ತಿಲ್ಲ. ಹಾಗಾಗಿ ಅವರು ಈಗ ಕೇವಲ ತಮ್ಮ ಯಶಸ್ಸಿನ ಕಹಳೆ ಮೊಳಗಿಸಿ, ಅದರ ಅಮಲಿನಲ್ಲಿ ತೇಲುತ್ತಿದ್ದಾರೆ. ರಾಜಕೀಯದ ರಾಜಕಾಲುವೆಯಲ್ಲಿ ಈಜಾಡಿ ದವರಿಗೆ ಇದೆಲ್ಲ ಮಾಮೂಲಿ. ಅಲ್ಲದೇ ಅವರು ಕೊಟ್ಟ ಗ್ಯಾರಂಟಿಗಳಿಂದ ಜನರಿಗೆ ಸಹಾಯ ಆಗಿರುವುದಂತೂ ಸತ್ಯ. ಹಾಗಾಗಿ ಅವರು ತಮ್ಮ ಸಾಧನೆಗಳು ಬೆಂಗಳೂರಿನ ಮಳೆ ನೀರಿನಲ್ಲಿ ಕೊಚ್ಚಿ ಹೋಗದಂತೆ ಜಾಗ್ರತೆ ವಹಿಸುತ್ತಿದ್ದಾರೆ ಅಷ್ಟೇ.

ಸಂಪಾದಕರ ಸದ್ಯಶೋಧನೆ

ಪತ್ರಿಕೆಯನ್ನು ನೆಟ್ಟರೆ ಹೂವು ಬಿಡುವುದಾ?

ಜಪಾನಿನ ಪ್ರಮುಖ ದಿನಪತ್ರಿಕೆಗಳಲ್ಲಿ 'ಮೈನಿಚಿ ಶಿಂಬುನ್' ಕೂಡ ಒಂದು. ಪರಿಸರ ಸ್ನೇಹಿ ಮತ್ತು ನವೀನ ಪ್ರಯತ್ನಗಳ ಮೂಲಕ ಈ ದೈನಿಕ ಗಮನ ಸೆಳೆದಿದೆ. ಇದು ಆಗಾಗ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಓದುಗರಲ್ಲಿ ಹಿತವಾದ ಅಚ್ಚರಿಯನ್ನು ಮೂಡಿಸುವುದುಂಟು. ಈ ಪತ್ರಿಕೆ 2016 ರಲ್ಲಿ ಹಸಿರು ಪತ್ರಿಕೆ' (Green Newspaper) ಎಂಬ ವಿಶಿಷ್ಟ ಆವಿಷ್ಕಾರವನ್ನು ಪರಿಚಯಿಸಿತು. ಸಾಮಾನ್ಯವಾಗಿ ಪತ್ರಿಕೆಯನ್ನು ಓದಿದ ಬಳಿಕ ಎಸೆಯುತ್ತಾರೆ, ಇನ್ನು ಕೆಲವರು ರದ್ದಿಗೆ ನೀಡಲು ಜೋಡಿಸಿಡುತ್ತಾರೆ. ಆದರೆ ಈ ಪತ್ರಿಕೆಯನ್ನು ಓದಿದ ಬಳಿಕ ನೆಡಬಹುದು ಎಂದು ಪತ್ರಿಕೆ ತಿಳಿಸಿತು. ನಿಮಗೆ ಆಶ್ಚರ್ಯವಾಗಿರಬಹುದು ಅಥವಾ ಇದೇನು ಎಂದು ಹುಬ್ಬು ಹಾರಿಸಬಹುದು. ಈ ಪತ್ರಿಕೆಯ ಪುಟಗಳನ್ನು ಮರುಬಳಕೆ ಮಾಡಿದ ಕಾಗದಗಳಿಂದ ತಯಾರು ಮಾಡಲಾಗಿತ್ತು. ಅಷ್ಟೇ ಅಲ್ಲ, ಪತ್ರಿಕೆಯನ್ನು ಹೂವುಗಳು ಅಥವಾ ಸಸ್ಯಗಳ ಬೀಜಗಳಿಂದ ತಯಾರು ಮಾಡಲಾಗಿತ್ತು. ಓದಿದ ನಂತರ, ಈ ಪತ್ರಿಕೆಯನ್ನು ನೆಲದಲ್ಲಿ ನೆಟ್ಟು ನೀರು ಹಾಕಿದರೆ, ಕೆಲವೇ ವಾರಗಳಲ್ಲಿ ಹೂವುಗಳು ಬಿಡುತ್ತವೆ ಅಥವಾ ಸಸ್ಯಗಳು ಮೊಳೆಯಬಹುದು. ಪತ್ರಿಕೆ ತಯಾರಿಸಲು ಕಾಗದಗಳು ಬೇಕು ತಾನೇ? ಕಾಗದಗಳನ್ನು ತಯಾರಿಸಲು ಮರಗಳು ಬೇಕಲ್ಲ? ಅಂದರೆ ಕಾಗದ ತಯಾರಿಕೆಗೆ ಮರಗಳನ್ನು ಕಡಿಯುವುದು ಅನಿವಾರ್ಯ. ಪತ್ರಿಕೆಗಳು ಮರಗಳನ್ನು ಕಡಿಯುತ್ತವೆ ಎಂಬ ಆಪಾದನೆ ಇದ್ದಿದ್ದೇ. ಇದನ್ನು ಹೋಗಲಾಡಿಸಲು 'ಮೈನಿಚಿ ಶಿಂಬುನ್' ಈ ವಿನೂತನ ಕ್ರಮವನ್ನು ಕೈಗೊಂಡಿತ್ತು. ಈ ಯೋಜನೆಯು ಜಪಾನ್ನ 'ಗ್ರೀನರಿ ಡೇ' (Greenery Day) ಯನ್ನು ಆಚರಿಸಲು 2016 ರ ಮೇ 4 ರಂದು ಆರಂಭವಾಯಿತು. ಈ ವಿಶೇಷ ಆವೃತ್ತಿಯನ್ನು ಶೇ.100 ಜೈವಿಕ ಕಾಗದದಿಂದ ಮುದ್ರಿಸಲಾಗಿತ್ತು ಮತ್ತು ಪತ್ರಿಕೆ ಮುದ್ರಣಕ್ಕೆ ಸಸ್ಯ ಆಧಾರಿತ ಮಸಿ ಬಳಸಲಾಗಿತ್ತು. ಇದು ಗೊಬ್ಬರದಂತೆ ಕಾರ್ಯನಿರ್ವಹಿಸುತ್ತದೆ. ಪತ್ರಿಕೆಯ ಪುಟಗಳಲ್ಲಿ ಹೂವುಗಳು ಮತ್ತು ಸಸ್ಯಗಳ ಬೀಜಗಳನ್ನು ಸೇರಿಸಲಾಗಿತ್ತು ಮತ್ತು ಓದುಗರಿಗೆ ಈ ಪುಟಗಳನ್ನು ಚಿಕ್ಕ ತುಂಡುಗಳಾಗಿ ಕತ್ತರಿಸಿ ನೆಲದಲ್ಲಿ ನೆಟ್ಟು ನೀರು ಹಾಕುವಂತೆ ಸೂಚಿಸಲಾಗಿತ್ತು. ಈ ಯೋಜನೆಯು ಜಪಾನಿನಾದ್ಯಂತ ನಲವತ್ತಾರು ಲಕ್ಷ ಜನರಿಗೆ ತಲುಪಿತ್ತು. ಪತ್ರಿಕೆಯ ಪ್ರಕಾಶಕರಿಗೆ 80 ದಶಲಕ್ಷ ಯೆನ್ (ಸುಮಾರು ಏಳು ಲಕ್ಷ ಡಾಲರ್) ಆದಾಯವನ್ನು ತಂದುಕೊಟ್ಟಿತು. ಪತ್ರಿಕೆಯು ಶಾಲೆಗಳಲ್ಲಿ ಪರಿಸರ ಸಂರಕ್ಷಣೆಯ ಕುರಿತು ಪಾಠಗಳನ್ನು ನೀಡಿದರೂ, ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸಿ, ಮರುಬಳಕೆ ಮತ್ತು ಸ್ಥಿರತೆಯ ಕುರಿತು ಚರ್ಚೆಗಳನ್ನು ನಡೆಸಿತು. ಈ ಹಸಿರು ಪತ್ರಿಕೆಯು ಜಪಾನಿನ ಪತ್ರಿಕೆಗಳ ಮರುಬಳಕೆ ದರವನ್ನು ಹೆಚ್ಚಿಸಲು ಸಹಾಯ ಮಾಡಿದೆ. 2023 ರಲ್ಲಿ ಇದು ಶೇ.80 ರಷ್ಟಾಗಿದೆ. ಈ ಯೋಜನೆ ಜಪಾನಿನಲ್ಲಿ ಮಾತ್ರ ಅಲ್ಲ, ಇತರ ದೇಶಗಳಲ್ಲಿಯೂ ಪರಿಸರ ಸ್ನೇಹಿ ಉತ್ಪನ್ನಗಳ ಬಗ್ಗೆ ಚರ್ಚೆಗಳನ್ನು ಹುಟ್ಟು ಹಾಕಿದೆ. ಜಪಾನಿನ ಪತ್ರಿಕೆಗಳಿಗೆ ಸಾಧ್ಯವಾಗಿದ್ದು ನಮಗೇಕೆ ಸಾಧ್ಯವಾಗುವುದಿಲ್ಲ ಎಂಬ ಪ್ರಶ್ನೆಯನ್ನೂ ಎತ್ತಿದೆ. ಈ ರೀತಿಯ ನವೀನ ಪ್ರಯತ್ನಗಳು ಮಾಧ್ಯಮಗಳ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಒತ್ತಿಹೇಳುತ್ತವೆ. 'ಮೈನಿಚಿ ಶಿಂಬುನ್' ನ ಈ ಹಸಿರು ಪತ್ರಿಕೆಯು ಜಪಾನಿನಲ್ಲಿ ಅಲ್ಲದೇ, ಜಗತ್ತಿನಾದ್ಯಂತ ಪರಿಸರ ಸ್ನೇಹಿ ಮಾಧ್ಯಮಗಳ ಪರ್ಯಾಯ ನಿದರ್ಶನವಾಗಿ ನಿಲ್ಲುತ್ತದೆ. ಉದಾಹರಣೆಗೆ, ಅಮೆರಿಕದಲ್ಲಿ ಸೀಡ್ ಪೇಪರ್ (Seed Paper) ಎಂಬ ಹೆಸರಿನಲ್ಲಿ ಹೂವುಗಳ ಬೀಜಗಳನ್ನು ಒಳಗೊಂಡ ಕಾಗದಗಳನ್ನು ಬಳಸಲಾಗುತ್ತಿದೆ. 'ಮೈನಿಚಿ ಶಿಂಬುನ್' ಹಸಿರು ಪತ್ರಿಕೆಯನ್ನು ಶಾಲೆಗಳಲ್ಲಿ ಶಿಕ್ಷಣ ಸಾಧನವಾಗಿ ಬಳಸಲಾಗುತ್ತಿದೆ. ಪರಿಸರ ಸಂರಕ್ಷಣೆಯ ಮಹತ್ವವನ್ನು ಮಕ್ಕಳಿಗೆ ತಿಳಿಸಲು, ಈ ಪತ್ರಿಕೆಯನ್ನು ಉಪಯೋಗಿಸಿ ಪಾಠಗಳನ್ನು ನೀಡಲಾಗುತ್ತಿದೆ. ಇದರಿಂದ ಮುಂದಿನ ಪೀಳಿಗೆಗೆ ಪರಿಸರ ಜಾಗೃತಿ ಮೂಡಿಸಲು ಸಹಾಯವಾಗಿದೆ. 1872 ರಲ್ಲಿ ಟೋಕಿಯೋ ನಿಚಿ ನಿಚಿ ಶಿಂಬುನ್ ಎಂಬ ಹೆಸರಿನಲ್ಲಿ ಆರಂಭವಾದ ಈ ಪತ್ರಿಕೆ, ಜಪಾನಿನ ಅತ್ಯಂತ ಹಳೆಯ ದಿನಪತ್ರಿಕೆಗಳಲ್ಲಿ ಒಂದಾಗಿದ್ದು, 1911 ರಲ್ಲಿ ಒಸಾಕಾ ಮೈನಿಚಿ ಶಿಂಬುನ್ ಜತೆಗೆ ವಿಲೀನಗೊಂಡು, 1943 ರಲ್ಲಿ 'ಮೈನಿಚಿ ಶಿಂಬುನ್' ಎಂಬ ಹೆಸರಿನಲ್ಲಿ ಪ್ರಕಟಣೆ ಆರಂಭಿಸಿತು. ಮೈನಿಚಿ ಶಿಂಬುನ್ ತನ್ನ ನಿಷ್ಠಾವಂತ ಪತ್ರಿಕೋದ್ಯಮಕ್ಕಾಗಿ ಪ್ರಸಿದ್ಧವಾಗಿದ್ದು, 1960 ರಲ್ಲಿ ಟೋಕಿಯೋ ಸ್ಟ್ಯಾಬಿಂಗ್' ಎಂಬ ಫೋಟೋಗ್ರಾಫರ್‌ಗೆ ಪುಲಿಟ್ಜರ್ ಪ್ರಶಸ್ತಿಯನ್ನು ಪಡೆದ ಏಕೈಕ ಜಪಾನೀಸ್ ಪತ್ರಿಕೆ ಆಗಿದೆ.

ಓದದವರಿಗೇನ್ ಗೊತ್ತು ಪುಸ್ತಕ ಪಸರಿಸುವ ಪರಿಮಳ!

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಊರಲ್ಲಿದ್ದಾಗ ಹತ್ತಿರದ ಗೋಕರ್ಣಕ್ಕೆ, ಅಲ್ಲಿನ ಓಂ ಬೀಚ್‌ಗೆ ಹೋಗಿ ಸ್ವಲ್ಪ ಹೊತ್ತು ಕಾಲಕಳೆದು ಬರುವುದು ಆಗೀಗದ ಕಾರ್ಯಕ್ರಮವಾಗಿತ್ತು. ಓಂ ಮತ್ತು ಕುಡ್ಲೆ ಬೀಚ್‌ನಲ್ಲಿ ಸಾಮಾನ್ಯವಾಗಿ ಫಾರಿನರ್‌ಗಳೇ ಜಾಸ್ತಿ ಇರುತ್ತಿದ್ದರು. ಅವರನ್ನು, ಅವರ ವೇಷವನ್ನು ನೋಡುವುದು ಕಾರ್ಯಕ್ರಮದ ಮುಖ್ಯಭಾಗಗಳಲ್ಲಿ ಒಂದಾಗಿತ್ತು. ಅಲ್ಲಿ ಮೊದಲು ಗ್ರಹಿಸಿದ್ದು- ಬೀಚ್ ಚೇರ್ ಹಾಕಿ ಮಲಗಿರುತ್ತಿದ್ದ ಬಹುತೇಕ ಎಲ್ಲ ವಿದೇಶಿಗರ ಕೈಯಲ್ಲಿ ಪುಸ್ತಕವಿರುತ್ತಿತ್ತು. ಇದೇನೋ ಒಂದು ವಿಶೇಷ ಎಂದು ಆಗ ಅನ್ನಿಸಿರಲಿಲ್ಲ. ಆಗ ಅದರ ಬಗ್ಗೆ, ಅದರಾಚೆ ಯೋಚಿಸಿರಲಿಲ್ಲ. ನಂತರದಲ್ಲಿ ದಕ್ಷಿಣ ಅಮೆರಿಕ, ಯುಎಸ್‌ಎ, ದಕ್ಷಿಣ ಆಫ್ರಿಕಾ ಮೊದಲಾದ ದೇಶಗಳನ್ನು ನೋಡಿದಾಗ, ಇಲ್ಲೆಲ್ಲ ವಿಶ್ರಮಿಸುವಿಕೆ, ಪ್ರಯಾಣ ಇತ್ಯಾದಿ ಕಾಯುವ ಸಂದರ್ಭದಲ್ಲೆಲ್ಲ ಪುಸ್ತಕ ಓದುವುದು ವಿದೇಶಿಗರ ಒಂದು ಸಾಮಾನ್ಯವಾದ ವಿಚಾರ ಎಂಬುದು ಹೆಚ್ಚೆಚ್ಚು ಗೋಚರವಾಯಿತು.

ನಾನು ಹುಟ್ಟಿ ಬೆಳೆದ ಜಾಗಗಳಲ್ಲೆಲ್ಲ ಪ್ರಾಜ್ಞರ ಸಂಖ್ಯೆ ಯಥೇಚ್ಛವಾಗಿದ್ದರೂ, ಯಾರೇ ಒಬ್ಬರು ಪುಸ್ತಕ ಓದುವುದು ಹೊರಗೆ ಕಾಣಿಸುತ್ತಿರಲಿಲ್ಲ. ಕೆಲವರ ಮನೆಗೆ ಹೋದರೆ ಗಾಜಿನ ಕಪಾಟುಗಳಲ್ಲಿ ಚಂದಕ್ಕೆ ಸರಿದು ಕೂತಿರುತ್ತಿದ್ದ ಪುಸ್ತಕಗಳನ್ನು ನೋಡಿದಾಗ, 'ಬಹುಶಃ ಅಂಗಡಿಯಿಂದ ತರುವಾಗ ಮುಟ್ಟಿದ್ದೇ ಕೊನೆಯಿರಬೇಕು' ಎನಿಸುತ್ತಿತ್ತು. ನನಗೋ, ಪುಸ್ತಕಗಳನ್ನು ಕಂಡಕೂಡಲೇ ಒಮ್ಮೆ ಮುಟ್ಟಿ, ಎರಡು ಹಾಳೆ ತಿರುವಿಸಬೇಕು, ಆಗಲೇ ಸಮಾಧಾನ. ಆಗೆಲ್ಲ ಧೂಳ್ವದರಗಳು ಕೈಗೆ ತಾಕುತ್ತಿದ್ದವು. ಒಳಕ್ಕೆ ಹಾಳೆ ತೆಗೆದರೆ ಪ್ರಿಂಟಿಂಗ್ ಪ್ರೆಸ್‌ನ ಪರಿಮಳ ಆರಿಹೋಗಿರುತ್ತಿರಲಿಲ್ಲ. ಇನ್ನು ಕೆಲವರ ಮನೆಗಳಿಗೆ ಹೋದಾಗ ಪುಸ್ತಕ ನೋಡಲು ನಿಂತರೆ ಅವರೂ ಪಕ್ಕದಲ್ಲಿಯೇ ಬಂದು ನಿಲ್ಲೋರು. ಒಮ್ಮೆ ಹೀಗೆ ಆದಾಗ ಯಜಮಾನರು ಒಟ್ಟಿಗೆ ಜೋಡಿಸಿದ್ದ ಮೂರ್ನಾಲ್ಕು ಪುಸ್ತಕವನ್ನು ಮುಟ್ಟಲಿಕ್ಕೆ ಬಿಡಲಿಲ್ಲ. ಏನೋ ಒಂದು ಕಥೆ ಹೇಳಿ ತಪ್ಪಿಸಿಬಿಡುತ್ತಿದ್ದರು. ನಂತರ ಅವರು ಒಳಕ್ಕೆ ಹೋದಾಗ ಥಟ್ಟನೆ ತೆರೆದು ನೋಡಿದರೆ, ಅದರ ಮೊದಲ ಪುಟದಲ್ಲಿ ಊರಿನ ಇನ್ನೊಬ್ಬರ ಹೆಸರು ಇತ್ತು. ಇದು ಬಹುಶಃ ಇವರು ಅವರ ಮನೆಯಿಂದ ತಂದಿದ್ದರು. ಇವರೂ ಓದಿಲ್ಲ, ಹಿಂದಿರುಗಿ ಕೊಡಲು ಏನೋ ಒಂದು ಮೋಹ; ಕೊಟ್ಟವರಿಗೂ ನೆನಪಿಲ್ಲ, ಏಕೆಂದರೆ ಅವರೂ ಓದುವವರಲ್ಲ. ಡಾಕ್ಟರ್ ಕ್ಲಿನಿಕ್, ಬ್ಯಾಂಕ್, ಕಚೇರಿ ಮೊದಲಾದವುಗಳಲ್ಲಿ ಕಾಯುವಾಗ ಎಲ್ಲರೂ ಆಕಾಶವನ್ನೇ ನೋಡುತ್ತಿರುತ್ತಿದ್ದರೇ ವಿನಾ, ಯಾರೊಬ್ಬರ ಕೈಯಲ್ಲೂ ಪುಸ್ತಕವಿರುತ್ತಿರಲಿಲ್ಲ. ಬಸ್ಸಿನಲ್ಲಿ ಪ್ರಯಾಣಿಸುವಾಗ ಯಾರೋ ಒಬ್ಬರು ಪೇಪರ್ ಓದುತ್ತಿದ್ದರೆ ಅದರ ಹಾಳೆಯನ್ನು ಕೇಳುವವರು ಬಿಡಿ, ಅವರು ಓದುತ್ತಿರುವಾಗಲೇ ಮಡಿಸಿದ್ದ ಪೇಪರ್‌ನ ಇನ್ನೊಂದರ್ಧವನ್ನು ತಲೆಕೆಳಗಾಗಿಯೇ ಓದುವವರಿದ್ದರು. ಓದು ಎಂದರೆ ಹೊರಗೆ ಕಾಣಿಸಿದ್ದು ಇಷ್ಟೇ. ಓದುವವರು ಇದ್ದದ್ದೇ ತೀರಾ ತೀರಾ ಕಡಿಮೆ. ಕೆಲವೇ ಕೆಲವರು. ಅವರೆಲ್ಲ ಎಲ್ಲೋ ವಿಚಿತ್ರದಂತೆ, 'ಗುಂಪಿನಲ್ಲಿ ಸೇರದ ಪದ'ದಂತೆ ಕಾಣಿಸುತ್ತಿದ್ದರು. ಊರಲ್ಲಿ ಇನ್ನು ಕೆಲವರು ಎರವಲು ಪುಸ್ತಕಗಳನ್ನಷ್ಟೇ ಓದುವವರಿದ್ದರು. ಅವರೆಂದೂ ಪುಸ್ತಕವನ್ನು ದುಡ್ಡು ಕೊಟ್ಟು ಖರೀದಿಸುತ್ತಿರಲಿಲ್ಲ. ಹೀಗೆ ಎರವಲು ಕೊಡುವವರು ಒಂದು ಪಟ್ಟಿಯಲ್ಲಿ ಯಾರ್ಯಾರಿಗೆ ಯಾವ್ಯಾವ ಪುಸ್ತಕ ಕೊಟ್ಟೆ ಎಂದು ಲೆಕ್ಕಹಚ್ಚಿ ಇಡುವವರಿದ್ದರು. ನಂತರ ದೊಡ್ಡ ಶಹರಗಳಲ್ಲಿ, ಬೆಂಗಳೂರು, ಚೆನ್ನೈ, ಕೋಲ್ಕತಾ, ದೆಹಲಿ ಇಲ್ಲೆಲ್ಲ ಓದುವವರನ್ನು ಬಹಿರಂಗವಾಗಿ ಕಂಡಿದ್ದು ಅಷ್ಟಕ್ಕಷ್ಟೇ.

ಇಂದಿಗೂ ಜೀವಮಾನದಲ್ಲಿ ಒಂದೇ ಒಂದು ಪುಸ್ತಕ ಓದದ ಸುಶಿಕ್ಷಿತರ ಬಹುದೊಡ್ಡ ಸಂಖ್ಯೆ ನಮ್ಮಲ್ಲಿದೆ. ಕೆಲ ವರ್ಷದ ಹಿಂದೆ ಫೇಸ್‌ಬುಕ್‌ನಲ್ಲಿ ನಾನು ಓದಿದ ಕೆಲವು ಪುಸ್ತಕಗಳ ಮುಖಪುಟಗಳನ್ನು ಹಂಚಿಕೊಂಡಿದ್ದೆ. ಅದಕ್ಕೆ ಪ್ರತಿಕ್ರಿಯಿಸಿದ ಒಬ್ಬರು, ''ನಾವು ಏಕೆ ಪುಸ್ತಕ ಓದಬೇಕು? ಪುಸ್ತಕ ಓದದವರು ಬದುಕುವುದೇ ಇಲ್ಲವೇ?'' ಎಂದು ಪ್ರಶ್ನಿಸಿದ್ದರು. ಅಂಥದ್ದಕ್ಕೆಲ್ಲ ಉತ್ತರಿಸಿ, ವಿವರಿಸಿ, ಒಪ್ಪಿಸುವುದೆಲ್ಲ ಸಾಧ್ಯವಾದದ್ದಲ್ಲ ಎಂದು ಸುಮ್ಮನೆ ಒಂದು ಲೈಕ್ ಒತ್ತಿ ಅಲ್ಲಿಗೇ ಬಿಟ್ಟೆ. ಅವರು ಕೇಳಿದ ಪ್ರಶ್ನೆ ಸರಿಯೇ ಇದೆ. ಆದರೆ ಉತ್ತರವನ್ನು ಅವರು ಬಯಸಿದಂತನಿಸಲಿಲ್ಲ. ಓದದವರಿಗೇನ್ ಗೊತ್ತು ಪುಸ್ತಕದ ಪರಿಮಳ!

ಮನೆಯಲ್ಲಿ ಪುಸ್ತಕ ಓದುವ ವಾತಾವರಣವಿದ್ದುದರಿಂದ ಮತ್ತು ತಂದೆಯವರ ಸ್ವಲ್ಪ ಒತ್ತಾಯದಿಂದ ನಾನು ಪುಸ್ತಕಗಳನ್ನು ಓದಲಿಕ್ಕೆ ಶುರುಮಾಡಿದ್ದು. ಬಹುಶಃ ಹಾಗೊಂದು ವಾತಾವರಣವಿಲ್ಲದಿದ್ದಲ್ಲಿ, ಓದಲಿಕ್ಕೆ ಕಲಿಯದಿದ್ದಲ್ಲಿ ನಾನು ಈ ಅಂಕಣವನ್ನು ಇಷ್ಟು ವರ್ಷದಿಂದ ನಿರಂತರವಾಗಿ ಒಂದೂ ವಾರ ತಪ್ಪಿಸದೆ ಬರೆಯಲಿಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ. ನನ್ನ ಮಟ್ಟಿಗೆ ಓದೇ ಬರೆಯುವ ಮೆಟ್ಟಿಲು ಹತ್ತಿಸಿದ್ದು. ಹಾಗಂತ ಓದಾಗಲಿ, ಬರವಣಿಗೆಯ ಸಿದ್ಧತೆಯಾಗಲಿ, ಬರವಣಿಗೆಯಾಗಲಿ, ನನ್ನ ವೈಯಕ್ತಿಕ ಮೋಜು, ವಿಶ್ರಾಂತಿಗೆ ಯಾವತ್ತೂ ಹೊರೆಯೆನಿಸಿದ್ದಿಲ್ಲ. ಇರಲಿ, ಅವೆಲ್ಲ ವೈಯಕ್ತಿಕವಾಯಿತು. ಈಗ ಓದಿನ ಮಹತ್ವದ ಬಗ್ಗೆಯೆಲ್ಲ ಕೊರೆಯಲಿಕ್ಕೆ ಹೋಗುವುದಿಲ್ಲ. ನೀವು ಈ ಲೇಖನ ಓದುತ್ತಿದ್ದೀರಿ ಎಂದರೆ ಓದುವ ಹವ್ಯಾಸದವರೇ ಎಂದಾಯಿತು. ಹಾಗಾಗಿ ಅದೆಲ್ಲ ವಿವರ ಬೇಡ. ನನ್ನ ಅನಿಸಿಕೆಯಲ್ಲಿ, ನಾನು ಯಾರಿಗೂ ಓದುವ ಮಹತ್ವದ ಬಗ್ಗೆ ಹೇಳಲೇಬಾರದು. ಓದುವವರಿಗೆ ಅದು ಗೊತ್ತು. ಇನ್ನು, ಓದದವರಿಗೆ ನೀವು ಎಷ್ಟು ಹೇಳಿದರೂ ಅವರು ಬದಲಾಗರು. ಒಂದೊಮ್ಮೆ ನಿಮ್ಮ ಮಾತು ಸರಿಯೆನಿಸಿ ಓದಲು ಶುರುವಿಟ್ಟುಕೊಂಡರೆಂದುಕೊಳ್ಳಿ, ಮುಂದುವರಿಸಲಿಕ್ಕಾಗದೆ ಕೈಚೆಲ್ಲುವವರೇ ಜಾಸ್ತಿ. ಏಕೆಂದರೆ, ಒಂದು ವಯಸ್ಸಿನ ನಂತರ ಓದಿನ ಹವ್ಯಾಸವನ್ನು ಒಲಿಸಿಕೊಳ್ಳುವುದು ಅಷ್ಟು ಸುಲಭದ್ದಲ್ಲ. ಹಾಗೆ ಕೆಲವರು ಇನ್ನೊಬ್ಬರನ್ನು ಕಂಡು, ಕೇಳಿ ಓದಲು ಶುರುಮಾಡಿ ಅದನ್ನು ಜೀವನದ ಸಹಜ ಭಾಗವಾಗಿ ಹೊಂದಿಸಿಕೊಂಡಿದ್ದಾರೆ ಎಂದರೆ, ಅದು ಅವರ ಅಚಲಚಿತ್ತದ ಪ್ರತೀಕವೇ ಸರಿ.

ಆಸ್ಟ್ರಿಚ್, ಪೆಂಗ್ವಿನ್ ಮೊದಲಾದ ಹಾರಲುಬಾರದ ಹಕ್ಕಿಗಳನ್ನು ನೋಡಿದಾಗ ಅವೆಲ್ಲ ವೈಲ್ಡ್ ಜಗತ್ತಿನಲ್ಲಿ ಇದೊಂದು ವೈಕಲ್ಯದಿಂದ ಇನ್ನೂ ನಶಿಸಿಹೋಗಿಲ್ಲವೇಕೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಸಾಮಾನ್ಯವಾಗಿ, ಬಹುತೇಕ ಪ್ರಾಣಿಗಳು ಅವುಗಳ ಲೈಫ್ ಸ್ಕಿಲ್, ಬದುಕುವ ಕಲೆಯನ್ನು ಕಲಿಯುವುದೇ ಅವುಗಳ ತಂದೆ-ತಾಯಿಯಿಂದ. ಅದರಲ್ಲಿಯೂ ವೇಗವಿಲ್ಲದ, ಹಾರಲುಬಾರದ, ಮರವೇರಲು ಸಾಧ್ಯವಾಗದ ಹೀಗೆ ಯಾವುದೋ ಒಂದು ಚಾಲೆಂಜ್ ಇರುವ ಜೀವಿಯಾದರೆ, ಅಲ್ಪಾಯುಷಿ ಜೀವಿಯಾದರೆ ಅವುಗಳ ಲೈಫ್ ಸ್ಕಿಲ್ ಟ್ರೈನಿಂಗ್‌ಗಳು ಇನ್ನಷ್ಟು ತೀವ್ರವಾಗಿರುತ್ತವೆ. ಜೀವಿಗಳಲ್ಲಿಯೇ ಮನುಷ್ಯನ ಬದುಕು ಅತ್ಯಂತ ಕ್ಲಿಷ್ಟವಾದದ್ದು. ಹಾಗಾಗಿಯೇ, ಇಲ್ಲಿ ಬದುಕಲಿಕ್ಕೆ ಅಣಿಯಾಗಲು ಗುರುಕುಲ, ಶಾಲೆ ಇತ್ಯಾದಿಗಳು ಬೇಕಾದದ್ದು. ಆದರೆ ಈ ಶಾಲೆಗಳಲ್ಲಿ ಕೆಲವು ತೀರಾ ಅವಶ್ಯಕ ಲೈಫ್ ಸ್ಕಿಲ್‌ಗಳನ್ನು ಕಲಿಸುವುದೇ ಇಲ್ಲ. ಅವನ್ನೆಲ್ಲ ತಂದೆ-ತಾಯಿ ಕಲಿಸಿಕೊಡಬೇಕು, ಅವರಿಗೆ ಗೊತ್ತಿದ್ದರೆ, ಮಹತ್ವದ್ದೆನಿಸಿದರೆ. ಆದರೆ ಕಾಲ ಕಳೆದಂತೆ ತಂದೆ-ತಾಯಂದಿರು ಮಕ್ಕಳಿಗೆ ಅಷ್ಟೊಂದು ಸಮಯ ಕೊಡಲಿಕ್ಕಾಗುತ್ತಿಲ್ಲ, ಕೊಟ್ಟರೂ ಪ್ರೀತಿಸಲಿಕ್ಕೆ, ಮುದ್ದಿಸಲಿಕ್ಕೆ, ಓಡಾಡಲಿಕ್ಕೆ ಹೊರತಾಗಿ ಜೀವನಕಲೆಯನ್ನು ಕಲಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಶಾಲೆಯ ಅವಲಂಬನೆ ದಿನಗಳೆದಂತೆ ಹೆಚ್ಚುತ್ತಿದೆ. ಈ ಕಾರಣಕ್ಕೇ ಮಕ್ಕಳು ತಂದೆ-ತಾಯಿಗಿಂತ ಮೇಷ್ಟ್ರು ಹೇಳಿದ್ದೇ ಸರ್ವಸ್ವ ಅನ್ನೋದು. ಆದರೆ ಇಂದು, ಆ ಹಿನ್ನೆಲೆಯಲ್ಲಿ ಶಾಲೆಯ ಶಿಕ್ಷಣದ ವಾಸ್ತವಿಕ ಉದ್ದೇಶವನ್ನೇ ಪ್ರಶ್ನಿಸುವಂತಿದೆ. ಮೊಳೆ ಹೊಡೆಯೋದು, ಗರಗಸ ಹಿಡಿಯೋದು ಸ್ವಿಚ್-ಪ್ಲಗ್ ಬದಲಿಸೋದು, ಈಜುವುದು ಹೇಗೆ ಎಂಬುದನ್ನೆಲ್ಲ ಶಾಲೆಯಲ್ಲಿ ಕಲಿಸುತ್ತಾರೆಯೇ ಎಂದು ಕೇಳಿದರೆ ಪ್ರಶ್ನೆಯೇ ಹಾಸ್ಯಾಸ್ಪದವೆನ್ನಿಸುವಂತಾಗಿದೆ. ಓದುವುದು ಹೇಗೆ, ಬರೆಯುವುದು ಹೇಗೆ ಎಂದು ಪ್ರೈಮರಿಯಲ್ಲಿ ಕಲಿಸುವಾಗ, ಅದು ತೀರಾ ಥಿಯರಿ ವಿಷಯವಾಗಿಯೇ ಇದ್ದುಬಿಡುತ್ತದೆ. ಅಲ್ಲಿಯೇ ಇನ್ನೊಂದು ಕೋಣೆಯಲ್ಲಿ, ಲೈಬ್ರರಿಯಲ್ಲಿರುವ ಪುಸ್ತಕಗಳದ್ದು- ಲೈಬ್ರರಿ ಇನ್‌ಚಾರ್ಜ್‌ಗಿರುವ ಜವಾಬ್ದಾರಿಯಿಂದಾಗಿ ಕಪಾಟಿನಿಂದ ಹೊರಬೀಳದಂಥ ಸ್ಥಿತಿ. ಆ ಲೈಬ್ರರಿಯ ಪುಸ್ತಕಗಳನ್ನು ತಂದು ಪಠ್ಯೇತರ ಓದು, ಆ ಓದಿನ ಮೋಜು ಇವನ್ನೆಲ್ಲ ಕಲಿಸುವ ಶಾಲೆಗಳು ನಮ್ಮಲ್ಲಿ ಕೆಲವು ಇದ್ದಿರಬಹುದು, ಆದರೆ ವಿರಳ.

ಭಾರತದಲ್ಲಿ ಈ ಪಬ್ಲಿಕ್ ಓದಿನ ಹವ್ಯಾಸ ತೀರಾ ಕಡಿಮೆಯೇ ಸರಿ. ವಿದೇಶಿಗರು, ಅದರಲ್ಲಿಯೂ ಅಮೆರಿಕನ್ನರು ಹಾಗಲ್ಲ. ಅವರ ಕೈಯಲ್ಲಿ, ಬ್ಯಾಗಿನಲ್ಲಿ ಪುಸ್ತಕವೊಂದು ಇದ್ದೇ ಇರುತ್ತದೆ. ಇವರೆಲ್ಲ ಇದೇಕೆ ಇಷ್ಟು ಓದೋದು? ಇವರನ್ನೆಲ್ಲ ಓದಿಗೆ ಹಚ್ಚಿಸಿದವರು ಯಾರು? ಕಲ್ಚರ್‌ನಲ್ಲಿಯೇ ಇವರಿಗೆ ಈ ಪ್ರಮಾಣದಲ್ಲಿ ಓದಿನ ಹವ್ಯಾಸ ಬಂದಿದ್ದು ಹೇಗೆ? ಎನ್ನುವ ಪ್ರಶ್ನೆಗಳು ನನ್ನಲ್ಲಿ ಬಹುಕಾಲದಿಂದಿದ್ದವು. ಏಕೆಂದರೆ ಓದುವ ಹವ್ಯಾಸಕ್ಕೆ ಬೆಳೆದುಬಂದ ಪರಿಸರ ಮುಖ್ಯವಾಗುತ್ತದೆ ಎನ್ನುವುದು ಕಂಡು ಗೊತ್ತಿತ್ತು. ಓದು ಹಿಂದೂಸ್ತಾನಿ ಸಂಗೀತದಂತೆ. ಅದು acquired taste, ಒಲಿಸಿಕೊಳ್ಳಬೇಕಾದ ಒಂದು ಜೀವನಕಲೆ, ರುಚಿ.

ಅದಕ್ಕೆ ಉತ್ತರ ಸಿಕ್ಕಿದ್ದು ಮಗಳು ಮೈನಾ ಶಾಲೆಗೆ ಹೋಗಲು ಶುರುಮಾಡಿದಾಗಿನಿಂದ. ಇಲ್ಲಿನ ಮಕ್ಕಳಿಗೆ ಶಾಲೆಗಳಲ್ಲಿ ಕಥೆ ಓದಿ ಹೇಳಲೆಂದೇ ಪ್ರತಿದಿನ ಒಂದಿಷ್ಟು ಸಮಯ ನಿಗದಿಪಡಿಸಿರಲಾಗುತ್ತದೆ. ಇದು ವ್ಯಾಕರಣ ಕಲಿಯುವುದಕ್ಕೆ ವ್ಯಯಿಸುವ ಸಮಯಕ್ಕಿಂತ ಜಾಸ್ತಿ. ಒಂದನೇ ಕ್ಲಾಸಿನಿಂದಲೇ ಕಾಮಿಕ್ ಪುಸ್ತಕಗಳನ್ನು ಓದಿ ಹೇಳೋದು ಶುರುವಾಗುತ್ತದೆ. ಎರಡನೇ ಕ್ಲಾಸಿಗೆ ಬರುವಾಗ ಓದು, ಬರೆಯೋದು ಕಲಿತ ಮಗುವಿಗೆ ಪುಸ್ತಕವನ್ನು ಕೊಟ್ಟು ಚಿತ್ರ ನೋಡುತ್ತ ಕೆಲವೇ ಶಬ್ದಗಳಲ್ಲಿ ಕಥೆ ಹೇಳುವ ಪುಸ್ತಕಗಳನ್ನು ಕೊಟ್ಟು ಓದಿಸಲು ಕೂರಿಸಲಾಗುತ್ತದೆ. ಇದು ಇಲ್ಲಿನ ಮಿಡ್ಲ್ ಸ್ಕೂಲ್‌ವರೆಗೂ ಮುಂದುವರಿದುಕೊಂಡು ಹೋಗುತ್ತದೆ. ಅಲ್ಲದೆ ಮಕ್ಕಳಿಗೆ ಊರಿನ ಲೈಬ್ರರಿಗೆ ಹೋಗುವಂತೆ, ಅಲ್ಲಿ ಇವಿಷ್ಟು ಬರಹಗಾರರಲ್ಲಿ ಒಬ್ಬರ ಪುಸ್ತಕವನ್ನು ಓದುವಂತೆ ಹೋಂವರ್ಕ್ ಕೊಡಲಾಗುತ್ತದೆ. ಹೀಗೆ ವಾರಕ್ಕೊಮ್ಮೆ ಮಕ್ಕಳನ್ನು ಲೈಬ್ರರಿಗೆ ಕರೆದೊಯ್ಯಲೇಬೇಕು. ಬರೀ ಓದಿಸುವುದಷ್ಟೇ ಅಲ್ಲ, ಅದರ ಬಗ್ಗೆ ಅವರಿಗೆ ಅನಿಸಿದ್ದನ್ನು ಶಾಲೆಯಲ್ಲಿ ಎಲ್ಲರೆದುರು ಹೇಳಬೇಕು. ಇದು ಪಬ್ಲಿಕ್ ಸ್ಪೀಕಿಂಗ್ ಕಲಿಯಲಿಕ್ಕೆ, ಸ್ಟೇಜ್‌ಫಿಯರ್ (ಸಭಾಕಂಪನ) ದೂರಮಾಡಲಿಕ್ಕೆ ಸಹಾಯವಾಗುತ್ತದೆ.

ಇದಷ್ಟೇ ಅಲ್ಲ, ಚಿಕ್ಕ ಗುಂಪುಗಳನ್ನು ಮಾಡಿ, ಆ ಗುಂಪಿಗೆ ಒಂದು ಪುಸ್ತಕ ಕೊಡಲಾಗುತ್ತದೆ. ಆ ಮಕ್ಕಳು ದಿನವೊಂದರಂತೆ ಒಬ್ಬೊಬ್ಬರು ಕೈಬದಲಿಸಿ, ಓದಿ, ಕೊನೆಯಲ್ಲಿ ಆ ಕಥೆಯಲ್ಲಿ ಹೇಳುವಂತೆ, ಚರ್ಚಿಸುವಂತೆ ಶಾಲೆಯಲ್ಲಿ ನೋಡಿಕೊಳ್ಳಲಾಗುತ್ತದೆ. ಇನ್ನು ಒಂದಿಷ್ಟು ಪುಸ್ತಕವನ್ನು ಜಿಲ್ಲೆಯ ಎಲ್ಲರೂ ಓದಬೇಕು. ಆ ಪುಸ್ತಕದ ಮೇಲೆ ಅಭಿಪ್ರಾಯ ಬರೆಯಬೇಕು. ಅದಕ್ಕೆ ಜಿಲ್ಲಾಮಟ್ಟದ ಸ್ಪರ್ಧೆ. ಗೆದ್ದವರಿಗೆ ಬಹುಮಾನ. ಮಕ್ಕಳು ಓದಿನಲ್ಲಿ ಅದೆಷ್ಟು ಒಳಹೊಕ್ಕಿರುತ್ತಾರೆಂದರೆ, ಮೂರನೇ ಕ್ಲಾಸಿನಲ್ಲಿರುವಾಗಲೇ ಕನಿಷ್ಠ 10 ಬರಹಗಾರರನ್ನು ಹಿಂಬಾಲಿಸಲು ಮಕ್ಕಳು ಶುರುಮಾಡುತ್ತಾರೆ. ಆ ಬರಹಗಾರನ ಮುಂದಿನ ಈ ಪುಸ್ತಕ, ಈ ತಿಂಗಳಲ್ಲಿ ಬಿಡುಗಡೆಯಾಗಲಿದೆ ಎನ್ನುವ ವಿಷಯವೂ ಮೂರನೇ ಕ್ಲಾಸಿನ ಮಕ್ಕಳಿಗೆ ತಿಳಿದಿರುತ್ತದೆ. ಉಳಿದದ್ದು ಊಹಿಸಿಕೊಳ್ಳಿ. ಹೀಗೆ ಓದು, ಆ ಮೂಲಕ ಚರ್ಚೆ, ಬರವಣಿಗೆ ಇವೆಲ್ಲವನ್ನೂ ಎಲ್ಲವೂ ಒಂದೇ ಎನ್ನುವ ರೀತಿಯಲ್ಲಿ ಕಲಿಸಲಾಗುತ್ತದೆ. ಐದನೇ ಕ್ಲಾಸಿಗೆ ಬರುವಷ್ಟರೊಳಗೆ ಪ್ರತಿ ಮಗುವೂ ಪಠ್ಯೇತರ ಓದನ್ನು ದಿನಚರಿಯ ಭಾಗವಾಗಿಸಿಕೊಂಡುಬಿಟ್ಟಿರುತ್ತದೆ.

ಇದೆಲ್ಲದರಿಂದ ಮಕ್ಕಳು 2-3ನೇ ಕ್ಲಾಸಿನಲ್ಲಿಯೇ ಕಾಮಿಕ್ ಪುಸ್ತಕಗಳನ್ನು, ಚಿತ್ರ ಬಿಡಿಸಿ ಹಾಳೆಗಳಲ್ಲಿ ಬರೆಯುತ್ತಾರೆ. ಅವರವರದೇ ಕಲ್ಪನೆಗಳು. ಅದೆಲ್ಲವನ್ನೂ ಸೇರಿಸಿ, ಪುಟಸಂಖ್ಯೆ ಹಾಕಿ, ಸ್ಟೇಪಲ್ ಮಾಡಿ ಶಾಲೆಗೆ ಒಯ್ದು ಅದರ ಸರಿ-ತಪ್ಪುಗಳ ಚರ್ಚೆ ಸಹಪಾಠಿಗಳ ಜತೆ ಆಗುತ್ತದೆ. ಈ ಮಕ್ಕಳು ಹೈಸ್ಕೂಲು ಮುಟ್ಟುವಾಗ ಸಾಕಷ್ಟು ಓದುವುದು ರೂಢಿಸಿಕೊಂಡಿರುತ್ತಾರೆ. ಅಲ್ಲಿ ಅವರೆದುರು 2 ಆಯ್ಕೆಗಳು. ಒಂದೋ ಬರವಣಿಗೆಯತ್ತ ಅವರ ಕಲಿಕೆ ಮುಂದುವರಿಸಬಹುದು ಅಥವಾ ಓದುಗನಾಗಿ ಇನ್ನಷ್ಟು ಅಡ್ವಾನ್ಸ್ ಪುಸ್ತಕಗಳನ್ನು ಓದಬಹುದು. ಅಲ್ಲಿಯೂ ಓದು, ಚರ್ಚೆ, ಪುಸ್ತಕದ ರಿವ್ಯೂ ಬರೆಯುವುದು, ಪುಸ್ತಕ ಬರೆಯುವುದು ಇತ್ಯಾದಿ ಮುಂದುವರಿಯುತ್ತದೆ. ಅಲ್ಲಿಂದ ಮುಂದೆ, ಹೈಸ್ಕೂಲ್ ಮುಗಿಸಿದವನು ಪ್ರಬುದ್ಧ ಬರಹಗಾರನಾಗಲು ಏನೇನು ಬೇಕು ಎಂದು ತಿಳಿದಿರುತ್ತಾನೆ, ಕಲಿತಿರುತ್ತಾನೆ. ಜತೆಗೆ ಪ್ರೌಢ ಓದುಗನಾಗಿರುತ್ತಾನೆ. ಮುಂದೆ ಓದುಗನಾಗಲಿ, ಬರಹಗಾರನಾಗಲಿ, ಆತನಿಗೆ ಓದಿನ ಆಯಾಮಗಳಾದ ಆತ್ಮಕಥನ, ಕಾದಂಬರಿ, ಕೃಷಿ, ವಿಜ್ಞಾನ, ಸಾಹಿತ್ಯ, ಫುಡ್ ಸಾಹಿತ್ಯ ಹೀಗೆ ಎಲ್ಲವುಗಳ ಸಾಕಷ್ಟು ಪರಿಚಯವಾಗಿರುತ್ತದೆ. ಅಲ್ಲಿಂದ ಮುಂದೆ ಓದು-ಬರಹ ಅವರವರ ಆಯ್ಕೆಗೆ ಬಿಟ್ಟದ್ದು.

ಈ ಕಾರಣಕ್ಕೆ ಅಮೆರಿಕದಲ್ಲಿ ಸಾಹಿತ್ಯ, ಬರವಣಿಗೆ ಮಲ್ಟಿ ಮಿಲಿಯನ್ ಡಾಲರ್ ವ್ಯವಹಾರ. ಮಕ್ಕಳಿಗೆ ಈ ರೀತಿ ಓದುವುದನ್ನು ಕಲಿಸುವುದರಿಂದ ಅದಕ್ಕೆ ತಕ್ಕನಾಗಿ ಅಷ್ಟೇ ಪ್ರಮಾಣದ ಶಿಶು, ಬಾಲಸಾಹಿತ್ಯ ಬೇಕಲ್ಲ. ಅಂತೆಯೇ ಉಳಿದೆಲ್ಲ, ಆಯಾ ವಯಸ್ಸಿನಲ್ಲಿ ಓದುವ ಸಾಹಿತ್ಯ ಪ್ರಕಾರಕ್ಕೂ ಎಲ್ಲಿಲ್ಲದ ಬೇಡಿಕೆ. ಬೇಡಿಕೆ ಹೆಚ್ಚಿದಂತೆ ಲಭ್ಯತೆ ಹೆಚ್ಚುತ್ತದೆ, ಪೈಪೋಟಿಯೂ ಅದಕ್ಕನುಗುಣವಾಗಿ. ಇದರಿಂದಾಗಿ ಇನ್ನಷ್ಟು ಅದ್ಭುತ ಬರಹಗಾರರು ತಯಾರಾಗುತ್ತಾರೆ. ಅಮೆರಿಕದಲ್ಲಿ ಬರಹಗಾರನಿಗೆ ಸ್ಟಾರ್ ವ್ಯಾಲ್ಯೂ ಇದೆ. ನೂರಾರು ಲೇಖಕರ ಪುಸ್ತಕಗಳನ್ನು ಓದುಗರು ಮುಂಗಡ ಕಾಯ್ದಿರಿಸುತ್ತಾರೆ. ಕೆಲವೊಂದು ಲೇಖಕರ ಪುಸ್ತಕಗಳನ್ನಂತೂ ಹೊಸ ಐಫೋನ್ ಖರೀದಿಗೆ ನಿಂತದ್ದಕ್ಕಿಂತ ಜಾಸ್ತಿ ಉದ್ದದ ಕ್ಯೂನಲ್ಲಿ ನಿಂತು ಓದುಗರು ಖರೀದಿಸುತ್ತಾರೆ. ಲೈಬ್ರರಿಯಲ್ಲಿ ಬಹುತೇಕ ಪುಸ್ತಕಗಳು ಸಿಕ್ಕರೂ ಜನರಿಗೆ ಸ್ವಂತಕ್ಕೇ ಬೇಕು.

ಅಮೆರಿಕನ್ ಪ್ರಜೆ, ಸರಾಸರಿ ಪ್ರತಿವರ್ಷ ತಲಾ ನೂರು ಡಾಲರ್‌ಗಿಂತ ಜಾಸ್ತಿ ಹಣವನ್ನು ಓದಲು ವ್ಯಯಿಸುತ್ತಾನೆ. ಪ್ರಿಂಟ್ ಪುಸ್ತಕದ ವ್ಯವಹಾರ ಅಮೆರಿಕದೊಳಗೆ 350 ಕೋಟಿ ಡಾಲರ್‌ನಷ್ಟು ದೊಡ್ಡದು. ಇಲ್ಲಿನ ಬಹುತೇಕ ಪುಸ್ತಕಗಳು ದೇಶದಾಚೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗುತ್ತವೆ. ಅದನ್ನೆಲ್ಲ ಸೇರಿಸಿದರೆ ಇದು 3,48,29,500 ಕೋಟಿ ರುಪಾಯಿಯ ಬಹುದೊಡ್ಡ ಇಂಡಸ್ಟ್ರಿ, ವ್ಯವಹಾರ. ಅಮೆರಿಕದಲ್ಲಿ ಲಕ್ಷದ ಲೆಕ್ಕದಲ್ಲಿ ಬರಹಗಾರರಿದ್ದಾರೆ. ಇಲ್ಲಿ ಪುಸ್ತಕ ಪ್ರಕಟಣೆಗೆ ಬೇಕಾದ ವ್ಯವಸ್ಥೆ ಸುಲಭದಲ್ಲಿ ಎಲ್ಲರ ಕೈಗೆ ಸಿಗುತ್ತದೆ. ಪುಸ್ತಕ ಬರೆಯುತ್ತಿದ್ದೇನೆ ಎಂದು ಯಾವುದೇ ಊರಿನ ಲೈಬ್ರರಿಗೆ ಹೋದರೆ, ಅದಕ್ಕೆ ಬೇಕಾಗುವ ಸಾಫ್ಟ್‌ವೇರ್‌ಗಳು ಮುಫತ್ತಾಗಿ ಲಭ್ಯ. ಅದಲ್ಲದೆ ಅದೇ ಲೈಬ್ರರಿಯಲ್ಲಿ ಪುಸ್ತಕ ವಿನ್ಯಾಸವನ್ನೂ ಹೇಳಿಕೊಡಲಾಗುತ್ತದೆ. ಪುಸ್ತಕ ಬಹಳ ಒಳ್ಳೆಯದಾಗಿ ಮೂಡಿಬಂದಿದ್ದರೆ, ಲೈಬ್ರರಿಯವರೇ ಪಬ್ಲಿಷಿಂಗ್ ಏಜಂಟ್ ಜತೆ ಸಂಪರ್ಕ ಮಾಡಿಕೊಡುತ್ತಾರೆ. ಇದೆಲ್ಲದರಿಂದ ಬರೆಯಬೇಕೆಂದಿದ್ದರೆ, ಒಳ್ಳೆಯ ಬರಹಗಾರನಾಗಿದ್ದರೆ ಮೊದಲ ಪುಸ್ತಕ ಹೊರತರುವುದು ಕಷ್ಟವಾಗುವುದಿಲ್ಲ. ಅದಕ್ಕೆ ಯಾರ ಬೆಂಬಲವೂ ಬೇಕಾಗಿಲ್ಲ. ಪುಸ್ತಕದ ಏಜಂಟ್‌ಗಳು ಪ್ರಿಂಟಿಂಗ್‌ನಿಂದ ಹಿಡಿದು ಪ್ರಕಟಣೆ, ಜಾಹೀರಾತು ಎಲ್ಲವನ್ನೂ ನೋಡಿಕೊಳ್ಳುತ್ತಾರೆ. ಹೀಗೆ ಇಡೀ ವ್ಯವಸ್ಥೆ ಬರವಣಿಗೆಗೆ ಮತ್ತು ಓದಿಗೆ ಬೇಕಾದ ಪೂರ್ಣ ವಾತಾವರಣವನ್ನು ಇಲ್ಲಿ ನಿರ್ಮಿಸಿದೆ. ಅಮೆರಿಕದಲ್ಲಿ ಪ್ರತಿ ವಯಸ್ಕ ಬರೀ ಪ್ರಿಂಟ್ ಪುಸ್ತಕದ ಓದಿಗೆ ವ್ಯಯಿಸುವ ಸರಾಸರಿ ಸಮಯ ದಿನಕ್ಕೆ 31 ನಿಮಿಷ (ಇದು ಸರಾಸರಿ- ಸಣ್ಣ ಸಂಖ್ಯೆಯಲ್ಲ). ಈ ಪ್ರಮಾಣದ ಓದಿನ ಸುತ್ತ ಉಳಿದೆಲ್ಲ ಜೀವನಾವಶ್ಯಕ ಕಲಿಕೆಗಳು. ಇದರ ಪರಿಣಾಮ ಕಾರ್ಪೊರೇಟ್ ಜಗತ್ತಿನಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಅಮೆರಿಕನ್ನರು ಈ ಕಾರಣದಿಂದಲೇ ಅಷ್ಟು ಚಂದಕ್ಕೆ ಇ-ಮೇಲ್ ಬರೆಯುತ್ತಾರೆ, ಮೀಟಿಂಗ್‌ಗಳಲ್ಲಿ ಮಾತನಾಡುತ್ತಾರೆ, ಪ್ರಸೆಂಟ್ ಮಾಡುತ್ತಾರೆ.

ಯಾವುದೋ ಕಾರ್ಯಕ್ರಮದಲ್ಲೋ, ಸಾಹಿತ್ಯೋತ್ಸವದಲ್ಲೋ ಅಥವಾ ಇನ್ನೆಲ್ಲೋ ಇಂದಿನ ಮಕ್ಕಳು, ದೊಡ್ಡವರು ಓದುವುದು ಕಡಿಮೆಯಾಗಿದೆ. ಓದುವವರು ಅಲ್ಪಸಂಖ್ಯಾತರು ಎಂದೆಲ್ಲ ಬಾಯಿಬಡಿದುಕೊಂಡರೆ ಓದುವ ಹವ್ಯಾಸ ಜನರಲ್ಲಿ ಹುಟ್ಟಿಬಿಡುವುದಿಲ್ಲ. ಅದನ್ನು ಎಳವೆಯಿಂದಲೇ, ಹಂತಹಂತವಾಗಿ ಕಲಿಸಿಬಿಡಬೇಕು. ಓದು, ಅದರ ಜತೆಜತೆಯಲ್ಲಿ ಮಾತಾಡುವ, ಬರೆಯುವ, ವಿಮರ್ಶಿಸುವ, ಚರ್ಚಿಸುವ, ವಿಷಯವನ್ನು ಪ್ರಸ್ತುತಪಡಿಸುವ ಹೀಗೆ ಉಳಿದೆಲ್ಲ, ಆಧುನಿಕ ಬದುಕಿಗೆ ತೀರಾ ಅವಶ್ಯಕವಿರುವ ಲೈಫ್ ಸ್ಕಿಲ್ ಅನ್ನು ಶಿಕ್ಷಣ ಕಲಿಸಬೇಕು. ಈ ವಿಷಯದಲ್ಲಿ ಅಮೆರಿಕದ ವ್ಯವಸ್ಥೆಯನ್ನು ಮೆಚ್ಚಲೇಬೇಕು, ನೋಡಿ ಕಲಿಯಬೇಕು, ಅಳವಡಿಸಿಕೊಳ್ಳಬೇಕು. ಜತೆಗೆ, ಇಂದಿನ ಇಂಟರ್‌ನೆಟ್ ಜಮಾನದಲ್ಲಿಯೂ ಪುಸ್ತಕಗಳು ಮಹತ್ವ ಕಳೆದುಕೊಳ್ಳದಂತೆ ನೋಡಿಕೊಂಡಿರುವ ಅಮೆರಿಕನ್ನರಿಗೆ, ಅವರ ಕಾಳಜಿಗೆ ಶಹಬಾಸ್ ಹೇಳಲೇಬೇಕು.

ಶಸ್ತ್ರಾಸ್ತ್ರ ಡೀಲರ್ ಪಾತ್ರದಲ್ಲಿ ಟ್ರಂಪ್ ಮಾಡುತ್ತಿರುವುದೇನು?!

ಅಮೆರಿಕ ವಿಶ್ವದ ಅತಿ ದೊಡ್ಡ ಆರ್ಥಿಕತೆಯಾಗಿರಬಹುದು, ಆದರೆ ಈಗ ಪ್ರಬಲ ಇಕಾನಮಿಯಾಗಿ ಉಳಿದಿಲ್ಲ. ಜಿಡಿಪಿ ಬೆಳವಣಿಗೆಯೂ ಸ್ಥಿರವಾಗಿಲ್ಲ. ಇದನ್ನು ಸ್ವತಃ ಅಮೆರಿಕ ಮೂಲದ ರೇಟಿಂಗ್ ಏಜೆನ್ಸಿಗಳೇ ತಮ್ಮ ವರದಿಗಳ ಮೂಲಕ ಎಚ್ಚರಿಸುತ್ತಿವೆ. ಮೂಡೀಸ್ ವರದಿಯನ್ನು ಟ್ರಂಪ್ ಅಲ್ಲಗಳೆಯುತ್ತಿರಬಹುದು. ಆದರೆ ವಾಸ್ತವವನ್ನು ಹೆಚ್ಚು ದಿನ ಬಚ್ಚಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗೆ ಸೌದಿ ಅರೇಬಿಯಾದಲ್ಲಿ ಅತ್ಯಂತ ವಿಲಕ್ಷಣವಾಗಿ ವರ್ತಿಸಿದರು! ಟ್ರಂಪ್ ಒಬ್ಬ ರಾಜಕಾರಣಿಗಿಂತಲೂ, ಅಂತಾರಾಷ್ಟ್ರೀಯ ಶಸ್ತ್ರಾಸ್ತ್ರ ಡೀಲರ್‌ನಂತೆ ಕಂಡುಬಂದರು.

ಅಮೆರಿಕದ ಮೇಲೆ ಟೈಮ್ ಬಾಂಬ್‌ನಂತಿರುವ 36 ಲಕ್ಷ ಕೋಟಿ ಡಾಲರ್ ಸಾಲವನ್ನು ತಗ್ಗಿಸಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದೀಗ ಏನು ಮಾಡಲೂ ಸಿದ್ಧರಾಗಿದ್ದಾರೆ. ಅಲ್ ಖೈದಾದ ಮಾಜಿ ಉಗ್ರನಿಗೂ ಜೈ ಎನ್ನುತ್ತಿದ್ದಾರೆ. ಮುಖ್ಯವಾಗಿ ಶಸ್ತ್ರಾಸ್ತ್ರ ಮಾರಾಟದ ಅಂತಾರಾಷ್ಟ್ರೀಯ ದಲ್ಲಾಳಿಯಾಗಿ ಹೊರಹೊಮ್ಮಿದ್ದಾರೆ. ಒಂದು ಕಡೆ ಸೌದಿ ಅರೇಬಿಯಾದ ಜತೆಗೆ 219 ಶತಕೋಟಿ ಡಾಲರ್ ಶಸ್ತ್ರಾಸ್ತ್ರ ಮಾರಾಟ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಮತ್ತೊಂದು ಕಡೆ ಸೌದಿಯ ಮನವೊಲಿಸಲು ಐಸಿಸ್ ಟೆರರಿಸ್ಟ್‌ಗಳ ಹುಟ್ಟೂರಾದ ಸಿರಿಯಾ ವಿರುದ್ಧದ ನಿರ್ಬಂಧಗಳನ್ನು ತೆರವುಗೊಳಿಸಿದ್ದಾರೆ. ಇದರೊಂದಿಗೆ ಸೌದಿ ಅರೇಬಿಯಾಕ್ಕೆ ರಾಜತಾಂತ್ರಿಕವಾಗಿ ದೊಡ್ಡ ಗೆಲುವಾಗಿದೆ. ಅರಬ್ಬರ ನಾಡಿನಲ್ಲಿ ಸೌದಿ ಈಗ ಮತ್ತೊಮ್ಮೆ ಹೀರೊ ಆಗಿ ಮಿಂಚುತ್ತಿದೆ.

ಅಮೆರಿಕ ವಿಶ್ವದ ಅತಿ ದೊಡ್ಡ ಆರ್ಥಿಕತೆಯಾಗಿರಬಹುದು, ಆದರೆ ಈಗ ಪ್ರಬಲ ಇಕಾನಮಿಯಾಗಿ ಉಳಿದಿಲ್ಲ. ಜಿಡಿಪಿ ಬೆಳವಣಿಗೆಯೂ ಸ್ಥಿರವಾಗಿಲ್ಲ. ಇದನ್ನು ಸ್ವತಃ ಅಮೆರಿಕ ಮೂಲದ ರೇಟಿಂಗ್ ಏಜೆನ್ಸಿಗಳೇ ತಮ್ಮ ವರದಿಗಳ ಮೂಲಕ ಎಚ್ಚರಿಸುತ್ತಿವೆ. ಮೂಡೀಸ್ ವರದಿಯನ್ನು ಟ್ರಂಪ್ ಅಲ್ಲಗಳೆಯುತ್ತಿರಬಹುದು. ಆದರೆ ವಾಸ್ತವವನ್ನು ಹೆಚ್ಚು ದಿನ ಬಚ್ಚಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ.

ನೂರು ವರ್ಷಗಳಲ್ಲಿ ಮೊದಲ ಬಾರಿಗೆ ಅಮೆರಿಕ 'ಎಎಎ' ಕ್ರೆಡಿಟ್ ರೇಟಿಂಗ್ ಕಳೆದುಕೊಂಡಿದೆ. ಆದರೆ ಇದುವೇ ಅಮೆರಿಕದ ಮೇಲಿನ ವಿಶ್ವಾಸ ಕಳೆದುಕೊಳ್ಳಲು ಕಾರಣವಾದರೆ ಎಲ್ಲರಿಗೂ ಸಮಸ್ಯೆಯಾಗಲಿದೆ. ಇದಕ್ಕಾಗಿ ಡೊನಾಲ್ಡ್ ಟ್ರಂಪ್ ಅವರನ್ನು ದೂರುವುದು ಸುಲಭ. ಆದರೆ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಸಾಲ ಮಾಡಿರುವ ಅಮೆರಿಕದ ಈಗಿನ ಸಾಲದ ಹೊರೆಗೆ ಟ್ರಂಪ್ ಅವರೊಬ್ಬರೇ ಕಾರಣರಲ್ಲ. ಡೌನ್‌ಗ್ರೇಡ್ 2011ರಲ್ಲಿ ಬರಾಕ್ ಒಬಾಮಾ ಅಧ್ಯಕ್ಷರಾಗಿದ್ದಾಗಲೇ 'ಎಸ್ ಆ್ಯಂಡ್ ಪಿ'ಯಿಂದ ನಡೆದಿತ್ತು. 2023ರಲ್ಲಿ ಬೈಡೆನ್ ಅವಧಿಯಲ್ಲೂ 'ಫಿಚ್' ಕೂಡ ತಗ್ಗಿಸಿತ್ತು. ಇದೀಗ ಮೂಡೀಸ್ ಸರದಿ. ಏನೆಲ್ಲ ಕಸರತ್ತುಗಳನ್ನು ಅಧ್ಯಕ್ಷರು ಮಾಡಿದರೂ, ಅಮೆರಿಕದ ಸಾಲ ಹುತ್ತದಂತೆ ಬೆಳೆಯುತ್ತಲೇ ಇದೆ. ಹೀಗಾಗಿ ಈ ರೇಟಿಂಗ್ ಕಡಿತವು ಅಮೆರಿಕಕ್ಕೆ ಸಾಲ ಕೊಡುತ್ತಿರುವವರಿಗೆ, ದೀರ್ಘಾವಧಿಗೆ ಅದು ಸುರಕ್ಷಿತವಲ್ಲ ಎಂಬ ಅಪಾಯದ ಕರೆಗಂಟೆಯನ್ನು ಬಾರಿಸಿದಂತಾಗಿದೆ.

ಆದರೆ ಸಾಲದ ಹೊರೆಯನ್ನು ಕರಗಿಸಲು ಡೊನಾಲ್ಡ್ ಟ್ರಂಪ್ ಮಾಡುತ್ತಿರುವುದಾದರೂ ಏನು? ಅಲ್ ಖೈದಾ, ಐಸಿಸ್ ಭಯೋತ್ಪಾದಕರ ಬಗ್ಗೆ ಗೊತ್ತಿದೆಯಲ್ಲವೇ. 2001ರಲ್ಲಿ ಅಮೆರಿಕದ ವಿಶ್ವವ್ಯಾಪಾರ ಕೇಂದ್ರದ ಅವಳಿ ಗೋಪುರಗಳನ್ನು ಸ್ಫೋಟಿಸಿ, ಮೂರು ಸಾವಿರಕ್ಕೂ ಹೆಚ್ಚು ಜನರನ್ನು ಬಲಿ ಪಡೆದ ಉಗ್ರರಿವರು. ಇದೇ ಅಲ್ ಖೈದಾ ಪಡೆಯಲ್ಲಿದ್ದ ಟೆರರಿಸ್ಟ್ ಈಗ ಸಿರಿಯಾದ ಹಂಗಾಮಿ ಅಧ್ಯಕ್ಷ ಅಹಮದ್ ಅಲ್ ಷರಾ. ಸೌದಿ ಅರೇಬಿಯಾದ ಮರ್ಜಿಗೆ ಒಳಗಾಗಿ, ಸಿರಿಯಾದ ಹಂಗಾಮಿ ಅಧ್ಯಕ್ಷನನ್ನು ಭೇಟಿಯಾಗಿ ಟ್ರಂಪ್ ಹಾಡಿ ಹೊಗಳುತ್ತಿದ್ದಾರೆ. ಒಂದು ಕಾಲದಲ್ಲಿ ಅಮೆರಿಕ ಈತನ ತಲೆಗೆ 1 ಕೋಟಿ ಡಾಲರ್ ಬಹುಮಾನ ಘೋಷಿಸಿತ್ತು!

ಹಾಗಾದರೆ ಅಮೆರಿಕದ ಸಾಲ ಈ ಪರಿಯಲ್ಲಿ ಬೆಳೆದಿರುವುದೇಕೆ? ಆದಾಯಕ್ಕಿಂತ ಹೆಚ್ಚು ಖರ್ಚು ಮಾಡಿರುವುದೇ ಇದಕ್ಕೆ ಕಾರಣ. 2024ರಲ್ಲಿ ಅಮೆರಿಕವು ತನ್ನ ಆದಾಯಕ್ಕಿಂತ 1.8 ಲಕ್ಷ ಕೋಟಿ ಡಾಲರ್ ಹೆಚ್ಚು ಮೊತ್ತವನ್ನು ಖರ್ಚು ಮಾಡಿತ್ತು. ಈ ವರ್ಷ ಆದಾಯಕ್ಕಿಂತ 2 ಲಕ್ಷ ಕೋಟಿ ಡಾಲರ್ ಕೊರತೆ ಉಂಟಾಗಿದೆ. ಹೀಗಾಗಿ ಕಾಲಾಂತರದಲ್ಲಿ ಅಮೆರಿಕದ ಒಟ್ಟು ಸಾಲ ಈಗ 36 ಲಕ್ಷ ಕೋಟಿ ಡಾಲರ್ ಆಗಿದೆ. ಅಂದರೆ ಜಿಡಿಪಿಯ ಶೇ.125ಕ್ಕೂ ಹೆಚ್ಚು. ಅಮೆರಿಕವು ಕೇವಲ ಬಡ್ಡಿಯ ಸಲುವಾಗಿಯೇ ಸುಮಾರು 1 ಲಕ್ಷ ಕೋಟಿ ಡಾಲರ್ ಕೊಡಬೇಕಾಗಿದೆ. ಇದು ಅದರ ರಕ್ಷಣಾ ವೆಚ್ಚಕ್ಕಿಂತ ಅಥವಾ ಆರೋಗ್ಯ ಬಜೆಟ್‌ಗಿಂತಲೂ ಜಾಸ್ತಿ.

ಆದ್ದರಿಂದ ಡೊನಾಲ್ಡ್ ಟ್ರಂಪ್ ಈಗ ದೇಶದ ಆದಾಯವನ್ನು ಹೆಚ್ಚಿಸಲೇಬೇಕು. ಅದಕ್ಕಾಗಿ ಇತ್ತೀಚೆಗೆ ಸುಂಕ ಸಮರವನ್ನೂ ಸಾರಿದರು. ಆದರೆ ಅದೂ ಕೈಕೊಟ್ಟಂತಿದೆ. ಚೀನಾ ವಿರುದ್ಧ ಯದ್ವಾತದ್ವಾ ಏರಿಸಿದ್ದ ಸುಂಕವನ್ನು ಹಿಂತೆಗೆದುಕೊಂಡಿದ್ದಾರೆ. ಅಲ್ಲಿಗೆ ಪ್ರತಿಸುಂಕದ ಮೂಲಕ ಅಮೆರಿಕಕ್ಕೆ ಪ್ರತಿದಿನ 2 ಶತಕೋಟಿ ಡಾಲರ್ ಮೊತ್ತದ ಹಣದ ಹೊಳೆಯನ್ನೇ ಹರಿಸುತ್ತೇನೆ ಎಂಬ ಟ್ರಂಪ್ ಹೇಳಿಕೆ 'ಶುದ್ಧ ಬುರುಡೆ' ಎಂಬುದು ಸಾಬೀತಾಗಿದೆ. ಹಾಗಾದರೆ ಟ್ರಂಪ್ ಸರಕಾರ ಆದಾಯವನ್ನು ತಕ್ಷಣ ಹೆಚ್ಚಿಸಲು ಏನು ಮಾಡಬೇಕು? ತೆರಿಗೆಯನ್ನು ಹೆಚ್ಚಿಸಬೇಕು ಅಥವಾ ಖರ್ಚುಗಳನ್ನು ಕಡಿಮೆ ಮಾಡಬೇಕು. ಪ್ರತಿಸುಂಕದಿಂದ ಬರುವ ಆದಾಯವನ್ನು ಬಳಸಿಕೊಂಡು ಅಮೆರಿಕನ್ನರ ಮೇಲಿನ ತೆರಿಗೆಯನ್ನು ಇಳಿಸುತ್ತೇನೆ ಎಂದು ಟ್ರಂಪ್ ಹೇಳುತ್ತಿದ್ದಾರೆ. ಆದರೆ ಇದು ಕಾರ್ಯಗತವಾಗದಿದ್ದರೆ ಭವಿಷ್ಯದಲ್ಲಿ ಇದೇ ಟ್ರಂಪ್ ತೆರಿಗೆ ಏರಿಸಲೂಬಹುದು. ಎರಡನೆಯದಾಗಿ ಸರಕಾರದ ದಕ್ಷತೆಯನ್ನು ಹೆಚ್ಚಿಸಲು ಎಲಾನ್ ಮಸ್ಕ್ ನೇತೃತ್ವದ ವಿಭಾಗ ಸಿದ್ಧವಾಗಿದೆ. ಅದು ಸರಕಾರಿ ಇಲಾಖೆಗಳ ಖರ್ಚುಗಳನ್ನು ಕಡಿತಗೊಳಿಸುತ್ತಿದೆ. ಆದರೆ ಇದೆಲ್ಲ ತಾತ್ಕಾಲಿಕ ಕ್ರಮಗಳಷ್ಟೇ. ಒಂದು ವೇಳೆ ಟ್ರಂಪ್ ತೆರಿಗೆ ಕಡಿತಗೊಳಿಸಿದರೆ ಮತ್ತೆ ಮುಂದಿನ ಹತ್ತು ವರ್ಷಕ್ಕೆ 5 ಲಕ್ಷ ಕೋಟಿ ಡಾಲರ್ ಹೆಚ್ಚುವರಿ ಕೊರತೆಯಾಗಲಿದೆ.

ಹೀಗಾಗಿ ಅಮೆರಿಕದ ಸಾಲ ಹೆಚ್ಚುತ್ತಾ ಹೋದರೆ ಒಂದು ಹಂತದ ಬಳಿಕ ಕೇವಲ ರೇಟಿಂಗ್ ಏಜೆನ್ಸಿಗಳು ಮಾತ್ರವಲ್ಲದೆ, ಹೂಡಿಕೆದಾರರೂ ಚಿಂತೆಗೀಡಾಗಲಿದ್ದಾರೆ. ಅಮೆರಿಕದ ಬಾಂಡ್‌ಗಳಿಗೆ ಬೇಡಿಕೆ ಇಳಿಮುಖವಾಗಲಿದೆ. ಆಗ ಬಾಂಡ್‌ಗಳ ಬೇಡಿಕೆಯನ್ನು ಹೆಚ್ಚಿಸಲು ಸರಕಾರ ಪ್ರತಿಯಾಗಿ ಹೂಡಿಕೆದಾರರಿಗೆ ಹೆಚ್ಚಿನ ಬಡ್ಡಿಯನ್ನು ನೀಡಬೇಕಾಗುತ್ತದೆ. ಈ ರೀತಿ ಬಾಂಡ್‌ಗಳಲ್ಲಿ ಹೂಡಿಕೆಗೆ ಬಡ್ಡಿ ಏರಿಕೆಯಾದರೆ ಸಾರ್ವಜನಿಕ-ಖಾಸಗಿ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳಲ್ಲಿಯೂ ಸಾಲಗಳಿಗೆ ಹೆಚ್ಚಿನ ಬಡ್ಡಿ ಕೊಡಬೇಕಾಗುತ್ತದೆ. ಆಗ ಆರ್ಥಿಕ ಚಟುವಟಿಕೆಗಳು ಕಡಿಮೆಯಾಗುತ್ತವೆ. ಆರ್ಥಿಕ ಹಿಂಜರಿತವೂ ಸಂಭವಿಸಬಹುದು.

ಟ್ರಂಪ್ ಅವರ ಪ್ರತಿಸುಂಕದ ಸಮರ ಈಗಾಗಲೇ ಜಾಗತಿಕ ಬೆಳವಣಿಗೆಯ ಲಯ ತಪ್ಪಿಸಿದೆ. ಹೇಗಾದರೂ ಬಡ್ಡಿದರಗಳನ್ನು ಇಳಿಸಬೇಕೆಂದು ಟ್ರಂಪ್ ಯತ್ನಿಸುತ್ತಿದ್ದಾರೆ. ಏಕೆಂದರೆ ಬಡ್ಡಿ ದರ ಇಳಿದರೆ ಸಾಲದ ಮರುಪಾವತಿಯ ಬಾಬ್ತು ಖರ್ಚು ಕಡಿಮೆಯಾಗಲಿದೆ. ಆದರೆ ಬಡ್ಡಿ ದರ ತಗ್ಗಿದರೆ ಹಣದುಬ್ಬರ ಹೆಚ್ಚುವ ಸಾಧ್ಯತೆ ಇದೆ. ಟ್ರಂಪ್ ಅಮೆರಿಕದ ಸಾಲದ ಸಮಸ್ಯೆಯನ್ನು ಸೃಷ್ಟಿಸಿಲ್ಲ. ಆದರೆ ಅಧ್ಯಕ್ಷರಾಗಿರುವುದರಿಂದ ಆರ್ಥಿಕತೆಯ ಜವಾಬ್ದಾರಿ ಅವರ ಮೇಲಿದೆ. ಆದರೆ ಟ್ರಂಪ್ ಈಗ ನಡೆಯುತ್ತಿರುವ ದಾರಿ ಯಾವುದು?

ಸೌದಿ ಅರೇಬಿಯಾದ ಮರ್ಜಿಯಿಂದ ಟ್ರಂಪ್ ಸಿರಿಯಾ ವಿರುದ್ಧದ ನಿರ್ಬಂಧಗಳನ್ನು ತೆರವುಗೊಳಿಸಿದ್ದಾರೆ. ಇದರಿಂದ ಒಂದೆರಡು ವರ್ಷದಲ್ಲೇ ಐಸಿಸ್ ಭಯೋತ್ಪಾದಕರ ಉಪಟಳ ಹೆಚ್ಚುವ ಆತಂಕ ಉಂಟಾಗಿದೆ. ಎರಡನೇ ಬಾರಿಗೆ ಅಧ್ಯಕ್ಷರಾದ ಬಳಿಕ ಟ್ರಂಪ್ ಅವರ ಮೊದಲ ಪ್ರಮುಖ ವಿದೇಶ ಪ್ರವಾಸ ಸೌದಿ ಅರೇಬಿಯಾಕ್ಕೆ ಆಗಿತ್ತು. ಮೊದಲ ಅವಧಿಯಲ್ಲೂ ಸೌದಿಗೇ ಮೊದಲು ಹೋಗಿದ್ದರು. ಕಾರಣ ರಹಸ್ಯವೇನಲ್ಲ. ''ನಾನು ಸೌದಿ ಅರೇಬಿಯಾ ಜತೆಗೆ ಮಹತ್ವದ ಡೀಲ್ ಮಾಡಲಿದ್ದೇನೆ. ಸೌದಿಯವರು ಅಮೆರಿಕನ್ ಕಂಪನಿಗಳಿಗೆ ಮುಂದಿನ 4 ವರ್ಷದಲ್ಲಿ 1 ಟ್ರಿಲಿಯನ್ ಡಾಲರ್ ವಹಿವಾಟು ನೀಡಲಿದ್ದಾರೆ. ಹೀಗಾಗಿ ಅದಕ್ಕೇ ನನ್ನ ಆದ್ಯತೆ'' ಎಂದು ಟ್ರಂಪ್ ಹೇಳಿದ್ದರು.

ಹೇಳಿ ಕೇಳಿ ಅಮೆರಿಕ ಜಗತ್ತಿನ ಅತಿ ದೊಡ್ಡ ಶಸ್ತ್ರಾಸ್ತ್ರಗಳ ರಫ್ತುದಾರ. ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ ವರದಿಯ ಪ್ರಕಾರ, 2020-2024ರಲ್ಲಿ ಜಾಗತಿಕ ಶಸ್ತ್ರಾಸ್ತ್ರ ರಫ್ತಿನಲ್ಲಿ ಶೇ.43ರ ಪಾಲನ್ನು ಅಮೆರಿಕವೊಂದೇ ತನ್ನದಾಗಿಸಿಕೊಂಡಿತ್ತು. ಇದು ಎರಡನೇ ದೊಡ್ಡ ರಫ್ತುದಾರ ಫ್ರಾನ್ಸ್‌ಗಿಂತ ನಾಲ್ಕು ಪಟ್ಟು ಹೆಚ್ಚು. ನೂರಾರು ದೇಶಗಳಿಗೆ ಅಮೆರಿಕ ಪ್ರಮುಖ ಶಸ್ತ್ರಾಸ್ತ್ರ ರಫ್ತುದಾರ ರಾಷ್ಟ್ರವಾಗಿದೆ. ಹೀಗಾಗಿಯೇ ಜಗತ್ತಿನ ಯಾವುದೇ ಭಾಗದಲ್ಲಿ ಸಂಘರ್ಷ, ಯುದ್ಧದ ವಾತಾವರಣ ಅಥವಾ ಸಮರವೇ ಶುರುವಾದರೆ, ಅಲ್ಲಿಗೆ ಅಮೆರಿಕ ದೌಡಾಯಿಸುತ್ತದೆ. 2024ರಲ್ಲಿ ನಾನಾ ದೇಶಗಳಿಗೆ ಮಿಲಿಟರಿ ಯುದ್ಧೋಪಕರಣಗಳ ರಫ್ತು ಮೂಲಕ 318 ಶತಕೋಟಿ ಡಾಲರ್ ವ್ಯಾಪಾರವನ್ನು ಅದು ನಡೆಸಿತ್ತು.

ಇತ್ತೀಚೆಗೆ ಭಾರತ-ಪಾಕಿಸ್ತಾನ ಸಂಘರ್ಷದಲ್ಲಿ ಕೂಡ ಡೊನಾಲ್ಡ್ ಟ್ರಂಪ್ ಅವರು ಶಾಂತಿದೂತನ ಪೋಷಾಕು ಧರಿಸಿ ರಂಗಪ್ರವೇಶಕ್ಕೆ ಯತ್ನಿಸಿದ್ದರು. ''ನನ್ನಿಂದಾಗಿಯೇ ಕದನವಿರಾಮ ಸಂಭವಿಸಿದೆ'' ಎಂಬ ಹೇಳಿಕೆಯನ್ನೂ ಕೊಟ್ಟರು. ಆದರೆ ಪ್ರಧಾನಿ ನರೇಂದ್ರ ಮೋದಿಯವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಟ್ರಂಪ್ ಅವರ ಹೆಸರನ್ನು ಎಲ್ಲಿಯೂ ಉಲ್ಲೇಖಿಸಲಿಲ್ಲ. ಬಳಿಕ ಟ್ರಂಪ್ ಕೂಡ ಕದನವಿರಾಮದಲ್ಲಿ ತಮ್ಮ ಪಾತ್ರ ಇಲ್ಲ ಎಂದು 'ಯೂ-ಟರ್ನ್' ತೆಗೆದುಕೊಂಡರು ಎಂಬುದು ಬೇರೆ ವಿಚಾರ. ಯುದ್ಧೋಪಕರಣಗಳ ವ್ಯಾಪಾರವು ಅಮೆರಿಕದ ವಿದೇಶಾಂಗ ನೀತಿಯ ಭಾಗವಾಗಿದೆ. ಬೈಡೆನ್ ಅವಧಿಯಲ್ಲೂ ಇಸ್ರೇಲ್ ಮತ್ತು ಉಕ್ರೇನ್‌ಗೂ ಭಾರಿ ಶಸ್ತ್ರಾಸ್ತ್ರಗಳನ್ನು ಅಮೆರಿಕ ಕೊಟ್ಟಿದೆ. ಶಸ್ತ್ರಾಸ್ತ್ರಗಳ ವ್ಯಾಪಾರ ತಪ್ಪಲ್ಲ. ಆದರೆ ಅದಕ್ಕಾಗಿಯೇ ಕದನಗಳನ್ನು ಜೀವಂತವಾಗಿಡಲು ಯತ್ನಿಸಿದರೆ ತಪ್ಪಾಗುತ್ತದೆ. ಮಾತ್ರವಲ್ಲದೆ ಇದರಿಂದ ಶಾಂತಿ ಸ್ಥಾಪನೆ ಅಸಾಧ್ಯ.

ಈ ನಡುವೆ ಚೀನಾ ಮತ್ತು ರಷ್ಯಾದ ಬೆದರಿಕೆಯನ್ನು ಎದುರಿಸಲು, ಅಮೆರಿಕವು 175 ಶತಕೋಟಿ ಡಾಲರ್ ಮೌಲ್ಯದ 'ಗೋಲ್ಡನ್ ಡೋಮ್ ಮಿಸೈಲ್ ಡಿಫೆನ್ಸ್ ಶೀಲ್ಡ್' ಅನ್ನು ವ್ಯವಸ್ಥೆಗೊಳಿಸಲು ಮುಂದಾಗಿದೆ. ಚೀನಾ ಮತ್ತು ರಷ್ಯಾ ಒಂದುವೇಳೆ ಅಮೆರಿಕದ ಮೇಲೆ ಕ್ಷಿಪಣಿ ದಾಳಿ ನಡೆಸಿದರೆ, ಆಕಾಶದಲ್ಲಿಯೇ ತಡೆಯಲು, ಹೊಡೆದುರುಳಿಸಲು ಈ ಗೋಲ್ಡನ್ ಡೋಮ್ ಸಹಕರಿಸಲಿದೆ. ಬಾಹ್ಯಾಕಾಶದಿಂದ ಕ್ಷಿಪಣಿ ದಾಳಿ ನಡೆಸಿದರೂ, ಅಣ್ವಸ್ತ್ರವಾಗಲಿ, ಬಗೆಬಗೆಯ ಕ್ಷಿಪಣಿಗಳು, ಡ್ರೋನ್, ಯಾವುದೇ ಅಪ್ಪಳಿಸಿದರೂ ಇದು ತಡೆಯಲಿದೆ. ಇನ್ನು ಮೂರು ವರ್ಷದಲ್ಲಿ ಇದು ರೆಡಿಯಾಗಲಿದೆಯಂತೆ. ಈ ಗೋಲ್ಡನ್ ಡೋಮ್ ಟ್ರಂಪ್ ಅವರ ರಾಷ್ಟ್ರೀಯವಾದ ಆಧರಿತ ರಾಜಕಾರಣಕ್ಕೂ ಬಹುಶಃ ಪುಷ್ಟಿದಾಯಕ. ಕೆನಡಾಕ್ಕೂ ಬೇಕಾದರೂ ಕಡಿಮೆ ಖರ್ಚಿನಲ್ಲಿ ಮಾಡಿಕೊಡಲು ಟ್ರಂಪ್ ಸಿದ್ಧರಾಗಿದ್ದಾರೆ! ಎಂಥಾ ಬಿಸಿನೆಸ್ ಮ್ಯಾನ್ ಅಲ್ಲವೇ ಅಮೆರಿಕದ ಈಗಿನ ಅಧ್ಯಕ್ಷರು!

ಭಟ್ಟರ್ ಸ್ಕಾಚ್

- **ಅನಂತ ಹಾಸನ, ಬೆಂಗಳೂರು**
  ಭಟ್ರೇ, ಟಿವಿ ಧಾರಾವಾಹಿಗಳ ನಿರ್ದೇಶಕ ಟಿ.ಎನ್.ಸೀತಾರಾಂ ತಪ್ಪುಗಳನ್ನೇ ಮಾಡುವುದಿಲ್ಲವಾ?
- **ಅವರ ಧಾರಾವಾಹಿಗಳನ್ನು ನೋಡಿಯೂ ಈ ಪ್ರಶ್ನೆನಾ?!**

- **ಮಧುಕರ ಹೆಬ್ಬಾರ, (ಇಮೇಲ್ ಮೂಲಕ)**
  ಭಟ್ರೇ, ನಿಮ್ಮ ಅಭಿಮಾನಿಗಳಲ್ಲಿ ಹುಡುಗರು ಹೆಚ್ಚೋ, ಹುಡುಗಿಯರು ಹೆಚ್ಚೋ?
- **ಲಿಂಗ ಗಣತಿ ಮಾಡೋದೊಂದು ಬಾಕಿ ಇತ್ತು ನೋಡು!**

- **ಪ್ರಭಾಕರ ರೆಡ್ಡಿ, ವೈಯಾಲಿಕಾವಲ್**
  ಸರ್, ಕಟ್ಟಾ ಸುಬ್ರಮಣ್ಯ ನಾಯ್ಡು ಬಾಲ್ಯದಿಂದಲೂ ಉಣ್ಣೆಟೋಪಿ ಧರಿಸಲು ಕಾರಣವೇನು?
- **'ಇದು ನನ್ನ ಜನ್ಮಸಿದ್ಧ ಲುಕ್ಕು' ಎಂದು ಅವರು ಭಾವಿಸಿದ್ದಾರಂತೆ!**

- **ರಾಜು ಬೆಟ್ಟಹಳ್ಳಿ, ಮಂಡ್ಯ**
  ಸರ್, ದೇವರನ್ನು ನೆನಪಿಸಿಕೊಂಡು ಚಹಾ ಕುಡಿಯಬೇಕು ಅಂತಾನಲ್ಲ?
- **ಹೂಂ.. ನಾನು ಕಣ್ಣನ್ 'ದೇವ'ನ್ ನೆನಪಿಸಿಯೇ ಕುಡಿಯೋದು!**

- **ಜೆ.ನಂದಕುಮಾರಿ, (ಇಮೇಲ್ ಮೂಲಕ)**
  ಭಟ್ರೇ, ಪರಮ ಆಲಸಿಯಾದ ಅವನನ್ನು ಯಾವ ಗ್ಯಾಜೆಟ್ಟಿಗೆ ಹೋಲಿಸಲಿ?
- **ಸದಾ ಡೆಡ್ ಆಗಿರುವ ಲ್ಯಾಂಡ್‌ಲೈನ್‌ಗೆ!**

- **ಕಿಶನ್ ಹೆಣ್ಣೂರು, (ಇಮೇಲ್ ಮೂಲಕ)**
  ಭಟ್ರೇ, 'ಫ್ಯಾಟ್ ಈಸ್ ಬ್ಯೂಟಿಫುಲ್' ಅಂತ ಇಲ್ಲೊಬ್ಬ ಹೇಳ್ತಾನಲ್ಲ?
- **ಯಾವನೋ ರಕ್ಷಿತಾ ಅಭಿಮಾನಿ ಇರಬೇಕು!**

- **ಭಾಗೀರಥಿ ಶರ್ಮ, ಶಿವಮೊಗ್ಗ**
  ಭಟ್ರೇ, 'ಹೆಣ್ಣು ಸಂಸಾರದ ಕಣ್ಣು' ಅಂತಾರಲ್ಲ, ಹಾಗಾದ್ರೆ ಗಂಡು?
- **ಲಕ್ಷಣವಿಲ್ಲದ ಕರುಣಾನಿಧಿ ಕಪ್ಪು ಕನ್ನಡಕ!**

- **ನಂಜೂರು ಹೇಮಂತ, ಮೈಸೂರು**
  ಭಟ್ರೇ, ಯಾವತ್ತೂ ಡೈ ಮಾಡುವವರು ಡೈ ಮಾಡದಿದ್ದರೆ ಹೇಗೆ ಕಾಣುತ್ತಾರೆ?
- **ಥೇಟು ಶ್ರೀ ಶ್ರೀ ರವಿಶಂಕರ್ ಥರ!**

- **ಶಶಿಧರ ಭಟ್, ಸಿದ್ದಾಪುರ**
  ಭಟ್ರೇ, ನನ್ನ ಸ್ನೇಹಿತ ಇಲ್ಲಿ ತನಕ ಒಂದೂ ಸುಳ್ಳನ್ನೇ ಹೇಳಿಲ್ಲವಲ್ಲ?
- **ಪಕ್ಕದಲ್ಲಿ ನೀನಿದ್ದರೆ ಅವನಿಗೆ ಆ ಪ್ರಸಂಗವೇ ಬರೊಲ್ಲ ಬಿಡು**

- **ಆದರ್ಶ ಶ್ರೀಕಾಂತ್, (ಇಮೇಲ್ ಮೂಲಕ)**
  ಭಟ್ರೇ, ನಾನೊಬ್ಬ ರಿಯಲ್ ಎಸ್ಟೇಟ್ ವ್ಯಾಪಾರಿ, ನನ್ನ ಹೆಂಡತಿಗೆ ಯಾವ ಸರ್ಪ್ರೈಸ್ ಕೊಡಲಿ?
- **ತಾಜ್‌ಮಹಲ್ ಪಕ್ಕದಲ್ಲಿ ಒಂದು ಸೈಟ್ ಗಿಫ್ಟ್ ಮಾಡಿ ನೋಡಿ!**

- **ರಾಜು ಪತ್ತಾರ, ಹುಬ್ಬಳ್ಳಿ**
  ಸರ್, ಪಕ್ಷಕ್ಕೆ ಸೇರಿಸಿಕೊಳ್ಳುವಾಗ ಪಟಾಕಿ ಸುಡ್ತಾರೆ, ಉಚ್ಚಾಟಿಸುವಾಗ?
- **ಟೈರ್ ಸುಡ್ತಾರೆ!**

ಕಾಡಿನ ನಡುವೆ ಕಟ್ಟಿಕೊಂಡ ಬದುಕು!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಹಳ್ಳಿಗಳಲ್ಲಿನ ಬದುಕು, ದಿನಚರಿ ಶ್ರೇಷ್ಠ ಎಂಬ ಮಾತಿದೆ. ಅಲ್ಲಿನ ಬದುಕಿನಲ್ಲಿ ದೊರಕುವ ಅನುಭವ ವೈವಿಧ್ಯ, ಆಪ್ತ ಭಾವವು ಇಂಥ ಮಾತಿಗೆ ಮೂಲ. ಈತನಕ ಹಲವು ಹಳ್ಳಿಗಳನ್ನು ಕಂಡಿರುವೆನಾದರೂ, ಕುಚ್ಚೂರು ಮತ್ತು ಕಬ್ಬಿನಾಲೆ ಎಂಬ ಹಳ್ಳಿಗಳು ನನ್ನ ಮನ ಸೆಳೆದ ಪರಿ ನಿಜಕ್ಕೂ ಅನನ್ಯ. ನಾನು ಕುಚ್ಚೂರಿಗೆ ಮೊದಲ ಬಾರಿ ಹೋಗಿದ್ದು ನಾಲ್ಕನೆಯ ತರಗತಿಯಲ್ಲಿದ್ದಾಗ. ಅಲ್ಲಿಗೆ ಕರೆದೊಯ್ದವರು ನಮ್ಮ ಅಮ್ಮಮ್ಮ. ಕರ್ನಾಟಕದ ಅತಿ ಸುಂದರ ಸ್ಥಳಗಳಲ್ಲಿ ಒಂದು ಎನ್ನಬಹುದಾದ ಕಬ್ಬಿನಾಲೆ ಗ್ರಾಮದ ತುತ್ತತುದಿಯಲ್ಲಿರುವ ಜನವಸತಿಯೇ ಕುಚ್ಚೂರು. ಸುತ್ತಲೂ ಕಾಡು, ಬೆಟ್ಟ, ಪರ್ವತಗಳು, ಸದಾ ಹರಿಯುವ ನದಿತೊರೆಗಳು, ಅಲ್ಲಲ್ಲಿ ಅಡಿಕೆ ತೋಟ; ಸಮುದ್ರ ಮಟ್ಟದಿಂದ ಸುಮಾರು 2000 ಅಡಿ ಎತ್ತರದಲ್ಲಿರುವ ಕುಚ್ಚೂರು, ಪ್ರಕೃತಿಮಾತೆಯ ಪುಟ್ಟಕೂಸು ಎನ್ನಬಹುದಾದ ಸುಂದರ ತಾಣ.

ಕುಚ್ಚೂರು ಎಂಬಲ್ಲಿ ನಮ್ಮ ಬಂಧುಗಳ ಮನೆಯಿದೆ. ಆ ಮನೆಯ ಎದುರಿನಲ್ಲೇ ಒಂದು ಗದ್ದೆ. ಆ ಗದ್ದೆಯ ತುದಿಯಲ್ಲಿ ನಿಂತರೆ, ಕೆಳಗೆ ಪ್ರಪಾತ, ಅದರಾಚೆ ದಟ್ಟ ಕಾಡು ತುಂಬಿದ ಕಣಿವೆ. ಎಡಭಾಗದಲ್ಲಿ ಮೇಲೇರಿ ನಿಂತ 'ಸುಳಿಗಲ್ ಬರೆ' ಎಂಬ ಹೆಸರಿನ ಮಲೆ. ಕೆಳಭಾಗದಲ್ಲಿ ಹರಿಯುತ್ತಿರುವ ಪುಟ್ಟ ನದಿಯ ನೀರನಿ ಮೊರತ. ಆ ಗದ್ದೆಯ ತುದಿಯಲ್ಲಿ ನಿಂತು ಸೂರ್ಯಾಸ್ತವನ್ನು ನೋಡುವುದೇ ಒಂದು ದೃಶ್ಯಕಾವ್ಯ ಸವಿದ ಅನುಭವ. ಸುತ್ತಲೂ ಹರಡಿರುವ ಹಸಿರು ತುಂಬಿದ ಪರ್ವತಗಳು, ಕಣಿವೆಗಳು, ಅಡಿಗೆ ತೋಟಗಳು; ಅವುಗಳ ನಡುವಿನಿಂದ ಕಾಣುವ ಸೂರ್ಯಾಸ್ತದ ಸೊಬಗನ್ನು ಅಕ್ಷರಗಳಲ್ಲಿ ಬಣ್ಣಿಸುವುದು ಕಷ್ಟ. ಕೆಂಬಣ್ಣದ ಸೂರ್ಯನು ದೂರದ ಸಮುದ್ರದಲ್ಲಿ ಮುಳುಗುವಾಗ, ಇಡೀ ಜಗತ್ತನ್ನೇ ಕೆಂಬಣ್ಣದಲ್ಲಿ ಮುಳುಗಿಸಿಬಿಡುತ್ತಾನೆ. ಹಸಿರನ್ನೇ ಒಡಲಲ್ಲಿ ತುಂಬಿಕೊಂಡಿರುವ ಕುಚ್ಚೂರು, ಆ ಸಂಜೆ ಹೊತ್ತಿನ ಕೆಂಬಣ್ಣದ ಲೋಕದಲ್ಲಿ, ಬೇರೊಂದೇ ವರ್ಣಛಾಯೆಯಲ್ಲಿ ಮಿಂದೇಳುತ್ತದೆ, ಮನದಲ್ಲಿ ಕಾವ್ಯಾನುಭವವನ್ನೇ ಮೂಡಿಸುತ್ತದೆ. ಕೊನೆಯಲ್ಲಿ ಸೂರ್ಯ ಮರೆಯಾದಾಗ, ಆ ಸುತ್ತಲಿನ ಹಸುರಿನ ಲೋಕವು ನಿಶಾಕತ್ತಲಿನಲ್ಲಿ ನಿಧಾನವಾಗಿ ಅದೃಶ್ಯವಾಗುವಾಗ, ನೋಡುವವರ ಮನಸ್ಸಿನಲ್ಲಿ ಒಂದು ತೆರನ ವಿಷಾದ ತುಂಬಿದ ಅನುಭವ, ಆ ವಿಷಾದದಲ್ಲೂ ಸೂರ್ಯಾಸ್ತದ ಅದ್ಭುತ ನೋಟವನ್ನು ಕಣ್ತುಂಬಿಕೊಂಡ ತೃಪ್ತಭಾವ.

ಕುಚ್ಚೂರು ಮನೆಗೆ ಆ ನಂತರ ನಾನು ಹಲವು ಬಾರಿ ಹೋಗಿದ್ದೆನಾದರೂ, ನಾಲ್ಕನೆಯ ತರಗತಿಯಲ್ಲಿದ್ದಾಗ ನಡೆದ ಆ ಮೊದಲ ಭೇಟಿ ನಿಜಕ್ಕೂ ವಿಶೇಷ. ಹಲವು ಕೊಠಡಿಗಳಿದ್ದ, ಎರಡು ಮಹಡಿಗಳಿದ್ದ ಕುಚ್ಚೂರು ಮನೆಯಲ್ಲಿ 1980ರ ದಶಕದ ತನಕ ಸುಮಾರು 100ರಿಂದ 150 ಜನರು ವಾಸಿಸುತ್ತಿದ್ದರು! ಅಲ್ಲೊಂದು ಅವಿಭಕ್ತ ಕುಟುಂಬವು ಹಲವು ತಲೆಮಾರುಗಳಿಂದ ಬದುಕನ್ನು ಕಟ್ಟಿಕೊಂಡಿತ್ತು. ಆ ಮನೆಯಲ್ಲಿದ್ದ ಮಕ್ಕಳ ಸಂಖ್ಯೆಯೇ ಸುಮಾರು 30! ವಿಶೇಷವೆಂದರೆ, ಆ ಮನೆಯ ಒಡೆತನದಲ್ಲಿ ಎಂಬಂತೆ ಒಂದು ಸರಕಾರಿ ಶಾಲೆಯಿತ್ತು! ಮನೆಯಿಂದ ಅನತಿ ದೂರದಲ್ಲಿ, ಒಂದು ತೋಟದಿಂದಾಚೆ ಶಾಲಾ ಕಟ್ಟಡ. ಆ ಶಾಲೆಗೆ ಉದ್ಯೋಗ ಅರಸಿ ಬರುವ ಉಪಾಧ್ಯಾಯರಿಗೆ ಕುಚ್ಚೂರು ಮನೆಯಲ್ಲಿ ಒಂದು ಕೊಠಡಿ ಮೀಸಲು. ಅದು ಏಕೋಪಾಧ್ಯಾಯ ಶಾಲೆ. ಸಾಮಾನ್ಯವಾಗಿ ದೂರದ ಬಯಲುಸೀಮೆಯಿಂದ ಬರುವ ಅಧ್ಯಾಪಕರು, ಕುಚ್ಚೂರು ಮನೆಯವರು ನೀಡಿದ ಕೊಠಡಿಯಲ್ಲಿ ವಾಸಿಸಿ, ಅವರ ಮನೆಯಲ್ಲೇ ಊಟ ತಿಂಡಿ ಮಾಡುತ್ತಿದ್ದರು; ಅದು ಅನಿವಾರ್ಯ.

ಏಕೆಂದರೆ, ಕುಚ್ಚೂರು ಮನೆಯ ಭೌಗೋಳಿಕ ಸನ್ನಿವೇಶ ಹಾಗಿತ್ತು! ಉಡುಪಿ ಜಿಲ್ಲೆಯ ಹೆಬ್ರಿಯಿಂದ ಸುಮಾರು 8 ಕಿ.ಮೀ. ದೂರದಲ್ಲಿದ್ದ ಅಲ್ಲಿಗೆ ನಡೆದುಕೊಂಡೇ ಬರುವ ಅನಿವಾರ್ಯತೆ. ಕಾಡಿನ ನಡುವೆ ಸಾಗುವ ಕಚ್ಚಾ ರಸ್ತೆಯಲ್ಲಿ ಸುಮಾರು ಎರಡು ಗಂಟೆಯ ನಡಿಗೆ! ಆ ಮಹಾ ಕುಟುಂಬದಲ್ಲಿ ನಡೆದ ಒಂದು ಮದುವೆಗೆ, ನಮ್ಮ ಅಮ್ಮಮ್ಮ ಕರೆದುಕೊಂಡು ಹೊರಟಿದ್ದರು. ಹೆಬ್ರಿ ಸನಿಹ ಬಸ್ ಇಳಿದು, ದಟ್ಟ ಕಾಡಿನ ನಡುವೆ ಸಾಗಿದ್ದ ಕಲ್ಲುತುಂಬಿದ ರಸ್ತೆಯಲ್ಲಿ ನಡೆಯ ತೊಡಗಿದೆವು. ಆ ಸುತ್ತಲಿನ ಎಲ್ಲರಿಗೂ ನಡಿಗೆಯೇ ಪ್ರಧಾನ. ಎದುರಿಗೆ ಸಿಕ್ಕಿದವರೆಲ್ಲರೂ, ಪರಿಚಯ ಇರಲಿ ಬಿಡಲಿ, 'ದೂರ ಹೊರಟಿದ್ದು?' ಎಂದು ನಸುನಗುತ್ತಾ ವಿಚಾರಿಸುತ್ತಿದ್ದರು. ಕುಚ್ಚೂರು ಮನೆಗೆ ಎಂದಾಕ್ಷಣ, ಯಾರ ಕಡೆಯ ಬಂಧುಗಳು ಎಂದು ಗುರುತಿಸಿ, ಮಾತನಾಡಿಸಿ ಮುಂದೆ ಹೋಗುತ್ತಿದ್ದರು. ಎಲ್ಲರಿಗೂ ಎಲ್ಲರೂ ಪರಿಚಯವಿರುವ ಗ್ರಾಮೀಣ ಪ್ರದೇಶ ಕುಚ್ಚೂರು.

ನಡುದಾರಿಯಲ್ಲಿ ನನಗೆ ಸುಸ್ತು; ದಾರಿಯ ಪಕ್ಕದಲ್ಲಿ ಪುಟ್ಟ ಹೋಟೆಲ್. ಅಲ್ಲಿ ಕಾರದ ಕಡ್ಡಿ ಕೊಡಿಸಿ, ಪುಸಲಾಯಿಸಿ ನಡೆಸಿಕೊಂಡು ಹೊರಟರು ನಮ್ಮ ಅಮ್ಮಮ್ಮ. ಆ ಹೋಟೆಲ್‌ನಲ್ಲಿ ಪುಟ್ಟ ಪಂಜರ; ಅಲ್ಲೊಂದು ಗಿಣಿ ಸಾಕಿದ್ದರು! ಕಬ್ಬಿನಾಲೆಯುದ್ದಕ್ಕೂ ಸಾಗುವ ಆ ರಸ್ತೆಯಲ್ಲಿ, ದಟ್ಟವಾಗಿ ಬೆಳೆದಿದ್ದ ಮರಗಳ ನೆರಳಿನಲ್ಲಿ ನಡೆದಿತ್ತು ನಮ್ಮ ನಡಿಗೆ. ಆ ಆರೆಂಟು ಕಿ.ಮೀ. ದೂರದ ಹಾದಿಯುದ್ದಕ್ಕೂ ಅಲ್ಲಲ್ಲಿ ಸಾಕಷ್ಟು ಮನೆಗಳಿದ್ದವು; ಪ್ರತಿ ಮನೆಗೆ ಒಂದು ಹೆಸರಿತ್ತೋ ಎಂಬಷ್ಟು ಸ್ಥಳನಾಮ ವೈವಿಧ್ಯ! ಪೆರ್ಲ, ಗುಬ್ಬಿಮಾರು, ಕಜನೆ, ಕೊರ್ತಬೈಲು, ಕೆಪ್ಪನ ಮಕ್ಕಿ, ಕೆಳ ಮಠ, ಮೇಲ್ಮಠ, ಕೊಂಕಣರ ಬೆಟ್ಟು, ಬಾಯರಬೆಟ್ಟು, ಜಾರನಬೆಟ್ಟು, ಕಾಜಗಲ್ಲು- ಈ ರೀತಿಯ ಹೆಸರುಗಳು. ಕೆಲವು ಕಡೆ ಒಂದು ಮನೆಗೆಂದೇ ಒಂದು ಹೆಸರು!

ನಮ್ಮ ದಾರಿಗಡ್ಡಲಾಗಿ ಒಂದು ಹೊಳೆ ಬಂತು; ಕಲ್ಲುಗಳ ನಡುವೆ ರಭಸದಿಂದ ಹರಿಯುವ, ನೊರೆಯುಕ್ಕುವ ನೀರು. ಆ ಹೊಳೆಯನ್ನು ದಾಟಲು, ಸುಮಾರು 80 ಅಡಿ ಉದ್ದ ಸೇತುವೆ-ಅದನ್ನು ನಿರ್ಮಿಸಿದ್ದು ಬಿಳಲು, ಬೆತ್ತ ಮತ್ತು ಮರದ ತುಂಡುಗಳನ್ನು ಬಳಸಿ! ಎರಡು ಬೃಹದಾಕಾರದ ಮರಗಳನ್ನು ಆಧರಿಸಿ, ಬಿಳಲುಗಳನ್ನು ಹೆಣೆದು ಮಾಡಿದ ಆ ಸೇತುವೆಯ ಮೇಲೆ ನಡೆಯುತ್ತಾ ಹೋದರೆ, ನಡುದಾರಿಯಲ್ಲಿ ತೂಗಾಡುತ್ತದೆ! ಮೇಘಾಲಯದಲ್ಲಿ ಎಲ್ಲೋ ಕೆಲವು ಕಡೆ ತೂಗಾಡುವ ಬಿಳಲು ಸೇತುವೆ ಇನ್ನೂ ಇವೆಯಂತೆ; ಅಂಥದ್ದೇ ಬಿಳಲು ಸೇತುವೆ ಕಬ್ಬಿನಾಲೆಯಲ್ಲಿ ಅಂದು ಸಾಮಾನ್ಯ ಎನಿಸಿತ್ತು! ಆ ಬಿಳಲಿನ ಸೇತುವೆಯನ್ನು ದಾಟುವಾಗ, ನಮ್ಮ ಅಮ್ಮಮ್ಮ ಕೈ ಹಿಡಿದಿದ್ದರೂ, ಮಧ್ಯ ಬಂದಾಗ, ಕೆಳಗೆ ಹರಿವ ರಭಸವಾದ ನೀರನ್ನು ಕಂಡು ಮತ್ತು ಸೇತುವೆ ತೂಗಾಡಿದ ಭರಕ್ಕೆ ನನಗೆ ನಿಜಕ್ಕೂ ಭಯವಾಯಿತು.

ಕುಚ್ಚೂರು ಮನೆಯನ್ನು ತಲುಪಿದಾಗ, ಸಣ್ಣ ಜಾತ್ರೆಯ ಮಧ್ಯೆ ಬಂದು ನಿಂತಂತಾಯಿತು. ಮರುದಿನ ನಡೆಯಲಿರುವ ಮದುವೆಯಲ್ಲಿ ಪಾಲ್ಗೊಳ್ಳಲೆಂದು ದೂರದೂರಿನಿಂದ ಬಂದಿದ್ದ ಬಂಧುಗಳು, ಬಂಧುಗಳ ಬಂಧುಗಳು (ನಮ್ಮಂಥವರು), ಅವರ ಮಕ್ಕಳು ಎಲ್ಲಾ ಅತ್ತಿತ್ತ ಓಡಾಡುತ್ತಿದ್ದರು. ಮರುದಿನದ ಮದುವೆಗಾಗಿ ತೋರಣ ಕಟ್ಟುವವರು ಮಕ್ಕಳನ್ನು ಒಡಗೂಡಿ, ಸಂಭ್ರಮದಿಂದ ಮಾತನಾಡುತ್ತಾ ಅತ್ತಿತ್ತ ಓಡಾಡುತ್ತಿದ್ದರು. ಆ ರಾತ್ರಿ ಅಲ್ಲಿ ಉರಿಸಿದ್ದ ಗ್ಯಾಸ್ ಲೈಟ್‌ನ ಬೆಳಕಿನ ಪ್ರಖರತೆ ಕಂಡು ಬೆರಗಾದೆ; ಗೊಸ್ ಎಂದು ಸದ್ದು ಮಾಡುತ್ತಿದ್ದ, ಮ್ಯಾಂಟಲ್ ಬಳಸಿ ಬೆಳಕು ನೀಡುತ್ತಿದ್ದ ಆ ಸೀಮೆಎಣ್ಣೆ ಆಧಾರಿತ ಸಾಧನವನ್ನು ಅದೇ ಮೊದಲು ಕಂಡಿದ್ದೆ! ಮದುವೆಗೆಂದು ಹೋಗಿದ್ದ ನಾವು ಮೂರು ದಿನ ಅಲ್ಲೇ ಠಿಕಾಣಿ ಹೂಡಿ, ಮಲೆನಾಡಿನ ನಡುವಿನ ಬದುಕಿನ ಒಂದು ಝಲಕನ್ನು ಅನುಭವಿಸಿದೆವು.

ಜಿಗಣೆ, ಇಂಬಳ, ಉಂಬುಳು ಎಂದೆಲ್ಲಾ ಕರೆಸಿಕೊಳ್ಳುವ, ಲೋಳೆ ದೇಹದ, ಕಪ್ಪನೆಯ ಪುಟ್ಟ ಜೀವಿಯನ್ನು ನಾನು ಮೊದಲು ಕಂಡದ್ದು ಇಲ್ಲೇ! ಕುಚ್ಚೂರು ಮನೆಯ ಎದುರಿನಲ್ಲೇ, ತುಸು ತಗ್ಗಿನ ಇಳಿಜಾರು ಜಾಗದಲ್ಲಿ ಅಡಿಕೆ ತೋಟವಿದೆ; ಅದರ ನಡುವೆ ಪುಟ್ಟ ತೋಡು ಹರಿಯುತ್ತದೆ; ಅಲ್ಲಿ ಸದಾ ಹರಿಯುವ ನೀರು. ಅಲ್ಲೆಲ್ಲಾ ಏಲಕ್ಕಿ ಗಿಡಗಳು ಪೊದೆಗಳಂತೆ ಬೆಳೆದಿದ್ದವು. ಜತೆಗೆ, ಆ ತಂಪು ಜಾಗದಲ್ಲಿ, ಸುರುಳಿ ಹೂವಿನ ಗಿಡಗಳಿದ್ದವು. ತೀಕ್ಷ್ಣ ಸುಗಂಧ ಹೊಂದಿದ್ದ ಬಿಳಿ ಬಣ್ಣದ ಸುರುಳಿ ಹೂವನ್ನು ಕೊಯ್ಯಲೆಂದು, ಕುಚ್ಚೂರಿನ ಬಾಲಕರ ಜತೆ ನಾನೂ ಹೊರಟೆ. ಸದಾ ತೇವ ಇರುವ ತೋಡಿನ ಬಳಿ, ಒಂದು ಇಂಬಳ ನನ್ನ ಕಾಲನ್ನು ಕಚ್ಚಿತು! 'ಅಯ್ಯೋ ಇಂಬಳ, ಕಿತ್ತು ಬಿಸಾಕು' ಎಂದು ಆ ಮನೆಯ ಹುಡುಗನೊಬ್ಬ ಹೇಳಿದ. ಬೆರಳಿನಲ್ಲಿ ಹಿಡಿದರೆ, ಜಾರಿ ಜಾರಿ ಹೋಗುವ ಇಂಬಳವನ್ನು ಕೀಳಲು ನನ್ನಿಂದ ಹೇಗೆ ತಾನೆ ಸಾಧ್ಯ? ಜತೆಗೆ, ಲೋಳೆ ದೇಹದ ಅದನ್ನು ಬೆರಳಿನಿಂದ ಮುಟ್ಟುವುದೇ ಒಂದು ಸಾಹಸ! ಪ್ರತಿದಿನ ಎಂಬಂತೆ ಇಂಬಳವನ್ನು ನೋಡಿದ್ದ, ಅದರೊಂದು ಸಹಬಾಳ್ವೆ ನಡೆಸುತ್ತಿದ್ದ ಆ ಮನೆಯ ಹುಡುಗನೇ ಇಂಬಳವನ್ನು ನಾಜೂಕಿನಂದ ಕಿತ್ತೆಸೆದ. ದೂರ ಹಾರಿ ಬಿದ್ದ ಅದನ್ನು ಕಂಡು, ಎಲ್ಲಾ ಮಕ್ಕಳೂ ನಕ್ಕದ್ದೇ ನಕ್ಕದ್ದು. ಸಣ್ಣ ಸಣ್ಣ ವಿಷಯಕ್ಕೂ ನಕ್ಕು ಸಂತಸದಿಂದಿರುತ್ತಿದ್ದರು, ಕುಚ್ಚೂರು ಮನೆಯ ಮಕ್ಕಳು!

100ರಿಂದ 150 ಜನ ವಾಸವಿದ್ದ ಆ ಮನೆಯ ದಿನಚರಿ ಹೇಗಿತ್ತು? ಅದೊಂದು ಪ್ರತ್ಯೇಕ ಗ್ರಾಮವಿದ್ದಂತೆ. ಬೆಳಗಿನ ತಿಂಡಿಗೆ ದೋಸೆ ಮಾಡಿದರೆ, ಎರಡು ದೋಸೆ ಕಲ್ಲುಗಳನ್ನಿಟ್ಟುಕೊಂಡು, ಸೌದೆ ಒಲೆಯ ಮುಂದೆ ಇಬ್ಬರು ಮಹಿಳೆಯರು ಆಸೀನರಾಗುತ್ತಿದ್ದರು. ಎಲ್ಲರಿಗೂ ದೋಸೆ ಮಾಡಿಕೊಡುವುದೇ ಅವರ ಕೆಲಸ! ಮೊದಲಿಗೆ ಮಕ್ಕಳ ಸಾಲು; ಅವರದ್ದು ಮುಗಿದ ನಂತರ ದೊಡ್ಡವರಿಗೆ. ಮನೆಯವರೆಲ್ಲರೂ ಮಧ್ಯಾಹ್ನದ ಹೊತ್ತಿನಲ್ಲಿ ಸಾಲಾಗಿ ಊಟಕ್ಕೆ ಕುಳಿತಾಗ, ಊಟ ಬಡಿಸಲು ಇಬ್ಬರು ಬೇಕು! ಆ ಮನೆಯಲ್ಲೇ ಒಂದು ಪುಟ್ಟ ದೇಗುಲವಿದೆ; ಪ್ರತಿ ವರ್ಷ ನವರಾತ್ರಿಯಲ್ಲಿ ಸಂಭ್ರಮದ ಆಚರಣೆ ನಡೆಯುತ್ತದೆ. ಇಂದಿಗೂ ಕುಚ್ಚೂರು ಮನೆಯಲ್ಲಿನ ದೇಗುಲದ ನವರಾತ್ರಿ ಆಚರಣೆ ಎಂದರೆ ವಿಶೇಷ ಸಂಭ್ರಮ.

ಕುಚ್ಚೂರು ಮನೆಯ ಅನತಿ ದೂರದಲ್ಲಿತ್ತು ಒಂದು 'ದೊಂಬೆ'. ದಪ್ಪನೆಯ ಅಡಿಕೆ ಮರದ ಕಾಂಡವನ್ನು ಸೀಳಿ, ನೀರು ಹರಿದು ಹೋಗಲು ಅನುಕೂಲವಾಗುವಂತೆ ಚೊಕ್ಕಡ ಮಾಡಿದ ಕಾಂಡವೇ ದೊಂಬೆ. ಅಂಥ ದೊಂಬೆಯನ್ನು ಎತ್ತರದ ಒಂದು ನೀರಿನ ಒರತೆಗೆ ಜೋಡಿಸಿ, 30 ಅಡಿ ನೀರು ನೆಗೆಯುವಂತೆ ಮಾಡಿದ್ದರು. ನೀರು ಬೀಳುವ ಜಾಗದಲ್ಲಿ ಕಲ್ಲಿನ ಚಪ್ಪಡಿ ಮತ್ತು ವಿಶಾಲವಾದ ಜಾಗ. ಸದಾ ನೀರು ಬೀಳುತ್ತಿದ್ದ ಆ ದೊಂಬೆಯ ಅಡಿ ನಿಂತೆ, ದಬದಬನೆ ತಲೆಯ ಮೇಲೆ ಸುರಿವ ಜಲಧಾರೆಯ ಸ್ನಾನ. ಪ್ರತಿದಿನ ಜಲಪಾತಕ್ಕೆ ತಲೆಯೊಡ್ಡುವ ಅವಕಾಶ ಆ ಮನೆಯ ಮಕ್ಕಳಿಗೆ, ದೊಡ್ಡವರಿಗೆ! ಆ ಪ್ರದೇಶದ ಸುತ್ತಲೂ ಹಲವು ಮೈಲುಗಳ ತನಕ ಕಾಡು, ಮಲೆಗಳೇ ಇದ್ದುದರಿಂದ, ಆ ನೀರಿನ ಧಾರೆ ಬೇಸಗೆಯಲ್ಲೂ ಬತ್ತುವುದಿಲ್ಲ. ವಿಶೇಷವೆಂದರೆ, ಕುಚ್ಚೂರು ಮನೆಯ ಅಡುಗೆ ಮನೆ, ಬಚ್ಚಲುಮನೆಗಳಲ್ಲೂ ಇಂಥದ್ದೇ ಪುಟ್ಟ ದೊಂಬೆಗಳಿವೆ! ಅಲ್ಲೆಲ್ಲಾ ಸದಾಕಾಲ, ದಿನದ ಇಪ್ಪತ್ತನಾಲ್ಕು ಗಂಟೆಯೂ ಸುರಿವ ನೀರು! ಕುಡಿಯಲು ಸಹ ನಿಸರ್ಗವೇ ನೀಡಿದ ನಿರಂತರ ನಲ್ಲಿ ನೀರು! ಆಧುನಿಕತೆಯು ನಿಧಾನವಾಗಿ ಕುಚ್ಚೂರಿಗೂ ಬಂದ ನಂತರ, ಅಡಿಕೆ ಮರದ ದೊಂಬೆಗಳ ಬದಲು, ಪ್ಲಾಸ್ಟಿಕ್ ಪೈಪುಗಳ ಮೂಲಕ ಈಗಲೂ ನೀರು ಬಂದು ಸುರಿಯುತ್ತದೆ, ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲ!

ಆ ನಂತರವೂ ಹಲವು ಬಾರಿ ಕಬ್ಬಿನಾಲೆ ಮತ್ತು ಕುಚ್ಚೂರಿಗೆ ಹೋಗಿದ್ದುಂಟು. ಆದರೆ ಮೊದಲ ಭೇಟಿಯ ಬೆರಗು ಇನ್ನೂ ಮಾಸಿಲ್ಲ. ನಂತರದ ದಶಕಗಳಲ್ಲಿ, ಕುಚ್ಚೂರು ಮನೆಯ ಅವಿಭಕ್ತ ಕುಟುಂಬವು, ಭಾಗವಾಯಿತು; ಜಮೀನು, ತೋಟ ಎಲ್ಲವೂ ಭಾಗವಾಗಿ, ಹೆಚ್ಚಿನವರು ಮೂಲಮನೆ ತೊರೆದು, ಸುತ್ತಮುತ್ತಲಿನ ಜಾಗಗಳಲ್ಲಿ ಪ್ರತ್ಯೇಕ ಮನೆ ಕಟ್ಟಿಕೊಂಡರು. ಎಲ್ಲಾ ಮನೆಗಳ ಸುತ್ತಲೂ ಮರಗಿಡಗಳು, ಹಳ್ಳ ತೊರೆಗಳು. ಒಂದು ಮನೆಯವರಂತೂ, ರಭಸದಿಂದ ಹರಿಯುವ ದೊಡ್ಡ ತೊರೆಯೊಂದರ ಮೇಲೆ, ಮರದ ಅಟ್ಟಣಿಕೆಗಳನ್ನು ಬಳಸಿ ಮನೆ ಕಟ್ಟಿಕೊಂಡಿದ್ದರು! ಕಾಡಿನ ನಡುವಿನ ಬದುಕು ಕಷ್ಟ; ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೈಲುಗಟ್ಟಲೆ ನಡೆಯಬೇಕು. ಆ ಮನೆಗೆಂದೇ ಇದ್ದ ಶಾಲೆಯು ಪ್ರಾಥಮಿಕ ಶಾಲೆ. ಆದ್ದರಿಂದ, ಹಲವರು ಪಟ್ಟಣಗಳತ್ತ ಸಾಗಿದರು.

ಪ್ರಾತಿನಿಧಿಕ ಚಿತ್ರ

ಇಪ್ಪತ್ತೊಂದನೆಯ ಶತಮಾನವು ಎಲ್ಲೆಡೆ ಬದಲಾವಣೆ ತಂದಿರುವಂತೆ, ಕಬ್ಬಿನಾಲೆ-ಕುಚ್ಚೂರಿನಲ್ಲೂ ಬದಲಾವಣೆಗಳನ್ನು ತಂದಿದೆ. ಈಗ ಬಸ್ ರಸ್ತೆಯಿದೆ; ಕಾರುಗಳು ಚಲಿಸಬಹುದಾದ ಟಾರು ರಸ್ತೆಯಿದೆ. ವಿದ್ಯೆ ಕಲಿತ ಹಲವರು ಕೆಲಸದ ನಿಮಿತ್ತ ಬೆಂಗಳೂರು, ಮಂಗಳೂರು, ಉಡುಪಿ ಮೊದಲಾದ ಪಟ್ಟಣಗಳನ್ನು ಸೇರಿದ್ದಾರೆ. ಹಲವರು ಅಲ್ಲೇ ನೆಲೆಸಿದ್ದಾರೆ. ಆ ಕಾಡಿನ ನಡುವೆ ಈಗ ಹೋಂ ಸ್ಟೇಗಳೂ ಆರಂಭವಾಗಿವೆ! ಪ್ರಕೃತಿಯ ಮಡಿಲಲ್ಲಿರುವ ಈ ಸುಂದರ ಗ್ರಾಮ ಇಂದಿಗೂ ಹಸುರಿನಿಂದ ತುಂಬಿದೆ. ಮತ್ತೊಮ್ಮೆ ಅಲ್ಲಿಗೆ ಹೋಗಿ ನಾಲ್ಕಾರು ದಿನ ತಂಗಬೇಕು ಎಂಬ ಆಸೆ ಮೂಡಿಸುತ್ತಿದೆ.

ವಸ್ತುಸ್ಥಿತಿ

ಗಣೇಶ್‌ಭಟ್ ವಾರಾಣಸಿ

ಗಂಗೆ ಇಂದು ಎಷ್ಟು ಪರಿಶುದ್ಧಳು?

ಭಾರತದಲ್ಲಿ ನೂರಾರು ನದಿಗಳು ಹರಿಯುತ್ತವೆಯಾದರೂ ಗಂಗಾ ನದಿಗೆ ಸಿಕ್ಕಿದ ಪ್ರಾಧಾನ್ಯ ಯಾವ ನದಿಗೂ ಸಿಕ್ಕಿಲ್ಲ. ಗಂಗೆ ಪಾವನ ನದಿಯೂ ಹೌದು, ಜೀವನದಿಯೂ ಹೌದು. ಗಂಗೆ ಹಾಗೂ ಗಂಗೆಯ ಉಪನದಿಗಳಾದ ಯಮುನಾ, ಗಂಡಕಿ, ಕೋಸಿ, ರಾಮ್ ಗಂಗಾ, ಗೋಮತಿ, ಮಹಾನಂದಾ ಮೊದಲಾದವುಗಳು ದೇಶದ 11 ರಾಜ್ಯಗಳಲ್ಲಿ ಪ್ರವಹಿಸುತ್ತವೆ. ದೇಶದ ಭೌಗೋಳಿಕ ಪ್ರದೇಶದ ಶೇ.26.3ರಷ್ಟು ಭಾಗವನ್ನು ಆವರಿಸಿರುವ ಗಂಗಾ ನದಿ ಹಾಗೂ ಅದರ ಉಪನದಿಗಳು ಸುಮಾರು 8.6 ಲಕ್ಷ ಚದರ ಕಿಲೋಮೀಟರ್‌ಗಳಷ್ಟು ಜಲಾನಯನ ಪ್ರದೇಶವನ್ನು ಹೊಂದಿವೆ. ದೇಶದ ಶೇ.43ರಷ್ಟು ಜನರು ಗಂಗಾ ನದಿಯ ನೀರನ್ನು ಆಶ್ರಯಿಸುತ್ತಿದ್ದಾರೆ ಎಂದರೆ ಈ ನದಿಯ ಸಾಮಾಜಿಕ ಹಾಗೂ ಆರ್ಥಿಕ ಮಹತ್ವವನ್ನು ಅರ್ಥೈಸಿಕೊಳ್ಳಬಹುದು. ದೇಶದ 60 ಕೋಟಿಗಿಂತಲೂ ಹೆಚ್ಚು ಜನರು ಗಂಗಾ ಜಲಾನಯನ ಪ್ರದೇಶದಲ್ಲಿ ಜೀವಿಸುತ್ತಿದ್ದಾರೆ. ದೆಹಲಿ, ಕೋಲ್ಕೊತಾ, ವಾರಾಣಸಿ, ಕಾನ್ಪುರ, ಲಖನೌ, ಪಟನಾ, ಆಗ್ರಾ, ಮೀರತ್ ಮೊದಲಾದ ಪಟ್ಟಣಗಳು ಗಂಗಾ ಜಲಾನಯನ ಪ್ರದೇಶದಲ್ಲಿ ತಲೆಯೆತ್ತಿವೆ. ಪುಣ್ಯನದಿ ಹಾಗೂ ಪ್ರಾಣನದಿಯಾಗಿರುವ ಗಂಗಾನದಿಯು ಕಾಲಾಂತರದಲ್ಲಿ ಪ್ರಪಂಚದ ಅತಿ ಕಲುಷಿತ ನದಿಯಾಗಿ ಬದಲಾದುದು ದೊಡ್ಡ ದುರಂತ.

ಯಮುನೆ ಹಾಗೂ ಗಂಗೆಯರ ತಟದಲ್ಲಿರುವ ಮಹಾನಗರಗಳ ಕೊಳಚೆ ನೀರು ನದಿಯ ಒಡಲನ್ನು ಸೇರುತ್ತಿದ್ದುದು, ಚರ್ಮ ಹದ ಮಾಡುವ ಕಾರ್ಖಾನೆಗಳ ತ್ಯಾಜ್ಯ ಹಾಗೂ ಕೈಗಾರಿಕೆಗಳ ರಾಸಾಯನಿಕಯುಕ್ತ ಅಪಾಯಕಾರಿ ತ್ಯಾಜ್ಯಗಳನ್ನು ನದಿಗೆ ಸುರಿಯಲಾಗುತಿದ್ದುದು, ಕಾಶಿ, ಪ್ರಯಾಗ ಮೊದಲಾದ ಸ್ಥಳಗಳಲ್ಲಿ ಅರೆಬೆಂದ ಶವಗಳನ್ನು ನದಿಯಲ್ಲಿ ವಿಸರ್ಜಿಸುತ್ತಿದ್ದುದು, ಪ್ರಾಣಿಗಳ ಶವಗಳನ್ನು ನದಿಗೆ ಎಸೆಯುತ್ತಿದ್ದುದು, ಜನರು ನದಿಯಲ್ಲಿಯೇ ಮಲಮೂತ್ರ ವಿಸರ್ಜನೆ ಮಾಡುತ್ತಿದ್ದುದು, ಜಲಾನಯನ ಪ್ರದೇಶಗಳಲ್ಲಿ ಕೃಷಿಕಾರ್ಯಗಳಿಗೆ ರಾಸಯನಿಕ ಗೊಬ್ಬರಗಳನ್ನು ಬಳಸುತ್ತಿದ್ದುದು ಮೊದಲಾದ ಕಾರಣಗಳಿಂದಾಗಿ ಗಂಗಾನದಿಯು ಮಲಿನವಾಗುತ್ತಲೇ ಹೋಯಿತು. ಗಂಗಾ ತೀರದ ಪ್ರದೇಶಗಳಲ್ಲಿ ಅರಣ್ಯ ನಾಶವಾಗಿ, ಸವೆತಕ್ಕೊಳಗಾದ ಮಣ್ಣು ನದಿಯನ್ನು ಸೇರಿ ನದಿಯಲ್ಲಿ ಹೂಳು ತುಂಬಲು ಕಾರಣವಾಗಿತ್ತು.

ರಾಜೀವ್ ಗಾಂಧಿಯವರು ಪ್ರಧಾನಿಯಾಗಿದ್ದಾಗ 1985ರಲ್ಲಿ 'ಗಂಗಾ ಆಕ್ಷನ್ ಪ್ಲಾನ್' (ಜಿಎಪಿ) ಹೆಸರಿನಲ್ಲಿ ಗಂಗಾ ನದಿಯನ್ನು ಶುದ್ಧಗೊಳಿಸುವ ಪ್ರಯತ್ನವು ನಡೆದಿತ್ತು. ಅಂದಿನ ಕಾಲದಲ್ಲಿ ಸುಮಾರು 900 ಕೋಟಿ ರುಪಾಯಿಗಳನ್ನು ಈ ಯೋಜನೆಗಾಗಿ ವ್ಯಯಿಸಲಾಗಿತ್ತಾದರೂ ಸರಿಯಾದ ಅಧ್ಯಯನ ಹಾಗೂ ಗುರಿಯಿಲ್ಲದೆ ಜಾರಿಗೊಳಿಸಿದ ಈ ಯೋಜನೆ ಯಾವುದೇ ಫಲವನ್ನು ಕೊಡದೆ ಆ ಮೊತ್ತವು ಪೋಲಾಗಿ ಹೋಯಿತು. 2014ರ ಲೋಕಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಘೋಷಿಸಿದ್ದಂತೆ ನರೇಂದ್ರ ಮೋದಿ ಸರಕಾರವು 2015ರಲ್ಲಿ 'ನಮಾಮಿ ಗಂಗೆ- ನ್ಯಾಷನಲ್ ಮಿಷನ್ ಫಾರ್ ಕ್ಲೀನ್ ಗಂಗಾ' ಯೋಜನೆಯನ್ನು ಆರಂಭಿಸಿತು. ನಮಾಮಿ ಗಂಗೆ ಯೋಜನೆಯು ಬಹಳ ವಿಸ್ತಾರವಾದುದು. ಗಂಗೆ ಹಾಗೂ ಅದರ ಉಪನದಿಗಳ ಪಾತ್ರದಲ್ಲಿರುವ ಉತ್ತರ ಭಾರತದ 11 ರಾಜ್ಯಗಳಲ್ಲಿ ಈ ಯೋಜನೆ ಜಾರಿಯಾಗುತ್ತಿದೆ. ಯೋಜನೆಯ ಮೊದಲ ಹಂತದ ಕೆಲಸಗಳಿಗೆ 20,000 ಕೋಟಿ ರುಪಾಯಿಗಳನ್ನು ಮೀಸಲಾಗಿಡಲಾಗಿದ್ದು 2ನೇ ಹಂತಲ್ಲಿ ಈ ಮೊತ್ತವನ್ನು 41,428.83 ಕೋಟಿ ರುಪಾಯಿಗಳಿಗೆ ಏರಿಸಲಾಯಿತು.

ಗಂಗಾ ತೀರದ ನಗರಗಳು ಹಾಗೂ ಪಟ್ಟಣಗಳಿಂದ ಹರಿದುಬರುವ ಕೊಳಚೆ ನೀರು ನದಿಯನ್ನು ಮಲಿನ ಮಾಡುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತಿತ್ತು. ಪ್ರತಿದಿನ ಗಂಗೆ, ಯಮುನೆ ಹಾಗೂ ಗಂಗೆಯ ಇತರ ಉಪನದಿಗಳನ್ನು ಸೇರುವ ಕೈಗಾರಿಕಾ ತ್ಯಾಜ್ಯ ಮತ್ತು ಕೊಳಚೆ ನೀರಿನ ಪ್ರಮಾಣವು 600ರಿಂದ 700 ಕೋಟಿ ಲೀಟರ್‌ಗಳು. ಕೊಳಚೆ ನೀರು ನದಿಯನ್ನು ಸೇರುವುದನ್ನು ತಡೆಯಲು 211 ಕೊಳಚೆ ನೀರು ಸಂಸ್ಕರಣಾ ಘಟಕಗಳನ್ನು(ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್- ಎಸ್‌ಟಿಪಿ) ನಿರ್ಮಿಸಲು ತೀರ್ಮಾನಿಸಲಾಯಿತು. ಇದಕ್ಕಾಗಿ ಮೀಸಲಿಟ್ಟ ಮೊತ್ತ 34,205 ಕೋಟಿ ರುಪಾಯಿಗಳು. ಇದುವರೆಗೆ 133 'ಎಸ್‌ಟಿಪಿ'ಗಳ ನಿರ್ಮಾಣ ಪೂರ್ಣಗೊಂಡಿದ್ದು, 55 'ಎಸ್‌ಟಿಪಿ'ಗಳು ನಿರ್ಮಾಣದ ಹಂತದಲ್ಲಿವೆ. 23 'ಎಸ್‌ಟಿಪಿ' ನಿರ್ಮಾಣ ಯೋಜನೆಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ. ಈಗಾಗಲೇ ಸರಿಸುಮಾರು 400 ಕೋಟಿ ಲೀಟರ್‌ಗಳಷ್ಟು ಕೊಳಚೆ ನೀರನ್ನು ಸಂಸ್ಕರಿಸಬಲ್ಲ 'ಎಸ್‌ಟಿಪಿ'ಗಳು ನಮಾಮಿ ಗಂಗೆ ಯೋಜನೆಯಡಿ ನಿರ್ಮಾಣವಾಗಿವೆ. ಏಷ್ಯಾದ ಅತಿ ದೊಡ್ಡ ತ್ಯಾಜ್ಯ ನೀರು ಸಂಸ್ಕರಣಾ ಘಟಕವಾದ ದೆಹಲಿಯ 'ಓಖ್ಲಾ ಎಸ್‌ಟಿಪಿ'ಯ ನಿರ್ಮಾಣ ಕಾರ್ಯವು ಈ ವರ್ಷದ ಎಪ್ರಿಲ್ ತಿಂಗಳಲ್ಲಿ ಪೂರ್ಣವಾಗಿದ್ದು ಅಲ್ಲಿ ದಿನವೊಂದಕ್ಕೆ 56.4 ಕೋಟಿ ಲೀಟರ್ ಮಲಿನ ನೀರನ್ನು ಸಂಸ್ಕರಿಸಲಾಗುತ್ತಿದೆ. ಇದರಿಂದಾಗಿ ಯಮುನಾ ನದಿಯ ಮಾಲಿನ್ಯದ ಮಟ್ಟವು ಗಣನೀಯವಾಗಿ ಕಡಿಮೆಯಾಗಲಿದೆ.

ಕಾನ್ಪುರದ ಚರ್ಮದ ಕಾರ್ಖಾನೆಗಳ ಮಲಿನ ತ್ಯಾಜ್ಯವನ್ನು ಒಳಗೊಂಡ ಸೀಸಮೌ ಕೊಳಚೆ ಕಾಲುವೆಯು ಪ್ರತಿ ದಿನ ಗಂಗಾ ನದಿಗೆ 14 ಕೋಟಿ ಲೀಟರ್‌ಗಳಷ್ಟು ಮಲಿನ ಜಲವನ್ನು ಸುರಿಯುತ್ತಿತ್ತು. ಈಗ ಸೀಸಮೌ ಕೊಳಚೆ ಕಾಲುವೆಯನ್ನು ಎಸ್‌ಟಿಪಿಗೆ ತಿರುಗಿಸಲಾಗಿದ್ದು 14 ಕೋಟಿ ಲೀಟರ್ ಕೊಳಚೆ ನೀರನ್ನು ಸಂಸ್ಕರಿಸಿ ನದಿಗೆ ಬಿಡಲಾಗುತ್ತಿದೆ. ಪ್ರಯಾಗ್‌ರಾಜ್‌ನಲ್ಲಿ 10 ಎಸ್‌ಟಿಪಿಗಳನ್ನು ನಿರ್ಮಿಸಲಾಗಿದ್ದು ಅವುಗಳು ಪ್ರತಿದಿನ 34 ಕೋಟಿ ಲೀಟರ್‌ಗಳಷ್ಟು ಕೊಳಚೆ ನೀರನ್ನು ಮರುಸಂಸ್ಕರಿಸುತ್ತಿವೆ. ಇನ್ನೂ 13 ಕೋಟಿ ಲೀಟರ್‌ಗಳಷ್ಟು ಮಲಿನ ನೀರನ್ನು ಸಂಸ್ಕರಿಸಬಲ್ಲ ಎಸ್‌ಟಿಪಿಗಳ ನಿರ್ಮಾಣವು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿದೆ. ವಾರಾಣಸಿಯಲ್ಲಿ ಪ್ರತಿದಿನ 12 ಕೋಟಿ ಲೀಟರ್‌ಗಳಷ್ಟು ತ್ಯಾಜ್ಯ ನೀರನ್ನು ಮರುಸಂಸ್ಕರಿಸಬಲ್ಲ 6ಕ್ಕೂ ಹೆಚ್ಚಿನ ಎಸ್‌ಟಿಪಿಗಳನ್ನು ನಿರ್ಮಿಸಲಾಗಿದೆ. ವಾರಾಣಸಿಯಲ್ಲಿ ಗಂಗೆಯನ್ನು ಸೇರುವ ಅಸ್ಸೀ ನದಿಯು ದೊಡ್ಡ ಪ್ರಮಾಣದಲ್ಲಿ ಕೈಗಾರಿಕಾ ತ್ಯಾಜ್ಯ ಹಾಗೂ ಕೊಳಚೆಯನ್ನು ಗಂಗೆಗೆ ಸೇರಿಸುತ್ತಿತ್ತು. ಗೊಯಿತಾ ಹಾಗೂ ರಮ್ನಾಗಳಲ್ಲಿ ನಿರ್ಮಿತವಾದ ಎಸ್‌ಟಿಪಿಗಳು ಅಸ್ಸೀ ನದಿಯನ್ನು ಶುದ್ಧಗೊಳಿಸುವ ಕೆಲಸವನ್ನು ಮಾಡುತ್ತಿವೆ. ಪಟನಾದಲ್ಲಿ 35 ಕೋಟಿ ಲೀಟರ್ ಸಾಮರ್ಥ್ಯದ ಎಸ್‌ಟಿಪಿಗಳು ಕಾರ್ಯನಿರ್ವಹಿಸುತ್ತಿವೆ. ಹರಿದ್ವಾರ, ಅಯೋಧ್ಯೆ, ಕೋಲ್ಕೊತಾ, ಫರೂಕಾಬಾದ್, ಬರೈಲಿ, ಲಖನೌ ಮೊದಲಾದ ನಗರಗಳಲ್ಲಿ ಕೊಳಚೆನೀರನ್ನು ಮರುಸಂಸ್ಕರಿಸುವ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಡಿಸೆಂಬರ್ 2026ರ ಒಳಗಾಗಿ ಎಲ್ಲಾ 211 ಎಸ್‌ಟಿಪಿಗಳ ನಿರ್ಮಾಣ ಕೆಲಸವನ್ನು ಪೂರ್ಣಗೊಳಿಸಿ ಗಂಗೆ ಹಾಗೂ ಅದರ ಉಪನದಿಗಳನ್ನು ಸೇರುವ 700 ಕೋಟಿ ಲೀಟರ್‌ಗಳಷ್ಟು ತ್ಯಾಜ್ಯ ನೀರನ್ನು ಶುದ್ಧೀಕರಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಕಲುಷಿತ ನೀರನ್ನು ಎಸ್‌ಟಿಪಿಗಳಿಗೆ ಹರಿಸಲು 5,250 ಕಿಲೋಮೀಟರ್‌ಗಿಂತಲೂ ಉದ್ದದ ನಾಲೆಗಳನ್ನು ನಿರ್ಮಿಸಲಾಗಿದೆ. ತ್ಯಾಜ್ಯ ನೀರಿಗೆ ಸೂಕ್ಷ್ಮ ಜೀವಾಣುಗಳನ್ನು ಸೇರಿಸಿ ನೀರಿನಲ್ಲಿರುವ ಅಪಾಯಕಾರಿ ಅಂಶಗಳನ್ನು ವಿಘಟಿಸಿ ಕಲುಷಿತ ನೀರಿನ ಅಪಾಯದ ಮಟ್ಟವನ್ನು ನಿವಾರಿಸುವ ಅತ್ಯಾಧುನಿಕ ಬಯೋರೆಮೆಡಿಯೇಷನ್ ಕೆಲಸಗಳು ಗಂಗಾ ನದಿಯುದ್ದಕ್ಕೂ ನಡೆಯುತ್ತಿದೆ.

ಮಹಾಕುಂಭಮೇಳದ ವೇಳೆ ಗಂಗೆಯ ನೀರಿನ ಗುಣಮಟ್ಟ ಚೆನ್ನಾಗಿಲ್ಲ ಎಂದು ನಡೆದ ಪ್ರಚಾರಗಳು ಸತ್ಯಕ್ಕೆ ದೂರಾದದ್ದು. ಈ ಬಗ್ಗೆ ಅಧ್ಯಯನ ನಡೆಸುತ್ತಿದ್ದ ವಿಜ್ಞಾನಿ ಡಾ. ಅಜಯ್ ಸೋನ್ಕರ್ ಅವರು ಗಂಗೆಯ ನೀರಿನಲ್ಲಿ ಫೇಕಲ್ ಕೋಲಿಫಾರ್ಮ್ ಬ್ಯಾಕ್ಟೀರಿಯಾದ ಮಟ್ಟವು ಗಣನೀಯ ಪ್ರಮಾಣದಲ್ಲಿ ಇಳಿದಿದೆ ಎಂಬುದನ್ನು ಸಾಬೀತುಪಡಿಸಿ ನೀರು ಸ್ನಾನಕ್ಕೆ ಯೋಗ್ಯವಾದುದು ಎಂದಿದ್ದರು. ಈಗ ಗಂಗಾ ತಟದ ಘಾಟ್‌ಗಳು ಶುಚಿಯಾಗಿವೆ, ಗಂಗಾ ನದಿಯಲ್ಲಿ ಶವಗಳು ತೇಲುತ್ತಿಲ್ಲ, ನದಿಗೆ ಕೊಳಚೆ ನೀರನ್ನು ಬಿಡಲಾಗುತ್ತಿಲ್ಲ, ಪವಿತ್ರ ಗಂಗಾನದಿಯನ್ನು ಪುನರುಜ್ಜೀವನಗೊಳಿಸುವ 'ನಮಾಮಿ ಗಂಗೆ' ಉಪಕ್ರಮವು ನೈಸರ್ಗಿಕ ಜಗತ್ತನ್ನು ಮರುಸ್ಥಾಪನೆಗೊಳಿಸುವ ವಿಶ್ವದ ಗಮನಾರ್ಹ 'ಟಾಪ್ 10' ಕೆಲಸಗಳಲ್ಲಿ ಒಂದಾಗಿದೆ ಎಂದು ವಿಶ್ವಸಂಸ್ಥೆಯೇ ಶ್ಲಾಘಿಸಿದೆ. ಬ್ರಿಟಿಷರ ಆಡಳಿತ ಕಾಲದಿಂದ ಮಲಿನೆಯಾದ ಗಂಗೆಯು 'ನಮಾಮಿ ಗಂಗೆ' ಯೋಜನೆಯ ಪರಿಣಾಮವಾಗಿ ಇಂದು ಹಿಂದೆಂದಿಗಿಂತಲೂ ಹೆಚ್ಚು ಶುಭ್ರವಾಗಿದ್ದಾಳೆ. 2026ರಲ್ಲಿ ನಮಾಮಿ ಗಂಗೆ ಯೋಜನೆಯು ಪೂರ್ಣವಾಗುವ ಹೊತ್ತಿಗೆ ಗಂಗೆ ಸಂಪೂರ್ಣವಾಗಿ ನಿರ್ಮಲವಾಗಲಿದ್ದಾಳೆ.

(ಲೇಖಕರು ಹವ್ಯಾಸಿ ಬರಹಗಾರರು)

ದೀರ್ಘಾಯಸ್ಸಿಗಿಂತ ಗುಣಮಟ್ಟದ ಬದುಕು ಮುಖ್ಯ

ಮನುಷ್ಯ ಹೆಚ್ಚೆಚ್ಚು ವರ್ಷಗಳ ಕಾಲ ಬದುಕಿದಷ್ಟೂ ಅವನು ಜಗತ್ತಿಗೆ ನೀಡುವ ಕೊಡುಗೆಗಳ ಬಗ್ಗೆ ಹೆಚ್ಚೆಚ್ಚು ಬದ್ಧತೆಯನ್ನು ಬೆಳೆಸಿಕೊಳ್ಳುತ್ತಾ ಹೋಗಬೇಕು. ಹೊಸತನ್ನು ಸೃಷ್ಟಿಸಲು ಸದಾ ಉತ್ಸುಕನಾಗಿರಬೇಕು. ಇಲ್ಲದಿದ್ದರೆ ಬದುಕಿನ ಉದ್ದೇಶವೇ ಅಪೂರ್ಣವಾಗುತ್ತದೆ. ಹಾಗಂತ ನಾನು ಮನಸಾ ನಂಬಿದ್ದೇನೆ.

ಸಂಗತ
ಡಾ.ವಿಜಯ್ ದರಡಾ
vveditoped@gmail.com

ನಾನೀಗ 75ಕ್ಕೆ ಕಾಲಿಟ್ಟಿದ್ದೇನೆ. ಗಣಿತದ ದೃಷ್ಟಿಯಲ್ಲಿ ನೋಡಿದರೆ ಇದೊಂದು ವಯಸ್ಸಿನ ಲೆಕ್ಕಾಚಾರ. ನನ್ನ ಕುಟುಂಬದವರು, ಹಿತೈಷಿಗಳು ಮತ್ತು ನನ್ನನ್ನು ಪ್ರೀತಿಸುವವರು ಬಹಳ ಸಂತೋಷದಿಂದ ಇದಕ್ಕೆ ಅಮೃತ ಮಹೋತ್ಸವ ಎಂದು ಕರೆಯುತ್ತಿದ್ದಾರೆ! 75ನೇ ಹುಟ್ಟುಹಬ್ಬಕ್ಕೆ ಅಸಂಖ್ಯ ಶುಭ ಸಂದೇಶಗಳು ಬಂದಿವೆ. ಸುಂದರ ಹಾರೈಕೆಗಳನ್ನು ನೋಡಿ ನನ್ನ ಹೃದಯ ತುಂಬಿದೆ. ಅವರೆಲ್ಲರಿಗೂ ಧನ್ಯವಾದ ಹೇಳಲು ಶಬ್ದಗಳು ಸಾಲವು. ನಿಮ್ಮೆಲ್ಲರ ಪ್ರೀತಿಗೆ ಇದೋ ತಲೆಬಾಗಿ ವಂದಿಸುತ್ತೇನೆ ಎಂದಷ್ಟೇ ಹೇಳಬಲ್ಲೆ!

ನನ್ನ ಬದುಕಿನ ಕಾಲಕೋಶದ ಕ್ಯಾನ್ವಾಸ್ ಮೇಲೆ ನಿಂತು ಹಿಂತಿರುಗಿ ನೋಡಿದರೆ ಯೌವನದಲ್ಲಿ ನಾನು ಹೊಲಿಯಲು ಆರಂಭಿಸಿದ ಸಂಬಂಧಗಳ ಪ್ರೀತಿಯ ತಂತುಗಳು ದೊಡ್ಡ ಪ್ರಮಾಣದಲ್ಲಿ ಇಂದು ಫಲ ನೀಡುತ್ತಿರುವುದು ಕಾಣಿಸುತ್ತದೆ. ಇಷ್ಟೂ ಕಾಲ ನಾನು ಇಡಿಯಾಗಿ ಬದುಕಿದ್ದೇನೆ. ನನ್ನ ನೆಲದ ಮಣ್ಣಿನ ಘಮವನ್ನು ಪ್ರೀತಿಸಿದ್ದೇನೆ. ಈ ಬದುಕಿಗೊಂದು ಪರಿಮಳವಿದೆ ಅಂತಾದರೆ ಅದು ನನ್ನ ಬಾಬೂಜಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಜವಾಹರಲಾಲ್ ದರಡಾ ಹಾಗೂ ನನ್ನ ತಾಯಿ ಶ್ರೀಮತಿ ವೀಣಾ ದೇವಿ ದರಡಾ ನೀಡಿದ ಕೊಡುಗೆ. ಈವರೆಗೆ ಬದುಕಿನ ಅಸಂಖ್ಯ ಮಜಲುಗಳನ್ನು ನೋಡಿದ್ದೇನೆ. ನೂರಾರು ದಾರಿಯಲ್ಲಿ ಸಾಗಿದ್ದೇನೆ. ಭಾವನೆಗಳ ಜಗತ್ತಿನ ಅಗಾಧ ಆಳದಲ್ಲಿ ಒಂದಷ್ಟು ವ್ಯಾಪ್ತಿಯನ್ನಾದರೂ ಶೋಧಿಸುವ ಅದೃಷ್ಟ ನನ್ನದಾಗಿತ್ತು. ಕ್ರೀಡೆಯಲ್ಲಿ ನನ್ನ ಪರಿಶ್ರಮವನ್ನು ಒರೆಗೆ ಹಚ್ಚಿದ್ದೇನೆ. ಪತ್ರಿಕೋದ್ಯಮದ ಬೃಹತ್ ಸಾಗರದಲ್ಲಿ ಈಜಾಡಿದ್ದೇನೆ. ಸಾಮಾನ್ಯ ಜನರಿಗಾಗಿ ರಾಜಕೀಯಕ್ಕೂ ಕಾಲಿಟ್ಟು ನನ್ನ ಕೈಲಾದ ಸೇವೆ ಮಾಡಿದ್ದೇನೆ. ಸುದೀರ್ಘ 18 ವರ್ಷಗಳ ಕಾಲ ನಾನು ಸಂಸತ್ ಸದಸ್ಯನಾಗಿದ್ದೆ. ಅಲ್ಲಿ ನಿಂತು ನಮ್ಮ ದೇಶವನ್ನು ಬಹಳ ಹತ್ತಿರದಿಂದ ಅರಿತುಕೊಳ್ಳುವ ಅವಕಾಶ ನನ್ನದಾಗಿತ್ತು. ಕಾಲಕಾಲಕ್ಕೆ ನನ್ನಿಂದ ಒಂದಷ್ಟು ಕವಿತಾ ಕುಸುಮಗಳು ಅರಳಿವೆ. ನನ್ನ ಕೈಯ ಕುಂಚವು ಭಾವನೆಗಳ ಕ್ಯಾನ್ವಾಸ್ ಮೇಲೆ ಆಗಾಗ ಒಂದಷ್ಟು ಬಣ್ಣಗಳನ್ನು ಚೆಲ್ಲಿದೆ! ಜೀವನ ಸಂಗಾತಿ ಜ್ಯೋತ್ಸ್ನಾ ನನ್ನನ್ನು ಸಂಗೀತದ ಅಧ್ಯಾತ್ಮ ಜಗತ್ತಿಗೆ ಪರಿಚಯಿಸಿದ್ದಾರೆ.

ನಾನೇಕೆ ಈ ಖಾಸಗಿ ಸಂಗತಿಗಳನ್ನೆಲ್ಲಾ ಹೇಳಿಕೊಳ್ಳುತ್ತಿದ್ದೇನೆ ಎಂದು ನಿಮಗೆ ಆಶ್ಚರ್ಯವಾಗುತ್ತಿರಬಹುದು. ಏಕೆ ಇದನ್ನು ಹೇಳುತ್ತಿದ್ದೇನೆ ಅಂದರೆ, ಜಗತ್ತಿನಲ್ಲಿ ಬಹಳ ಕಡಿಮೆ ಜನರಿಗೆ ಬದುಕಿನ ಹಲವಾರು ವಿಭಿನ್ನ ಮುಖಗಳನ್ನು ನೋಡುವ ಅವಕಾಶ ಸಿಗುತ್ತದೆ. ಬಹುತೇಕ ಜನರಿಗೆ ಕುಟುಂಬದ ಹೊಟ್ಟೆ ಹೊರೆಯಲು ಕಷ್ಟಪಡುವುದೇ ಜೀವನದ ಬಹುಪಾಲು ಸಮಯವನ್ನು ತಿಂದುಹಾಕುತ್ತದೆ. ಈ ವಿಷಯದಲ್ಲಿ ನಾನು ಅದೃಷ್ಟವಂತ. ಹೀಗಾಗಿ ನನ್ನ ವೈವಿಧ್ಯಮಯ ಅನುಭವಗಳಲ್ಲಿ ಕೆಲವಾದರೂ ನಿಮಗೆ ಅನುಕೂಲವಾಗಬಹುದು ಎಂಬ ದೃಷ್ಟಿಯಿಂದ ಇದನ್ನು ಹಂಚಿಕೊಳ್ಳುತ್ತಿದ್ದೇನೆ. ಏಕೆಂದರೆ ಮನುಷ್ಯರು ಪರಸ್ಪರರ ಒಡನಾಟದಲ್ಲಿ ಜೀವನಾನುಭವಗಳನ್ನು ಸಂಪಾದಿಸುತ್ತಾರೆ. ನನ್ನ ಈವರೆಗಿನ 75 ವರ್ಷಗಳಲ್ಲಿ ಕನಿಷ್ಠ 55 ವರ್ಷಗಳನ್ನಾದರೂ ಸಾಕಷ್ಟು ಕ್ರಿಯಾಶೀಲವಾಗಿ ಕಳೆದಿದ್ದೇನೆ. ನನ್ನ ಪ್ರಕಾರ ನಾವು ಎಷ್ಟು ಸುದೀರ್ಘ ಕಾಲ ಬದುಕುತ್ತೇವೆ ಎಂಬುದು ಮುಖ್ಯವಲ್ಲ, ಅದರ ಬದಲು ಎಷ್ಟು ಗುಣಮಟ್ಟದ ಬದುಕನ್ನು ಜೀವಿಸಿದ್ದೇವೆ ಎಂಬುದು ಮುಖ್ಯ. ಹಾಗಂತ ನಾನು ಮನಸಾ ನಂಬಿದ್ದೇನೆ. ಇದನ್ನು ಬರೆಯುವಾಗ ಬಾಲ್ಯದಲ್ಲಿ ಓದಿದ ಕಬೀರ ದಾಸರ ಪದ್ಯವೊಂದು ನೆನಪಾಗುತ್ತಿದೆ: ''**ದೊಡ್ಡವನಾದರೆ ಏನಾಯಿತು, ಖರ್ಜೂರದ ಮರವೂ ಬೆಳೆಯುತ್ತದೆ, ದಣಿದ ಪ್ರಯಾಣಿಕನಿಗೆ ನೆರಳಿಲ್ಲ, ಹಣ್ಣೂ ಬಹಳ ಎತ್ತರದಲ್ಲಿದೆ**''- ಖರ್ಜೂರದ ಮರದಂತೆ ಎತ್ತರಕ್ಕೆ ಬೆಳೆದರೆ ಏನು ಪ್ರಯೋಜನ? ಅದು ನಮಗೆ ನೆರಳು ಕೊಡುವುದಿಲ್ಲ. ಹಣ್ಣು ಕೊಯ್ದು ತಿನ್ನೋಣವೆಂದರೆ ತುಂಬಾ ಎತ್ತರದಲ್ಲಿರುತ್ತದೆ. ಹಾಗೆಯೇ ನಾವು ಕೂಡ ತುಂಬಾ ದೊಡ್ಡ ಮನುಷ್ಯರಾಗಿ ಬೆಳೆದರೆ ಏನು ಪ್ರಯೋಜನ? ನಮ್ಮಿಂದ ನಾಲ್ಕು ಜನರಿಗೆ ಉಪಕಾರವಾಗಲಿಲ್ಲ ಅಂತಾದರೆ ಅದು ವ್ಯರ್ಥವಲ್ಲವೇ? ಬದುಕಿನ ಯಾವ ಹಂತದಲ್ಲಿ ಕಬೀರರ ಈ ಸಾಲುಗಳು ನನ್ನ ಜೀವನದ ಮಂತ್ರವಾಯಿತು ಎಂಬುದು ನೆನಪಿಲ್ಲ. ಬಹುಶಃ ಬಾಬೂಜಿಯವರ ಬದುಕನ್ನು ನೋಡಿ ನಾನೂ ಇದಕ್ಕೆ ಶರಣಾಗಿರಬೇಕು. ತಂದೆಯವರು ತಮ್ಮ ಸಂಪೂರ್ಣ ಬದುಕನ್ನು ಸಮಾಜದ ಸೇವೆಗೆ ಒಪ್ಪಿಸಿಕೊಂಡಿದ್ದರು. ನಾನು ಕೂಡ ಅದೇ ದಾರಿಯನ್ನು ಅನುಸರಿಸುತ್ತಿದ್ದೇನೆ. ಯಾವತ್ತೂ ನಾನು ವೈಯಕ್ತಿಕ ಯಶಸ್ಸನ್ನು ಸಮಾಜ ಸೇವೆಯ ಆಧ್ಯಾತ್ಮಿಕ ಮಾರ್ಗವೆಂಬಂತೆ ನೋಡಿದ್ದೇನೆ. ಹೀಗಾಗಿ ನಾನು ಇವತ್ತಿನ ಯುವಕರಿಗೆ ಹೇಳುವುದಿಷ್ಟೆ; ನನ್ನ ಬದುಕಿನ ಟೈಮ್‌ಲೈನ್ ಅನ್ನು ನಿರ್ಧರಿಸಿರುವುದು ಕಾಲ. ಅದು ಯಾರ ಕೈಯಲ್ಲೂ ಇಲ್ಲ. ಆದರೆ ಈ ಸುದೀರ್ಘ ಪ್ರಯಾಣದಲ್ಲಿ ನನ್ನೊಳಗೆ ಒಂದು ಮುಗ್ಧತೆಯನ್ನೂ, ಬಾಲ್ಯದ ಉತ್ಸಾಹವನ್ನೂ ಉಳಿಸಿಕೊಂಡು ಕ್ರಿಯಾಶೀಲವಾಗಿ ಬದುಕುತ್ತಾ ಬಂದಿದ್ದೇನೆ. ಇದರಲ್ಲಿ ನನ್ನ ಪ್ರಯತ್ನವೇ ಸಾಕಷ್ಟಿದೆ. ಎಷ್ಟು ವಯಸ್ಸಾದರೂ ಸರಿ, ನಿಮ್ಮೊಳಗೊಬ್ಬ ಬಾಲಕ ಎಲ್ಲಿಯವರೆಗೆ ಜೀವಂತವಾಗಿರುತ್ತಾನೋ ಅಲ್ಲಿಯವರೆಗೆ ನೀವು ಪರಿಶುದ್ಧವಾಗಿಯೂ, ಕ್ರಿಯಾಶೀಲವಾಗಿಯೂ ಬದುಕುತ್ತೀರಿ. ಒಂದು ಮಗು ಯಾವತ್ತಾದರೂ ಸುಮ್ಮನೆ ಕುಳಿತುಕೊಳ್ಳುವುದನ್ನು ನೋಡಿದ್ದೀರಾ? ಇಲ್ಲ. ಅದು ಸದಾಕಾಲ ಚಟುವಟಿಕೆಯಲ್ಲಿ ಮುಳುಗಿರುತ್ತದೆ. ಹೊಸಹೊಸತನ್ನು ಕಲಿಯಲು ಹವಣಿಸುತ್ತಿರುತ್ತದೆ. ನೀವು ಯುವಕರು ಈಗ ಅತ್ಯಂತ ಸುಧಾರಿತ ತಂತ್ರಜ್ಞಾನದ ಯುಗದಲ್ಲಿ ಬದುಕುತ್ತಿದ್ದೀರಿ. ಈ ಕಾಲದಲ್ಲಿಯೂ ಹೊಸತನ್ನು ಕಲಿಯುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳುವುದಿಲ್ಲ ಅಂತಾದರೆ ಬದುಕಿನ ಬಾಗಿಲನ್ನು ಮುಚ್ಚುತ್ತಿದ್ದೀರಿ ಎಂದರ್ಥ. ಯಶಸ್ಸನ್ನು ನೋಡಬೇಕೆಂದರೆ ಕಲಿಯುವ ಬಯಕೆ ಸದಾಕಾಲ ಜೀವಂತವಾಗಿರಬೇಕು.

ನನಗೆ ಯಾವಾಗಲೂ ಸ್ಫೂರ್ತಿ ಸಿಗುವುದು ಭಗವದ್ಗೀತೆಯಿಂದ. ಬದುಕಿನ ಉದ್ದೇಶ ಕೇವಲ ಯಶಸ್ಸು ಅಥವಾ ವೈಫಲ್ಯದಲ್ಲಿ ಇಲ್ಲ, ಬದಲಿಗೆ ಅದು ನಮ್ಮ ಕರ್ತವ್ಯವನ್ನು ಪ್ರಜ್ಞಾಪೂರ್ವಕವಾಗಿ ಮತ್ತು ನಿಸ್ವಾರ್ಥ ಮನೋಭಾವದಿಂದ ನೆರವೇರಿಸುವುದರಲ್ಲಿದೆ ಎಂದು ಕೃಷ್ಣ ಹೇಳುತ್ತಾನೆ. ಅರ್ಜುನನಿಗೆ ಯುದ್ಧಕ್ಕೂ ಮುನ್ನ ವೈಯಕ್ತಿಕ ಲಾಭ ಅಥವಾ ನಷ್ಟದ ಮೋಹದಿಂದ ಮುಂದುವರಿಯಬೇಡ ಎಂದೂ ಹೇಳುತ್ತಾನೆ. ಬದುಕಿನುದ್ದಕ್ಕೂ ನಾನು ಇದೇ ತತ್ವವನ್ನು ಪಾಲಿಸುತ್ತಾ ಬಂದಿದ್ದೇನೆ. ನಾನು ಬಹಳ ದೊಡ್ಡ ಗುರಿ ನಿಗದಿಪಡಿಸುತ್ತೇನೆ ಎಂದು ಸಹೋದ್ಯೋಗಿಗಳು ಹೇಳುವುದುಂಟು. ದೊಡ್ಡ ಗುರಿ ನಿಗದಿಪಡಿಸುವುದಕ್ಕೆ ಕಾರಣ ಇಷ್ಟೆ; ಬದುಕಿನಲ್ಲಿ ಯಾವುದೂ ಅಸಾಧ್ಯವಲ್ಲ. ಒಂದು ಕೆಲಸವನ್ನು ನೀವು ಮಾಡದೆ ಇದ್ದರೆ ಇನ್ನಾರೋ ಮಾಡುತ್ತಾರೆ. ಹಾಗಿದ್ದರೆ ನೀವೇ ಏಕೆ ಅದನ್ನು ಮಾಡಬಾರದು? ಈ ಬದ್ಧತೆ ಹಾಗೂ ಕುತೂಹಲದ ಮೂಲ ಇರುವುದು ವಿಜ್ಞಾನದಲ್ಲಿ! ಆದರೆ ಇದಕ್ಕೆ ಬೇಕಾದ ಸ್ಫೂರ್ತಿ ಹಾಗೂ ಕೌಶಲಗಳನ್ನು ಮಾತ್ರ ನೀವೇ ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ನಿಮ್ಮ ಕನಸು ನನಸಾಗುವುದು ಹೇಗೆ? ಬಾಬೂಜಿಯವರು ಲೋಕಮತ್ ಪತ್ರಿಕೆಯನ್ನು ವಿಸ್ತರಿಸುವ ಕನಸು ಕಂಡಿದ್ದರು. ಸಹೋದರ ರಾಜೇಂದ್ರ ಮತ್ತು ನಾನು ಸೇರಿಕೊಂಡು ಆ ಕನಸು ನನಸು ಮಾಡುವ ಶಪಥ ಮಾಡಿದ್ದೆವು. ಫಲಿತಾಂಶ ಇಂದು ನಿಮ್ಮ ಕಣ್ಮುಂದೆಯೇ ಇದೆ. ಈಗ ದೇವೇಂದ್ರ, ರಿಷಿ ಮತ್ತು ಕರಣ್ ಲೋಕಮತ್ ಕುಟುಂಬವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲು ಕೆಲಸ ಮಾಡುತ್ತಿದ್ದಾರೆ. ಪೂರ್ವಾ ಯಾವಾಗಲೂ ತನ್ನ ಸಹೋದರರ ಹಿಂದಿನ ಶಕ್ತಿಯಾಗಿ ಕೆಲಸ ಮಾಡುತ್ತಾಳೆ.

ನೆನಪಿಡಿ, ನಿಮ್ಮ ತಂದೆ ತಾಯಂದಿರ ಆಶೀರ್ವಾದ, ಒಡಹುಟ್ಟಿದವರ ಅಸೀಮ ಪ್ರೀತಿ, ಸಂಗಾತಿಯ ಸಹಕಾರ ಮತ್ತು ಮಕ್ಕಳ ಅಕ್ಕರೆಯಿಲ್ಲದೆ ಇದ್ದರೆ ಖಂಡಿತ ಯಾರೂ ಯಶಸ್ಸಿನ ಸಮೀಪಕ್ಕೂ ಹೋಗಲು ಸಾಧ್ಯವಿಲ್ಲ. ಕುಟುಂಬಕ್ಕಿಂತ ಯಾವುದೂ ದೊಡ್ಡದಲ್ಲ. ಬಹುಶಃ ನನ್ನ ಮಾತು ನಿಮಗೆ ವಿಚಿತ್ರವಾಗಿ ಕೇಳಿಸಬಹುದು. ಆದರೂ ಹೇಳುತ್ತೇನೆ, ಯಾವತ್ತೂ ನಿಮ್ಮ ಸಂಗಾತಿಯನ್ನು ಕಡೆಗಣಿಸಬೇಡಿ. ಅವಳು ಇಲ್ಲದೆ ಇದ್ದರೆ ನಿಮ್ಮ ಬದುಕು ಯಾವುದೇ ರೀತಿಯಲ್ಲೂ ಪೂರ್ಣವಾಗಲು ಸಾಧ್ಯವಿಲ್ಲ. ಅವಳು ನಿಮಗಾಗಿ ಮಾಡಿದ ತ್ಯಾಗ, ನಿಮ್ಮ ಒಳಿತಿನಲ್ಲಿ ಹೊಂದಿರುವ ಬದ್ಧತೆ ಮತ್ತು ನಿಮಗೆ ನೀಡುವ ನಿರ್ವ್ಯಾಜ ಪ್ರೀತಿಯನ್ನು ಸದಾ ಗೌರವಿಸಿ. ನಿಮ್ಮ ಕುಟುಂಬವನ್ನು ಕಟ್ಟಿ, ಬೆಳೆಸಿ, ಬದುಕಿಗೊಂದು ಸಂತೋಷ ನೀಡಿದವಳೇ ಅವಳು. ಕುಟುಂಬದಲ್ಲಿ ಪ್ರೀತಿಯ ಪ್ರವಾಹ ಹರಿಯುತ್ತಿದ್ದರೆ ಮಾತ್ರ ಆ ಮನೆಯಲ್ಲಿ ಜನರು ಸೆಂಚುರಿ ಬಾರಿಸಬಲ್ಲರು!

ಯುವಕರಿಗೆ ಇನ್ನೂ ಒಂದು ಕಿವಿಮಾತು ಹೇಳುತ್ತೇನೆ. ಭವಿಷ್ಯದ ಬಗ್ಗೆ ಹೆದರಬೇಡಿ. ಆತ್ಮವಿಶ್ವಾಸದಿಂದ ಮುಂದೆ ಹೋಗಿ. ಆದರೆ ನೀವು ಮಾಡುವ ಕೆಲಸದಿಂದ ಜಗತ್ತಿಗೆ ಒಳ್ಳೆಯದಾಗುತ್ತದೆ ಎಂಬುದನ್ನು ಮಾತ್ರ ಖಾತ್ರಿಪಡಿಸಿಕೊಳ್ಳಿ. ಹೆದರುತ್ತಾ ಕುಳಿತರೆ ನಿಮ್ಮದೇ ಕೌಶಲಗಳು ತುಕ್ಕು ಹಿಡಿಯುತ್ತಾ ಹೋಗುತ್ತವೆ. ನಿಮ್ಮಲ್ಲಿರುವ ಸಾಮರ್ಥ್ಯಕ್ಕೆ ಮಂಕು ಬಡಿಯುತ್ತದೆ. ಕೌಶಲ ಮತ್ತು ಸಾಮರ್ಥ್ಯವನ್ನು ಆಗಾಗ ಬಳಸುತ್ತಿದ್ದರೆ ಮಾತ್ರ ಅವು ಇನ್ನಷ್ಟು ಹರಿತವಾಗುತ್ತವೆ. ಸುಲಭಕ್ಕೆ ಯಾವುದರ ಬಗ್ಗೆಯೂ ಸಿಟ್ಟಾಗಬೇಡಿ. ಸಿಟ್ಟು ನಿಮ್ಮಲ್ಲಿ ಗೊಂದಲ ಹುಟ್ಟಿಸುತ್ತದೆ. ಗೊಂದಲಕ್ಕೆ ಬಿದ್ದ ಮನುಷ್ಯ ದಾರಿ ತಪ್ಪುತ್ತಾನೆ. ಹೀಗಾಗಿ ಸಿಟ್ಟನ್ನು ಹಿಡಿತದಲ್ಲಿಟ್ಟುಕೊಳ್ಳಿ. ಅಹಂಕಾರದಿಂದ ಅಥವಾ ಸ್ವಯಂಪ್ರತಿಷ್ಠೆಯಿಂದ ದೂರವಿರಿ. ನಿಮ್ಮನ್ನು ನೀವು ಅರ್ಥಮಾಡಿಕೊಳ್ಳಿ. ನಿಮ್ಮ ಮಿತಿಯೇನು, ದೌರ್ಬಲ್ಯವೇನು, ಸಾಮರ್ಥ್ಯವೇನು ಮತ್ತು ಶಕ್ತಿಯೇನು ಎಂಬುದನ್ನು ತಿಳಿಯಿರಿ. ಪ್ರಕೃತಿ ನಿಮ್ಮೊಂದಿಗೆ ಇರಲು ಇಡೀ ಜಗತ್ತನ್ನು ಸೃಷ್ಟಿಸಿದೆ. ನೀವು ಎಲ್ಲಿಗೆ ಬೇಕಾದರೂ ಹೋಗಬಹುದು. ನಿಮ್ಮ ಜ್ಞಾನ ಹಾಗೂ ಸಮರ್ಪಣಾ ಮನೋಭಾವಗಳು ನಿಮ್ಮನ್ನು ಎಲ್ಲಿಗೆ ಬೇಕಾದರೂ ಕರೆದೊಯ್ಯಬಲ್ಲವು. ನಿಮ್ಮದೇ ಸಂಕಲ್ಪಗಳಿಗೆ ನಿಮ್ಮನ್ನು ಸಂಪೂರ್ಣ ರೂಪಾಂತರಗೊಳಿಸುವ ಶಕ್ತಿಯಿದೆ. ಜೀವನದ ಅರ್ಥ ದೀರ್ಘಾಯುಷ್ಯದಲ್ಲಿಲ್ಲ, ಅದು ಇರುವುದು ಗುಣಮಟ್ಟದ ಕಾರ್ಯಗಳಲ್ಲಿ.

ಕೊನೆಯದಾಗಿ ಹೇಳುವುದಾದರೆ, ಹುಟ್ಟುಹಬ್ಬಕ್ಕೆ ಬಂದ ನಿಮ್ಮ ಶುಭಾಶಯಗಳು ನನಗೆ ಇನ್ನಷ್ಟು ಒಳ್ಳೆಯ ಕೆಲಸಗಳನ್ನು ಮಾಡಲು ಮತ್ತು ಅರ್ಥಪೂರ್ಣವಾಗಿ ಬದುಕಲು ಪ್ರೇರಣೆ ನೀಡಿವೆ. ನನ್ನ ಪ್ರಯತ್ನಗಳಿಗೆ ಈಗ ಇನ್ನಷ್ಟು ಬಲ ಬಂದಿದೆ. ಎಲ್ಲರಿಗೂ ಮತ್ತೊಮ್ಮೆ ಥ್ಯಾಂಕ್ಸ್. ಇನ್ನೊಂದು ಸಂಗತಿಯನ್ನು ಹೇಳಬೇಕು: ದೇಶವನ್ನು ಕಟ್ಟುವ ಕಾರ್ಯದಲ್ಲಿ ಎಲ್ಲರೂ ನಮ್ಮನ್ನು ತೊಡಗಿಸಿಕೊಳ್ಳೋಣ. ಪ್ರತಿಯೊಬ್ಬ ಯುವಕರೂ ತಮ್ಮ ಎದೆಯ ಮೇಲೆ ತ್ರಿವರ್ಣ ಧ್ವಜದ ಪುಟ್ಟ ಬ್ಯಾಡ್ಜ್ ಅಥವಾ ಕೈಗೆ ತಿರಂಗಾದ ಬ್ಯಾಂಡ್ ಧರಿಸಿ. ಎಲ್ಲಿ ಸಿಗುತ್ತದೆ ಎಂಬುದು ಗೊತ್ತಿಲ್ಲದಿದ್ದರೆ ನನಗೆ ಬರೆಯಿರಿ. ಜೈ ಹಿಂದ್...

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 18

ಸಮಾಚಾರ ಸಣ್ಣದಲ್ಲ

ಉಗ್ರ, ಪಾಕ್‌ಗೆ ತಿಳಿಹೇಳಿ ಟರ್ಕಿಗೆ ಭಾರತ ಸಲಹೆ

ದೆಹಲಿ: ದಶಕಗಳಷ್ಟು ಹಳೆಯ ಭಯೋತ್ಪಾದನಾ ಮೂಲಸೌಕರ್ಯ ನಾಶಕ್ಕೆ, ಗಡಿಯಾಚೆಗಿನ ಭಯೋತ್ಪಾದನೆ ಅಂತ್ಯಕ್ಕೆ ಮುಂದಾಗುವಂತೆ ಪಾಕಿಸ್ತಾನಕ್ಕೆ ಅದರ ಮಿತ್ರರಾಷ್ಟ್ರವಾದ ಟರ್ಕಿ ತಿಳಿಹೇಳಬೇಕು. ತನ್ನ ಪ್ರಭಾವ ಬಳಸಿ ಪಾಕ್ ಅನ್ನು ಸರಿದಾರಿಗೆ ತರಬೇಕು ಎಂದು ಭಾರತ ಗುರುವಾರ ಕರೆ ನೀಡಿದೆ. ಇದೇ ವೇಳೆ, ಪಹಲ್ಗಾಮ್ ದಾಳಿ ನಂತರ ಪಾಕಿಸ್ತಾನವನ್ನು ಬೆಂಬಲಿಸಿದ ಟರ್ಕಿ ದೇಶದ ಕ್ರಮವನ್ನು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಟೀಕಿಸಿದ್ದಾರೆ. ದ್ವಿಪಕ್ಷೀಯ ಸಂಬಂಧಗಳು ಪರಸ್ಪರರ ಪ್ರಮುಖ ಕಾಳಜಿಗಳ ಸೂಕ್ಷ್ಮತೆ ಆಧರಿಸಿರಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಟರ್ಕಿ ಸರಕಾರದ ಗಮನ ಸೆಳೆಯಲೆತ್ನಿಸಿದ್ದಾರೆ. ಭಾರತದ 9 ವಿಮಾನ ನಿಲ್ದಾಣಗಳಲ್ಲಿ ನಿರ್ವಹಣೆ ಸೇವೆಗಳನ್ನು ಒದಗಿಸುವ ಟರ್ಕಿಶ್ ಸ್ಥಾಪಿತ ಏಜೆನ್ಸಿಗೆ ಭದ್ರತಾ ಕ್ಲಿಯರೆನ್ಸ್ ರದ್ದುಗೊಳಿಸಿರುವ ನಾಗರಿಕ ವಿಮಾನಯಾನ ಭದ್ರತಾ ಬ್ಯೂರೋ ಕ್ರಮ ಕುರಿತು ದೆಹಲಿಯಲ್ಲಿನ ಟರ್ಕಿ ರಾಯಭಾರಿ ಜತೆ ಚರ್ಚಿಸಲಾಗಿದೆ. ಈ ಕುರಿತ ನಿರ್ಧಾರವನ್ನು ನಾಗರಿಕ ವಿಮಾನಯಾನ ಭದ್ರತಾ ಬ್ಯೂರೋ ತೆಗೆದುಕೊಂಡಿದೆ ಎಂದು ಜೈಶ್ವಾಲ್ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ಉಗ್ರ ದಾಳಿಗೆ ಮಾಸ: ಕಾಶ್ಮೀರ ಬಣಬಣ

ದೆಹಲಿ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನ ಬೈಸರನ್ ಹುಲ್ಲುಗಾವಲಿನಲ್ಲಿ ಏ.22ರಂದು ನಡೆದ ಭಯೋತ್ಪಾದಕ ದಾಳಿಯಲ್ಲಿ 25 ಪ್ರವಾಸಿಗರು, ಒಬ್ಬ ಸ್ಥಳೀಯ ಪ್ರಾಣ ಕಳೆದುಕೊಂಡ ಘಟನೆಗೆ ಒಂದು ತಿಂಗಳಾಗಿದೆ. ನಂತರದಲ್ಲಿ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ನಡೆಸಿ ಭಯೋತ್ಪಾದಕರ ತವರು ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಲಾಗಿದೆ. ಅಷ್ಟೇ ಅಲ್ಲದೇ, ಭಾರತ ಸರಕಾರ, ಸರ್ವಪಕ್ಷಗಳ ಸಂಸದರ 7 ನಿಯೋಗಗಳನ್ನು ವಿಶ್ವದ ವಿವಿಧ ದೇಶಗಳಿಗೆ ಕಳುಹಿಸಿಕೊಡುತ್ತಿದ್ದು, ಜಗತ್ತಿನೆದುರು ಪಾಕಿಸ್ತಾನದ ಅಸಲಿ ಚಹರೆಯನ್ನು ಅನಾವರಣ ಮಾಡುವ ಕಾರ್ಯವೂ ನಡೆಯಲಾರಂಭಿಸಿದೆ. ಇನ್ನೊಂದೆಡೆ, ಪ್ರವಾಸಿಗರ ಮೆಚ್ಚಿನ ತಾಣ ಪಹಲ್ಗಾಮ್ ಮಾತ್ರವಲ್ಲದೇ ಇಡೀ ಜಮ್ಮು-ಕಾಶ್ಮೀರ ರಾಜ್ಯದಲ್ಲಿ ಪ್ರವಾಸಿಗರ ಹರಿವು ಕಡಿಮೆಯಾಗಿದೆ. ಪ್ರವಾಸಿಗರನ್ನೇ ಆಶ್ರಯಿಸಿದ್ದ ದೋಣಿ ಚಾಲಕರು, ಕುದುರೆ ಸವಾರರು, ವ್ಯಾಪಾರಿಗಳು ಭಾಗಶಃ ನಿರುದ್ಯೋಗಿಗಳಾಗಿದ್ದಾರೆ ಎಂದು ವರದಿಯಾಗಿದೆ.

ಸರಕಾರದ ಹಣಕ್ಕಾಗಿ 58 ಬಾರಿ ಮಡಿದರು!

ಭೋಪಾಲ್: ಸರಕಾರದಿಂದ ಹಣ ಪಡೆಯುವುದಕ್ಕಾಗಿ 'ಹಾವು ಕಡಿತದಿಂದ ಸಾವು' ಎಂದು ಹೇಳಿ ಇಬ್ಬರು 58 ಬಾರಿ ಸಾವಿಗೀಡಾದ ನಾಟಕವಾಡಿ ವಂಚಿಸಿರುವ ಪ್ರಕರಣ ಮಧ್ಯಪ್ರದೇಶದ ಸಿಯೋನಿ ಜಿಲ್ಲೆಯಲ್ಲಿ ನಡೆದಿದೆ. ಹಾವು ಕಡಿತದಿಂದ ಸಾವು, ನೀರಿನಲ್ಲಿ ಮುಳುಗಿ ಸಾವು ಮತ್ತು ಸಿಡಿಲು ಬಡಿದು ಸಾವು ಎಂದು ದಾಖಲೆಗಳನ್ನು ಸೃಷ್ಟಿ ಮಾಡಿ ಸಿಯೋನಿ ಜಿಲ್ಲೆಯೊಂದರಲ್ಲೇ 11.26 ಕೋಟಿ ರು.ಗಳನ್ನು ಸರಕಾರದ ಖಜಾನೆಯಿಂದ ಪಡೆದು ವಂಚಿಸಲಾಗಿದೆ. ಈ ಹಗರಣದಲ್ಲಿ ಸಿಯೋನಿಯ ಜಿಲ್ಲೆಯ ಕಿಯೋಲಾರಿ ತಹಸಿಲ್‌ನಲ್ಲಿ ನಡೆದಿದ್ದು, 11.26 ಕೋಟಿ ರು.ಗಳು 47 ಜನರ ಬ್ಯಾಂಕ್ ಖಾತೆಗಳಿಗೆ ಜಮಾ ಆಗಿರುವುದು ತಿಳಿದುಬಂದಿದೆ. ಲೆಕ್ಕಪತ್ರ ಪರಿಶೀಲನೆ ವೇಳೆ ಹಣಕಾಸು ಇಲಾಖೆ ಅಧಿಕಾರಿಗಳ ಕಣ್ಣಿಗೆ ಬಿದ್ದಿದ್ದು, ಆ ಬಳಿಕವಷ್ಟೇ ದೊಡ್ಡ ಹಗರಣ ಬೆಳಕಿಗೆ ತಂದಿದೆ. ಕಚೇರಿಯ ಸಹಾಯಕ ಗ್ರೇಡ್‌ನ ಸಚಿನ್ ದಹಾಯಕ್ ಹಗರಣದ ಕಿಂಗ್‌ಪಿನ್ ಆಗಿದ್ದಾನೆ. 11.26 ಕೋಟಿ ರು.ಗಳನ್ನೂ ತನ್ನದೇ ಕುಟುಂಬದ ಸದಸ್ಯರು, ಸ್ನೇಹಿತರು ಮತ್ತು ಪರಿಚಯಸ್ಥರ ಖಾತೆಗಳಿಗೆ ವರ್ಗಾಯಿಸಿ ಗುಳಂ ಮಾಡಿದ್ದಾನೆ.

ಉಕ್ರೇನ್ ಯುದ್ಧ ಅಂತ್ಯ ಪುಟಿನ್‌ಗೆ ಇಷ್ಟವಿಲ್ಲ

ವಾಷಿಂಗ್ಟನ್: ವರ್ಷಕ್ಕೂ ಹೆಚ್ಚು ಸಮಯದಿಂದ ಉಕ್ರೇನ್ ವಿರುದ್ಧ ನಡೆಸುತ್ತಿರುವ ಯುದ್ಧವನ್ನು ಸದ್ಯಕ್ಕೆ ಕೊನೆಗೊಳಿಸಲು ರಷ್ಯಾ ಅಧ್ಯಕ್ಷ ವ್ಲಾದಿಮೀರ್ ಪುಟಿನ್‌ಗೆ ಇಷ್ಟವಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುರೋಪ್ ಒಕ್ಕೂಟ ದೇಶಗಳ ಪ್ರಮುಖ ನಾಯಕರ ಜತೆಗಿನ ಖಾಸಗಿ ಸಂಭಾಷಣೆ ವೇಳೆ ಹೇಳಿದ್ದಾರೆ ಎಂದು ವರದಿಯಾಗಿದೆ. ಈ ಯುದ್ಧದಲ್ಲಿ ತಾವೇ ಗೆಲ್ಲುತ್ತೇವೆ ಎಂದು ಪುಟಿನ್ ಬಲವಾಗಿ ನಂಬಿದ್ದಾರೆ. ಹಾಗಾಗಿಯೇ, ಅವರು ಶಾಂತಿ ಮಾತುಕತೆಗೆ ಸಿದ್ಧರಿಲ್ಲ ಎಂದು ಟ್ರಂಪ್ ಯೂರೋಪ್ ದೇಶಗಳ ನಾಯಕರಿಗೆ ಮತ್ತು ಉಕ್ರೇನ್ ಅಧ್ಯಕ್ಷರಿಗೆ ತಿಳಿಸಿದ್ದಾರೆಂದು ವರದಿಯಾಗಿದೆ. ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ, ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ, ಯುರೋಪಿಯನ್ ಕಮಿಷನ್ ಅಧ್ಯಕ್ಷರಾದ ಉರ್ಸುಲಾ ವಾನ್ ಡೆರ್ ಲೇಯೆನ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಮತ್ತು ಜರ್ಮನ್ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಸೇರಿದಂತೆ ಹಲವು ಯುರೋಪಿಯನ್ ನಾಯಕರ ಜತೆಗಿನ ದೂರವಾಣಿ ಕರೆ ಸಂದರ್ಭ ಟ್ರಂಪ್ ಈ ಮಾಹಿತಿ ಹಂಚಿಕೊಂಡಿದ್ದಾರೆ ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.

{ಸುಬ್ರಮಣಿಯನ್ ಸ್ವಾಮಿ} ಬಿಜೆಪಿ ನಾಯಕ

ಪಹಲ್ಗಾಮ್ ಉಗ್ರ ದಾಳಿ ನಾಗರಿಕತೆ ಇತಿಹಾಸದಲ್ಲೇ ಅತಿಕ್ರೂರ. ಅದಕ್ಕೆ ಕಾರಣವಾದ ಪಾಕ್‌ಗೆ ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲೇ ಇನ್ನಷ್ಟು ಬುದ್ಧಿ ಕಲಿಸಬೇಕಿತ್ತು. ಪಾಕ್ ಭಯೋತ್ಪಾದನೆ ಬಗ್ಗೆ ವಿಶ್ವಕ್ಕೆ ತಿಳಿಸಲು ವಿದೇಶಗಳಿಗೆ ತೆರಳುತ್ತಿರುವ ಸರ್ವಪಕ್ಷ ನಿಯೋಗದಿಂದ ಪ್ರಯೋಜನವಿಲ್ಲ. ಸರಕಾರದ ಹಣದಲ್ಲಿ ರಂಜನೆ.

ರಾಜಸ್ಥಾನದಲ್ಲಿ ಪ್ರಧಾನಿ ನರೇಂದ್ರ ಮೋದಿ ಗುಡುಗು | ಪಾಲನ್‌ನಲ್ಲಿ 26 ಸಾವಿರ ಕೋಟಿ ರು. ಯೋಜನೆಗಳಿಗೆ ಮೋದಿ ಚಾಲನೆ

ಸಿಂಧೂರ ಅಳಿಸಿದವರನ್ನು ಮಣ್ಣಿನಲ್ಲಿ ಹೂತಿದ್ದೇವೆ

ಜೈಪುರ: ಭಾರತದ ಮಾತೆಯರು, ಸೋದರಿಯರ ಸಿಂಧೂರವನ್ನು ಅಳಿಸಲು ಮುಂದಾದವರನ್ನು ಮಣ್ಣಿನಲ್ಲಿ ಹೂತುಬಿಟ್ಟಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಗುಡುಗಿದ್ದಾರೆ.

ರಾಜಸ್ಥಾನ ರಾಜ್ಯದಲ್ಲಿನ ಬಿಕಾನೇರ್ ವಾಯುನೆಲೆಗೆ ಗುರುವಾರ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ, ಆ ಬಳಿಕ ಪಾಲನ್‌ನಲ್ಲಿ 26 ಸಾವಿರ ಕೋಟಿ ರು.ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ನಂತರ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು.

ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏ.22 ರಂದು ಪಾಕಿಸ್ತಾನದ ಭಯೋತ್ಪಾದಕರು ನಡೆಸಿದ ದಾಳಿಗೆ ಪ್ರತೀಕಾರವನ್ನು ಭಾರತದ ಸೇನಾಪಡೆಗಳು ಕೇವಲ 22 ನಿಮಿಷಗಳಲ್ಲಿ ತೀರಿಸಿಕೊಂಡಿವೆ. ಮೇ 7ರ ನಸುಕಿನಲ್ಲಿ ಪಾಕಿಸ್ತಾನಕ್ಕೆ ನುಗ್ಗಿ ಆ ದೇಶದಲ್ಲಿದ್ದ 9 ಉಗ್ರರ ಅಡಗುತಾಣಗಳನ್ನು ಪುಡಿಗಟ್ಟಿವೆ ಎಂದು ಹೇಳಿದರು.

ಆ ದಾಳಿಯ ಮೂಲಕ 'ಭಾರತೀಯ ನಾರಿಯರ ಸಿಂಧೂರ ಬಂದೂಕಿನ ಪುಡಿಯಾಗಿ ಬದಲಾದರೆ ಎಂತಹ ಪರಿಣಾಮ ಬೀರುತ್ತದೆ' ಎಂಬುದನ್ನು ದೇಶದ ಶತ್ರುಗಳು ನೋಡಿದ್ದಾರೆ. ನನ್ನ ರಕ್ತನಾಳಗಳಲ್ಲಿ ರಕ್ತವಲ್ಲ, ಈಗಲೂ ಸಿಂದೂರ ಕುದಿಯುತ್ತಿದೆ ಎಂದು ಪ್ರಧಾನಿ ಘರ್ಜಿಸಿದರು.

ಭಯೋತ್ಪಾದನೆ ವಿರುದ್ಧ ಭಾರತದ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದ ಮೋದಿ, ಉಗ್ರವಾದ ವಿರುದ್ಧ ಹೋರಾಟಕ್ಕೆ ಭಾರತ ಒಗ್ಗಟ್ಟಾಗಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯ ಗುಂಡೇಟು 140 ಕೋಟಿ ಭಾರತೀಯರ ಎದೆಗೆ ನಾಟಿದಂತಿತ್ತು. ಬದಲಾಗಿ ಭಾರತದ ಯೋಧರು, ಭಯೋತ್ಪಾದಕ ರಾಷ್ಟ್ರದ ಎದೆಗೇ ಗುಂಡೇಟು ನೀಡಿದ್ದಾರೆ. ನಮ್ಮ ಸಶಸ್ತ್ರ ಪಡೆಗಳು ಪಾಕಿಸ್ತಾನ ಸರಕಾರ ಭಾರತದ ಮಂಡಿಯೂರುವಂತೆ ಮಾಡಿವೆ ಎಂದು ಹೆಮ್ಮೆಯಿಂದ ಹೇಳಿದರು. 140 ಕೋಟಿ ಜನತೆ ಭಯೋತ್ಪಾದನೆಯನ್ನು ಬೇರುಸಮೇತ ಕಿತ್ತೆಸೆಯಲು ಸಂಕಲ್ಪ ಮಾಡಿದ್ದರು. ನಮ್ಮ ಸರಕಾರವೂ ಮೂರೂ ಸೇನಾಪಡೆಗಳಿಗೆ ಮುಕ್ತ ಅಧಿಕಾರ ನೀಡಿತ್ತು. ಮೂರು ಪಡೆಗಳು ಒಟ್ಟಾಗಿ ಪಾಕಿಸ್ತಾನ ನಾಲ್ಕೇ ದಿನದಲ್ಲಿ ಶರಣಾಗುವಂತೆ ಮಾಡಿದವು ಎಂದು ಮೋದಿ ಹೆಮ್ಮೆಯಿಂದ ಹೇಳಿದರು. ಭಾರತೀಯ ಸೇನೆಯ ಶೌರ್ಯ ಮತ್ತು ಧೈರ್ಯವನ್ನು ಶ್ಲಾಘಿಸಿದರು.

ರಾಜಸ್ಥಾನದ ಬಿಕಾನೇರ್ ವಾಯುನೆಲೆಗೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಭೇಟಿ ನೀಡಿದಾಗ ಐಎಎಫ್ ಸಿಬ್ಬಂದಿಗಳಿಂದ ಹರ್ಷೋದ್ಗಾರ.

ಪಿಒಕೆ ಬಗೆಗಷ್ಟೇ ಚರ್ಚೆ

ಇನ್ನೇನಿದ್ದರೂ ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ಮಾತ್ರ ಚರ್ಚೆ. ಸಿಂಧೂ ನದಿಯ ನೀರಿನಲ್ಲಿ ಭಾರತದ ನ್ಯಾಯಯುತವಾದ ಪಾಲು ಅಷ್ಟನ್ನೂ ಭಾರತವೇ ಬಳಸಿಕೊಳ್ಳಲಿದೆ. ಪಾಕಿಸ್ತಾನಕ್ಕೆ ಒಂದು ಹನಿಯೂ ದೊರೆಯುವುದಿಲ್ಲ. ಭಾರತದ ರಕ್ತದೊಂದಿಗೆ ಆಟವಾಡಿದ್ದಕ್ಕೆ ಪಾಕಿಸ್ತಾನ ಈ ಬೆಲೆ ತೆರಲೇಬೇಕಾಗುತ್ತದೆ ಎಂದು ಪ್ರಧಾನಿ ಮೋದಿ ಕಡ್ಡಿಮುರಿದಂತೆ ಹೇಳಿದ್ದಾರೆ.

ಪಾಕ್ ವಿರುದ್ಧ ಮೋದಿ ಘರ್ಜನೆ

- ನಾನು ಶಾಂತವಾಗಿದ್ದರೂ ನನ್ನ ರಕ್ತನಾಳಗಳಲ್ಲಿ ಸಿಂದೂರ ಕುದಿಯುತ್ತಲೇ ಇರುತ್ತದೆ.
- ಈ ಮೋದಿ ಭಾರತ ಮಾತೆಯ ಸೇವಕ ಎನ್ನುವುದನ್ನು ಪಾಕಿಸ್ತಾನ ಮರೆತಿದ್ದಕ್ಕೆ ತಕ್ಕಪಾಠ
- ಪಾಕ್ ವಾಯುನೆಲೆಗಳು ಸದ್ಯ ಐಸಿಯುನಲ್ಲಿವೆ-ಪ್ರತಿ ಉಗ್ರ ದಾಳಿಗೂ ಬೆಲೆ ತೆರಬೇಕು
- ಭಾರತ ವಿರುದ್ಧ ಪಾಕಿಸ್ತಾನ ಎಂದೂ ನೇರ ಯುದ್ಧ ಗೆದ್ದಿಲ್ಲ. ಅದಕ್ಕೇ ಉಗ್ರವಾದ ಆಶ್ರಯಿಸಿದೆ
- ಬಿಕಾನೇರ್ ವಿಮಾನ ನಿಲ್ದಾಣ ಮೇಲೂ ಪಾಕ್ ದಾಳಿ ಮಾಡಲು ಯತ್ನಿಸಿ ವಿಫಲಗೊಂಡಿತು
- ಭಾರತದ ದಾಳಿಯಲ್ಲಿ ಪಾಕಿಸ್ತಾನದ ರಹೀಮ್ ಯಾರ್ ಖಾನ್ ವಾಯುನೆಲೆ ಧ್ವಂಸಗೊಂಡಿದೆ
- ಭಾರತದಲ್ಲಿ ಭಯೋತ್ಪಾದಕ ದಾಳಿ ನಡೆಸಿದರ ಪಾಕಿಸ್ತಾನ ಸೇನೆ ಮತ್ತು ಆರ್ಥಿಕತೆ ಬೆಲೆ ತೆರಬೇಕು
- ಪಾಕ್ ಜತೆ ವ್ಯಾಪಾರ, ಶಾಂತಿ ಮಾತುಕತೆ ಅಸಾಧ್ಯ: ಪಾಕ್ ಆಕ್ರಮಿತ ಕಾಶ್ಮೀರ ವಿಚಾರವಷ್ಟೇ ಚರ್ಚೆ

ಸರ್ವಪಕ್ಷ ನಿಯೋಗದಲ್ಲಿ ದಕ್ಷಿಣ ಕನ್ನಡ ಸಂಸದ ಕ್ಯಾ.ಬ್ರಿಜೇಶ್ ಚೌಟ

ಪಾಕ್ ಉಗ್ರವಾದ: ವಿದೇಶಕ್ಕೆ ಕನಿಮೋಳಿ ನಿಯೋಗ

ದೆಹಲಿ: 'ಆಪರೇಷನ್ ಸಿಂದೂರ' ಕಾರ್ಯಾಚರಣೆ ಮತ್ತು ಪಾಕಿಸ್ತಾನದಿಂದ ನಡೆಯುವ ಗಡಿಯಾಚೆಗಿನ ಭಯೋತ್ಪಾದನೆ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದ ನಾಯಕರ ಗಮನ ಸೆಳೆದು ಮನದಟ್ಟು ಮಾಡಿಕೊಡಲೆಂದೇ ಕೇಂದ್ರ ಸರಕಾರ ಡ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಸಂಸದೆ ಕನಿಮೋಳಿ ನೇತೃತ್ವದಲ್ಲಿ ರಚಿಸಿರುವ 'ಸರ್ವಪಕ್ಷ ನಿಯೋಗ'ದ ಎರಡನೇ ತಂಡ ಗುರುವಾರ ವಿದೇಶ ಯಾತ್ರೆ ಆರಂಭಿಸಿದೆ. ಈ ನಿಯೋಗದಲ್ಲಿ ದಕ್ಷಿಣ ಕನ್ನಡದ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರೂ ಇದ್ದಾರೆ ಎಂಬುದು ಉಲ್ಲೇಖಾರ್ಹ.

ರಾಜತಾಂತ್ರಿಕ ಕಾರ್ಯತಂತ್ರದ ಭಾಗವಾಗಿ, ಪಾಕಿಸ್ತಾನ ಪ್ರಚೋದಿತ ಭಯೋತ್ಪಾದನೆ ಬಗ್ಗೆ ಜಾಗತಿಕ ಸಮುದಾಯಕ್ಕೆ ವಾಸ್ತವಾಂಶಗಳನ್ನು ವಿವರಿಸಲು ಡಿಎಂಕೆ ನಾಯಕಿ, ಸಂಸದೆ ಕನಿಮೋಳಿ ಅವರ ನೇತೃತ್ವದಲ್ಲಿ 6 ಸಂಸದರು, ಇಬ್ಬರು ಮಾಜಿ ರಾಯಭಾರಿಗಳ ನಿಯೋಗ ಗುರುವಾರ ಬೆಳಗ್ಗೆ 11 ಗಂಟೆಗೆ ದೆಹಲಿಯಿಂದ ಹೊರಟಿದ್ದು, ಮೊದಲು ರಷ್ಯಾಕ್ಕೆ ಭೇಟಿ ನೀಡುತ್ತಿದೆ. ನಂತರ ಮೇ 25ರಂದು ಸ್ಲೊವೇನಿಯಾ, ಮೇ 27ಕ್ಕೆ ಗ್ರೀಸ್, ಮೇ 29ಕ್ಕೆ ಲಾತ್ವಿಯಾ ಮತ್ತು ಮೇ 31ರಂದು ಸ್ಪೇನ್ ದೇಶಕ್ಕೆ ಭೇಟಿ ನೀಡಲಿದೆ.

ನಿಯೋಗ: ಡಿಎಂಕೆ ಸಂಸದೆ ಕನಿಮೋಳಿ, ಬಿಜೆಪಿ ಸಂಸದ ಕ್ಯಾ. ಸಂದೀಪ್ ಚೌಟ, ಸಮಾಜವಾದಿ ಪಕ್ಷದ ಸಂಸದ ರಾಜೀವ್ ರೈ, ನ್ಯಾಷನಲ್ ಕಾನ್ಫರೆನ್ಸ್ ಸಂಸದ ಮಿಯಾನ್ ಅಲ್ತಾಫ್ ಅಹ್ಮದ್, ಆರ್‌ಜೆಡಿ ಪಕ್ಷದ ಸಂಸದ ಪ್ರೇಮ್ ಚಂದ್ ಗುಪ್ತಾ, ಎಎಪಿ ಪಕ್ಷದ ಸಂಸದ ಅಶೋಕ್ ಮಿತ್ತಲ್ ಇದ್ದಾರೆ. ಅಲ್ಲದೇ, ನೇಪಾಳದ ಮಾಜಿ ರಾಯಭಾರಿ ಮಂಜೀವ್ ಪುರಿ ಹಾಗೂ ಫ್ರಾನ್ಸ್‌ನಲ್ಲಿನ ಮಾಜಿ ರಾಯಭಾರಿ ಜಾವೇದ್ ಅಶ್ರಫ್ ಸಹ ನಿಯೋಗದಲ್ಲಿದ್ದಾರೆ.

ಸಂಜಯ್ ಝಾ ನಿಯೋಗ

ಇನ್ನೊಂದೆಡೆ, ಜೆಡಿಯು ಸಂಸದ ಸಂಜಯ್ ಝಾ ನೇತೃತ್ವದ 7 ಸಂಸದರು ಮತ್ತು ಒಬ್ಬರು ರಾಯಭಾರಿ ಇರುವ ನಿಯೋಗ ಬುಧವಾರ ಮತ್ತು ಗುರುವಾರ ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಜಪಾನ್‌ಗೆ ಭೇಟಿ ನೀಡಿದೆ. ಯುಎಇನ ಅಬುಧಾಬಿ ನಗರದಲ್ಲಿ ಹಾಗೂ ಜಪಾನ್ ಟೋಕಿಯೊದಲ್ಲಿ ಆಯಾ ದೇಶದ ಪ್ರಮುಖರ ಜತೆ ಸಭೆ ನಡೆಸಿ ಪಾಕಿಸ್ತಾನದ ಅಸಲಿ ಮುಖವನ್ನು ಅನಾವರಣಗೊಳಿಸುವ ಕೆಲಸ ಮಾಡಿದೆ.

ಮೊದಲ ಬಾರಿಗೆ ಸಂಸದನಾದ ನನಗಿದು ದೊಡ್ಡ ಅವಕಾಶವಾಗಿದೆ. ಭಯೋತ್ಪಾದನೆ ವಿರುದ್ಧ, ನಿರ್ದಿಷ್ಟವಾಗಿ ಪಾಕಿಸ್ತಾನ ಪ್ರೇರಿತ ಜಿಹಾದಿ ಉಗ್ರವಾದ ಅಪಾಯಗಳ ಬಗ್ಗೆ ಜಗತ್ತಿಗೆ ತಿಳಿಸಿಕೊಡುವುದು ಸೇನೆಯಲ್ಲಿ ಸೇವೆ ಸಲ್ಲಿಸಿದ ಯೋಧನಾಗಿ ಇದು ದೊಡ್ಡ ಜವಾಬ್ದಾರಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತದ ದೃಢ ಮತ್ತು ಒಗ್ಗಟ್ಟಿನ ಸಂದೇಶವನ್ನು ಜಾಗತಿಕ ಮಟ್ಟದಲ್ಲಿ ಸಾರುವುದಕ್ಕೆ ಈ ಅಪರೂಪದ ಅವಕಾಶ ದೊರಕಿದೆ. ನಿಯೋಗದ ಭಾಗವಾಗಿರುವುದು ಬಹಳ ಹೆಮ್ಮೆ ಮತ್ತು ಸೌಭಾಗ್ಯದ ಸಂಗತಿ.

-ಕ್ಯಾ. ಬ್ರಿಜೇಶ್ ಚೌಟ
ದಕ್ಷಿಣ ಕನ್ನಡ ಸಂಸದ

ಪ್ಯಾಲೆಸ್ತೀನ್ ಉಗ್ರನ ಗುಂಡೇಟಿಗೆ ಇಸ್ರೇಲ್ ಅಧಿಕಾರಿ, ಸಂಗಾತಿ ಬಲಿ

ವಾಷಿಂಗ್ಟನ್: ವಾಷಿಂಗ್ಟನ್‌ನಲ್ಲಿರುವ ಇಸ್ರೇಲ್ ರಾಯಭಾರ ಕಚೇರಿಯ ಅಧಿಕಾರಿ ಮತ್ತು ಅವರ ಭಾವೀ ಪತ್ನಿಯನ್ನು ಪ್ಯಾಲೆಸ್ತೀನ್ ಉಗ್ರನೊಬ್ಬ ಗುಂಡಿಕ್ಕಿ ಕೊಂದಿದ್ದಾನೆ.

ಯಹೂದಿ ವಸ್ತು ಸಂಗ್ರಹಾಲಯದ ಬಳಿ ಬುಧವಾರ ಸಂಜೆ ಬಂದೂಕುಧಾರಿ 'ಫ್ರೀ ಪ್ಯಾಲೆಸ್ತೀನ್' ಹೆಸರಲ್ಲಿ ಗುಂಡಿನ ದಾಳಿ ನಡೆಸಿದ್ದಾನೆ. ಕೆಲವೇ ದಿನಗಳಲ್ಲಿ ವಿವಾಹ ಮಾಡಿಕೊಳ್ಳಲಿದ್ದ ಇಸ್ರೇಲ್ ರಾಯಭಾರ ಕಚೇರಿ ಅಧಿಕಾರಿ ಯಾರೋನ್ ಲಿಸ್ಚಿನ್ಸ್ಕಿ(20) ಮತ್ತು ಅವರ ಭಾವೀ ಪತ್ನಿ ಗುಂಡಿನ ದಾಳಿಗೆ ಬಲಿಯಾಗಿದ್ದಾರೆ.

ಅಮೆರಿಕದ ರಾಜಧಾನಿ ನಗರದಲ್ಲಿರುವ 'ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್'(ಎಫ್‌ಬಿಐ) ಕ್ಷೇತ್ರ ಕಚೇರಿ ಸಮೀಪದಲ್ಲೇ ಇರುವ ಕ್ಯಾಪಿಟಲ್ ಯಹೂದಿ ವಸ್ತು ಸಂಗ್ರಹಾಲಯದ ಹೊರಗೆ ಗುಂಡಿನ ದಾಳಿ ನಡೆದಿದೆ.

ವಿವಾಹ ನಿಶ್ಚಿತಾರ್ಥಕ್ಕಾಗಿ ಉಂಗುರ ಖರೀದಿಗೆಂದು ಜತೆಯಾಗಿ ಬಂದಿದ್ದ ಭಾವೀ ದಂಪತಿಗಳ ಮೇಲೆ ಗುಂಡಿನ ದಾಳಿ ನಡೆಸಿದ ಇಲಿಯಾಸ್ ರೋಡ್ರಿಗಜ್ ಎಂಬಾತನನ್ನು ವಾಷಿಂಗ್ಟನ್ ಡಿಸಿ ಪೊಲೀಸರು ಗುಂಡಿನ ದಾಳಿ ನಡೆದ ಕೆಲ ಗಂಟೆಗಳ ಬಳಿಕ ಬಂಧಿಸಿ, ಬಂದೂಕು ವಶಪಡಿಸಿಕೊಂಡಿದ್ದಾರೆ ಎಂದು ಹೋಮ್‌ಲ್ಯಾಂಡ್ ಸೆಕ್ಯುರಿಟಿ ಇಲಾಖೆ ಕಾರ್ಯದರ್ಶಿ ಕ್ರಿಸ್ಟಿ ನೋಯೆಮ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.



ಭಯೋತ್ಪಾದಕ ಕೃತ್ಯ

ಈ ಗುಂಡಿನ ದಾಳಿ ಯಹೂದಿಗಳ ವಿರುದ್ಧದ ಭಯೋತ್ಪಾದಕ ಕೃತ್ಯ. ಗುಂಡಿನ ದಾಳಿಗೆ ಕಾರಣ ಏನೆಂದು ಪೊಲೀಸರು ತನಿಖೆ ನಡೆಸಿದ್ದಾರೆ. ಕೃತ್ಯಕ್ಕೆ ಕಾರಣರಾದವರ ವಿರುದ್ಧ ಅಮೆರಿಕ ಅಧಿಕಾರಿಗಳು ಕಠಿಣ ಕ್ರಮ ಕೈಗೊಳ್ಳುತ್ತಾರೆ ಎಂಬ ವಿಶ್ವಾಸ ನಮಗಿದೆ. ಇಸ್ರೇಲ್ ತನ್ನ ನಾಗರಿಕರು ಮತ್ತು ಪ್ರತಿನಿಧಿಗಳನ್ನು ರಕ್ಷಿಸಲು ದೃಢನಿಶ್ಚಯದಿಂದ ಕಾರ್ಯನಿರ್ವಹಿಸುತ್ತದೆ ಎಂದು ವಿಶ್ವಸಂಸ್ಥೆಯಲ್ಲಿ ಇಸ್ರೇಲ್ ರಾಯಭಾರಿಯಾಗಿರುವ ಡ್ಯಾನಿ ಡ್ಯಾನನ್ ಹೇಳಿದ್ದಾರೆ.

ಪಾಕ್ ಐಎಸ್‌ಐನಿಂದ ತರಬೇತಾಗಿದ್ದ ಬೇಹುಗಾರರಿಬ್ಬರು ಸೆರೆ | ನೇಪಾಳದ ಅನ್ಸಾರಿ, ಭಾರತೀಯ ಆಜಂ ಐಎಸ್‌ಐ ಏಜೆಂಟ್ಸ್

ಪಹಲ್ಗಾಮ್‌ಗೂ ಮುನ್ನ ಅತಿದೊಡ್ಡ ದಾಳಿಗೆ ಐಎಸ್‌ಐ ಸಂಚು!

ದೆಹಲಿ: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿನ ಪ್ರಸಿದ್ಧ ಪ್ರವಾಸಿ ತಾಣ ಪಹಲ್ಗಾಮ್ ಸಮೀಪದ ಬೈಸರನ್ ಹುಲ್ಲುಗಾವಲಿನಲ್ಲಿ ಪಾಕಿಸ್ತಾನ ಮೂಲದ ಭಯೋತ್ಪಾದಕರು ದಾಳಿ ನಡೆಸಿ 26 ಮಂದಿಯನ್ನು ಹತ್ಯೆ ಮಾಡಿದ ಘಟನೆಗೂ ಮುನ್ನವೇ 'ಐಎಸ್‌ಐ' ಭಾರತದಲ್ಲಿ ಪಹಲ್ಗಾಮ್‌ಗಿಂತಲೂ ದೊಡ್ಡ ಮಟ್ಟದ ಭಯೋತ್ಪಾದಕ ದಾಳಿಯನ್ನು ನಡೆಸಲು ಸಂಚು ಹೂಡಿತ್ತು ಎಂಬುದಾಗಿದೆ. ಈ ವಿಚಾರ ಪಾಕ್‌ನ ಐಎಸ್‌ಐ ತರಬೇತಿ ಪಡೆದ ಇಬ್ಬರು ಬೇಹುಗಾರರ ಬಂಧನದಿಂದ ಬಹಿರಂಗಗೊಂಡಿದೆ.

ಸುದೈವವಶಾತ್, ಐಎಸ್‌ಐನ ದೊಡ್ಡ ದಾಳಿಯ ಸಂಚನ್ನು ಭಾರತದ ಗುಪ್ತಚರ ಸಂಸ್ಥೆಗಳು ಮುಂಚಿತವಾಗಿಯೇ ಪತ್ತೆ ಹಚ್ಚಿ, ವಿಫಲಗೊಳ್ಳುವಂತೆ ಮಾಡಿದವು ಎಂದು ಉನ್ನತ ಮೂಲಗಳು ತಿಳಿಸಿವೆ.

ಭಾರತೀಯ ಸೇನಾಪಡೆಗಳ ಚಟುವಟಿಕೆಗಳ ಮಾಹಿತಿ ಸಂಗ್ರಹಿಸಿ ರವಾನಿಸಲೆಂದೇ ಪಾಕ್ ಗುಪ್ತಚರ ಸಂಸ್ಥೆ 'ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್' (ಐಎಸ್‌ಐ) ಒಬ್ಬ ನೇಪಾಳಿ, ಮತ್ತೊಬ್ಬ ಭಾರತೀಯನಿಗೆ ತರಬೇತಿ ನೀಡಿ ನಿಯೋಜಿಸಿತ್ತು. 'ಐಎಸ್‌ಐ' ಏಜೆಂಟ್, ನೇಪಾಳ ಮೂಲದ ಅನ್ಸಾರುಲ್ ಮಿಯಾ ಅನ್ಸಾರಿಯನ್ನು ದೆಹಲಿ ಹೋಟೆಲ್‌ನಲ್ಲಿ ಬಂಧಿಸಿದ್ದರೆ, ಅನ್ಸಾರಿ ನೀಡಿದ ಸುಳಿವಿನ ಮೇರೆಗೆ ರಾಂಚಿಯಲ್ಲಿ ಅಖ್ಲಾಕ್ ಅಜಮ್‌ನನ್ನು ಬಂಧಿಸಲಾಗಿದೆ. ಅನ್ಸಾರಿ ನೇಪಾಳದವನಾಗಿದ್ದರೆ, ಆಜಂ ಭಾರತೀಯ ಪ್ರಜೆ. ಪಹಲ್ಗಾಮ್‌ಗೂ ಮುನ್ನವೇ ದೊಡ್ಡ ಮಟ್ಟದ ದಾಳಿಗೆ ಐಎಸ್‌ಐ ಸಂಚು ಹೂಡಿತ್ತು ಎಂಬುದು ಇವರಿಬ್ಬರ ವಿಚಾರಣೆ ವೇಳೆ ತಿಳಿದುಬಂದಿದೆ. ಅನ್ಸಾರಿ ಬಳಿ ಇದ್ದ ಡಿಜಿಟಲ್ ಪುರಾವೆ ಮತ್ತಿತರ ದಾಖಲೆ ಪತ್ರಗಳಲ್ಲಿ ಭಾರತೀಯ ಸಶಸ್ತ್ರ ಪಡೆಗೆ ಸಂಬಂಧಿಸಿದ ಸೂಕ್ಷ್ಮ ವಿಚಾರಗಳಿದ್ದವು ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಕೇಂದ್ರೀಯ ತನಿಖಾ ಸಂಸ್ಥೆಗಳು ಜನವರಿ-ಮಾರ್ಚ್ ವೇಳೆ ರಹಸ್ಯ ಕಾರ್ಯಾಚರಣೆ ನಡೆಸಿದ್ದಾಗ ಸಂಗ್ರಹವಾಗಿದ್ದ ಮಾಹಿತಿ ಆಧರಿಸಿ ಅನ್ಸಾರಿಯ ಬಂಧನವಾಗಿದೆ. ವಿಚಾರಣೆ ವೇಳೆ ಅನ್ಸಾರಿ ಐಎಸ್‌ಐನ ಬೇಹುಗಾರಿಕೆ ಜಾಲದ ಬಗ್ಗೆ ಮಾಹಿತಿ ಬಹಿರಂಗಪಡಿಸಿದ್ದಾನೆ. ಅನ್ಸಾರಿ ಐಎಸ್‌ಐನ ಸೂಚನೆ ಮೇರೆಗೇ ಪಾಕ್‌ನಿಂದ ಹೊರಟು ನೇಪಾಳ ಮೂಲಕ ಭಾರತ ಪ್ರವೇಶಿಸಿ ದೆಹಲಿಗೆ ಬಂದಿದ್ದ. ಪಾಕ್‌ಗೆ ವಾಪಸಾಗಲು ಸಿದ್ಧನಾಗಿದ್ದ ಆತನನ್ನು ಗುಪ್ತಚರ ಇಲಾಖೆ ಮಾಹಿತಿ ಮೇರೆಗೆ ಇತ್ತೀಚೆಗೆ ಬಂಧಿಸಲಾಗಿದೆ.

ಸ್ಲೀಪರ್ ಸೆಲ್ ಶೋಧ: ಆಪರೇಷನ್ ಸಿಂದೂರ್ ಬಳಿಕ ದೇಶಾದ್ಯಂತ ಅಡಗಿರುವ ಉಗ್ರರು, ಉಗ್ರ ಚಟುವಟಿಕೆಗಳಿಗೆ ನೆರವಾಗುವವರು, ಪಾಕ್ ಪರ ಗೂಢಾಚಾರಿಕೆ ನಡೆಸುವವರ ವಿರುದ್ಧ ಸರಣಿಯೋಪಾದಿ ಕಾರ್ಯಾಚರಣೆ ನಡೆದಿದ್ದು, ಐಎಸ್‌ಐ ಮಾಡ್ಯೂಲ್‌ಗಳನ್ನು ಪತ್ತೆ ಮಾಡಿ 20ಕ್ಕೂ ಅಧಿಕ ಸ್ಲೀಪರ್ ಸೆಲ್ ಏಜೆಂಟ್‌ಗಳನ್ನು ಬೇಹುಗಾರರನ್ನು ಬಂಧಿಸಲಾಗಿದೆ.

ಮಾಹಿತಿ ರವಾನೆಗೆ ರಾಂಚಿಯ ಆಜಂ

ಜಾರ್ಖಂಡ್ ರಾಜ್ಯದ ರಾಂಚಿ ನಿವಾಸಿಯಾದ ಅಖ್ಲಾಕ್ ಆಜಂ, ಪಾಕಿಸ್ತಾನದ ಹ್ಯಾಂಡ್ಲರ್ಸ್‌ಗಳ ಜತೆಗೆ ಸತತ ಸಂಪರ್ಕದಲ್ಲಿದ್ದ. ಅನ್ಸಾರಿ ಕಲೆ ಹಾಕುತ್ತಿದ್ದ ಸೂಕ್ಷ್ಮ ಮಾಹಿತಿಗಳು, ದಾಖಲೆಗಳನ್ನು ಪಾಕ್‌ನ ಐಎಸ್‌ಐಗೆ ತಲುಪಿಸುವ ಕೆಲಸ ಮಾಡುತ್ತಿದ್ದ. ಇವರಿಬ್ಬರೂ ಈ ಮೊದಲು ದೆಹಲಿಯಲ್ಲಿನ ಪಾಕ್ ರಾಯಭಾರ ಕಚೇರಿಯಲ್ಲಿದ್ದ ಐಎಸ್‌ಐ ಅಧಿಕಾರಿ ಮುಜುಮ್ಮಿಲ್ ಮತ್ತು ಎಹ್ಸಾನ್ ಉರ್ ರಹೀಂ(ಡ್ಯಾನಿಸ್) ಜತೆಗೂ ಸಂಪರ್ಕದಲ್ಲಿದ್ದರು. ಅನ್ಸಾರಿ, ಆಜಂ ನೀಡುತ್ತಿದ್ದ ಸೇನಾ ಚಟುವಟಿಕೆಗಳ ಮಾಹಿತಿಗಳನ್ನು ಸ್ಥಳೀಯ ಯೂಟ್ಯೂಬರ್‌ಗಳಿಗೆ ದಾಟಿಸುತ್ತಿದ್ದ ಮುಜುಮ್ಮಿಲ್ ಮತ್ತು ಡ್ಯಾನಿಷ್, ಭಾರತದ ವಿರುದ್ಧವಾಗಿ ವರದಿಗಳು, ಕಾರ್ಯಕ್ರಮಗಳು ಬಿತ್ತರವಾಗುವಂತೆ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ದೊಡ್ಡ ಮಟ್ಟದ ದಾಳಿಗೆ ಸಂಚು

ದೆಹಲಿಯ ಪಾಲಂನಲ್ಲಿರುವ ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳ ನಿಲ್ದಾಣ, ಸಿಜಿಓ ಕಾಂಪ್ಲೆಕ್ಸ್ ಮತ್ತು ದೆಹಲಿ ದಂಡು ಪ್ರದೇಶಗಳ ಮೇಲೆ ತರಬೇತಿ ಪಡೆದ ಭಯೋತ್ಪಾದಕರ ಮೂಲಕ ದೊಡ್ಡ ಮಟ್ಟದಲ್ಲಿ ದಾಳಿ ನಡೆಸಲು ಐಎಸ್‌ಐ ಸಂಚು ಹೂಡಿತ್ತು ಎಂಬುದು ಅನ್ಸಾರಿ, ಆಜಂ ಬಂಧನದಿಂದ ಬಹಿರಂಗಗೊಂಡಿದೆ. ಅಲ್ಲದೇ, ಪಾಕ್‌ನ ಐಎಸ್‌ಐ, ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ ಸಂಘಟನೆ ಸದಸ್ಯರ ಮೂಲಕ ಪಂಜಾಬ್‌ನಲ್ಲಿ ಗ್ರನೇಡ್ ದಾಳಿ ನಡೆಸುವುದಕ್ಕೂ ನೆರವಾಗಿದೆ ಎಂಧು ಬಂಧಿತ ಉಗ್ರರು ತಿಳಿಸಿದ್ದಾರೆ.

ಗುಪ್ತಚರನಾದ ಕ್ಯಾಬ್ ಚಾಲಕ!

ನೇಪಾಳ ಮೂಲದ ಅನ್ಸಾರುಲ್ ಮಿಯಾ ಅನ್ಸಾರಿ 2008ರಿಂದ ಕತಾರ್‌ನಲ್ಲಿ ಕ್ಯಾಬ್ ಚಾಲಕನಾಗಿದ್ದ. ಆತನಿಗೆ ಅಲ್ಲಿ ಐಎಸ್‌ಐ ಏಜೆಂಟ್ ಸಂಪರ್ಕವಾಗಿದೆ. ನಂತರ ಅಯೋಧ್ಯೆಯ ಬಾಬರಿ ಮಸೀದಿ ಧ್ವಂಸ ಮೊದಲಾದ ಸಂಗತಿಗಳನ್ನು ಪದೇ ಪದೇ ಹೇಳಿ ಅನ್ಸಾರಿಯ ಮನಃಪರಿವರ್ತನೆ ಮಾಡಲಾಗಿದೆ. ಉಗ್ರವಾದವನ್ನು ಆತನ ತಲೆಗೆ ತುಂಬಿ 2024ರಲ್ಲಿ ಪಾಕ್‌ಗೆ ಕರೆದೊಯ್ದು ಸೇನೆಯ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿಸಲಾಗಿದೆ. ಅಲ್ಲದೇ 1 ತಿಂಗಳು ಗುಪ್ತಚರ ತರಬೇತಿ ಕೊಡಿಸಿ ಸೂಕ್ಷ್ಮ ಮಾಹಿತಿಗಳನ್ನು ಸಂಗ್ರಹಿಸುವ ವಿಧಾನಗಳನ್ನು ಕಲಿಸಿಕೊಡಲಾಗಿದೆ. ಆ ಬಳಿಕ ಆತ ನೇಪಾಳ ಮಾರ್ಗವಾಗಿ ದೆಹಲಿ ತಲುಪುವಂತೆ ಮಾಡಲಾಗಿದೆ. ಭಾರತದ ಸೇನಾಪಡೆಗಳ ದಾಖಲೆಗಳನ್ನು ಸಂಗ್ರಹಿಸಿ ಪಾಕ್ ಕಳುಹಿಸಿಕೊಡುವ ಕೆಲಸವನ್ನು ತನಗೆ ವಹಿಸಲಾಗಿತ್ತು ಎಂದು ಅನ್ಸಾರಿ ವಿಚಾರಣೆ ವೇಳೆ ಹೇಳಿದ್ದಾನೆ.

ನಕ್ಸಲ್ ದಮನ ವೇಳೆ ಪೊಲೀಸರಿಬ್ಬರು ಹುತಾತ್ಮ

ನಾರಾಯಣಪುರ: ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ಎರಡು ಕಡೆ ನಡೆದ ನಕ್ಸಲ್ ದಮನ ಕಾರ್ಯಾಚರಣೆ ವೇಳೆ ಜಿಲ್ಲಾ ಮೀಸಲು ಪೊಲೀಸ್ ಪಡೆಯ ಇಬ್ಬರು ಸಿಬ್ಬಂದಿ ಹುತಾತ್ಮರಾಗಿದ್ದಾರೆ. ಒಬ್ಬ ಪೊಲೀಸ್ ಸಿಬ್ಬಂದಿ, ನಕ್ಸಲರು ನೆಲದಲ್ಲಿ ಅಡಗಿಸಿಟ್ಟಿದ್ದ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಸ್ಫೋಟದಲ್ಲಿ ಸಾವಿಗೀಡಾದರೆ, ಮತ್ತೊಬ್ಬರು ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ನಕ್ಸಲರ ಗುಂಡೇಟಿಗೆ ಬಲಿಯಾಗಿದ್ದಾರೆ. ದಟ್ಟ ಅರಣ್ಯ ಪ್ರದೇಶವಾದ ಅಭುಜ್ಮದ್‌ನಲ್ಲಿ 30 ಮಾವೋವಾದಿ ನಕ್ಸಲರನ್ನು ಹೊಡೆದುರುಳಿಸಿದ ಜಂಟಿ ಕಾರ್ಯಾಚರಣೆ ಪಡೆಯ ಸಿಬ್ಬಂದಿ ಕೇಂದ್ರ ಸ್ಥಾನಕ್ಕೆ ವಾಪಸಾಗುತ್ತಿದ್ದಾಗ ನಕ್ಸಲರು ನೆಲದಡಿ ಹುದುಗಿಸಿದ್ದ ಐಇಡಿ ಮೇಲೆಯೇ ಬಿಜಾಪುರ ಜಿಲ್ಲಾ ಮೀಸಲು ಪಡೆಯ ಪೊಲೀಸ್ ರಮೇಶ್ ಹೆಮ್ಲಾ ತಿಳಿಯದೇ ಕಾಲಿಟ್ಟಿದ್ದಾರೆ. ತಕ್ಷಣವೇ ಐಇಡಿ ಸ್ಫೋಟಗೊಂಡಿದೆ. ಪರಿಣಾಮ, ರಮೇಶ್ ಹೆಮ್ಲಾ ಸ್ಥಳದಲ್ಲೇ ಸಾವಿಗೀಡಾದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ರಾಜ್ಯದಲ್ಲಿಯೇ ಮತ್ತೊಂದೆಡೆ ಬುಧವಾರ ಮುಂಜಾನೆ ನಕ್ಸಲ್ ನಿಗ್ರಹ ಕಾರ್ಯಾಚರಣೆ ನಡೆದಿದ್ದು, ಡಿಆರ್‌ಜಿಯ ಮತ್ತೊಬ್ಬರು ಪೊಲೀಸ್ ಬಲಿಯಾಗಿದ್ದಾರೆ. ಕೊರ್ರಂ ನಾರಾಯಣಪುರದ ಓಚಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಭಟ್ಬೇಡ ಗ್ರಾಮದ ನಿವಾಸಿ ಖೋಟ್ಲುರಾಮ್ ಕೊರ್ರಂ ಹುತಾತ್ಮರಾದ 2ನೇ ಪೊಲೀಸ್ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ವಸತಿ: ವಿಶೇಷಚೇತನರಿಗೆ ಶೇ.4ರಷ್ಟು ಮೀಸಲು

ದೆಹಲಿ: ವಿಶೇಷಚೇತನರಿಗೆ ಸರಕಾರದ ವಸತಿ ಯೋಜನೆಗಳಲ್ಲಿನ ಹಂಚಿಕೆಯಲ್ಲಿ ಶೇ.4ರಷ್ಟು ಮೀಸಲು ಸೌಲಭ್ಯ ನೀಡುವ ಮಹತ್ವದ ನಿರ್ಧಾರವನ್ನು ಕೇಂದ್ರದ ಎನ್‌ಡಿಎ ಸರಕಾರ ಕೈಗೊಂಡಿದೆ. 'ಸುಗಮ್ಯ ಭಾರತ್' ಅಭಿಯಾನದಡಿ ಎಲ್ಲಾ ನಾಗರಿಕರಿಗೆ ಸಮಾನ ಅವಕಾಶಗಳ ಬದ್ಧತೆಯನ್ನು ಪುನರುಚ್ಚರಿಸುವ ಉದ್ದೇಶದಿಂದ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ ಲಾಲ್ ಖಟ್ಟರ್ ಗುರುವಾರ ಹೇಳಿದ್ದಾರೆ. ವಿಶೇಷಚೇತನರ(ದಿವ್ಯಾಂಗರ) ಹಕ್ಕುಗಳ ಕಾಯಿದೆ-2016ರ ಅನ್ವಯವೇ ಕೇಂದ್ರ ಸರಕಾರದ ವಸತಿ ಸೌಕರ್ಯಗಳಲ್ಲಿ ನ್ಯಾಯಯುತ ಅವಕಾಶ ಸೃಷ್ಟಿಸಿಕೊಡಲಾಗಿದೆ. ಈ ಸಂಬಂಧ ವಸತಿ ಮತ್ತು ನಗರ ವ್ಯವಹಾರಗಳ ನಿರ್ದೇಶನಾಲಯ ಆದೇಶ ಹೊರಡಿಸಿದೆ. ಈ ಉಪಕ್ರಮ ಪ್ರತಿ ನಾಗರಿಕರ ಸಬಲೀಕರಣಕ್ಕೆ ಸರಕಾರದ ಸಮರ್ಪಣೆಯ ಪ್ರತೀಕವಾಗಿದೆ ವಸತಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.



ಕಿಶ್ತ್ವಾರ್ ಕಾರ್ಯಾಚರಣೆ: ಒಬ್ಬ ಯೋಧ ಹುತಾತ್ಮ

ಶ್ರೀನಗರ: ಜಮ್ಮು-ಕಾಶ್ಮೀರದ ಕಿಶ್ತ್ವಾರ್‌ನಲ್ಲಿ ಅಡಗಿರುವ ಉಗ್ರರನ್ನು ದಮನ ಮಾಡಲು ಭದ್ರತಾ ಪಡೆಗಳ ಜಂಟಿ ತಂಡ ಗುರುವಾರ ಬೃಹತ್ ಕಾರ್ಯಾಚರಣೆ ಹಮ್ಮಿಕೊಂಡಿದ್ದು, ಈ ಸಂದರ್ಭ ಉಗ್ರರ ಕಡೆಯಿಂದ ಸಿಡಿದ ಗುಂಡಿಗೆ ಯೋಧರೊಬ್ಬರು ಬಲಿಯಾಗಿದ್ದಾರೆ. ನಾಲ್ವರು ಜೈಶ್-ಎ-ಮೊಹಮ್ಮದ್ (ಜೆಇಎಂ) ಭಯೋತ್ಪಾದಕರು ಕಣಿವೆ ಪ್ರದೇಶದಲ್ಲಿ ಅಡಗಿಕೊಂಡಿದ್ದಾರೆ. ಉಗ್ರರು ಅಡಗಿರುವ ಪ್ರದೇಶವನ್ನು ಭದ್ರತಾ ಪಡೆಗಳು ಸುತ್ತುವರಿದಿದ್ದು, ಕಾರ್ಯಾಚರಣೆ ಮುಂದುವರಿದಿದೆ. ಕಾರ್ಯಾಚರಣೆಯ ತೀವ್ರಗೊಳಿಸಿದ್ದಾಗಲೇ ಗುಂಡಿನ ಚಕಮಕಿ ವೇಳೆ ಭದ್ರತಾ ಪಡೆಯ ಯೋಧರೊಬ್ಬರಿಗೆ ಗುಂಡು ತಾಕಿತು. ಗಂಭೀರ ಗಾಯಗೊಂಡಿದ್ದ ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅಲ್ಲಿ ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದರು ಎಂದು 'ವೈಟ್‌ನೈಟ್ ಕಾರ್ಪ್ಸ್' ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದೆ. ಗುಪ್ತಚರ ಮಾಹಿತಿ ಸಿಕ್ಕ ನಂತರವೇ ಜಂಟಿ ಭದ್ರತಾ ಪಡೆಗಳು ಪ್ರದೇಶವನ್ನು ಸುತ್ತುವರಿದು, ಉಗ್ರರ ನಾಮಾವಶೇಷಕ್ಕೆ ಕಾರ್ಯಾಚರಣೆ ಆರಂಭಿಸಿದವು. ಕಿಶ್ತ್ವಾರ್‌ನ ಕಣಿವೆ ಪ್ರದೇಶದಲ್ಲಿ ಕಾರ್ಯಾಚರಣೆ ಗುರುವಾರ ಸಂಜೆ ಬಳಿಕವೂ ಮುಂದುವರೆದಿದೆ. ನಾಲ್ವರು ಭಯೋತ್ಪಾದಕರು ಅಡಗುತಾಣದಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಭದ್ರತಾ ಪಡೆ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಭಯೋತ್ಪಾದಕರನ್ನು ಎದುರಿಸಲು ಮತ್ತು ಉಗ್ರರು ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ನೋಡಿಕೊಳ್ಳಲು ಸೇನೆಯನ್ನು ಸಜ್ಜುಗೊಳಿಸಲಾಗಿದೆ. ಅಡಗಿಕೊಂಡಿದ್ದ ಭಯೋತ್ಪಾದಕರು ಗುಂಡು ಹಾರಿಸಿದರು. ಇದು ಪರಸ್ಪರರ ನಡುವೆ ಗುಂಡಿನ ಚಕಮಕಿಗೆ ಕಾರಣವಾಯಿತು.

ಆಲಿಕಲ್ಲು ಹೊಡೆತಕ್ಕೆ ಇಂಡಿಗೋ ಮೂತಿ ಛಿದ್ರ

ಶ್ರೀನಗರ: ಆಲಿಕಲ್ಲು ಮಳೆಯ ಹೊಡೆತಕ್ಕೆ ಇಂಡಿಗೋ ವಿಮಾನದ ಮೂತಿ ಛಿದ್ರವಾಗಿದ್ದು, ತುರ್ತು ಭೂಸ್ಪರ್ಶ ಮಾಡಲಾಗಿದೆ. 220 ಪ್ರಯಾಣಿಕರು ಮತ್ತು 7 ಸಿಬ್ಬಂದಿ ಸ್ವಲ್ಪದರಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬುಧವಾರ ಸಂಜೆ ದೆಹಲಿಯಿಂದ ಹೊರಟು ಶ್ರೀನಗರದತ್ತ ಹಾರಾಟ ನಡೆಸಿದ್ದಾಗಲೇ ಆಲಿಕಲ್ಲು ಮಳೆ ಸುರಿಯಲಾರಂಭಿಸಿತು. ದೊಡ್ಡ ಆಲಿಕಲ್ಲೊಂದು 6ಇ2142 ವಿಮಾನದ ಮೂತಿಗೆ ಜೋರಾಗಿ ಅಪ್ಪಳಿಸಿತು. ಪರಿಣಾಮ ವಿಮಾನದ ಮುಂಭಾಗ ಛಿದ್ರವಾಗಿ ವಿಮಾನದೊಳಕ್ಕೆ ಗಾಳಿ ನುಗ್ಗಿ ಇಡೀ ವಿಮಾನ ನಡುಗಲಾರಂಭಿಸಿತು. ವಿಮಾನ ಸಿಬ್ಬಂದಿ ಕಂಗಲಾದರು. ಪ್ರಯಾಣಿಕರು ಭಯದಿಂದ ಚೀರಲಾರಂಭಿಸಿದರು. ಸಮಯಪ್ರಜ್ಞೆ ಮೆರೆದ ಪೈಲಟ್‌ಗಳು ಶ್ರೀನಗರದಲ್ಲಿ ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಿಸಿದರು. 227 ಜನರ ಜೀವ ಕೂದಲೆಲೆ ಅಂತರದಲ್ಲಿ ಪಾರಾಯಿತು. ಆಲಿಕಲ್ಲು ಹೊಡೆತಕ್ಕೆ ಸಿಲುಕಿ ನಿಯಂತ್ರಣ ಕಳೆದುಕೊಳ್ಳುವಂತಾಗಿದ್ದ ವಿಮಾನವನ್ನು ಪೈಲಟ್ ಸಂಬಾಳಿಸಿ ಶ್ರೀನಗರದ ವಿಮಾಣ ನಿಲ್ದಾಣದಲ್ಲಿಯೇ ಸಂಜೆ 6.30ರಲ್ಲಿ ಸುರಕ್ಷಿತವಾಗಿ ಇಳಿಸಿದ್ದಾರೆ. 220 ಪ್ರಯಾಣಿಕರು, 7 ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ಶ್ರೀನಗರ ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಚಿವ ಡಾ.ಶರಣಪ್ರಕಾಶ ಜಿಲ್ಲಾ ಪ್ರವಾಸ ಇಂದು

ಗದಗ: ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ ಆರ್ ಪಾಟೀಲ ಅವರು ಮೇ 23 ರಂದು ಗದಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು ವಿವರ ಇಂತಿದೆ: ಮೇ 23 ರಂದು ಬೆಳಗ್ಗೆ 7.50 ಕ್ಕೆ ಹುಬ್ಬಳ್ಳಿಯಿಂದ ರಸ್ತೆ ಮೂಲಕ ಹೊರಟು ಬೆಳಗ್ಗೆ 8.45 ಗಂಟೆಗೆ ಗದಗ ಜಿಲ್ಲೆಗೆ ಆಗಮಿಸುವರು. ಬೆಳಗ್ಗೆ 10.30 ಗಂಟೆಗೆ ಗದಗ ನಗರದ ಕೊಪ್ಪಳ ರಸ್ತೆಯಲ್ಲಿನ ಭರತ್ ಮೆಗಾ ಸಿಟಿಯಲ್ಲಿ ಸಂಕನೂರು ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗನ ನೂತನ ಕಟ್ಟಡದ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಕೆ.ಎಚ್ ಪಾಟೀಲ್ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಭೇಟಿ ನೀಡುವರು. ಮಧ್ಯಾಹ್ನ 4 ಗಂಟೆಗೆ ಕೆ.ಎಚ್ ಪಾಟೀಲ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡುವರು. ಸಂಜೆ 6 ಗಂಟೆಗೆ ಗದಗ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡುವರು. ರಾತ್ರಿ 10 ಗಂಟೆಗೆ ಗದಗಿನಿಂದ ರೈಲು ಮೂಲಕ ಕಲಬುರಗಿಗೆ ಪ್ರಯಾಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಕನ್ನಡ ಮಾತನಾಡಲು ನಿರಾಕರಣೆ: ಖಂಡನೆ

ನರಗುಂದ: ಕನ್ನಡದ ನೆಲ ಜಲವನ್ನು ಸೇವಿಸಿ ಕನ್ನಡ ಮಾತನಾಡಲು ನಿರಾಕರಿಸಿದ ಬೆಂಗಳೂರಿನ ಚಂದಪೂರ ಶಾಖೆಯ ಭಾರತೀಯ ಸ್ಟೇಟ್ ಬ್ಯಾಂಕಿನ ವ್ಯವಸ್ಥಾಪಕಿಯ ದರ್ಪದ ಮಾತುಗಳು ಖಂಡನೀಯ ಎಂದು ಭೈರನಹಟ್ಟಿ ಶಿರೋಳ ಮಠದ ಶಾಂತಲಿಂಗ ಶ್ರೀಗಳು ಖಂಡಿಸಿದರು. ಭಾರತೀಯ ರಿಸರ್ವ್ ಬ್ಯಾಂಕಿನ ನಿಬಂಧನೆಯ ಪ್ರಕಾರ ಆಯಾ ರಾಜ್ಯದಲ್ಲಿರುವ ಬ್ಯಾಂಕಿನಲ್ಲಿ ಮಾತೃಭಾಷೆಯಲ್ಲಿಯೇ ಗ್ರಾಹಕರ ಜತೆ ವ್ಯವಹರಿಸಬೇಕು. ಆದರೂ ಮಹಿಳಾ ವ್ಯವಸ್ಥಾಪಕಿ ಕನ್ನಡ ಮಾತನಾಡುವಂತೆ ಕೇಳಿಕೊಂಡಾಗ ಇದು ಭಾರತ ಹಿಂದಿಯಲ್ಲಿ ಮಾತನಾಡು ಎಂದು ಆಂಗ್ಲ ಭಾಷೆಯಲ್ಲಿ ಉದ್ಧಟತನದ ಮಾತುಗಳ ಮೂಲಕ ಕನ್ನಡಕ್ಕೆ ಅವಮಾನಿಸಿದ್ದಾರೆ. ಕರ್ನಾಟಕದಲ್ಲಿರುವ ಅನ್ಯರಾಜ್ಯದ ಬ್ಯಾಂಕ್ ಸಿಬ್ಬಂದಿಗೆ ಕನ್ನಡ ಭಾಷೆಯ ತರಬೇತಿ ನೀಡುವ ಮೂಲಕ ಕನ್ನಡ ಭಾಷೆಯಲ್ಲಿ ವ್ಯವಹರಿಸುವುದು ಕಡ್ಡಾಯವಾಗಬೇಕು ಎಂದು ಹೇಳಿದರು.

ಅಪ್ರೆಂಟೀಸ್ ತರಬೇತಿಗೆ ನೇರ ಸಂದರ್ಶನ

ನರಗುಂದ: ಅಪ್ರೆಂಟಿಸ್ ತರಬೇತಿಗೆ ಸಂದರ್ಶನ ಇಂದು ತಾಲೂಕಿನ ಶಿರೋಳ ಶ್ರೀಮಾದಾರ ಚೆನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಹೀರೋ ಮೋಟಾರ್ ಕಾರ್ಪ್ಸ ಬೆಂಗಳೂರು ಇವರ ವತಿಯಿಂದ ಮೇ 23ರಂದು 10 ಅಪ್ರೆಂಟಿಸ್ ನೇರ ಸಂದರ್ಶನದ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಐಟಿಐ ಪಾಸಾದ ಮತ್ತು ಕೊನೆಯ ವರ್ಷ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ಪ್ರಯೋಜನ ಪಡೆದುಕೊಳ್ಳಲು ಬಸವರಾಜ್ ಸಾಲಿಮಠ ಪ್ರಾಚಾರ್ಯರು ಶ್ರೀಮಾದಾರ ಚೆನ್ನಯ್ಯ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಧ್ಯಾಪಕರಿಂದ ವರದಿ ತಯಾರಿಕೆ

ಗದಗ: ಜಿಲ್ಲಾ ಮಾನವ ಅಭಿವೃದ್ಧಿ-2025ರ ವರದಿ ತಯಾರಿಕೆ ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ 2031 ರಾಜ್ಯಾದ್ಯಂತ ತಯಾರಿಸಲು ಸರಕಾರವು ತೀರ್ಮಾನಿಸಿ ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಗದಗ ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾ ಮಾನವ ಅಭಿವೃದ್ಧಿ-2025ರ ವರದಿ ತಯಾರಿಕೆ ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ 2031 ತಯಾರಿಸಲು ತಾಂತ್ರಿಕ ಬೆಂಬಲ ಸಂಸ್ಥೆಯವರು ಸರ್ಕಾರಿ ಅರ್ಥಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರುಗಳು ಮೂಲಕ ತಯಾರಿಸಬೇಕಾಗಿರುತ್ತದೆ. ಸದರಿ ಪ್ರಾಧ್ಯಾಪಕರುಗಳು ಈ ಹಿಂದೆ ಈ ರೀತಿಯ ಚಟುವಟಿಕೆಗಳಲ್ಲಿ ಭಾಗವಹಿಸಿದ ಅನುಭವ ಬಗ್ಗೆ ಸರಕಾರಿ ಪ್ರಾಧ್ಯಾಪಕರುಗಳ curriculum vitaeನ್ನು ಮೇ 29ರಂದು ಅಪರಾಹ್ನ 4 ಗಂಟೆಯೊಳಗಾಗಿ ಜಿಲ್ಲಾ ಪಂಚಾಯತ್, ಗದಗ ಇ-ಮೇಲ್ ವಿಳಾಸ ceozp.gdg@gmail.comಕ್ಕೆ ಕಳುಹಿಸಲಾಗಿದೆ.

ವಿರಾಮ
ಪ್ರತಿ ಭಾನುವಾರ

{ಗೋವಿಂದ ಕಾರಜೋಳ} ಸಂಸದ

ನಮ್ಮ ಪಾಕಿಸ್ತಾನ ಎಂದು ಹೇಳಿಕೆ ನೀಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನಾಚಿಕೆಯಾಗಬೇಕು. ಕಾಂಗ್ರೆಸ್ ನಾಯಕರ ನೆಂಟರು ಪಾಕಿಸ್ತಾನದಲ್ಲಿ ಇದ್ದಹಾಗೆ ಕಾಣಿಸುತ್ತಿದೆ. ಸ್ವಾತಂತ್ರ್ಯ ಸಿಕ್ಕಾಗಿನಿಂದಲೂ ಪಾಕಿಸ್ತಾನ ನಮ್ಮೊಂದಿಗೆ ಸಂಘರ್ಷ ನಡೆಸುತ್ತ ಬಂದಿದೆ.

ವಿದ್ಯಾವರ್ಧಕ ಸಂಘದ ಚುನಾವಣೆಯಲ್ಲಿ ಮತದಾರರು ಬದಲಾವಣೆ ಬಯಸಿದ್ದಾರೆ: ಮೋಹನ ಲಿಂಬೀಕಾಯಿ

ರಾಜಕೀಯ ವ್ಯಕ್ತಿಗಳಿಂದಾಗಿ ಎದುರಾದ ಚುನಾವಣೆ

ಧಾರವಾಡ: ಚುನಾವಣೆಯಲ್ಲಿ ರಾಜಕೀಯ ವ್ಯಕ್ತಿಗಳು ಕೂಡಿಕೊಂಡು, ವಿದ್ಯಾವರ್ಧಕ ಸಂಘದ ಚುನಾವಣೆ ಎದುರಿಸುತ್ತಿದ್ದಾರೆ ಎಂದು ವಿರೋಧಿ ಬಣ ಹೇಳುತ್ತಿದೆ.

ಆದರೆ ರಾಜಕೀಯ ಮಾಡಲು ಬಹಳಷ್ಟು ಕ್ಷೇತ್ರಗಳು ಇವೆ. ನಾನು ವಿದ್ಯಾವರ್ಧಕ ಸಂಘದಲ್ಲಿ ಯಾವುದೇ ರಾಜಕೀಯ ಚಟುವಟಿಕೆ ಮಾಡುವುದಿಲ್ಲ. ವಿದ್ಯಾವರ್ಧಕ ಸಂಘದಲ್ಲಿ ರಾಜಕೀಯ ನಡೆಯಬಾರದು ಎನ್ನುವ ದೃಷ್ಟಿಯಿಂದ ವಿದ್ಯಾವರ್ಧಕ ಸಂಸ್ಥೆ ಶ್ರೇಯೋಭಿವೃದ್ಧಿ ಆಗಬೇಕೆಂದು ನಾವು ಚುನಾವಣೆಗೆ ನಿಂತಿದ್ದೇವೆ ಎಂದು ವಿದ್ಯಾವರ್ಧಕ ಸಂಘದ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಮೋಹನ ಲಿಂಬೀಕಾಯಿ ಹೇಳಿದರು.

ಧಾರವಾಡದ ಕೆಂಪಗೇರಿಯಲ್ಲಿ ಪಾಪು ಅಭಿಮಾನಿ ಬಳಗದ ಅಭ್ಯರ್ಥಿಗಳು ಕರೆದಿದ್ದ ಸುದ್ದಿಗೋಷ್ಠಿಯಲ್ಲಿ, ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಮೋಹನ ಲಿಂಬೀಕಾಯಿ ಮಾತನಾಡಿ, ಬಹುತೇಕ ಎಲ್ಲ ಮತದಾರರನ್ನು ನಾವು ಭೇಟಿಯಾಗಿದ್ದೇವೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಇರುವ ಮತದಾರರನ್ನು ಭೇಟಿಯಾಗಿದ್ದು, ವಿದ್ಯಾವರ್ಧಕ ಸಂಘದ ಬಗ್ಗೆ ಅಭಿವೃದ್ಧಿ ಚಿಂತನೆ ಹೊಂದಿದವರು ಇದ್ದಾರೆ. ಈ ಬಾರಿ ಮತದಾರರು ಬದಲಾವಣೆ ಬಯಸಿದ್ದಾರೆ.

ವೀರಣ್ಣಾ ರಾಜೂರು ಅವರು ಅವಿರೋಧವಾಗಿ ಆಯ್ಕೆಯಾದರೆ ನಮ್ಮ ಬೆಂಬಲ ಸದಾ ಇರುತ್ತೆ. ಅದಕ್ಕಾಗಿ ನಾವು ಒಗ್ಗಟಾಗಿ ಕೆಲಸ ಮಾಡುತ್ತೇವೆ.

ಅಭ್ಯರ್ಥಿಗಳ ಸಮಗ್ರ ಮಾಹಿತಿ ಇರುವ ಪ್ಯಾಂಪಲೇಟ್‌ಗಳನ್ನು ಬಿಡುಗಡೆ ಮಾಡಲಾಯಿತು.

> ಮೃತ್ಯುಂಜಯ ಅಪ್ಪಗಳ ಸಂಶೋದನಾ ಕೇಂದ್ರ ಸ್ಥಾಪಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಈ ಹಿಂದೆ ಡಾ.ನಾಡೋಜ ಪಾಟೀಲ್ ಪುಟ್ಟಪ್ಪ ಅವರು ಸಲ್ಲಿಸಿದ್ದ ಪ್ರಸ್ತಾವನೆಗೆ ಧೂಳು ಹಿಡಿದಿದೆ. ಪಾಪು ಅಭಿಮಾನಿ ಬಳಗದವರು ಆಯ್ಕೆ ಆದರೆ, ನಮ್ಮ ಬದ್ಧತೆ ಪ್ರಕಾರ ಅದಕ್ಕಾಗಿ ನಾವು 1 ಕೋಟಿ ಅನುದಾನವನ್ನು ತರಲು ಪ್ರಯತ್ನ ಮಾಡುತ್ತೇವೆ.
> -ಪ್ರಕಾಶ ಉಡಿಕೇರಿ,
> ಪ್ರಧಾನ ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿ

ಅವರ ಅವಿರೋಧ ಆಯ್ಕೆಯಾದರೆ ಸಾರಸ್ವತ ಲೋಕಕ್ಕೆ ಸಿಗುವ ಗೌರವ ಅಂತಾ ವಿಚಾರ

ಬೆಲ್ಲದರ ಮಾತಿಗೆ ತಿರುಗೇಟು

ಮೋಹನ ಲಿಂಬೀಕಾಯಿ ಅವರಿಗೆ ಮತದಾರರು ಈ ಬಾರಿ ಪಾಠ ಕಲಿಸುತ್ತಾರೆ ಎಂದು ಹೇಳಿದ್ದು, ಅದನ್ನು ನಾನು ಸ್ವಾಗತ ಮಾಡುತ್ತೇನೆ ಎಂದರು.

ಮಾಡಿದಿವಿ. ಅದು ಅವಿರೋಧ ಆಗಲಿಲ್ಲಾ ಚುನಾವಣೆ ನಡೆಯುತ್ತಿದೆ.

ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ಹೆಚ್ಚಿಸಲು ಗುಣಮಟ್ಟದ ಕಾರ್ಯಾಗಾರವನ್ನು ಮಾಡಿದ್ದೇವೆ ಎಂದು ಚುನಾವಣೆಗೆ ನಿಂತಿರುವ ವಿರೋಧಿ ಬಣ ಹೇಳಿದೆ. ಅದು ಎಷ್ಟರಮಟ್ಟಿಗೆ ಸಫಲತೆ ಆಗಿದೆ ಎನ್ನುವುದು ಜಿಲ್ಲೆಯ ಜನರಿಗೆ ಗೊತ್ತಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿ ಪ್ರಕಾಶ ಉಡಿಕೇರಿ ಮಾತನಾಡಿ, ಜಿಲ್ಲೆಯಲ್ಲಿ ಜಿಲ್ಲಾ ಜಾಗೃತಿ ಸಮಿತಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಇದೆ. ವಿದ್ಯಾವರ್ಧಕ ಸಂಘದಲ್ಲಿ ಹಂಚಿಕೆಯಾಗಿರುವ ಮಳಿಗೆಗಳ ಕುರಿತು ಈ ಬಗ್ಗೆ ಸದಸ್ಯರಿಂದಲೇ ದೂರನ್ನು ಕೊಡಲಾಗಿದೆ. ಇದರಲ್ಲಿ ತಾರತಮ್ಯ ಆಗಿದ್ದು ನಿಜ. ವಿದ್ಯಾವರ್ಧಕ ಸಂಘ ಪಾರಂಪರಿಕ ಕಟ್ಟಡವಾಗಿದ್ದು, ಅದರ ಪಕ್ಕದಲ್ಲಿ ತಗಡಿನ ಡಬ್ಬಿ ಹಾಕಿದ್ದು, ಪದಾಧಿಕಾರಿಗಳ ಬೆಂಬಲಿಗನಾಗಿರುವ ಕರೆಯಪ್ಪ ಸುಣಗಾರ ಅವರಿಗೆ ಕೊಟ್ಟಿದ್ದಾರೆ. ಈ ಬಗ್ಗೆ ಟೆಂಡರ್ ಆಗಿದೆಯೇ ಎಂದು ಪ್ರಶ್ನಿಸಿದರು.

ಬೈಯಲಾ ನಿಯಮ ಮೀರಿ ನಿವೃತ್ತಿಯಾದವರ ಆಯ್ಕೆ

ಪಾರಂಪರಿಕ ಕಟ್ಟಡದ ಪಕ್ಕ ಡಬ್ಬಿ ಅಂಗಡಿ ಹಾಕಿದ್ದು ತಪ್ಪು, ಬೈಯಲಾ ಮೀರಿ ನಿವೃತ್ತಿ ಆದವರನ್ನು ಇಬ್ಬರನ್ನು ಆಯ್ಕೆ ಮಾಡಿದ್ದಾರೆ. ಅವರಿಗೆ 25 ಸಾವಿರ ವೇತನವನ್ನು ಕೊಡುತ್ತಿದ್ದಾರೆ ಇಂದು ಪ್ರಶ್ನಾರ್ಹವಾಗಿದೆ ಎಂದು ಪ್ರಕಾಶ ಉಡಿಕೇರಿ ಹೇಳಿದರು. 74 ಕಡೆಗಳಲ್ಲಿ ಶೈಕ್ಷಣಿಕ ಪ್ರಗತಿಯನ್ನು ಮಾಡಲಿಕ್ಕೆ, ಕಾರ್ಯಾಗಾರ ಮಾಡಿದ್ದೇವೆ ಎಂದಿದ್ದಾರೆ. ಆದರೆ ತಮ್ಮ ಕಾರ್ಯಾಗಾರದಲ್ಲಿ ಬಂದವರಿಗೆ ಖಾಸಗಿ ಸಂಸ್ಥೆಯ ಟ್ಯೂಷನ್‌ಗಾಗಿ ಕಡ್ಡಾಯವಾಗಿ ಬರಬೇಕೆಂದು ಹೇಳಲಾಗಿದೆ ಇದಕ್ಕೆ ಉತ್ತರ ಕೊಡಬೇಕು. ವಿದ್ಯಾವರ್ಧಕ ಸಂಘಕ್ಕೆ ನಿಯತಕಾಲಿಕವಾಗಿ, ತನ್ನಿಂದಲೇ ತಾನೆ ಬರುವ ಅನುದಾನ 60 ಲಕ್ಷ ಹಾಗೂ ನಾನು ಈ ಹಿಂದೆ ಪ್ರಧಾನ ಕಾರ್ಯದರ್ಶಿ ಆಗಿದ್ದಾಗ, ನನ್ನ ವೈಯಕ್ತಿಕ ಪ್ರಯತ್ನದಿಂದ 5 ಲಕ್ಷ ಅನುದಾನ ನಾನು ತಂದು ಕೊಡಿಸಿರುವುದು ನಾನು ಮಾಡಿರುವ ಪ್ರಾಮಾಣಿಕ ಕೆಲಸವಾಗಿದೆ.

ಚಂದ್ರಕಾಂತ ಬೆಲ್ಲದರಿಗೆ ತಂದೆಯಷ್ಟೇ ಗೌರವ ಕೊಡುತ್ತೇನೆ

ಚಂದ್ರಕಾಂತ ಬೆಲ್ಲದ ಅವರು, ಗಡಿನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಮಯದಲ್ಲಿ, ಯಾವುದೇ ಅನುದಾನವನ್ನು ಸೂಕ್ತ ರೀತಿಯಲ್ಲಿ ಬಳಸಿಲ್ಲ. ಅವರು ನನ್ನ ತಂದೆಯ ಸಮಾನರಾಗಿ ಗೌರವ ಕೊಡುವವನಾಗಿದ್ದು, ಅವರ ಜತೆಗೆ ಕೆಲಸವನ್ನು ಮಾಡಿರುವೆ ಎಂದು ಲಿಂಬೀಕಾಯಿ ಹೇಳಿದರು. ಇದೇ ಸಂದರ್ಭದಲ್ಲಿ ಚುನಾವಣೆಗೆ ನಿಂತಿರುವ ಅಭ್ಯರ್ಥಿಗಳ ಸಮಗ್ರ ಮಾಹಿತಿ ಇರುವ ಪ್ಯಾಂಪಲೇಟಗಳನ್ನು ಬಿಡುಗಡೆ ಮಾಡಲಾಯಿತು. ಸುದ್ದಿಗೋಷ್ಠಿಯಲ್ಲಿ ಪಾಪು ಅಭಿಮಾನಿ ಬಳಗದ ಎಲ್ಲ 15 ಅಭ್ಯರ್ಥಿಗಳು ಉಪಸ್ಥಿತರಿದ್ದರು.

ಇಂದು ತಿರಂಗಾ ಯಾತ್ರೆ: ಬೆಂಬಲಿಸಲು ಮನವಿ

ಹಾವೇರಿ: ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂದೂರ ದಾಳಿ ನಡೆಸಿ ಪ್ರತ್ಯುತ್ತರ ನೀಡುತ್ತಿರುವ ನಮ್ಮ ದೇಶದ ಸೈನಿಕರಿಗೆ ಆತ್ಮಸ್ಥೈರ್ಯ ತುಂಬು ಕೆಲಸ ಎಲ್ಲರೂ ಕೈ ಜೋಡಿಸಬೇಕು. ಮೇ 23 ರಂದು ಹಾವೇರಿ ನಗರದ ಪುರಸಿದ್ದೇಶ್ವರ ದೇವಸ್ಥಾನದಿಂದ ಬೆಳಗ್ಗೆ ತಿರಂಗಾ ಯಾತ್ರೆ ಆರಂಭವಾಗಿ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಉತ್ಸವ ನಡೆಯಲಿದೆ ಎಂದು ಬಿಜೆಪಿ ಮುಖಂಡ ವೆಂಕಟೇಶ ನಾರಾಯಣಿ ತಿಳಿಸಿದರು.

ನಗರ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ರಕ್ಷಣೆಗಾಗಿ ಉಗ್ರ ರಾಷ್ಟ್ರವಾದ ಪಾಕಿಸ್ತಾನಿಯರ ವಿರುದ್ಧ ನಮ್ಮ ಸೈನಿಕರು ಪ್ರಾಣದ ಹಂಗು ತೊರೆದು ಹಗಲಿರುಲು ದೇಶ ರಕ್ಷಣೆ ಕೆಲಸ ಮಾಡುತ್ತಿದ್ದಾರೆ. ದೇಶ ರಕ್ಷಣೆಯಲ್ಲಿ ತೊಡಗಿರುವ ಎಲ್ಲ ಸೈನಿಕರ ಬೆನ್ನಿಗೆ ನಿಂತು ಬೆಂಬಲಿಸುವ ಕೆಲಸ ಮಾಡಬೇಕು.

ಇಂದು ಹಾವೇರಿಯಲ್ಲಿ ನಡೆಯುವ ತಿರಂಗಾ ಯಾತ್ರೆಗೆ ಪಕ್ಷಾತೀತವಾಗಿ ಅನೇಕ ಸಂಘಟನೆಗಳು ನಮ್ಮೊಂದಿಗೆ ಕೈ ಜೋಡಿಸಿದ್ದು ಎಲ್ಲರೂ ಒಟ್ಟಾಗಿ ಬೃಹತ್ ತಿರಂಗಾ ಯಾತ್ರೆ ಹಮ್ಮಿಕೊಂಡಿದ್ದೇವೆ ಎಂದರು.

ನಗರದ ಪತ್ರಿಕಾ ಭವನದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ವೆಂಕಟೇಶ ನಾರಾಯಣಿ ಮಾತನಾಡಿದರು.

> ನಾನು ಸೈನಿಕನಾಗಿ ನಿವೃತ್ತಿಯಾಗಿದ್ದೇನೆ. ಸೇವಾವಧಿಯಲ್ಲಿ ಐದು ವರ್ಷಗಳ ಕಾಲ ಕಾಶ್ಮೀರದ ಅನೇಕ ಕಡೆಗಳಲ್ಲಿ ಸೇವೆ ಮಾಡಿದ್ದೇನೆ. ದೇಶದ ಒಳಗಡೆಯೇ ಪಾಕಿಸ್ತಾನ ನಂಟು ಹೊಂದಿದವರಿದ್ದಾರೆ. ಕಾಶ್ಮೀರದಲ್ಲಿ ಪ್ರತಿ ಮನೆಯಲ್ಲಿ ಒಬ್ಬ ಉಗ್ರರಿದ್ದಾರೆ. ಮೊದಲು ಇವರನ್ನು ಬಗ್ಗು ಬಡೆಯಬೇಕು. ದೇಶದ ಪ್ರಧಾನಿ ಅವರು ನಮ್ಮ ಸೈನಿಕರಿಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದು ತುಂಬಾ ಸಂತೋಷವಾಗಿದೆ.
> -ಕೆ.ಸಿ ಕೋರಿ, ಮಾಜಿ ಸೈನಿಕ

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮೂರು ಸೇನಾ ಪಡೆಗಳಿಗೆ ಸಂಪೂರ್ಣ ಅಧಿಕಾರ ನೀಡಿ ದೇಶವನ್ನು ಸುಭದ್ರವಾಗಿ ಕಾಪಾಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಜಿ.ಪಂ ಅಧ್ಯಕ್ಷ ಪರಮೇಶ್ವರಪ್ಪ ಮೇಗಳಮನಿ, ಮಾಜಿ ಸೈನಿಕರಾದ ಕೆ.ಸಿ ಕೋರಿ, ವಿರುಪಾಕ್ಷಪ್ಪ, ಹೊನ್ನಪ್ಪ ಎಲಿಗಾರ ಸುಭಾಸ, ಆಂಜನೇಯ ಈಳಗೇರ, ಹನುಮಂತಪ್ಪ ದಾಸರ, ನಗರಸಭೆ ಸದಸ್ಯ ಶಿವಯೋಗಿ ಹುಲಿಕಂತಿಮಠ ಸೇರಿದಂತೆ ಇತರರು ಇದ್ದರು.

ಮನುಕುಮಾರಗೆ ಗ್ಲೋಬಲ್ ಅವಾರ್ಡ್



ಹುಬ್ಬಳ್ಳಿ: ಇಲ್ಲಿನ ಜೆ.ಕೆ ಶಿಕ್ಷಣ ಸಂಸ್ಥೆಯ ತಬಲಾ ಶಿಕ್ಷಕರಾದ ಮನುಕುಮಾರ ಹಿರೇಮಠಗೆ ಬೆಂಗಳೂರಿನಲ್ಲಿ ಗ್ಲೋಬಲ್ ಕನ್ನಡಿಗ ಅವಾರ್ಡನ್ನು ಪ್ರದಾನ ಮಾಡಲಾಯಿತು.

ಬೆಂಗಳೂರಿನ ಕುವೆಂಪು ಸಭಾಂಗಣದಲ್ಲಿ, ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್, ಚೇತನ ಫೌಂಡೇಶನ್ ಧಾರವಾಡ, ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು ಹಾಗೂ ಕರ್ನಾಟಕ ಚಲನಚಿತ್ರ ಕ್ಷೇಮಾಭಿವೃದ್ಧಿ ಮಂಡಳಿ ಇವರ ಸಂಯುಕ್ತ ಆಶ್ರಯದಲ್ಲಿ ಈ ಎಲ್ಲ ಸಂಘಗಳ ಅಧ್ಯಕ್ಷರಾದ ಚಂದ್ರಶೇಖರ ಮಾಡಲಗೇರಿ ಈ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಈ ಎಲ್ಲ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಪುರಸಭೆಯ ಅಧ್ಯಕ್ಷರಾಗಿ ಶಿವಾನಂದ ಆಯ್ಕೆ

ಅಣ್ಣಿಗೇರಿ: ಪಟ್ಟಣದ ಪುರಸಭೆಯ 10ನೇ ಅವಧಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ 16ನೇ ವಾರ್ಡಿನ ಸದಸ್ಯ ಶಿವಾನಂದ ಬೆಳಹಾರ ಹಾಗೂ ಉಪಾಧ್ಯಕ್ಷರಾಗಿ 1ನೇ ವಾರ್ಡಿನ ಸದಸ್ಯ ನಾಗರಾಜ ದಳವಾಯಿ ಅವಿರೋಧವಾಗಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡ ಹಾಗೂ ಉಪಾಧ್ಯಕ್ಷ ಸ್ಥಾನ ಹಿಂದುಳಿದ 'ಅ' ವರ್ಗಕ್ಕೆ ಮೀಸಲಾತಿ ಘೋಷಣೆ ಆಗಿದ್ದರಿಂದ ಅಧ್ಯಕ್ಷ ಸ್ಥಾನಕ್ಕೆ ಸದಸ್ಯ ಶಿವಾನಂದ ಬೆಳಹಾರ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸದಸ್ಯ ನಾಗರಾಜ ದಳವಾಯಿ ಮಾತ್ರ ತಲಾ ಒಂದೊಂದು ನಾಮಪತ್ರ ಸಲ್ಲಿಸಿದ್ದರಿಂದ - ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಹಾಗೂ ತಹಸೀಲ್ದಾರ ಮಂಜುನಾಥ ದಾಸಪ್ಪನವರ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ಶಿವಾನಂದ ಬೆಳಹಾರ ಮಾತನಾಡಿ, ಅಣ್ಣಿಗೇರಿ ನಗರವನ್ನು ರಾಜ್ಯದಲ್ಲಿಯೇ - ಮಾದರಿ ನಗರವನ್ನಾಗಿ ಮಾಡಲು ಸರ್ವ ಸದಸ್ಯರು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದರು. ನನಗೆ ಬೆಂಬಲ ಸೂಚಿಸಿದ ಸರ್ವ ಸದಸ್ಯರಿಗೆ ಮತ್ತು ವಾರ್ಡಿನ ಮತದಾರ ಪ್ರಜೆಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಅಣ್ಣಿಗೇರಿ ಪುರಸಭೆಗೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷ, ಉಪಾಧ್ಯಕ್ಷರಿಗೆ ಶಾಸಕ ಎನ್.ಎಚ್.ಕೋನರಡ್ಡಿ ಸನ್ಮಾನಿಸಿ ಗೌರವಿಸಿದರು.

ಉಪಾಧ್ಯಕ್ಷ ನಾಗರಾಜ ದಳವಾಯಿ ಮಾತನಾಡಿ, ಅಧಿಕಾರಿಗಳು ಸರ್ವಾಧಿಕಾರ ಮಾಡದೇ ಸರ್ವ ಸದಸ್ಯರ ಗಮನಕ್ಕೆ ತಂದು ಕಾರ್ಯಕಲಾಪಗಳನ್ನು ಮಾಡಬೇಕು ಎಂದು ಖಡಕ ಎಚ್ಚರಿಕೆ ನೀಡಿದರು. ನನ್ನ ಆಯ್ಕೆ ನನ್ನ ವಾರ್ಡಿನ ಪ್ರತಿಯೊಂದು ಪ್ರಜೆಗೂ ಸಲ್ಲಬೇಕು ಎಂದರು.

ಮುಖ್ಯಾಧಿಕಾರಿ ವೈ.ಜಿ.ಗದ್ದಿಗೌಡರ, ಈಶ್ವರ ಕಾಳಪ್ಪನವರ, ಮಂಜುನಾಥ ಮಾಯಣ್ಣವರ, ಮುತ್ತು ದ್ಯಾವನೂರ, ಧರ್ಮರಾಜ ಹರನಶಿಕಾರಿ, ರಾಘವೇಂದ್ರ ರಾಮಗಿರಿ, ಚಂದ್ರಗೌಡ ಕಿತ್ತೂರ, ಬಾಬಾಜಾನ ಮುಲ್ಲಾನವರ, ಮಾರುತಿ ಮರಡ್ಡಿ ಉಪಸ್ಥಿತರಿದ್ದರು.



ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಸದಸ್ಯ ಶಿವಾನಂದ ಬೆಳಹಾರ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸದಸ್ಯ ನಾಗರಾಜ ದಳವಾಯಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

> ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ಎಲ್ಲ ಸದಸ್ಯರನ್ನು ಒಗ್ಗೂಡಿಸಿಕೊಂಡು ಪಟ್ಟಣದ ಅಭಿವೃದ್ಧಿಗೆ ಕೈಜೋಡಿಸಬೇಕು. ವಿಶೇಷ ಅನುದಾನವನ್ನು ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.
> -ಎನ್.ಎಚ್.ಕೋನರಡ್ಡಿ, ಶಾಸಕ

ಪ್ರಧಾನಿ ಮೋದಿ ದೂರದೃಷ್ಟಿತ್ವದ ನಾಯಕ

ಧಾರವಾಡ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ, ಕಳೆದ ದಶಕದಲ್ಲಿ ಭಾರತವು ಮೂಲಸೌಕರ್ಯ ಅಭಿವೃದ್ಧಿಯ ಸುವರ್ಣ ಯುಗವನ್ನು ಕಾಣುತ್ತಿದೆ ಎಂದು ರಾಜ್ಯಪಾಲ ಥಾವರಚಂದ ಗೆಹ್ಲೂಟ ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿ ಚಾಲನೆ ನೀಡಿದ, ಪುನರಾಭಿವೃದ್ಧಿ ಆಗಿರುವ ಧಾರವಾಡ ರೈಲ್ವೆ ನಿಲ್ದಾಣ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ರಾಜ್ಯಪಾಲರು, ಈ ಪರಿವರ್ತನಾತ್ಮಕ ಪಯಣದ ಭಾಗವಾಗಿ, ಧಾರವಾಡ ರೈಲು ನಿಲ್ದಾಣವನ್ನು ಮಹತ್ವಾಕಾಂಕ್ಷೆಯ ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿಯಲ್ಲಿ 17,1 ಕೋಟಿ ವೆಚ್ಚದಲ್ಲಿ ವಿಶ್ವ ದರ್ಜೆಯ ಸೌಲಭ್ಯವನ್ನಾಗಿ ಪುನರಾಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ವಿಧಾನ ಪರಿಷತ್ತ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಶಾಸಕ ಅಮೃತ ದೇಸಾಯಿ, ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶಾಕೀರ ಸನದಿ, ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ಮಹಾಪೌರ ರಾಮಪ್ಪ ಬಡಿಗೇರ, ನೈರುತ್ಯ ರೈಲ್ವೆ ವಲಯದ ವ್ಯವಸ್ಥಾಪಕ ನಿರ್ದೇಶಕ ಮುಕುಲ ಸರಣ ಮಾತುರ, ರೈಲ್ವೆ ಐಜಿಪಿ ಆರ್.ಎಸ್.ಪಿ.ಸಿಂಗ್ ವೇದಿಕೆಯಲ್ಲಿದ್ದರು.

ರಾಜ್ಯಪಾಲ ಥಾವರಚಂದ ಗೆಹ್ಲೂಟ ಅವರು ಧಾರವಾಡ ರೈಲ್ವೆ ನಿಲ್ದಾಣ ಉದ್ಘಾಟನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

> ಈ ಆಧುನಿಕ ಜಿ+1 ನಿಲ್ದಾಣವು ಈಗ ಹೊಸ ಭಾರತದ ಸ್ಫೂರ್ತಿಯನ್ನು ಪ್ರತಿಬಿಂಬಿಸು ಅತ್ಯಾಧುನಿಕ ಮೂಲಸೌಕರ್ಯ ಮತ್ತು ಅಂತರ್ಗತ ಸೌಲಭ್ಯಗಳೊಂದಿಗೆ ಪ್ರಯಾಣಿಕರಿಗೆ ವರ್ಧಿತ ಅನುಕೂಲತೆಯನ್ನು ಒದಗಿಸುತ್ತದೆ.
> -ಥಾವರಚಂದ ಗೆಹ್ಲೂಟ, ರಾಜ್ಯಪಾಲ

ಮದ್ಯ ಮಾರಾಟ ವಹಿವಾಟಿನ ಶುಷ್ಕ ದಿನ

ಗದಗ : ಲಕ್ಷ್ಮೇಶ್ವರ ತಾಲೂಕು ಶಿಗ್ಲಿ ಗ್ರಾಮ ಪಂಚಾಯತ್‌ಯ ವಿವಿಧ ಕಾರಣಗಳಿಂದ ಖಾಲಿ ಇರುವ / ತೆರವಾಗಿರುವ ಸ್ಥಾನಗಳಿಗೆ ಉಪಚುನಾವಣೆ-2025 ರ ಹಿನ್ನೆಲೆಯಲ್ಲಿ ಮೇ 25 ರಂದು ಮತದಾನವು ಜರುಗಲಿದೆ. ಈ ಸಮಯದಲ್ಲಿ ಮುಕ್ತ ಹಾಗೂ ಶಾಂತಿಯುತ ಮತದಾನ ಜರುಗಲು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಚುನಾವಣೆ ನಡೆಯುವ ಗ್ರಾಪಂಗಳ ನೀತಿ ಸಂಹಿತೆ ಜಾರಿಯಲ್ಲಿರುವ ಪ್ರದೇಶಗಳ ವ್ಯಾಪ್ತಿಯಲ್ಲಿ ಮತದಾನವು ಮುಕ್ತಾಯಗೊಳ್ಳುವ ಪೂರ್ವದ 48 ಗಂಟೆಗಳನ್ನು ಮದ್ಯ ವಹಿವಾಟಿನ ಶುಷ್ಕ ದಿನಗಳೆಂದು ಘೋಷಿಸಲಾಗಿದೆ. ಲಕ್ಷ್ಮೇಶ್ವರ ತಾಲೂಕು ಶಿಗ್ಲಿ ಗ್ರಾಮ ಪಂಚಾಯತಿಯ ಪ್ರದೇಶಗಳ ವ್ಯಾಪ್ತಿಯಲ್ಲಿ ಮೇ 23 ರ ಸಂಜೆ 5 ಗಂಟೆಯಿಂದ ಮೇ 25 ರ ಮದ್ಯರಾತ್ರಿಯರವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ. ವ್ಯವಹಾರ ಕೇಂದ್ರಗಳಲ್ಲಿ ಮದ್ಯ ಮಾರಾಟ ಸರಬರಾಜು ಮತ್ತು ಸೇವೆಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಹುಯಿಲಗೋಳ: ದುರ್ಗಾದೇವಿ ಜಾತ್ರೆ ಸಂಭ್ರಮ

ಗದಗ: ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುವ ತಾಲೂಕಿನ ಹುಯಿಲಗೋಳ ಗ್ರಾಮದ ಗ್ರಾಮದೇವತೆ ಶ್ರೀದುರ್ಗಾದೇವಿ ಜಾತ್ರೆ ಮೇ 20ರಂದು ಆರಂಭವಾಗಿದೆ. ದೇವಸ್ಥಾನವು ವಿದ್ಯುತ್ ದೀಪಗಳ ಅಲಂಕಾರದಿಂದ ಝಗಮಗಿಸುತ್ತಿದ್ದು, ಗ್ರಾಮದ ಮಹಿಳೆಯರು ಶ್ರೀ ದೇವಿಗೆ ಉಡಿ ತುಂಬುವ ಮೂಲಕ ಭಕ್ತಿ ಸಮರ್ಪಣೆ ಮಾಡಿದರು.

ಸಾಂಪ್ರದಾಯಿಕ ಆಚರಣೆ: ಇನ್ನು ಕಳೆದ ಮೂರು ವರ್ಷದ ಹಿಂದೆ ಕೋವಿಡ್ ಕಾರಣದಿಂದ ಸಂಕ್ಷಿಪ್ತವಾಗಿ ಜಾತ್ರೆ ನಡೆಸಲಾಗಿತ್ತು. ಪ್ರಸ್ತುತ ಏಳು ವರ್ಷಗಳ ಬಳಿಕ ಇದೀಗ ಜಾತ್ರೆ ಅದ್ದೂರಿಯಾಗಿ ನಡೆಯುತ್ತಿದ್ದು, ನಾಡಿನ ವಿವಿಧೆಡೆ ನೆಲೆಸಿರುವ ಗ್ರಾಮಸ್ಥರು ಇದೀಗ ಗ್ರಾಮಕ್ಕೆ ಆಗಮಿಸಿ, ದೇವಿಯ ದರ್ಶನ ಮಾಡುತ್ತಿದ್ದಾರೆ.

ಹೋಳಿಗೆ ಊಟ: ಜಾತ್ರೆಯ ಎರಡನೇ ದಿನವಾದ ಮಹಾ ಅನ್ನಸಂತರ್ಪಣೆ ನಡೆಯಿತು. ಅನ್ನಸಂತರ್ಪಣೆಯಲ್ಲಿ ಗ್ರಾಮಸ್ಥರು ಹೋಳಿಗೆ ಊಟ ಸವಿದರು.

ಸಾಂಪ್ರದಾಯಿಕ ಆಚರಣೆ

ಇನ್ನು ಮೂರು ವರ್ಷಕ್ಕೊಮ್ಮೆ ನಡೆಯುವ ಶ್ರೀ ದುರ್ಗಾ ದೇವಿ ಜಾತ್ರೆಯಲ್ಲಿ ಸಾಂಪ್ರದಾಯಿಕ ಆಚರಣೆಗಳು ಸಾಂಗವಾಗಿ ನಡೆದವು. ಭಕ್ತರು ತಮ್ಮ ಹರಕೆ ತೀರಿಸುವ ಕೆಲಸದಲ್ಲಿ ಮಗ್ನರಾಗಿದ್ದರು.

ಇಂದು ಬೂಂದಿ ಊಟ: ಇನ್ನು ಜಾತ್ರೆಯ ಮೂರನೇ ದಿನವಾದ ಗುರುವಾರ ಬೂಂದಿಯ ಅನ್ನಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಹುಯಿಲಗೋಳ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷ ಟಿಪ್ಪುಸುಲ್ತಾನ ನದಾಫ, ಮುಖಂಡರಾದ ಶರಣಪ್ಪ ಕಡಿಯವರ, ಮುತ್ತು ಪಡೇಸೂರ, ರಮೇಶ ಬೆಳಗಟ್ಟಿ, ಸಂಗಪ್ಪ ಮಾರನಬಸರಿ, ಶೇಖಪ್ಪ ಹಂಚಿನಾಳ, ಬಸನಪ್ಪ ಮಾಗಡಿ, ಲಕ್ಷ್ಮಣ ನೀರಲಗಿ, ಎಲ್.ಬಿ. ಅಂಗಡಿ ಸೇರಿ ಹಲವು ಯುವಕರ ಪಡೆ ಗ್ರಾಮದೇವತೆ ಜಾತ್ರೆ ಯಶಸ್ವಿಗೆ ಶ್ರಮಿಸುತ್ತಿದ್ದಾರೆ.

ರೈಲು ನಿಲ್ದಾಣಕ್ಕೆ ಹಾಲುಮತ ಮಹಾಸಭಾ ಆಗ್ರಹ

ಗದಗ: ಇಡೀ ಏಷ್ಯಾ ಖಂಡದಲ್ಲಿ ಪ್ರಪ್ರಥಮವಾಗಿ ಸಹಕಾರ ಸಂಘವನ್ನು ಸ್ಥಾಪಿಸಿ, ದೇಶಕ್ಕೆ ಕೀರ್ತಿ ತಂದ ಸಹಕಾರ ರಂಗದ ಪಿತಾಮಹಾ ಕಣಗಿನಹಾಳದ ಯಜಮಾನರಾದ ಸಿದ್ದನಗೌಡ ಪಾಟೀಲ ಅವರ ಹೆಸರನ್ನು ನವೀಕೃತಗೊಂಡ ಗದಗ ರೈಲು ನಿಲ್ದಾಣಕ್ಕೆ ಸಹಕಾರ ರಂಗದ ಪಿತಾಮಹ ಕಣಗಿನಹಾಳದ ಯಜಮಾನ ಸಿದ್ದನಗೌಡ ಪಾಟೀಲ ಅವರ ಹೆಸರನ್ನು ಇಡಬೇಕು ಎಂದು ಹಾಲುಮತ ಮಹಾಸಭಾದ ವತಿಯಿಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಸಚಿವರಿಗೆ ಮನವಿ ಸಲ್ಲಿಸಿ ಹಾಲುಮತ ಮಹಾಸಭಾದ ರಾಜ್ಯಾಧ್ಯಕ್ಷ ರುದ್ರಣ್ಣ ಗುಳಗುಳಿ ಅವರು ಮಾತನಾಡಿ, ಕಣಗಿನಹಾಳ ಗ್ರಾಮಕ್ಕೆ ರೈಲು ನಿಲ್ದಾಣ ಸ್ಥಾಪನೆ, ಗ್ರಾಮದಲ್ಲಿ ಸರಕಾರಿ ಶಾಲೆ ನಿರ್ಮಾಣ ಹಾಗೂ ಗ್ರಾಮಕ್ಕೆ ಶಾಶ್ವತವಾಗಿ ಕುಡಿಯುವ ನೀರು ಪೂರೈಕೆ ಮಾಡಲು ಒಂದು ಬಾವಿಯನ್ನು ನಿರ್ಮಿಸಿದರೆ ಸಹಕಾರ ಸಂಘವನ್ನು ಸ್ಥಾಪಿಸುತ್ತೇನೆ ಎಂದು ಭರವಸೆ ನೀಡಿದ್ದರು. ನವೀಕೃತಗೊಂಡ ರೈಲು ನಿಲ್ದಾಣಕ್ಕೆ ಕಣಗಿನಹಾಳದ ಯಜಮಾನರಾದ ಸಿದ್ದನಗೌಡ ಪಾಟೀಲ ಅವರ ಹೆಸರನ್ನು ರೈಲು ನಿಲ್ದಾಣಕ್ಕೆ ಇಡುವುದು ಸೂಕ್ತವಾಗಿದೆ ಎಂದು ಜಿಲ್ಲಾ ಹಾಲುಮತ ಮಹಾಸಭಾ ವತಿಯಿಂದ ಹಾಗೂ ಗದಗ ನಗರದ ಜನತೆಯ ಪರವಾಗಿ ಮನವಿ ಮಾಡಿದರು. ಹಾಲುಮತ ಮಹಾಸಭಾ ಜಿಲ್ಲಾ ಗೌರವಾಧ್ಯಕ್ಷ ನಾಗರಾಜ ಮೆಣಸಗಿ, ಉಪಾಧ್ಯಕ್ಷ ಸೋಮನಗೌಡ ಪಾಟೀಲ, ಕಾರ್ಯದರ್ಶಿ ಮುತ್ತು ಜಡಿ ಪದಾಧಿಕಾರಿ ಸತೀಶ ಗಿಡ್ಡಹನುಮಣ್ಣವರ, ಹನುಮಂತ ಗಿಡ್ಡಹನುಮಣ್ಣವರ ಕುರುಬರ ಸಂಘ ಯುವ ಘಟಕದ ಅಧ್ಯಕ್ಷ ಮಂಜುನಾಥ ಜಡಿ, ಮುತ್ತು ಮುಸಿಗೇರಿ, ಹೇಮಂತ ಗಿಡ್ಡ ಹನುಮಣ್ಣವರ, ಮಾರನಬಸರಿ, ರವಿ ವಗ್ಗನವರ, ಸಿದ್ದು ಯಾಳವಾಡದ, ಮುರುಗೇಶ ಕೋಗಲಿ ಉಪಸ್ಥಿತರಿದ್ದರು.

ಹಾಲುಮತ ಮಹಾಸಭಾದ ವತಿಯಿಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸಮಾಚಾರ ಸಣ್ಣದಲ್ಲ

ಫುಟ್ಬಾಲ್ ಕೋಚ್‌ಗಳ ಆಯ್ಕೆಗೆ ಅರ್ಜಿ

ಬಳ್ಳಾರಿ: ಖೇಲೋ ಇಂಡಿಯಾ ಯೋಜನೆ ಅಡಿ ರಾಜ್ಯದಲ್ಲಿ 31 ಜಿಲ್ಲೆಗಳಲ್ಲಿ ಸಣ್ಣ ಖೇಲೋ ಇಂಡಿಯಾ ಕೇಂದ್ರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದು, ಬಳ್ಳಾರಿ ಜಿಲ್ಲೆಯ ಫುಟ್ಬಾಲ್ ಖೇಲೋ ಇಂಡಿಯಾ ಕೇಂದ್ರಕ್ಕೆ ತರಬೇತು ದಾರರ ಆಯ್ಕೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ ತಿಳಿಸಿದ್ದಾರೆ. ರಾಷ್ಟ್ರಮಟ್ಟದ ಫುಟ್ಬಾಲ್ ಕ್ರೀಡಾಪಟುಗಳು, ಎನ್ ಐಎಸ್, ಡಿಪ್ಲೊಮಾ ಇನ್ ಫುಟ್ಬಾಲ್ ಆಟ ಅಥವಾ ಎಂ.ಪಿ.ಇಡಿ ಫುಟ್‌ಬಾಲ್ ಆಟದಲ್ಲಿ ವಿಶೇಷತೆ ಮತ್ತು ರಾಷ್ಟ್ರೀಯ ಪದಕ ವಿಜೇತ, ರಾಜ್ಯ ಪದಕ ವಿಜೇತ, ರಾಷ್ಟ್ರೀಯ ಮಟ್ಟದಲ್ಲಿ ಪ್ರಾತಿನಿಧ್ಯವಹಿಸಿದ ರಾಜ್ಯದವರು ಅರ್ಜಿ ಸಲ್ಲಿಸಲು ಅರ್ಹರಾಗಿದ್ದು, ಆಸಕ್ತ ಅರ್ಹ ಫುಟ್ಬಾಲ್ ತರಬೇತುದಾರರು ಅರ್ಜಿ ಪಡೆದು ಭರ್ತಿ ಮಾಡಿ ಮೇ 26 ರೊಳಗಾಗಿ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಗರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯಗಳ ಪ್ರವೇಶಾತಿಗೆ ಆನ್‌ಲೈನ್

ಹೊಸಪೇಟೆ: 2025-26ನೇ ಸಾಲಿನಲ್ಲಿ ಹೊಸಪೇಟೆ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಹೊಸಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಜಿಲ್ಲೆಯ ಅರ್ಹ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಇಲಾಖಾ ವೆಬ್ ಸೈಟ್ ಮೂಲಕ ತಿತಿತಿ.ತಿ.ಇಚಿಡಿ.ಟಿಛಿ.ಟಿ ನಲ್ಲಿ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿಗಳನ್ನು ಸಲ್ಲಿಸಬಹು ದಾಗಿದೆ. ಸಲ್ಲಿಸಿದ ಅರ್ಜಿ ಮತ್ತು ಅಗತ್ಯ ಇರುವ ಎಲ್ಲಾ ದಾಖಲಾತಿಗಳೊಂದಿಗೆ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಹೊಸಪೇಟೆ ಕಚೇರಿಗೆ ಅಥ ವಾ ವಸತಿ ನಿಲಯಗಳಿಗೆ ಸಲ್ಲಿಸಬೇಕು. ಡಾ.ಅಂಬೇ ಡ್ಕರ್ ಸರಕಾರ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹೊಸಪೇಟೆ, ಮರಿಯಮ್ಮನಹಳ್ಳಿ, ಕಮಲಾಪುರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯ ಹೊಸಪೇಟೆ, ಕಮಲಾ ಪುರ ಸೇರಿದಂತೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಹೊಸಪೇಟೆ 1,2,3,4 ಮತ್ತು ತಾಂತ್ರಿಕ ಬಾಲಕರ ವಿದ್ಯಾರ್ಥಿ ನಿಲಯ ಹೊಸಪೇಟೆ. ಬಾಲಕಿಯರ ವಿದ್ಯಾರ್ಥಿ ನಿಲಯ ಹೊಸಪೇಟೆ. ಹಂಪಿ ಕನ್ನಡ ವಿವಿಯ ಬಾಲಕರ ವಿದ್ಯಾರ್ಥಿ ನಿಲಯ ಈ ಎಲ್ಲಾ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿಗಳು ಆರಂಭ ವಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 31 ರಂದು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ 9480843076 ಸಂಖ್ಯೆಗೆ ಕಚೇರಿ ಸಮಯದಲ್ಲಿ ಕರೆ ಮಾಡಿ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೆಂಘೆ ಜ್ವರದ ತಡೆಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ಪ್ರತಿ ವರ್ಷ ಮೇ 16ಕ್ಕೆ ರಾಷ್ಟ್ರೀಯ ಡೆಂಗ್ಯೂ ದಿನ ಆಚರಣೆ

ಡೆಂಘೀ ಜ್ವರದ ಬಗ್ಗೆ ಭಯ ಬೇಡ ಎಚ್ಚರವಿರಲಿ

ಬಳ್ಳಾರಿ: ಡೆಂಘೀ ಜ್ವರದ ಅಪಾಯಗಳು ಮತ್ತು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ರೋಗ ಲಕ್ಷಣ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ದೇಶದಲ್ಲಿ ಪ್ರತಿ ವರ್ಷ ಮೇ 16 ರಂದು ರಾಷ್ಟ್ರೀಯ ಡೆಂಘೀ ದಿನ ಆಚರಿಸಲಾಗುತ್ತದೆ ಎಂದು ಮಹಾನಗರ ಪಾಲಿಕೆಯ ಉಪ ಮಹಾಪೌರ ಡಿ.ಸುಕುಂ ಹೇಳಿದರು.

> **ಡೆಂಘೀ ಎಂಬುದು ಸೋಂಕಿತ ಈಡಿಸ್ ಈಜಿಪ್ಟಿ ಸೊಳ್ಳೆಯ ಕಡಿತದಿಂದ ಹರಡುವ ವೈರಸ್ ಆಗಿದ್ದು, ಇದನ್ನು ಸಾಮಾನ್ಯವಾಗಿ ಡೆಂಘೀ ಸೊಳ್ಳೆ ಎಂದು ಕರೆಯಲಾಗುತ್ತದೆ. ಈ ರೋಗವು ಸೊಳ್ಳೆಗಳ ಸಂತಾನೋತ್ಪತ್ತಿ ಪರಿಸ್ಥಿತಿಗಳು ಸೂಕ್ತವಾಗಿರುವ ಮಳೆಗಾಲ ಮತ್ತು ನಂತರ ಹೆಚ್ಚಾಗುತ್ತದೆ. ಡೆಂಘೀ ತಡೆಗಟ್ಟುವ ಕಾರ್ಯಕ್ರಮಗಳಲ್ಲಿ ಸಮುದಾಯ ಭಾಗವಹಿಸುವಿಕೆಯನ್ನುಉತ್ತೇಜಿಸುವುದು.**
> -**ಡಾ.ಎನ್.ಬಸರೆಡ್ಡಿ**, ಜಿಲ್ಲಾ ಶಸ್ತ್ರ ಚಿಕಿತ್ಸ

''ರಾಷ್ಟ್ರೀಯ ಡೆಂಘೀ'' ದಿನಾಚರಣೆ ಅಂಗವಾಗಿ ಮಹಾನಗರ ಪಾಲಿಕೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಮೇಲ್ವಿಚಾರಕರು ಹಾಗೂ ಪೌರ ಕಾರ್ಮಿಕರಿಗೆ ಜಿಲ್ಲಾ ಮಟ್ಟದ ಪುನರ್ ಮನನ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಚೇರಿ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ''ಡೆಂಘೀ ಸೋಲಿಸಲು ಹೆಜ್ಜೆಗಳು: ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡಿ'' ಎಂಬ ಘೋಷವಾಕ್ಯದಡಿ ''ರಾಷ್ಟ್ರೀಯ ಡೆಂಘೀ'' ದಿನಾಚರಣೆ ಅಂಗವಾಗಿ ಮಹಾನಗರ ಪಾಲಿಕೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಮೇಲ್ವಿಚಾರಕರು ಹಾಗೂ ಪೌರ ಕಾರ್ಮಿಕರಿಗೆ ಜಿಲ್ಲಾ ಮಟ್ಟದ ಪುನರ್ ಮನನ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಡೆಂಗ್ಯೂ ಜ್ವರದ ಬಗ್ಗೆ ಭಯ ಬೇಡ ಆದರೆ ಎಚ್ಚರವಿರಲಿ. ಎಲ್ಲರೂ ನಮ್ಮ ಸುತ್ತ ಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಂಡು ಡೆಂಘೀ ರೋಗ ಹರಡದಂತೆ ತಡೆಯೋಣ ಎಂದರು. ಚಿಕಿತ್ಸೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಹರಡುವುದು. ಸರಕಾರದ ಉಪಕ್ರಮಗಳು ಮತ್ತು ಆರೋಗ್ಯ ಸೇವೆಯ ಲಭ್ಯತೆಯನ್ನು ಎತ್ತಿತೋರಿಸುವುದು.

ಡೆಂಘೀ ಋತುವಿಗೆ ಮುನ್ನ ಮುಂಜಾಗ್ರತಾ ಕ್ರಮಕೈಗೊಳ್ಳಲು ಸ್ಥಳೀಯ ಅಧಿಕಾರಿಗಳನ್ನು ಸಜ್ಜುಗೊಳಿಸುವುದು ಎಂದು ತಿಳಿಸಿದರು.

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಆರ್. ಅಬ್ದುಲ್ಲಾ ಪ್ರಾಸ್ತವಿಕವಾಗಿ ಮಾತನಾಡಿ, ರಾಜ್ಯಾದ್ಯಂತ ಡೆಂಗ್ಯೂ ಈಗ ಸ್ಥಳೀಯ ರೋಗವಾಗಿರುವುದರಿಂದ ಹೆಚ್ಚಿನ ಜನರು ಡೆಂಗ್ಯು ಸೋಂಕಿನ ಅಪಾಯದಲ್ಲಿದ್ದಾರೆ.

ರಾಷ್ಟ್ರೀಯ ಡೆಂಘೀ ದಿನ-2025 ನ್ನು ಡೆಂಘೀ ಸೋಲಿಸುವ ಹೆಜ್ಜೆಗಳು: ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡಿ ಎಂಬ ಘೋಷಾವಾಕ್ಯದೊಂದಿಗೆ ಪ್ರಸ್ತುತ ಜಿಲ್ಲೆಯಲ್ಲಿ ಬೀಳುತ್ತಿರುವ ಬೇಸಿಗೆ ಮಳೆ ಹಾಗೂ ಮುಂಬರುವ ಮಳೆಗಾಲದ ದಿನಗಳಲ್ಲಿ ಡೆಂಗಿ ಜ್ವರ ಹರಡುವ ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣಗಳು ಹೆಚ್ಚಾಗಿದ್ದು, ಡೆಂಘೀ ಜ್ವರ ಪ್ರಕರಣವು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಪರಿಣಮಿಸುವ ಸಾಧ್ಯತೆ ಅಧಿಕವಾಗಿರುವ ಹಿನ್ನಲೆಯಲ್ಲಿ ಡೆಂಘೀ ನಿಯಂತ್ರಣದ ಸಂಬಂಧ ಈಡೀಸ್ ಲಾರ್ವ ನಿರ್ಮೂಲನೆಯನ್ನು ತೀರ್ವಗೊಳಿಸುವುದು ಪ್ರಮುಖ ಗುರಿಯಾಗಿದೆ.

> **ಜಿಲ್ಲೆಯಾದ್ಯಂತ ಡೆಂಘೀ ಜ್ವರ ಹರಡುವುದನ್ನು ಎದುರಿಸಲು ಮತ್ತು ನಿಯಂತ್ರಿಸಲು ಆರೋಗ್ಯ ಇಲಾಖೆಯು ಮಾಡುತ್ತಿರುವ ನಿರಂತರ ಪ್ರಯತ್ನಗಳ ಭಾಗವಾಗಿ ಪ್ರತಿ ವರ್ಷ ಮೇ 16 ರಂದು ರಾಷ್ಟ್ರೀಯ ಡೆಂಘೀ ದಿನ ವನ್ನು ಆಚರಿಸಲಾಗುತ್ತದೆ. ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಕಛೇರಿಯ ವಾರ್ಷಿಕವಾಗಿ ಆಯೋಜಿಸುವ ಈ ದಿನವು ಡೆಂಗ್ಯೂ (ಸೊಳ್ಳೆಯಿಂದ ಹರಡುವ ವೈರಸ್) ಬಗ್ಗೆ ಜಾಗೃತಿ ಮೂಡಿಸಲು ಮತ್ತು ತಡೆಗಟ್ಟುವಿಕೆ, ಶಿಕ್ಷಣ ಮತ್ತು ಆರಂಭಿಕ ಹಸ್ತಕ್ಷೇಪ ತಂತ್ರಗಳ ಮೂಲಕ ಸಾಮೂಹಿಕ ಕ್ರಮವನ್ನು ಉತ್ತೇಜಿಸಲು ಸಮರ್ಪಿಸಲಾಗಿದೆ ಹಾಗೂ ಜಿಲ್ಲೆಯಲ್ಲಿ ಯಾವುದೇ ಡೆಂಗಿ ಮರಣ ಪ್ರಕರಣಗಳು ವರದಿಯಾಗದಂತೆ ಸಮಯೋಚಿತರಾಗಿ ಕಾರ್ಯ ನಿರ್ವಹಿಸಲು ಹಾಗೂ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.**
> -**ಡಾ.ವೈ.ರಮೇಶ್**, ಜಿಲ್ಲಾ ಆರೋಗ್ಯ ಮತ್ತು ಕುಟುಂಬ **ಕಲ್ಯಾಣ ಅಧಿಕಾರಿ**

ಡೆಂಘೀ ಜ್ವರ ನಿಯಂತ್ರಣದಲ್ಲಿ ಈಡೀಸ್ ಲಾರ್ವ ನಿರ್ಮೂಲನೆಯೇ ಅಸ್ತ್ರವಾಗಿದ್ದು, ಈಡೀಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡುವುದರ ಮೂಲಕ ಈಡೀಸ್ ಉತ್ಪತ್ತಿಯನ್ನು ನಿಯಂತ್ರಿಸಬಹುದಾಗಿದೆ. ಈ ಸರಳ ವಿಧಾನದಿಂದ ಡೆಂಗ್ಯೂ ಜ್ವರ ಪ್ರಕರಣವನ್ನು ತಡೆಗಟ್ಟಬಹುದಾಗಿದ್ದು, ಸದರಿ ಚಟುವಟಿಕೆಯನ್ನು ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಹಾಗೂ ತಮ್ಮ ದೈನಂದಿನ ಕರ್ತವ್ಯದ ಭಾಗವಾಗಿ ಕೈಗೊಳ್ಳುವಂತೆ ಮಾಡುವುದು ಅಗತ್ಯವಾಗಿದೆ ಎಂದು ಹೇಳಿದರು.

ಡೆಂಘೀ ಜ್ವರದ ಲಕ್ಷಣಗಳು: ತೀವ್ರಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂದೆ ನೋವು, ಸ್ನಾಯು ಮತ್ತು ಕೀಲುನೋವು, ವಾಕರಿಕೆ ಮತ್ತು ವಾಂತಿ, ಚರ್ಮದ ದದ್ದು, ಸೌಮ್ಯ ರಕ್ತಸ್ರಾವ (ಉದಾ: ಮೂಗಿನ ರಕ್ತಸ್ರಾವ, ಒಸಡುಗಳಿಂದ ರಕ್ತಸ್ರಾವ).

ಹೆಚ್ಚಿನ ಡೆಂಘೀ ಪ್ರಕರಣಗಳು ಸೌಮ್ಯವಾಗಿರುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಇದು ತೀವ್ರವಾದ ಡೆಂಘೀಆಗಿ ಮುಂದುವರಿಯಬಹುದು. ಇದನ್ನು ಡೆಂಘೀ ಹೆಮರಾಜಿಕ ಜ್ವಾರ ಎಂದೂ ಕರೆಯುತ್ತಾರೆ. ಇದು ಆಂತರಿಕ ರಕ್ತಸ್ರಾವ, ಅಂಗಾಂಗ ವೈಫಲ್ಯ ಮತ್ತು ಸಾವಿಗೆ ಕಾರಣವಾಗಬಹುದೆಂದು ತಿಳಿಸಿದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಡೆಂಘೀ ನಿಯಂತ್ರಣ ನಮ್ಮೆಲ್ಲರ ಜವಬ್ದಾರಿ ಎಂಬ ಭಿತ್ತಿ ಪತ್ರವನ್ನು ಬಿಡುಗಡೆಗೊಳಿಸಿದರು.

ಬಳಿಕ ಜಿಲ್ಲಾ ವಿಬಿಡಿಸಿ ಸಮಾಲೋಚಕರಾದ ಪ್ರತಾಪ್.ಎಚ್ ಅವರು ಮಹಾನಗರ ಪಾಲಿಕೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳಿಗೆ, ಮೇಲ್ವಿಚಾರಕರಿಗೆ ಹಾಗೂ ಪೌರ ಕಾರ್ಮಿಕರಿಗೆ ಈಡೀಸ್ ಲಾರ್ವ ಉತ್ಪತ್ತಿ ತಾಣಗಳ ನಾಶ ಕಾರ್ಯದ ಕುರಿತು ತರಬೇತಿ ನೀಡಿದರು.

ಡೆಂಘೀ ದಿನಾಚರಣೆ ಅಂಗವಾಗಿ ಜಿಲ್ಲಾ ಆಸ್ಪತ್ರೆ ಮುಂಭಾಗದಲ್ಲಿ ಮಾನವ ಸರಪಳಿ ನಿರ್ಮಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳಾದ ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ವೀರೇಂದ್ರಕುಮಾರ್, ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ವಿಬಿಡಿಸಿ ಕಾರ್ಯಕ್ರಮ ಅನುಷ್ಠನಾ ಅಧಿಕಾರಿಗಳಾದ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಈಶ್ವರ ದಾಸಪ್ಪನವರ ಸೇರಿದಂತೆ ರವೀಂದ್ರ ಜಿನಗಾ, ಮರಿಬಸವನ ಗೌಡ ಚಾನಾಳ್ ಹಾಗೂ ಶಕುಂತಲಾ.ಬಿ, ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ವಿಬಿಡಿಸಿ ಸಿಬ್ಬಂದಿ ವರ್ಗದವರು ಇತರರು ಉಪಸ್ಥಿತರಿದ್ದರು.

ಬಳ್ಳಾರಿ: ರಕ್ಷಣಾ ಕಾರ್ಯಚರಣೆಯ ಅಣಕು ಪ್ರದರ್ಶನ

ಬಳ್ಳಾರಿ: ಪ್ರಸ್ತುತ ದೇಶದಲ್ಲಿ ಯುದ್ಧ ಸಂಭವಿಸುವ ವಿದ್ಯಮಾನಗಳನ್ನು ಗಮನದಲ್ಲಿಟ್ಟುಕೊಂಡು ಭಾರತ ಸರಕಾರದ ಕೇಂದ್ರ ಗೃಹ ಸಚಿವಾಲಯ ಹಾಗೂ ರಾಜ್ಯ ಸರಕಾರದ ನಿರ್ದೇಶನದಂತೆ ಮುಂದೆ ಆಗಬಹುದಾದ ಎಲ್ಲಾ ರೀತಿಯ ಅನಾಹುತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ವತಿಯಿಂದ ಅಪರೇಶನ್ ಅಭ್ಯಾಸ್ ಅಡಿ ನಾಗರಿಕ ರಕ್ಷಣಾ ಕಾರ್ಯಚರಣೆಯ ಅಣುಕು ಪ್ರದರ್ಶನವನ್ನು ಶನಿವಾರ ಸಂಡೂರಿನ ತೋರಣಗಲ್ಲು ಬಳಿಯ ಜೆಎಸ್‌ಡಬ್ಲ್ಯೂ ವಿಜಯನಗರ ಟೌನ್‌ಶಿಪ್ ನಲ್ಲಿ ಹಮ್ಮಿಕೊ ಳ್ಳಲಾಯಿತು.

ನಾಗರಿಕ ರಕ್ಷಣಾ ಕಾರ್ಯಚರಣೆಯ ಅಣುಕು ಪ್ರದರ್ಶನವನ್ನು ಶನಿವಾರ ಸಂಡೂರಿನ ತೋರಣಗಲ್ಲು ಬಳಿಯ ಜೆಎಸ್‌ಡಬ್ಲ್ಯೂ ವಿಜಯನಗರ ಟೌನ್‌ಶಿಪ್ ನಲ್ಲಿ ಹಮ್ಮಿಕೊಳ್ಳಲಾಯಿತು.

ಅಣುಕು ಪ್ರದರ್ಶನದಲ್ಲಿ ನುರಿತ ಅಗ್ನಿಶಾಮಕ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಜೆಎಸ್ ಡಬ್ಲ್ಯೂನ ಕ್ಯೂಆರ್‌ಟಿ, ಸಂಶೋಧನಾ ಮತ್ತು ರಕ್ಷಣೆ, ವಿಮಾನ ನಿಲ್ದಾಣ ಭದ್ರತಾ ತಂಡ, ಶ್ವಾನದಳ, ಅಗ್ನಿಶಾಮಕ ದಳದ ತಂಡ ಮತ್ತು ಇತರೆ ತಂಡ ಒಳಗೊಂಡಂತೆ ಸುಮಾರು 100ಕ್ಕೂ ಹೆಚ್ಚು ಸಿಬ್ಬಂದಿಗಳು ಅಣುಕು ಪ್ರದರ್ಶನ ನಡೆಸಿಕೊಟ್ಟರು.

ಅಣುಕು ಪ್ರದರ್ಶನದಲ್ಲಿ ಅನಾಹುತ ಸಂಭವಿಸಿದಲ್ಲಿ ಕೈಗೊಳ್ಳಬಹುದಾದ ಪ್ರಥಮ ಚಿಕಿತ್ಸಾ ಕಾರ್ಯ, ಸುರಕ್ಷಿತ ಸ್ಥಳದಲ್ಲಿ ಅಡಗುವಿಕೆ, ಶ್ವಾನಗಳ ಕಾರ್ಯಾಚರಣೆ ಹಾಗೂ ಇತರೆ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಯಪಡಿ ಸಲಾಯಿತು.ಈ ಸಂದರ್ಭದಲ್ಲಿ ಸಹಾಯಕ ಆಯುಕ್ತ ಪಿ.ಪ್ರಮೋದ್, ತೋರಣಗಲ್ಲು ವಿಭಾಗ ಡಿ.ಎಸ್.ಪಿ ಪ್ರಸಾದ್ ಗೋಖಲೆ ಸೇರಿದಂತೆ ಆರೋಗ್ಯ ಇಲಾಖೆ, ಕಾರ್ಖಾನೆಗಳು ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ ಇಲಾಖೆ, ಗೃಹ ರಕ್ಷಕದಳ ಅಧಿಕಾರಿಗಳು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಗಳು, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರು ಮತ್ತು ಸಾರ್ವಜನಿಕರು ಹಾಜರಿದ್ದರು.

ನರ್ಸರಿ ಮಾಲೀಕರು ಉತ್ತಮ ಬೆಳೆಗಾಗಿ ಸೂಕ್ತ ಕ್ರಮ ಪಾಲಿಸಿ

ಬಳ್ಳಾರಿ: ಕುರುಗೋಡು ತಾಲೂಕಿನ ಮೆಣಸಿ ನಕಾಯಿ ಬೆಳೆಗಾರರು ಹಾಗೂ ನರ್ಸರಿ ಮಾಲೀಕರು ಉತ್ತಮ ಬೆಳೆ ಪಡೆಯಲು ಸೂಕ್ತ ಕ್ರಮ ಅನುಸರಿಸಬೇಕು ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ. ನರ್ಸರಿ ಮಾಲೀಕರು ತಮ್ಮ ನರ್ಸರಿ ಚಟುವಟಿಕೆಗಳ ನಿಯಮ ಬದ್ಧಗೊಳಿಸುವ ನಿಟ್ಟಿನಲ್ಲಿ ಕಡ್ಡಾಯವಾಗಿ ಜಿ.ಎಸ್.ಟಿ ನೋಂದಾಯಿಸಿಕೊಳ್ಳಬೇಕು. ನರ್ಸರಿ ಜಾಗ ಗುತ್ತಿಗೆ ಪಡೆದಿದ್ದಲ್ಲಿ ನಿಯಾಮನುಸಾರ ಒಡಂಬಡಿಕೆ ಮಾಡಿಸಿಕೊಳ್ಳಬೇಕು. ನರ್ಸರಿ ಮಾಲೀಕರು ತಮ್ಮ ನರ್ಸರಿ ಮುಂಭಾಗ ನರ್ಸರಿಯ ಹೆಸರು ಇರುವ ನಾಮ ಫಲಕ ಅಳವಡಿಸುವುದು ಕಡ್ಡಾಯವಾಗಿದೆ ಎಂದು ಹೇಳಿದ್ದಾರೆ. ರೈತರಿಗೆ ಉತ್ತಮ ಗುಣಮಟ್ಟ ಸಸಿಗಳನ್ನು ನೀಡಲು ಅಳವಡಿಸಿಕೊಳ್ಳಬೇಕಾದ ವೈಜ್ಞಾನಿಕ ನರ್ಸರಿ ಕ್ರಮಗಳಾದ ಕೋಕೋಪಿಟ್ ಬಳಕೆ, ತರಕಾರಿ ನರ್ಸರಿಗಳಲ್ಲಿ ಕೀಟ ನಿರೋಧಕ ಬಲೆಗಳ ಬಳಕೆಯ ಬಗ್ಗೆ ಹಾಗೂ ಬೀಜೋಪಚಾರ ಕುರಿತು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳಬೇಕು. ಪ್ರತಿ ಸಸಿಗೆ 45 ರು. ಪೈಸೆ ದರದಲ್ಲಿ ಕಡ್ಡಾಯವಾಗಿ ಮಾರಾಟ ಮಾಡಬೇಕು. ಮೆಣಸಿನಕಾಯಿ ಬೆಳೆಗಾರರು ಕಡ್ಡಾಯವಾಗಿ ನರ್ಸರಿ ಮೆಣಸಿನಕಾಯಿ ಸಸಿಗಳನ್ನು ಜಿ.ಎಸ್.ಟಿ ನೋಂದಣಿಯಾಗಿರುವ ನರ್ಸರಿಗಳಿಂದಲೇ ಖರೀದಿಸಿ, ಬಿಲ್ಲನ್ನು ಪಹಣಿಯಲ್ಲಿರುವ ರೈತ ಹೆಸರಿಗೆ ಪಡೆದು ನಾಟಿ ಮಾಡಬೇಕು ಹಾಗೂ ಪಡೆದಂತಹ ಬಿಲ್ಲನ್ನು ಬೆಳೆ ಮಾರಾಟ ಆಗುವವರೆಗೂ ಭದ್ರವಾಗಿ ಇಟ್ಟುಕೊಳ್ಳಬೇಕು. ರೈತರಿಂದ ಬೀಜ ಪಡೆದಿರುವ ಮತ್ತು ಸಸಿಗಳನ್ನು ವಿತರಿಸಿದ ದಿನಾಂಕಗಳ ವಹಿ ಸಹ ನಿರ್ವಹಿಸಬೇಕು ಎಂದು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೂಡು ತೊರೆದ ಕಾಡು ಹಕ್ಕಿಗಳು ನಾಡಿಗೆ ಕಾಲಿಟ್ಟ ತಳೇವಾಡಿಗರು

ಜಿಲ್ಲಾ ನೋಟ

ವಿನಾಯಕ ಮಠಪತಿ, ಬೆಳಗಾವಿ

ಇವರು ಇಡೀ ಬದುಕನ್ನು ಕಾಡಿನಲ್ಲೇ ಕಳೆದವರು. ಆಧುನಿಕತೆ ಎಷ್ಟೇ ಬೆಳೆದರು ಹೊರ ಜಗತ್ತಿನ ಗಾಳಿಯೂ ಸೋಕದಂತೆ ಬದುಕು ನಡೆಸುತ್ತಿದ್ದ ಕಾಡು ವಾಸಿಗಳು ಈಗ ತಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಿಂದ ತಲೆಮಾರುಗಳಿಂದ ಬದುಕು ಕಟ್ಟಿಕೊಂಡಿದ್ದು ಮನೆಯನ್ನು ಬಿಟ್ಟು ಹೊರನಡೆಯುವ ನಿರ್ಧಾರ ಮಾಡಿದ್ದಾರೆ. ದಟ್ಟ ಅರಣ್ಯದಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ ಜೀವನ ನಡೆಸುತ್ತಿದ್ದ ಕುಟುಂಬಗಳಿಗೆ ಸರಕಾರ ಹೊಸ ದಿಕ್ಕನ್ನು ತೋರಿಸಿದೆ.

13 ಗ್ರಾಮಗಳ ಕತೆ

ಬೆಳಗಾವಿ ವಿಭಾಗದ ಭೀಮಗಡ ವನ್ಯಜೀವಿಧಾಮ ವ್ಯಾಪ್ತಿಯ ಖಾನಾಪುರ ತಾಲೂಕಿನ ಸುಮಾರು 13 ಗ್ರಾಮಗಳು ಮಳೆಗಾಲದ ಸಂದರ್ಭದಲ್ಲಿ ಸಂಪರ್ಕ ಕಳೆದುಕೊಳ್ಳುತ್ತವೆ. ಕಾಡಂಚಿನ ಗ್ರಾಮದಲ್ಲಿ ವಾಸವಿರುವ ಜನ ಹೊರ ಜಗತ್ತಿನ ಸಂಪರ್ಕ ಕಳೆದುಕೊಂಡು ಸಂಕಷ್ಟ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅಷ್ಟೇ ಅಲ್ಲದೆ ಅನಾರೋಗ್ಯದ ಪೀಡಿತ ಜನ ಔಷಧಕ್ಕೂ ದಿಕ್ಕಿಲ್ಲದಂತೆ ಬದುಕು ನಡೆಸುತ್ತಾರೆ.

ಐತಿಹಾಸಿಕ ಹೆಜ್ಜೆ

ರಾಜ್ಯದ ಇತಿಹಾಸದಲ್ಲೇ ಮೊದಲಬಾರಿಗೆ ಅರಣ್ಯ ಇಲಾಖೆ ವತಿಯಿಂದ ಐತಿಹಾಸಿಕ ಹೆಜ್ಜೆ ಇಡಲಾಗಿದೆ. ಖಾನಾಪುರ ತಾಲೂಕಿನ ನೇರಸೆ ಗ್ರಾಮ ಪಂಚಾಯತಿ ವ್ಯಾಪ್ತಿಯ ತಳೇವಾಡಿ ಗ್ರಾಮದ 27 ಕುಟುಂಬಗಳು ಸ್ವಯಂಪ್ರೇರಿತರಾಗಿ ತಾವು ಬೆಳೆದ ಕಾಡಂಚಿನ ಮನೆ ತೊರೆದು ಹೊರ ಜಗತ್ತಿಗೆ ಬರಲು ಒಪ್ಪಿಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ ಪ್ರತಿ ಕುಟುಂಬಕ್ಕೆ ಸರಕಾರ ತಲಾ 15 ಲಕ್ಷ ಪರಿಹಾರ ನೀಡುವ ಮೂಲಕ ಮೂಲಭೂತ ಸೌಕರ್ಯದಿಂದ ವಂಚಿತವಾಗಿದ್ದ ಕಾಡಂಚಿನ ಕುಟುಂಬಗಳನ್ನು ಸ್ಥಳಾಂತರ ಮಾಡಲಾಗಿದೆ.

ತಳೇವಾಡಿ ಗ್ರಾಮ

ಭೀಮಗಡ ವನ್ಯಜೀವಿಧಾಮ ವ್ಯಾಪ್ತಿಯ ದಟ್ಟ ಅರಣ್ಯದಲ್ಲಿ 'ತಳೇವಾಡಿ' ಗ್ರಾಮದಲ್ಲಿ 40 ಕುಟುಂಬಗಳು ವಾಸ ಮಾಡುತ್ತಿವೆ. ಎಲ್ಲರೂ ಸ್ವಯಂ ಪ್ರೇರಿತರಾಗಿ ಸ್ಥಳಾಂತರ ಹಾಗೂ ಪುನರ್ ವಸತಿಗೆ ಅರ್ಜಿ ಸಲ್ಲಿಸಿದ್ದರು. ಪರಿಶೀಲನೆ ಮಾಡಿ ಒಟ್ಟು 27 ಕುಟುಂಬಗಳನ್ನು ಸ್ಥಳಾಂತರ ಮಾಡಲಾಯಿತು. ಕಳೆದ ಮೇ 17 ರಂದು ನಡೆದ ಕಾರ್ಯಕ್ರಮದಲ್ಲಿ ತಲಾ ಕುಟುಂಬಕ್ಕೆ ಹದಿನೈದು ಲಕ್ಷ ಪರಿಹಾರ ವಿತರಣೆ ನೀಡಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ನಾಟ್ ರೀಚಬಲ್ ಹಳ್ಳಿಗಳು

ಸಾಮಾನ್ಯವಾಗಿ ಖಾನಾಪುರ ತಾಲೂಕಿನ ಸುಮಾರು 13 ಕಂದಾಯ ಗ್ರಾಮಗಳು ದಟ್ಟ ಅರಣ್ಯದ ನಡುವೆ ಇವೆ. ಇಲ್ಲಿ ವಾಸಿಸುವ ಜನರಿಗೆ ಸರಕಾರ ಹಾಗೂ ಅಧಿಕಾರಿ ವರ್ಗ ಮೂಲಭೂತ ಸೌಕರ್ಯ ಕಲ್ಪಿಸಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ. ಇವುಗಳಲ್ಲಿ ಪ್ರಮುಖವಾಗಿ ತಳೇವಾಡಿ, ಪಾಸ್ತೋಲಿ, ಗವಾಳಿ, ಕೃಷ್ಣಾಪೂರ ಮತ್ತು ಹೊಳದಾ ಗ್ರಾಮಗಳು ಮಳೆಗಾಲದಲ್ಲಿ ಸಂಪರ್ಕ ಕಳೆದುಕೊಳ್ಳುತ್ತವೆ. ಆ ದಿನಗಳಲ್ಲಿ ಗ್ರಾಮದ ಜನ ತುತ್ತು ಊಟಕ್ಕೂ ಪರಿತಪಿಸುತ್ತಾರೆ.



ಕಾಡು ಹಕ್ಕಿಗಳ ಮನವಿ

ತಲೆಮಾರಿನಿಂದ ಕಾಡಿನಲ್ಲೇ ಬದುಕು ಸಾಗಿಸುತ್ತಿದ್ದ ಕುಟುಂಬಗಳು ಸ್ವಯಂ ಪ್ರೇರಿತರಾಗಿ ನಾಡಿಗೆ ಬರಲು ಒಪ್ಪಿಕೊಂಡಿದ್ದು ಮಾತ್ರವಲ್ಲದೆ ಪರಿಹಾರವನ್ನೂ ಪಡೆದಿದ್ದಾರೆ. ಆದರೆ ಹದಿನೈದು ಲಕ್ಷ ಪರಿಹಾರದ ಜೊತೆ ಗ್ರಾಮದ ಕುಟುಂಬಗಳಿಗೆ ಒಂದೇ ಜಾಗದಲ್ಲಿ ವಸತಿ ಸೌಲಭ್ಯ ಕಲ್ಪಿಸಬೇಕೆಂದು ಮನವಿ ಮಾಡುತ್ತಿದ್ದಾರೆ. ಇದರಿಂದ ಅವರ ಗ್ರಾಮದ ಹೆಸರಿನಲ್ಲೇ ಈ ಅರಣ್ಯ ವಾಸಿಗಳು ಒಟ್ಟಾಗಿ ಬದುಕು ಕಟ್ಟಿಕೊಳ್ಳುವ ಹಂಬಲ ಹೊಂದಿದ್ದಾರೆ.

ಅನುದಾನ ಕಲ್ಪಿಸಲಿ

ಅರಣ್ಯ ವಾಸಿಗಳ ಸ್ಥಳಾಂತರಕ್ಕಾಗಿ ನೀಡಿರುವ ಪರಿಹಾರವನ್ನು ಕೇಂದ್ರ ಸರಕಾರದ ಕಾಂಪಾ (ಅರಣ್ಯೀಕರಣ ಪರಿಹಾರ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ) ನಿಧಿ ಬಳಸಿಕೊಂಡಿದೆ. ಅದರ ಜೊತೆ ರಾಜ್ಯ ಸರಕಾರ ಕೂಡ ಹೆಚ್ಚುವರಿ ಅನುದಾನ ಮೀಸಲಿಟ್ಟು ಪರಿಹಾರ ನೀಡಿದರೆ ಇದರಿಂದ ಕಾಡುವಾಸಿಗಳು ಬದುಕು ಇನ್ನಷ್ಟು ಸುಂದರವಾಗುತ್ತದೆ ಎನ್ನುತ್ತಾರೆ.

ಅರಣ್ಯ ಸಚಿವರ ಆ ಭೇಟಿ

ಕಳೆದ ಡಿಸೆಂಬರ್ ನ ಬೆಳಗಾವಿ ಚಳಿಗಾಲ ಅಧಿವೇಶನ ಸಂದರ್ಭದಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಖಾನಾಪುರ ಕಾಡಂಚಿನ ಗ್ರಾಮಗಳಿಗೆ ಭೇಟಿ ನೀಡಿದ್ದರು. ಇಬ್ಬರು ಮಹಿಳೆಯರು ತಮ್ಮ ನೋವನ್ನು ಸಚಿವರ ಬಳಿ ಹೇಳಿಕೊಂಡಿದ್ದರು. ಹುಲಿ ದಾಳಿಗೆ ಪತಿಯನ್ನು ಕಳೆದುಕೊಂಡು ಸಂಕಷ್ಟದ ಜೀವನ ನಡೆಸುತ್ತಿದ್ದ ಮಹಿಳೆಯ ನೋವು ಸಚಿವ ಈಶ್ವರ್ ಖಂಡ್ರೆ ಅವರ ಮನಸ್ಸು ಕರಗುವಂತೆ ಮಾಡಿದೆ. ನಂತರ ಬೆಂಗಳೂರಿಗೆ ತೆರಳಿ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದು ಮಾತ್ರವಲ್ಲದೆ ಸ್ಥಳಾಂತರಕ್ಕೆ ಒಪ್ಪಿಕೊಂಡ ಕಟುಂಬಗಳಿಗೆ ಪರಿಹಾರ ನೀಡಿ ಪುನರ್ ವಸತಿ ಕಲ್ಪಿಸಲು ಆ ಒಂದು ಭೇಟಿಯಿಂದ ಸಾಧ್ಯವಾಯಿತು ಎಂಬುದೇ ಅದ್ಭುತ.

ಅತಂತ್ರವಾಗದಿರಲಿ ಬದುಕು

ಮೂರು ತಲೆಮಾರುಗಳಿಂದ ಕಾಡಿನಲ್ಲೇ ವಾಸವಿರುವ ಅರಣ್ಯ ವಾಸಿಗಳ ಒಳಿತಿಗಾಗಿ ಸರಕಾರ ಪರಿಹಾರ ಕೊಟ್ಟು ಹೊರ ಕಳುಹಿಸುತ್ತಿದೆ. ಆದರೆ ಹೊರ ಜಗತ್ತಿಗೆ ಬರುವ ಮುಗ್ಧ ಕಾಡು ಜನ ವಂಚಕರ ಕೈಯಲ್ಲಿ ಸಿಲುಕಿ ಸುಂದರ ಬದುಕು ಹಾಳಾಗದಂತೆ ಸರಕಾರ ಎಚ್ಚರಿಕೆ ವಹಿಸಬೇಕು. ಪರಿಹಾರವಾಗಿ ಒಂದಷ್ಟು ಹಣ ನೀಡುವ ಜೊತೆ ವಸತಿ ಸೌಲಭ್ಯವನ್ನೂ ಕಲ್ಪಿಸಿದರೆ ದಶಕಗಳಿಂದ ಈ ಅರಣ್ಯ ವಾಸಿಗಳು ನಡೆಸಿದ ಹೋರಾಟಕ್ಕೆ ಒಂದು ಅರ್ಥವಾದರೂ ಸಿಕ್ಕಂತಾಗುತ್ತದೆ. ಸರಕಾರಕ್ಕಿದು ಕಷ್ಟದ ಸಂಗತಿಯೇನಲ್ಲ.. ಮನಸು ಮಾಡಬೇಕಷ್ಟೆ..

ಐಎಎಸ್, ಐಪಿಎಸ್, ಕೆಎಎಸ್ ಗುರಿ ಸಾಧನೆ ಕನಸಿಗರಿಗೆ ಉಚಿತ ತಯಾರಿ

ಜಿಲ್ಲಾ ನೋಟ

ಕೆ.ಎಸ್.ಮಂಜುನಾಥ ರಾವ್, ಕೋಲಾರ

> **ಯುಪಿಎಸ್ಸಿ ತರಬೇತಿಗೆ ಅಗತ್ಯ ಮಾರ್ಗದರ್ಶನ, ಅಭ್ಯಾಸ ಸಾಮಗ್ರಿಗಳ ಕೊರತೆ ನಾನು ಅನುಭವಿಸಿದ್ದು ಆ ಕಷ್ಟ ಕೋಲಾರ ಭಾಗದ ಮಕ್ಕಳು ಅನುಭವಿಸುವುದು ಬೇಡ ಎಂದು ಸ್ಥಳೀಯವಾಗಿ ಕೋಚಿಂಗ್ ಸೆಂಟರ್ ಉಚಿತವಾಗಿ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ನಾನಾ ಹುದ್ದೆಗಳಿಗೆ ಹಳ್ಳಿಗಾಡಿನ ಮಕ್ಕಳು ಆಯ್ಕೆ ಆಗುವ ಮೂಲಕ ತರಬೇತಿ ಕೇಂದ್ರದ ಸಾರ್ಥಕ್ಯ ಮೆರೆದಿದ್ದಾರೆ. ನಿರೀಕ್ಷೆಗೂ ಮೀರಿದ ಸ್ಪಂದನೆ ಗೆಳೆಯರಿಂದ ಸಿಗುತ್ತಿರುವುದು ಮತ್ತಷ್ಟು ಗುಣಮಟ್ಟದ ವ್ಯವಸ್ಥೆಗೆ ಪೂರಕವಾಗಿದೆ. ಧರಣಿ ಶೆಟ್ಟಿ ಯುಪಿಎಸ್ಸಿ ಸಂದರ್ಶನದಲ್ಲಿ ಯಶಸ್ವಿ ಆಗುವ ಮೂಲಕ ಡಿಎಂಆರ್ ಸಂಸ್ಥೆಯ ಮೊದಲ ಐಎಎಸ್ ಅಧಿಕಾರಿ ಆಗುತ್ತಾರೆಂಬ ಸದಾಶಯ ಹೊಂದಿದ್ದೇನೆ.**
> -**ಡಿ.ದೇವರಾಜ್,** ಡಿಸಿಪಿ, ಪೂರ್ವ ವಲಯ,ಬೆಂಗಳೂರು

ಕೆಎಎಸ್ ಎಂದರೆ 'ಕೋಲಾರ ಅಡ್ಮಿನಿಸ್ಟ್ರೇಷನ್ ಸರ್ವೀಸ್ 'ಎಂಬುದು ಪ್ರತೀತಿ. ಆದರೆ ಐಎಎಸ್ ನಲ್ಲೂ ನಂದಿನಿ ಕೋಲಾರ ಜಿಲ್ಲೆಯ ಪ್ರತಿಭೆಯ ಛಾಪು ಮೂಡಿಸಿದ್ದಾರೆ.

2023ರಲ್ಲಿ ಕೋಲಾರಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಬಂದು ಮಾದರಿ ಪೊಲೀಸ್ ಜಿಲ್ಲೆಯಾಗಿ ರೂಪಿಸಿದ ಐಪಿಎಸ್ ಅಧಿಕಾರಿ ಕೋರಗಂಡಹಳ್ಳಿ ಡಿ.ದೇವರಾಜ್ ತಮ್ಮ ತಂದೆ-ತಾಯಿ ಹೆಸರಿನಲ್ಲಿ ಕೋಲಾರದಲ್ಲಿ ಕೋಚಿಂಗ್ ಸೆಂಟರ್ ಆರಂಭಿಸಿದ್ದಾರೆ. ಯುವಜನರ ಮಾರ್ಗದರ್ಶನದ ಕೊರತೆ ಗಮನಿಸಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ತಾವು ಪಟ್ಟ ಕಷ್ಟವನ್ನು ಸ್ಥಳೀಯ ಹುಡುಗರು ಪಡಬಾರದೆಂಬ ಸದಾಶಯದೊಂದಿಗೆ ಇಂಥ ಸಂಸ್ಥೆ ಸ್ಥಾಪನೆಗೆ ನಿರ್ಧರಿಸಿದರು.

- ಡಿಎಂಆರ್ ಕೋಚಿಂಗ್ ಸೆಂಟರ್
- ಹಳ್ಳಿಗಾಡಿನ ಯುವಕರಿಗೆ ವರದಾನ
- ಪ್ರವೇಶ ಉಚಿತ - ನೌಕರಿ ಖಚಿತ
- ಸ್ಪರ್ಧಾತ್ಮಕ ಪರೀಕ್ಷೆ ಗೆ ಸಿದ್ಧತಾ ತಾಣ

ಎಲ್ಲಿದೆ ಕೋಚಿಂಗ್ ಸೆಂಟರ್

ಕೋಲಾರ-ಬಂಗಾರಪೇಟೆ ಮುಖ್ಯ ರಸ್ತೆಯಲ್ಲಿನ ದೀಪಾ ಕಾಂಪ್ಲೆಕ್ಸ್‌ನ ಮೊದಲ ಮಹಡಿಯಲ್ಲಿ ದ್ಯಾವೀರಪ್ಪರತ್ನಮ್ಮ ಎಜುಕೇಜನ್ ಸೊಸೈಟಿಯಡಿ ಡಿಎಂಆರ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ ತೆರೆದರು. 100 ಅಭ್ಯರ್ಥಿಗಳಿಗೆ ಮೊದಲಿಗೆ ತಲಾ 10 ಸಾವಿರ ರೂ. ವೆಚ್ಚ ಮಾಡುವ ಮೂಲಕ ಆರಂಭಿಸಿದರು. ಇದರೊಂದಿಗೆ ಸಮಾಜಮುಖಿ ಸೇವೆಗೂ ಮುಂದಾದರು.

ಸ್ನೇಹಿತರ ಸಹಾಯ ಹಸ್ತ

ದೇವರಾಜ್ ಅವರ ಸೇವಾಪರ ಮನೋಭಾವ ಅರ್ಥ ಮಾಡಿಕೊಂಡ ಸ್ನೇಹಿತರು ಸ್ವಯಂ ಪ್ರೇರಿತರಾಗಿ ಎರಡನೇ ಬ್ಯಾಚ್‌ನಿಂದ ಕೈ ಜೋಡಿಸುತ್ತಿದ್ದು ಇದೀಗ 5ನೇ ತಂಡದಲ್ಲಿ 93 ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಪಡೆದುಕೊಳ್ಳುತ್ತಿದ್ದಾರೆ. ಎರಡು ಕ್ಲಾಸ್ ರೂಂಗಳು, ನೂರಾರು ಪುಸ್ತಕಗಳನ್ನು ಹೊಂದಿದೆ. ಸುಸಜ್ಜಿತ ಲೈಬ್ರೆರಿ, ಶೌಚಾಲಯ, ಕುಡಿಯುವ ನೀರು, ಆಫೀಸ್ ರೂಂ, ಕಾರಿಡಾರ್ ಹೊಂದಿರುವ ತರಬೇತಿ ಸಂಸ್ಥೆಯಲ್ಲಿ ಇದುವರೆಗೆ ಸುಮಾರು 400 ಮಂದಿ ಕೋಚಿಂಗ್ ಪಡೆದಿದ್ದಾರೆ.

ಸಾಧಕರಿವರು

ಇಲ್ಲಿ ತರಬೇತಿ ಪಡೆದ ಧರಣಿ ಎನ್ ಶೆಟ್ಟಿ ಅವರು ಯುಪಿಎಸ್ಸಿ ಪರೀಕ್ಷೆಯನ್ನು ಮುಗಿಸಿ ಸಂದರ್ಶನಕ್ಕೆ ಸಜ್ಜಾಗುತ್ತಿದ್ದಾರೆ. ಜತೆಗೆ ಕೆಪಿಎಸ್ಸಿ ಪ್ರಿಲಿಮನರಿ ಪಾಸಾಗಿದ್ದು ಮೇನ್ಸ್‌ಗೆ ತಯಾರಿ ನಡೆಸಿದ್ದಾರೆ. ಹರಿಚಂದನ, ಎಸ್.ನಾಗೇಶ್ ಸಹಾ ಕೆಪಿಎಸ್ಸಿ ಮೇನ್ಸ್‌ಗೆ ಅಭ್ಯಾಸ ಮಾಡುತ್ತಿದ್ದಾರೆ. ವಿ.ಜಯ ಸೂರ್ಯ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆ ಆಗಿದ್ದರೂ ಕೆಪಿಎಸ್ಸಿ ಮುಖ್ಯಪರೀಕ್ಷೆಗೆ ಸಿದ್ದರಾಗುತ್ತಿದ್ದಾರೆ. ವಿ.ಮೋಹನ್ ಸಬ್ ಇನ್ಸ್‌ಪೆಕ್ಟರ್ ಹುದ್ದೆ ಅಲಂಕರಿಸಿದ್ದಾರೆ. ಎಂ.ಶಿಲ್ಪಾ ಮತ್ತು ಎಂ.ಸ್ವರ್ಣ ಅವರು ಎಸಿ-ಎಸ್‌ಎಡಿ ಪ್ರಿಮಿನಲರಿ ಮುಗಿಸಿ ಮೈನ್ಸ್‌ಗೆ ಓದುತ್ತಿದ್ದಾರೆ.

ವಿಷಯವಾರು ತರಗತಿ

ಪೊಲಿಟಿಕಲ್ ಸೈನ್ಸ್, ಸಂವಿಧಾನ-ರಾಜಕೀಯ, ಅರ್ಥಶಾಸ್ತ್ರ,ಇತಿಹಾಸ, ಪರಿಸರ ವಿಜ್ಞಾನ, ಭೂಗೋಳ ಶಾಸ್ತ್ರ,ವಿಜ್ಞಾನ-ತಂತ್ರಜ್ಞಾನ,ಮಾನಸಿಕ ಸಾಮರ್ಥ್ಯದ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿದ್ದು ಬೆಂಗಳೂರಿನ ಹೆಸರಾಂತ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯ ಅಧ್ಯಾಪಕರು ಕೋಲಾರಕ್ಕೆ ಬಂದು ಕೋಚಿಂಗ್ ಕೊಡುತ್ತಿದ್ದಾರೆ. ಹಳ್ಳಿಗಾಡಿನ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಉಚಿತವಾಗಿ ಸಿಗುತ್ತಿದೆ.

ನಾನಾ ಸ್ತರದವರು

ಇಲ್ಲಿ ವಿದ್ಯಾರ್ಥಿಗಳು, ಖಾಸಗಿ ನೌಕರರು, ಶಿಕ್ಷಕರು ಹೀಗೆ ಸಮಾಜದ ನಾನಾ ಸ್ತರದವರು ಕೋಚಿಂಗ್ ಪಡೆಯುತ್ತಿರುವುದರಿಂದಾಗಿ ಸೋಮವಾರದಿಂದ ಶುಕ್ರವಾರದವರೆಗೆ ವಿದ್ಯಾರ್ಥಿಗಳನ್ನು ಕೂರಿಸಿ ಓದಿಸಲಾಗುತ್ತದೆ. ಶನಿವಾರ ಮತ್ತು ಭಾನುವಾರ ಕ್ಲಾಸ್ ತೆಗೆದುಕೊಳ್ಳಲಾಗುತ್ತಿದೆ. ದೆಹಲಿ, ಹೈದ್ರಾಬಾದ್,ಬೆಂಗಳೂರಿಗೆ ಸೀಮಿತವಾಗಿದ್ದ ಐಎಎಸ್-ಐಪಿಎಸ್-ಕೆಎಎಸ್ ತರಬೇತಿ ಇದೀಗ ಕೋಲಾರದ ಗ್ರಾಮಾಂತರ ಹುಡುಗ - ಹುಡುಗಿಯರ ಮನೆ ಬಾಗಿಲಲ್ಲೇ ಸಿಗುತ್ತಿರುವ ಬಗ್ಗೆ ಪೋಷಕರು ಕೂಡ ಅಭಿಮಾನದ ಜತೆ ಹೆಮ್ಮೆ ವ್ಯಕ್ತಪಡಿಸುತ್ತಿದ್ದಾರೆ.

ಆರಾಮ

@vishwavaninews

ಚಿತ್ತವಿಹಾರ

ಕನಸು ನನಸಾಗಿಸುವ ಛಲ

• ಹೊಸ್ಮನೆ ಮುತ್ತು

ನಿಮ್ಮ ಕನಸುಗಳನ್ನು ಅನುಸರಿಸಿ, ಗುಂಪನ್ನು ಅಲ್ಲ (ಫಾಲೋ ಯುವರ್ ಡ್ರೀಮ್ಸ್ ನಾಟ್ ದ ಕ್ರೌಡ್) ಎನ್ನುತ್ತದೆ ಒಂದು ಉಕ್ತಿ. ಗುಂಪಿನಲ್ಲಿ ಗೋವಿಂದ ಆಗಬೇಡಿ, ಅನನ್ಯತೆ ಕಾಪಾಡಿಕೊಳ್ಳಿ ಎಂಬ ಅರ್ಥ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಕನಸುಗಳಿರುತ್ತವೆ. ಈ ಕನಸುಗಳು ವ್ಯಕ್ತಿಯನ್ನು ಪ್ರೇರೇಪಿಸುತ್ತವೆ, ಗುರಿಗಳನ್ನು ತಲುಪಲು ಸಹಾಯ ಮಾಡುತ್ತವೆ. ಆದರೆ, ಅನೇಕ ಬಾರಿ ತಮ್ಮ ಸ್ವಂತ ಆಸಕ್ತಿಗಳಿಗಿಂತ ಹೆಚ್ಚಾಗಿ ಸಾಮಾಜಿಕ ಒತ್ತಡಗಳಿಂದ ನಿರ್ದೇಶಿಸಲ್ಪಟ್ಟ ವೃತ್ತಿಯನ್ನೂ, ಜೀವನ ಶೈಲಿಯನ್ನೂ ಅಥವಾ ಗುರಿಯನ್ನೂ ಅಪ್ಪಿಬಿಡುತ್ತಾರೆ. ಅಂದರೆ, ತಮ್ಮ ಕನಸುಗಳನ್ನು ಬೆನ್ನಟ್ಟುವ ಬದಲು, 'ಗುಂಪಿನಲ್ಲಿ ಗೋವಿಂದ' ಆಗುತ್ತಾರೆ!

ಬೇರೆಯವರನ್ನು ಅನುಸರಿಸುವುದು, ನಕಲು ಮಾಡುವುದು ಸುಲಭ. ಆದರೆ ಅದರಿಂದ ಗುರಿಯನ್ನು ತಲುಪಲು ಸಾಧ್ಯವಿಲ್ಲ. ನಿಜವಾದ ಯಶಸ್ಸು ಕನಸುಗಳನ್ನು ಅನುಸರಿಸುವುದರಿಂದ ಬರುತ್ತದೆಯೇ ಹೊರತು, ಬಹುಜನರ ಅಭಿಪ್ರಾಯದಿಂದಲ್ಲ. ಸಾಮಾಜಿಕ ನಿರೀಕ್ಷೆಗಳು ಮತ್ತು ಸಾಮಾಜಿಕ ರೂಢಿಗಳು ಗುಂಪನ್ನು ಅನುಸರಿಸಲು ನಿರ್ದೇಶಿಸಬಹುದು. ಆದರೆ ವೈಯಕ್ತಿಕ ಬೆಳವಣಿಗೆ, ಅರ್ಥಪೂರ್ಣ ಸಾಧನೆ ಮತ್ತು ನಿಜವಾದ ಸಂತೋಷ ನಾವೇ ಕನಸಿದ ಕನಸುಗಳನ್ನು ಅನುಸರಿಸುವುದರಲ್ಲಿದೆ. ವೈವಿಧ್ಯಮಯ ಆಕಾಂಕ್ಷೆಗಳು ಮತ್ತು ಅಂತ್ಯವಿಲ್ಲದ ಸಾಧ್ಯತೆಗಳಿಂದ ತುಂಬಿರುವ ಈ ಜಗತ್ತಿನಲ್ಲಿ, ಒಬ್ಬಾತ ತನ್ನ ಕನಸುಗಳನ್ನು ಅನುಸರಿಸುವ ನಿರ್ಧಾರ ಆತನ ವ್ಯಕ್ತಿತ್ವದ ದಿಟ್ಟ ಕ್ರಿಯೆಯಾಗಿ ಗೋಚರಿಸುತ್ತದೆ.

ತುಳಿದ ತಿಳಿದ ಹಾದಿಯಿಂದ ವಿಮುಖರಾಗಲು, ಅನುಕರಣೆಯ ಆಕರ್ಷಣೆಯನ್ನು ವಿರೋಧಿಸಲು ಮತ್ತು ಆಂತರಿಕ ಉತ್ಸಾಹಗಳೊಂದಿಗೆ ಕನಸುಗಳನ್ನು ಬೆನ್ನಟ್ಟಲು ಧೈರ್ಯಬೇಕಾಗುತ್ತದೆ. ಆಗ ಜನರು ನಿಮ್ಮನ್ನು ಟೀಕಿಸಬಹುದು, ನಿರುತ್ಸಾಹಗೊಳಿಸಬಹುದು. ಆದರೆ, ನಿಮ್ಮ ಕನಸುಗಳ ಮೇಲೆ ನಿಮಗೆ ನಂಬಿಕೆ ಇದ್ದರೆ, ನೀವು ಟೀಕೆಗಳಿಗೆ ಕಿವಿಗೊಡದೇ, ನಿಮ್ಮ ದಾರಿಯಲ್ಲಿ ಮುಂದುವರಿಯಬೇಕು. ಕನಸುಗಳ ಬೆನ್ನು ಹತ್ತಿದಾಗ, ಒಮ್ಮೊಮ್ಮೆ ಸೋಲಬಹುದು, ನಿರಾಶೆಯಾಗಲೂಬಹುದು. ಆದರೆ, ಕನಸುಗಳನ್ನು ಬಿಟ್ಟುಕೊಡಬಾರದು. ಕನಸು ನನಸಾಗಲು ಶ್ರಮವಹಿಸಿದರೆ, ಖಂಡಿತವಾಗಿಯೂ ಯಶಸ್ಸು ದೊರಕುತ್ತದೆ. ಪ್ರಪಂಚದ ಅತ್ಯಂತ ಯಶಸ್ವಿ ವ್ಯಕ್ತಿಗಳಲ್ಲಿ ಅನೇಕರು ಸಾಮಾಜಿಕ ಮಾನದಂಡಗಳಿಗೆ ಅನುಗುಣವಾಗಿರುವುದಕ್ಕಿಂತ ಹೆಚ್ಚಾಗಿ ತಮ್ಮ ಕನಸುಗಳನ್ನು ಅನುಸರಿಸಲು ನಿರ್ಧರಿಸಿದ್ದರು. ನಿಮ್ಮ ಕನಸುಗಳನ್ನು ಬೆನ್ನಟ್ಟಲು ಧೈರ್ಯದಿಂದ ಹೆಜ್ಜೆ ಹಾಕಿ. ಇತರರ ಟೀಕೆ ಅಥವಾ ನಿರುತ್ಸಾಹಕ್ಕೆ ಹೆದರಬೇಡಿ. ನಿಮ್ಮ ಮೇಲೆ ನಂಬಿಕೆ ಇಡಿ ಮತ್ತು ಮುಂದುವರಿಯಿರಿ. ಕನಸು ಕಾಣಲು ಧೈರ್ಯ ಮಾಡಿ, ಅದನ್ನು ನನಸಾಗಿಸುವ ಛಲ ಹೊಂದಿ, ನಡೆಯಿರಿ; ಗುರಿ ತಲುಪುವಿರಿ.

ಹನಿ ಮಳೆ

ಪರಿಣಾಮ

ಸುರಿಯುತ್ತಿರುವ ಮಳೆಗೆ
ಹೊಳೆಯಾಗಿ ರೂಪಾಂತರ
ಬೆಂಗಳೂರಿನ ಓಣಿ
ಕಾರು ಬೈಕು ಬಸ್ಸು
ಎಲ್ಲವನ್ನೂ ಬಿಟ್ಟು
ಓಡಿಸಬೇಕಿದೆ ದೋಣಿ!

• ಮಹಾಂತೇಶ ಮಾಗನೂರ

ಕಾರ್ಟಿಸೋಲ್ ದೇಹಕ್ಕೆ ಅಗತ್ಯ; ಆದರೆ, ಅದು ಅನವಶ್ಯಕವಾಗಿ ಉತ್ಪತ್ತಿಯಾದರೆ, ಅಪಾಯ ತಂದೊಡ್ಡಬಲ್ಲದು. ನಿರಂತರ ಒತ್ತಡದ ಬದುಕಿನ ಬದಲು, ನೆಮ್ಮದಿಗೆ, ಸಹಜ ಸಂತಸಕ್ಕೆ ದಿನಚರಿಯಲ್ಲಿ ಸ್ಥಾನವಿರಲಿ!

ಸ್ವಾಸ್ಥ್ಯದ ಗುಟ್ಟು ಇಲ್ಲಿದೆ!

• ಡಾ ಸೌಮ್ಯ ಕೆ.ವಿ. ಯಲ್ಲಾಪುರ

ಈಗ ಪ್ರತಿದಿನವೆಂಬಂತೆ, ಹೃದಯಾಘಾತಗಳು ಸಮಾಜವನ್ನು ಆಘಾತಕ್ಕೆ ದೂಡುತ್ತಿವೆ. ಕಡಿಮೆ ವಯಸ್ಸಿನಲ್ಲಿಯೇ ಹೃದಯಾಘಾತ ಹಾಗೂ ಅನಿರೀಕ್ಷಿತ ಸಾವುಗಳು ಹೆಚ್ಚುತ್ತಿರುವುದು ನಿಜಕ್ಕೂ ಆತಂಕದ ಸಂಗತಿ. ಇದಕ್ಕೆ ಪೂರಕವಾದ ಅನೇಕ ಕಾರಣಗಳಲ್ಲಿ ಹೆಚ್ಚುತ್ತಿರುವ ಕಾರ್ಟಿಸೋಲ್ ಹಾರ್ಮೋನಿನ ಪಾತ್ರದ ಬಗ್ಗೆ ಅಧ್ಯಯನಗಳು ಬೆಳಕು ಚೆಲ್ಲಿವೆ.

ಕಾರ್ಟಿಸೋಲ್ ಎಂಬುದು ದೈಹಿಕ ಹಾಗೂ ಮಾನಸಿಕ ಒತ್ತಡದ ಸಮಯದಲ್ಲಿ ದೇಹದಲ್ಲಿ ಬಿಡುಗಡೆಯಾಗುವ ಒಂದು ಹಾರ್ಮೋನು. ಕಿಡ್ನಿಯ ಮೇಲ್ಭಾಗದಲ್ಲಿ ಇರುವ ಅಡ್ರಿನಲ್ ಗ್ರಂಥಿಗಳು ಇದರ ಉತ್ಪಾದಕ ತಾಣ. ಮಾನವನ ಉಳಿವಿಗಾಗಿ ಇದು ಅಗತ್ಯ; ತುರ್ತು ಸಂದರ್ಭದಲ್ಲಿ ಇದರ ಸಹಾಯದಿಂದ ಮಾನವನು ಅಪಾಯದಿಂದ ಹೊರಬರಬಲ್ಲ. ಆದರೆ, ಈ ಹಾರ್ಮೋನು ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆಯಾದರೆ ಅಥವಾ ಪದೇಪದೇ ಏರಿಕೆಯಾಗುತ್ತಿದ್ದಲ್ಲಿ ಅಪಾಯಕ್ಕೆ ಕಾರಣವಾಗಬಹುದು.

ಕಾರ್ಟಿಸೋಲ್ ಏರಿಕೆಯಿಂದ ಹೃದಯದ ಮೇಲೆ ಯಾವೆಲ್ಲ ಪರಿಣಾಮಗಳು ಆಗಬಹುದು?

- ರಕ್ತದೊತ್ತಡ ಹಾಗೂ ಹೃದಯದ ಬಡಿತ ಹೆಚ್ಚುತ್ತದೆ.
- ರಕ್ತನಾಳಗಳ ಉರಿಯೂತವನ್ನುಂಟು ಮಾಡುತ್ತದೆ.
- ಕೊಬ್ಬಿನಂಶದ ಶೇಖರಣೆಯನ್ನು ಹೆಚ್ಚಿಸುತ್ತದೆ.
- ರಕ್ತಗರಣೆಗಟ್ಟುವ ಅಂಶಗಳನ್ನು ಹೆಚ್ಚಿಸುತ್ತದೆ.
- ಹೃದಯದ ವಿದ್ಯುತ್ ತರಂಗಗಳನ್ನು ಏರುಪೇರಾಗಿಸಬಲ್ಲದು.

ಯುವಜನತೆಗೆ ಕಾರ್ಟಿಸೋಲ್ ರಿಸ್ಕ್!

ಭಾವೋದ್ರೇಕ ಹಾಗೂ ತೀವ್ರವಾದ ಪ್ರತಿಕ್ರಿಯೆ ನೀಡುವ ಮನೋಭಾವ ಯುವಜನತೆಯಲ್ಲಿ ಹೆಚ್ಚುತ್ತಿದೆ. ನಿರ್ಜಲೀಕರಣದ ಹಂತದಲ್ಲಿ ತೀಕ್ಷ್ಣತರವಾದ ವರ್ಕ್ ಔಟ್ ಮಾಡುವುದು, ಆರೋಗ್ಯಪೂರ್ಣವಾದ ನಿದ್ದೆಯ ಬಗ್ಗೆ ಅಲಕ್ಷ್ಯ, ನಿರಂತರವಾಗಿ ರಾತ್ರಿ ಪಾಳಿಗಳಲ್ಲಿ ಕೆಲಸ, ಸೋಮಾರಿ ಜೀವನ ಶೈಲಿ, ವೃತ್ತಿ ಜೀವನದ ಅತಿಒತ್ತಡ, ಸದಾ ಸ್ಪರ್ಧೆಯ ತುರುಸು, ಪದೇಪದೇ ಜಂಕ್ ಆಹಾರ ಸೇವನೆ, ಸ್ಟೀರಾಯಿಡ್ ಸೇವನೆ, ಮದ್ಯಪಾನ, ಧೂಮಪಾನ, ಮಾದಕ ವಸ್ತು ಸೇವನೆ.. ಹೀಗೆ ಯುವಜನತೆಯನ್ನು ಅಪಾಯದಂಚಿಗೆ ತಳ್ಳುತ್ತಿರುವ ಅಂಶಗಳ ಪಟ್ಟಿ ಬೆಳೆಯುತ್ತಲೇ ಸಾಗುತ್ತದೆ. ಇವೆಲ್ಲಾ ಸಂದರ್ಭಗಳಲ್ಲಿ ಕಾರ್ಟಿಸೋಲ್ ಉತ್ಪತ್ತಿಯು ಅಗತ್ಯಕ್ಕಿಂತ ಅಧಿಕವಾಗಿರಲೂಬಹುದು! ಇದು ರಿಸ್ಕ್ ಎನಿಸುತ್ತದೆ.

ಯಾವಾಗ ಎಷ್ಟು?

ಸಾಮಾನ್ಯವಾಗಿ ಬೆಳಗಿನ ಹೊತ್ತಿನಲ್ಲಿ ರಕ್ತದಲ್ಲಿ ಕಾರ್ಟಿಸೋಲ್ ಪ್ರಮಾಣವು ಹೆಚ್ಚಿರುತ್ತದೆ. ದಿನದ ಸಮಯವನ್ನು ಅವಲಂಬಿಸಿ ವ್ಯತ್ಯಾಸವಾಗುತ್ತದೆ. ಒತ್ತಡಕ್ಕೊಳಗಾದಾಗ ವಯಸ್ಕರಲ್ಲಿ ಇದರ ಪರಿಮಾಣವು ಸಹಜ ಸ್ಥಿತಿಗಿಂತ 2 ರಿಂದ 5 ಪಟ್ಟು ಹೆಚ್ಚಬಹುದು!

ಹೃದಯಕ್ಕಷ್ಟೇ ಅಲ್ಲ ಹೆಚ್ಚಿದ ಕಾರ್ಟಿಸೋಲ್‌ನಿಂದ ಬೇರೆ ಅವಯವಗಳಿಗೂ ರಿಸ್ಕ್ ಇದೆ, ಮಿದುಳು: ಆತಂಕ, ಖಿನ್ನತೆ, ಮರೆವು, ನಿದ್ರಾಹೀನತೆ, ಏಕಾಗ್ರತೆಯ ಕೊರತೆ; ಯಕೃತ್ತು: ಹೆಚ್ಚಿದ ಗ್ಲುಕೋಸ್ ಉತ್ಪಾದನೆ, ಇನ್ಸುಲಿನ್ ನಿರೋಧಕತೆ, ಡಯಾಬಿಟಿಸ್; ಮಾಂಸಖಂಡಗಳು: ದುರ್ಬಲತೆ; ಕೊಬ್ಬಿನಂಶ: ಹೊಟ್ಟೆಯ ಭಾಗದಲ್ಲಿ ಹೆಚ್ಚಿದ ಕೊಬ್ಬಿನ ಶೇಖರಣೆ, ಬೊಜ್ಜು; ರೋಗನಿರೋಧಕ ಶಕ್ತಿ: ಕುಂದುವುದರಿಂದ ಹೆಚ್ಚಿದ ಸೋಂಕಿನ ಅಪಾಯ; ಮೂಳೆಗಳು: ಆಸ್ಟಿಯೋಪೋರೆಸಿಸ್; ಸಂತಾನೋತ್ಪತ್ತಿ: ಮಾಸಿಕ ಚಕ್ರದಲ್ಲಿ ಏರುಪೇರು, ಬಂಜೆತನ, ಲೈಂಗಿಕ ನಿರಾಸಕ್ತಿ. ನಿರಂತರವಾಗಿ ಕಾರ್ಟಿಸೋಲ್ ಅಗತ್ಯಕ್ಕಿಂತ ಹೆಚ್ಚಿಗೆ ಉತ್ಪತ್ತಿಯಾದರೆ ಇಂತಹ ರಿಸ್ಕ್ ಎದುರಾದೀತು.

ಸುರಕ್ಷಿತ ಮಟ್ಟದ ಕಾರ್ಟಿಸೋಲ್

ಸುರಕ್ಷಿತ ಮಟ್ಟಕ್ಕಿಂತ ಕಾರ್ಟಿಸೋಲ್ ಏರದಿರಲು ಇಲ್ಲಿವೆ ಸರಳ ಟಿಪ್ಸ್!

- **ಬೆಳಗಿನ ಉಪಾಹಾರ ಮುಖ್ಯ:** ಸಾಮಾನ್ಯವಾಗಿ ಕಾರ್ಟಿಸೋಲ್ ದೇಹದಲ್ಲಿ ಬೆಳಿಗ್ಗೆ ಹೆಚ್ಚಿರುತ್ತದೆ. ಉಪಾಹಾರವನ್ನು ನಿರ್ಲಕ್ಷಿಸುವುದು ಯುವ ಜನತೆಯಲ್ಲಿ ಒಂದು ಫ್ಯಾಶನ್ ಆಗಿದೆ. ದೇಹಕ್ಕೆ ಆಹಾರದ ಅಭಾವವಿದೆ ಎಂಬ ಸೂಚನೆ ಹೋದೊಡನೆ ಕಾರ್ಟಿಸೋಲ್ ಬಿಡುಗಡೆಯಾಗುತ್ತದೆ. ಹೀಗಾಗಿ ಎದ್ದ ಒಂದು ಗಂಟೆಯೊಳಗೆ ಬೆಳಗಿನ ಉಪಾಹಾರವನ್ನು ಸೇವಿಸುವುದು ಅತ್ಯವಶ್ಯ.
- **ಚಹಾ ಕಾಫಿಗೆ ಹಿತ ಮಿತವೇ ಮಂತ್ರ:** ಖಾಲೀ ಹೊಟ್ಟೆಯಲ್ಲಿ ಚಹಾ ಕಾಫಿ ಸೇವನೆ ಬೇಡ. ಪದೇ ಪದೇ ಚಹಾ ಕಾಫಿ ಕುಡಿಯುವುದು ಕಾರ್ಟಿಸೋಲ್ ಏರಿಕೆಗೆ ಕಾರಣವಾಗುತ್ತದೆ. ಕೆಲವು ಅಧ್ಯಯನಗಳ ಪ್ರಕಾರ ಗ್ರೀನ್ ಟೀ ಅಥವಾ ಬ್ಲಾಕ್ ಟೀ ಕುಡಿಯುವುದರಿಂದ ಕಾರ್ಟಿಸೋಲ್ ಕಡಿಮೆಯಾಗಲೂಬಹುದು.
- **ಬೆಳಿಗ್ಗೆ ಎದ್ದೊಡನೆ ಮೊಬೈಲ್ ವೀಕ್ಷಣೆ ಬೇಡ:** ನೈಸರ್ಗಿಕ ಬೆಳಕಿನೊಂದಿಗೆ ದಿನವನ್ನು ಸ್ವಾಗತಿಸೋಣ. ಬೆಳಿಗ್ಗೆ ಎದ್ದೊಡನೆ ಮೊಬೈಲ್ ವೀಕ್ಷಿಸಿದರೆ ನೀಲಿ ಬೆಳಕಿನ ಪ್ರಭಾವಕ್ಕೆ ಒಳಗಾಗಬೇಕಾಗುತ್ತದೆ.
- ಅತಿ ವ್ಯಾಯಾಮ ಬೇಡ: ಏಕದಂ ಫಿಟ್ನೆಸ್ ಭ್ರಮೆಯಲ್ಲಿ ಜಿಂನಲ್ಲಿ ಅತಿಯಾದ ವರ್ಕ್‌ಔಟ್ ಮಾಡುವುದು ಕೂಡ ಒಳ್ಳೆಯದಲ್ಲ. ವಾಕಿಂಗ್, ಯೋಗ, ಆಹ್ಲಾದಕರ ಚಟುವಟಿಕೆಗಳು, ನೃತ್ಯ ಹೀಗೆ ಬೇರೆ ಪ್ರಕಾರಗಳ ಬಗ್ಗೆ ಕೂಡ ಗಮನ ಹರಿಸೋಣ.
- **ಸಮತೋಲಿತ ಆಹಾರ:** ಅತಿ ಕಡಿಮೆ ಪಿಷ್ಟದ ಡಯಟ್ ದೇಹವನ್ನು ಒತ್ತಡಕ್ಕೆ ತಳ್ಳುತ್ತದೆ. ಜಂಕ್ ಫುಡ್ ಸೇವನೆಯಿಂದ ಕಾರ್ಟಿಸೋಲ್ ಪ್ರಮಾಣ ಹೆಚ್ಚುವುದನ್ನು ವೈಜ್ಞಾನಿಕ ಅಧ್ಯಯನಗಳು ನಿರೂಪಿಸಿವೆ. ಆದ್ದರಿಂದ ಹೆಚ್ಚು ತರಕಾರಿ ಬಳಸುವ ಆಹಾರ ಪದ್ಧತಿ ಉತ್ತಮ.
- **ಭಾವನಾತ್ಮಕ ಆಸರೆಯಿಂದ ಒತ್ತಡ ಮುಕ್ತ ಬದುಕು:** ನಮ್ಮೊಳಗೇ ನೋವುಗಳನ್ನು ತುಮುಲಗಳನ್ನು ಬಚ್ಚಿಟ್ಟು ಒದ್ದಾಡುವುದರಿಂದ ಕಾರ್ಟಿಸೋಲ್ ಹೆಚ್ಚಬಲ್ಲದು. ಭಾವನಾತ್ಮಕ ಆಸರೆ ಉತ್ತಮ ಸ್ನೇಹಿತನ ರೂಪದಲ್ಲಿ ಇರಬಹುದು ಅಥವಾ ಬರವಣಿಗೆಯ ಮೂಲಕ ನಮ್ಮೆಲ್ಲ ಭಾವನೆಗಳನ್ನು ಹರಿಯಬಿಡಬಹುದು.
- **ನಿದ್ದೆಯೆಂಬ ಅದ್ಭುತ ಮದ್ದು:** ಗುಣಮಟ್ಟದ ನಿದ್ದೆ ನಮ್ಮನ್ನು ಪುನಶ್ಚೇತನಗೊಳಿಸುತ್ತದೆ. ಸೂರ್ಯಾಸ್ತದ ಬಳಿಕ ಮೊಬೈಲ್ ಬಳಕೆ ಕಡಿಮೆ ಮಾಡುವುದು ವೈಜ್ಞಾನಿಕವಾಗಿ ಉತ್ತಮವೆಂದು ನಿರೂಪಿತವಾಗಿದೆ. ಇಲ್ಲವಾದಲ್ಲಿ ಕಾರ್ಟಿಸೋಲ್ ಪರಿಮಾಣ ಹೆಚ್ಚುತ್ತದೆ. ಮೆಲಾಟೋನಿನ್ ಕಡಿಮೆಯಾಗುತ್ತದೆ. ನಿದ್ರಾಹೀನತೆಯ ಸಮಸ್ಯೆ ತಲೆದೋರುತ್ತದೆ.
- **ಜಲವೆಂಬ ಅಮೃತ:** ಬಾಯಾರಿಕೆ ಆಗಲಿ ಬಿಡಲಿ, ಆಗಾಗ ನೀರು ಕುಡಿಯುವ ಅಭ್ಯಾಸವಿರಲಿ. ನಿರ್ಜಲೀಕರಣವು ಕಾರ್ಟಿಸೋಲ್ ಬಿಡುಗಡೆಯನ್ನು ಪ್ರಚೋದಿಸುತ್ತದೆ.
- **ತಾಳ್ಮೆ ಮುಖ್ಯ:** ಎಲ್ಲವನ್ನೂ 100% ಪರಿಪೂರ್ಣತೆಯಿಂದ ಮಾಡಬೇಕು ಎಂಬ ಮನೋಭಾವದವರಿಗೆ ನಿರಂತರ ಒತ್ತಡ ಉಸಿರುಗಟ್ಟಿಸುತ್ತದೆ. ನಿರಮ್ಮಳತೆಯನ್ನು ರೂಢಿಸಿಕೊಳ್ಳುವುದು ಇಂದಿನ ಆದ್ಯತೆ.
- **ಆತ್ಮಾನಂದಕ್ಕೆ ಹವ್ಯಾಸ:** ದುಡಿಯುವ, ಗಳಿಸುವ ರೇಸಿನಲ್ಲಿ ಇರುವವರು, ಯಾವುದು ಸಂತೋಷವನ್ನು ಕೊಡಬಲ್ಲದು ಎಂಬುದನ್ನು ಮರೆತೇ ಹೋಗಿರುತ್ತಾರೆ. ಸಂಗೀತ, ನೃತ್ಯ, ಹವ್ಯಾಸಗಳು, ಆಟ ಇತ್ಯಾದಿಗಳಿಗೆ ಪ್ರಾಮುಖ್ಯತೆ ಕೊಡಬೇಕು.
- ಸಂತೋಷ ಅಡಗಿರುವುದು ಸಣ್ಣ ಸಂಗತಿಗಳಲ್ಲಿ: ಹಕ್ಕಿಗಳ ಚಿಲಿಪಿಲಿ, ನಿಸರ್ಗದ ಮಡಿಲು, ಪ್ರಿಯ ಜನರೊಂದಿಗೆ ಒಡನಾಟ, ಸಾಕು ಪ್ರಾಣಿಗಳ ಸಾಂಗತ್ಯ ಸ್ವಾಭಾವಿಕವಾಗಿ ನಮ್ಮಲ್ಲಿ ಕಾರ್ಟಿಸಪಲ್ ದುಷ್ಪರಿಣಾಮವನ್ನು ಕಡಿಮೆ ಮಾಡಬಲ್ಲದು.
- ಅಚ್ಚುಕಟ್ಟಲ್ಲೂ ಇದೆ ನೆಮ್ಮದಿಯ ಬೀಜ: ಚಲ್ಲಾಪಿಲ್ಲಿಯಾದ ಮನೆ, ಆಫೀಸಲ್ಲಿ ಅಡ್ಡಾದಿಡ್ಡಿಯಾಗಿ ಬಿದ್ದ ಫೈಲುಗಳು ನಿಮ್ಮ ಒತ್ತಡವನ್ನು ಏರಿಸಬಲ್ಲವು. ನೈರ್ಮಲ್ಯಕ್ಕೂ ಅಚ್ಚುಕಟ್ಟುತನಕ್ಕೂ ಆದ್ಯತೆ ಕೊಡಿ.

ಕೋಲಾಹಲದ ಈ ಜಗದಲಿ ಪುಣ್ಯ ಚಿಂತನೆಯಿಲ್ಲ!

ವನ್ಯಮೃಗಗಳ ನಡುವೆ ಗೋವು ಬಂದೇನಹುದು?
ಪಣ್ಯವೀಧಿಯಲಿ ತಾತ್ತ್ವಿಕನಿಗೇನಹುದು
ಅನ್ಯಾಯದುನ್ಮತ್ತ ಕೋಲಾಹಲದ ಲೋಕ
ಪುಣ್ಯವನು ಚಿಂತಿಪುದೆ ? - ಮಂಕುತಿಮ್ಮ

ವನ್ಯಮೃಗಗಳ ನಡುವೆ ಒಂದು ಗೋವು ಬಂದರೆ ಆ ಗೋವಿನ ಕಥೆ ಏನಾಗಬಹುದು? ಆ ವನ್ಯ ಮೃಗಗಳು ಆ ಗೋವನ್ನು ಬೇಟೆಯಾಡಿ ಮುಗಿಸಿಬಿಡುತ್ತವೆ. ವ್ಯಾಪಾರಿಗಳೇ ತುಂಬಿರುವ ಬೀದಿಯಲ್ಲಿ ತಾತ್ವಿಕನು ಹೋಗಿ ಬರೀ ತಾತ್ವಿಕತನದ ಕಥೆಯನ್ನೋ, ಮಾತುಗಳನ್ನೋ ಆಡಿದರೆ ಅಂತಹುವುಗಳನ್ನು ವ್ಯಾಪಾರಿಗಳಾದರೂ ಕೇಳುತ್ತಾರೆಯೇ? ಈ ಜಗತ್ತಿನಲ್ಲಿ ಅನ್ಯಾಯವೆಂಬುದು ಉನ್ಮತ್ತತೆಯಲ್ಲಿ ತೇಲುತ್ತಾ ಕೋಲಾಹಲವನ್ನೇ ಸೃಷ್ಟಿಸುತ್ತಿರುವ ಈ ದಿನಮಾನಕಾಲದಲ್ಲಿ ಪುಣ್ಯದ ಬಗ್ಗೆ ಚಿಂತನೆ ಮಾಡುವವರಾದರೂ ಯಾರು?

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಮಾನವನ ಹೃದಯಾಂತರಾಳದಲ್ಲಿ ಸ್ವಾರ್ಥವು ಬಹುರೂಪಿಯಾಗಿಯೇ ಇರುತ್ತದೆ. ಈತನು ಅರಿಷಡ್ವರ್ಗಂಗಳ ದಾಸನಾಗಿ, ಅವುಗಳ ಆಣತಿಯಂತೆಯೇ ತನ್ನ ಜೀವನ ಕಳೆಯುತ್ತಲಿದ್ದಾನೆ. ಅದೂ ಬೇಕು, ಇದೂ ಬೇಕು, ಮತ್ತೊಂದೂ ಬೇಕೆಂಬ ಆಸೆಗಳ ಊಟೆಯಲ್ಲಿಯೇ ತಾನು ಜೀವಿಸುತ್ತಾ ಇದ್ದಾನೆ. ಆ ಮನದಲ್ಲಿನ ಕೆಲವು ಆಸೆಗಳ ಪೂರೈಕೆಗಾಗಿ ಯಾವ ಹಂತಕ್ಕಾದರೂ, ಯಾವ ಹೀನ ಕೆಲಸಕ್ಕಾದರೂ ಕೈ ಹಾಕಿ ತನ್ನ ಸ್ವಾರ್ಥ ಸಿದ್ದಿಗಾಗಿ ಪಣತೊಟ್ಟು ಪಡೆಯಲೇ ಬೇಕೆಂಬ ಹುಚ್ಚುತನ ಇವನಲ್ಲಿ ಮೈದುಂಬಿಕೊಂಡಿದ್ದಾಗ ಈತನಲ್ಲಿ ಅನ್ಯಾಯ, ಅಪ್ರಮಾಣಿಕತೆ, ಸುಳ್ಳುಗಳ ಬಲೆಗಳನ್ನು ಹೆಣೆದುಕೊಂಡು ಈತನು ಜೀವನ ಮಾಡುವ ಈ ಕಾಲಘಟ್ಟದಲ್ಲಿ ಉತ್ತಮರು, ಪರೋಪಕಾರಿಗಳೂ, ನಿಸ್ವಾರ್ಥಿಗಳು, ಪ್ರಾಮಾಣಿಕರು, ಸದ್ವಿನಯವಂತರು ಸಿಗುವುದೇ ದುರ್ಲಭವಾಗಿದೆ. ಹೆಚ್ಚಿನವರು ಹೇಗಾದರೂ ಸರಿ ನಾನು ಹಣ ಮಾಡಬೇಕು, ಅಂತಸ್ತು ಹೊಂದಬೇಕು, ಅಧಿಕಾರ ಹಿಡಿಯಲೇಬೇಕು, ಈ ಜಗತ್ತೇ ನನ್ನ ಕಾಲಬುಡದಲ್ಲಿ ವಶವಾಗಿರಬೇಕು ಎನ್ನುವ ಮನಸ್ಥಿತಿಯವರಲ್ಲಿ ಉತ್ತಮ ಗುಣಗಳನ್ನು ಹೊಂದಿರುವ ಮನುಷ್ಯರು ಸಿಗುವುದೇ ಅಪರೂಪ. ಒಂದು ವೇಳೆ ಅಂತಹ ಸದ್ಗುಣ ಸಂಪನ್ನ ವ್ಯಕ್ತಿಗಳು ಈ ಅನ್ಯಾಯಕಾರರ ನಡುವೆ ಸಿಕ್ಕಲ್ಲಿ ಬದುಕುವುದಾದರೂ ಹೇಗೆ? ಎಂಬ ಪ್ರಶ್ನೆ ಮೂಡುತ್ತದೆ. ಈ ಬಗ್ಗೆ ಈಪದ್ಯದಲ್ಲಿ ಎರಡು ಒಳ್ಳೆಯ ಉಪಮೆಗಳನ್ನು ನೀಡಿದ್ದಾರೆ. ಅವಾವುವೆಂದರೆ ವನ್ಯಮೃಗಗಳ ನಡುವೆ ಗೋವೇನು ಬಂದಿಹುದು ? ಎಂದು. ಹೌದು ಒಂದು ಕಾಡಿನಲ್ಲಿ ಬರೀ ಕಾಡು ಮೃಗಗಳೇ ತುಂಬಿಕೊಂಡಿರುವಲ್ಲಿ ಸಾಧುವಾದ ಒಂದು ಗೋವು ಬಂದರೆ ಆ ಕಾಡು ಮೃಗಗಳು ಈ ಸಾಧುವಾದ ಗೋವನ್ನು ಬೇಟೆಯಾಡಿ, ಸಿಗಿದು ಅದನ್ನು ಭಕ್ಷಿಸದೆ ಬಿಡುತ್ತವೆಯೇ? ಹಾಗೆಯೇ ಬರೀ ವರ್ತಕರೇ ತುಂಬಿಕೊಂಡು, ಲೆಕ್ಕಾಚಾರದಲ್ಲಿ ವ್ಯಾಪಾರ ಮಾಡುವಾಗ, ಪಣ್ಯವೀಥಿ (ಹಣ ಮಾಡುವ ಸ್ಥಳ) ಯಲ್ಲಿ ಒಬ್ಬ ಸಾತ್ವಿಕನು ಬಂದು ತತ್ವದ ವಿಚಾರಗಳನ್ನು ಅವರಿಗೆ ಉಪದೇಶ ಮಾಡಿದರೆ ವ್ಯಾಪಾರಸ್ಥರು ಈ ಸಾತ್ವಿಕನ ಸಾತ್ವಿಕ ನುಡಿಗಳನ್ನು ಕೇಳಲು ಇಚ್ಚೆ ಪಡುತ್ತಾರೆಯೇ? ಇಲ್ಲ. ಈ ಜಗತ್ತಿನಲ್ಲಿ ಈ ಮಾನವ ಜೀವಿಯು ಸ್ವಾರ್ಥದ ದಾಸನಾಗಿ, ತನಗೆ ಬೇಕಾದುದನ್ನು ಪಡೆಯಲು ಅನ್ಯಾಯವೆಸಗುತ್ತಾ, ಅನ್ಯಾಯದ ಉನ್ಮತ್ತತೆಯಲ್ಲಿ ತೇಲುತ್ತಿರುವಾಗ ಪುಣ್ಯದ ಬಗ್ಗೆ, ಸಾತ್ವಿಕತನದ ಬಗ್ಗೆ, ಪರೋಪಕಾರದ ಬಗ್ಗೆ, ಅರಿವಿನ ಬಗ್ಗೆ, ಸಹಾಯದ ಬಗ್ಗೆ ಚಿಂತನೆಯಾದರೂ ಯಾರು ಮಾಡುತ್ತಾರೆ ಎಂದು ಈ ಪದ್ಯದಲ್ಲಿ ಕಳವಳವನ್ನು ವ್ಯಕ್ತ ಪಡಿಸಿದ್ದಾರೆ.

ಪುಸ್ತಕಲೋಕ

ಸಾಂಸ್ಕೃತಿಕ ಪತ್ರಗಳು



ಇದೊಂದು ವಿಶಿಷ್ಟ ಪುಸ್ತಕ. ಹಿರಿಯ ಸಾಹಿತಿ ಕೆ. ಸತ್ಯನಾರಾಯಣ ಅವರಿಗೆ, ಗಿರೀಶ್ ವಿ. ವಾಘ್ (1950-2025) ಅವರು ಬರೆದ ಖಾಸಗಿ ಪತ್ರಗಳನ್ನು ಇಲ್ಲಿ ಸಂಕಲನಗೊಳಿಸಲಾಗಿದೆ. ಸಂಸ್ಕೃತಿ ಮತ್ತು ಸಾಹಿತ್ಯದ ಕುರಿತು ಅತೀವ ಆಸಕ್ತಿಯನ್ನು ಹೊಂದಿದ್ದ ಗಿರೀಶ್ ವಿ.ವಾಘ್ ಅವರು, ಆ ವಿಚಾರಗಳನ್ನೊಳಗೊಂಡ ಪತ್ರಗಳನ್ನು ಕೆ. ಸತ್ಯನಾರಾಯಣ ಅವರಿಗೆ ನಿರಂತರವಾಗಿ ಬರೆಯುತ್ತಲೇ ಇದ್ದರು. 1998-2004ರ ನಡುವಿನ ಅವಧಿಯಲ್ಲಿ ಬರೆದ ಇಲ್ಲಿನ ಪತ್ರಗಳಲ್ಲಿ ಹಲವು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚರ್ಚೆಗಳು ಅಭಿಪ್ರಾಯಗಳು ಇವೆ. ಇಂತಹ 48 ಪತ್ರಗಳನ್ನು ಹೊಂದಿರುವ ಈ ಸಂಕಲನವನ್ನು ಅಮೂಲ್ಯ ಪುಸ್ತಕ (ಬೆಂಗಳೂರು) ಪ್ರಕಟಿಸಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮಾಡಿದ ಕಾರ್ಯದ ಫಲವಿದು (4)
3. ಬೀಸುವ ಗಾಳಿ (4)
4. ದಾನವನಿಗೆ ಮತ್ತೊಂದು ಹೆಸರು (3)
5. ಎರಡು ಕಂಬಗಳ ನಡುವಿನ ಸ್ಥಳ (3)
7. ಬೆಳಕಿಗೆ ಅಡ್ಡವಾಗಿ ನಿಂತಾಗ ಉಂಟಾದ ಛಾಯೆ (3)
11. ನವರತ್ನಗಳಲ್ಲಿ ಒಂದು (4)
12. ಕರಾರು ಮಾಡಿಕೊಳ್ಳುವಾಗ ಏಕೆ ಅಡ್ಡಿ? (4)
13. ಸಿಂಹದ ಕುತ್ತಿಗೆಯ ಮೇಲಿನ ಕೂದಲು (3)
15. ಬೆಟ್ಟದಂತೆ ಚಲಿಸದೆ ಇರುವ (3)
16. ಸಾರವಿರುವ ಸಮುದ್ರ (3)
17. ತೆಂಗಿನ ಕಾಯಿ (4)
18. ಒಳ್ಳೆಯ ಸ್ವಭಾವವುಳ್ಳವಳು (4)

ಮೇಲಿಂದ ಕೆಳಕ್ಕೆ

2. ಒಂದಲ್ಲಾ ಒಂದು ದಿನ ಬರುವುದು (3)
3. ಮೂಗು ಗುರುತಿಸುವಂತಹದ್ದು (3)
6. ಚಿನ್ನದಂತಹ ದಾಸ ಶ್ರೇಷ್ಠ (5)
8. ದೇಹದ ರಕ್ಷಣೆಗೆ ತೊಟ್ಟುಕೊಳ್ಳುವ ಹೊದಿಕೆ (5)
9. ಮನವಿರುವ ಚಿತ್ತ (3)
10. ವಿಷ್ಣುವಿನ ವಾಹನ (3)
14. ಸಲ ತಂದು ತಿಂದ ಮಾವಿನಹಣ್ಣು (3)
15. ತಿಂದಿದ್ದು ಜೀರ್ಣವಾಗು (3)

ಸರಿಯುತ್ತರಗಳು

ಕಾಯಕವೇ ಕೈಲಾಸ ಎಂದು ಬದುಕಿದ ನಕ್ಕೀರ

ಇದೊಂದು ತಮಿಳುನಾಡಿನಲ್ಲಿ ಹೆಚ್ಚು ಪ್ರಚಲಿತವಿರುವ ಕಥೆ. ನಕ್ಕೀರ ಎನ್ನುವ ಒಬ್ಬ ಶಿವಭಕ್ತ ಯಾವಾಗಲೂ ಸಮುದ್ರದ ತಡಿಯಲ್ಲಿ, ಕೆಲಸ ಮಾಡುತ್ತಿದ್ದ. ಸಮುದ್ರದ ಆಳಕ್ಕೆ ಇಳಿದು ಅಲ್ಲಿದ್ದ ಮುತ್ತು ರತ್ನಗಳನ್ನು ಆಯ್ದು ತರುವುದು ಅವನ ಕೆಲಸ. ಆತ ಪ್ರತಿ ಉಸಿರಿನಲ್ಲಿ, ಶಿವನಾಮವನ್ನು ಧ್ಯಾನಿಸುತ್ತಿದ್ದ. ನೀರಿನಲ್ಲಿ ಮುಳುಗುವಾಗ, ಮುತ್ತುಗಳನ್ನು ಆಯ್ದುಕೊಳ್ಳುವಾಗ, ಮೇಲೆ ಬಂದು ಅವುಗಳನ್ನು ಬೇರ್ಪಡಿಸುವಾಗಲೂ ಕೂಡಾ ಅವನ ಬಾಯಲ್ಲಿ ಶಿವನನಾಮವೇ ಇರುತ್ತಿತ್ತು. ಇವನ ಈ ನಡೆ, ನುಡಿಯಿಂದ ಎಲ್ಲರಿಗೂ ಇವನ ಬಗ್ಗೆ ಅಪಾರ ಗೌರವ.

ಎಲ್ಲರೂ ಇವನನ್ನು ಶಿವಭಕ್ತನೆಂದು ಕೊಂಡಾಡುವುದನ್ನು ಕೇಳಿ, ಅವನನ್ನು ಪರೀಕ್ಷಿಸ ಬೇಕೆಂದು, ಶಿವನೇ ಒಂದು ಸಲ ಸಮುದ್ರದ ದಡದಲ್ಲಿ ಅವನ ಎದುರಿಗೇ ಬಂದು ನಿಂತ.

ನಕ್ಕೀರ ತನ್ನ ಕೆಲಸದಲ್ಲಿ ಎಷ್ಟು ನಿರತನಾಗಿದ್ದರೆಂದರೆ ಅವನ ಮುಂದೆ ಸಾಕ್ಷಾತ್ ಶಿವನೇ ಬಂದು ನಿಂತರೂ ಅವನಿಗೆ ಗೊತ್ತಾಗಲಿಲ್ಲ. ಶಿವನನ್ನು ಗಮನಿಸದೆ ನೀರಿನಲ್ಲಿ ಮುಳುಗಿದ. ಈಗ ಶಿವನಿಗೆ ಅವನ ಮೇಲೆ ಬಹಳ ಕೋಪ ಬಂತು. ಇವನನ್ನು ಮಹಾ ಶಿವಭಕ್ತನೆಂದು ಜನ ಕೊಂಡಾಡುತ್ತಿದ್ದಾರೆ, ತಾನೇ ಎದುರಿಗೆ ಬಂದು ನಿಂತರೂ ಇವನು ನನ್ನನ್ನು ಗಮನಿಸುತ್ತಲೇ ಇಲ್ಲವಲ್ಲ ಎಂದುಕೊಂಡ.

ಸ್ವಲ್ಪ ಸಮಯದ ನಂತರ ನಕ್ಕೀರ ನೀರಿನಿಂದ ಮೇಲೆ ಬಂದ, ಆಗಲೂ ಇವನು ಶಿವನನ್ನು ಗಮನಿಸಲಿಲ್ಲ.ತಕ್ಷಣ ಶಿವ ಕೋಪದಿಂದ ತನ್ನ ಮೂರನೇಯ ಕಣ್ಣನ್ನು ತೆರೆದ. ಶಿವ ತನ್ನ ಹಣೆಗಣ್ಣನ್ನು ತೆರೆದರೆ, ಇಡೀ,ಪ್ರಪಂಚವೇ ಭಸ್ಮವಾಗಿ ಹೋಗುತ್ತದೆ. ಆದರೆ ಶಿವ ಮೂರನೆಯ ಕಣ್ಣನ್ನು ತೆರೆದರೂ ಕೂಡ, ಬೆಂಕಿಯ ಉರಿ ನಕ್ಕೀರನನ್ನು ಮುಟ್ಟಲಿಲ್ಲ. ಅವನು ತನ್ನ ಪಾಡಿಗೆ ತಾನು, ಶಿವಧ್ಯಾನದೊಂದಿಗೆ, ತನ್ನ ಕೆಲಸದಲ್ಲಿ ನಿರತನಾಗಿದ್ದ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಆಗ ಶಿವನೇ ಆಶ್ಚರ್ಯದಿಂದ ನಕ್ಕೀರನನ್ನು ಮುಟ್ಟಿ ಮಾತನಾಡಿಸಿದ. ನನ್ನನ್ನು ಕಾಣಲೆಂದು ಅನೇಕ ಶರಣರು ನೂರಾರು ವರ್ಷಗಳ ತಪಸ್ಸು ಮಾಡಿದರೂ ಅವರಿಗೆ ದರ್ಶನ ನೀಡದ ನಾನು ನಿನ್ನ ಮುಂದೆಯೇ ಬಂದು ನಿಂತಿದ್ದರೂ ನಿರ್ಲಕ್ಷದಿಂದ ನೀನು ಕೆಲಸ ಮಾಡುತ್ತಿರುವೆಯಲ್ಲ ಇದಕ್ಕೆ ಕಾರಣ ಏನು? ಎಂದು ಕೇಳಿದ.

ಆಗ ನಕ್ಕೀರ, ದೇವಾ ನಾನು ನನ್ನ ಕಾಯಕದಲಿ ತನ್ಮಯನಾಗಿ ಬಿಟ್ಟಿದ್ದೆ. ನೀವು ಬಂದಿದ್ದು, ನನಗೆ ತಿಳಿಯಲಿಲ್ಲ. ನನಗೆ ಕಾಯಕವೇ ಪೂಜೆ ಆ ಕಾಯಕ ನೀನೇ ನನ್ನ ಕಾಯಕದ ಉದ್ದೇಶವೂ ನೀನೇ, ಎಂದು ಹೇಳಿ ಶಿವನ ಕಾಲಿಗೆರಗಿದ.

ಅದು ನಿಜವೇ, ಆದರೆ ನನ್ನ ಉರಿಗಣ್ಣಿನ ಬೆಂಕಿ ನಿನ್ನನ್ನು ಯಾಕೆ ಸುಡಲಿಲ್ಲ? ಎಂದು ಕೇಳಿದ ಶಿವ.

ಆಗ ನಕ್ಕೀರ ದೇವಾ, ನಾನು ದುಡಿದು ತಿನ್ನುವವನು ನೀನು ಬೇಡಿ ತಿನ್ನುವವನು. ದುಡಿದು ತಿನ್ನುವವನು, ತಿರುಗಿ ತಿನ್ನುವವನಿಗಿಂತ ದೊಡ್ಡವನು. ನಿನ್ನ ಉರಿ ಗಣ್ಣಿಗಿಂತ ನನ್ನ ಕಾಯಕದ ಶಕ್ತಿಯೇ ಹೆಚ್ಚು ಎಂದು ಕೈ ಮುಗಿದ. ಇವನ ಮಾತನ್ನು ಶಿವ ಮೆಚ್ಚಿಕೊಂಡ. ಶಿವ ಅವನ ಕಾಯಕದ ಶಕ್ತಿಯನ್ನು ಹೊಗಳಿ ಪ್ರೀತಿಯಿಂದ ಅವನನ್ನು ಆಶೀರ್ವದಿಸಿ ಕೈಲಾಸಕ್ಕೆ ಹೊರಟ.

ನಿಜ ಜೀವನದಲ್ಲಿ ಕೂಡ ಅನೇಕರು ಎರಡು ಹೊತ್ತಿನ ಊಟಕ್ಕಾಗಿ ಕಾಯಕದಲ್ಲಿ ಅದೆಷ್ಟು ನಿರತರಾಗಿರುತ್ತಾರೆ ಎಂದರೆ, ಅವರಿಗೆ ಪೂಜೆ, ಯಾತ್ರೆ ಇವುಗಳಿಗೆ ಸಮಯವೇ ಇರುವುದಿಲ್ಲ. ಪ್ರಾಮಾಣಿಕ ಬದುಕನ್ನು ಆರಿಸಿಕೊಂಡವರಿಗೆ ಕಾಯಕದಲ್ಲಿ ದೇವರನ್ನು ಕಾಣುವವರಿಗೆ, ಇಂತಹ ವ್ರತ, ಪೂಜೆ, ಯಾತ್ರೆಗಳ ಫಲವೆ ಲ್ಲವೂ ಅವರ ಕಾಯಕದಿಂದಲೇ ಸಿಕ್ಕಿಬಿಡು ವವು. ನಾನಾ ರೀತಿಯ ಫಲ ಪುಷ್ಪಗಳನ್ನು ದೇವರಿಗೆ ಅರ್ಪಿಸಿ ಅವನನ್ನು ಸಂತುಷ್ಟ ಪಡಿ ಸಲು ಸಾಧ್ಯವಾಗುವುದೋ ಇಲ್ಲವೋ ಗೊತ್ತಿಲ್ಲ ಆದರೆ ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದಾಗ, ಇತರರಿಗೆ ಕೇಡು ಬಯಸದೇ ಇದ್ದಾಗ ಖಂಡಿತ ದೇವರನ್ನು ಮೆಚ್ಚಿಸುತ್ತೇವೆ.

ಪೂರ್ವಜನ್ಮದ ಕಡೆ ಮರು ನೋಟ

ನನ್ನ ಉದಾತ್ತ ಭಕ್ತರು ನನ್ನನ್ನು ಪಡೆದ ನಂತರ ಪುನರ್ಜನ್ಮ ಹೊಂದುವುದಿಲ್ಲ (8.16). ಆ ಪುನರ್ಜನ್ಮವು ದುಃಖದ ನೆಲೆಯಾಗಿದೆ. (8.15) ಈ ಸಂದರ್ಭದಲ್ಲಿ ಪುನರ್ಜನ್ಮವನ್ನು ತಿಳಿದುಕೊಳ್ಳುವುದು ಮಹತ್ವದ್ದಾಗಿದೆ.

ಸಾಮಾನ್ಯವಾಗಿ ಪುನರ್ಜನ್ಮವೆಂದರೆ ಮರಣದ ನಂತರ ಹೊಸ ಜೀವವನ್ನು ಪಡೆಯುವುದು. ಇದು ಅಕ್ಷರಶಃ ಅನುವಾದ. ಇದನ್ನು ನಮ್ಮ ಸುತ್ತಲಿನ ಹೊಸ ಪರಿಸ್ಥಿತಿಯ ಉದ್ಭವವೆಂದೂ ಹೇಳಬಹುದು.

ನಿಯಮಿತ ತಳಹದಿಯ ಮೇಲೆ ನಮ್ಮ ಸುತ್ತಲಿನ ಪರಿಸ್ಥಿತಿಗಳು ಅಭಿವೃದ್ಧಿ ಹೊಂದಿರುತ್ತವೆ. ಅವುಗಳನ್ನು ಇಂದ್ರಿಯಗಳು ತಮ್ಮ ಪೂರ್ವಾಗ್ರಹ ಪೀಡಿತ ಅರಿವಿನಿಂದ ಗ್ರಹಿಸುತ್ತವೆ. ಒಂದು ಸನ್ನಿವೇಶವು ಕೊನೆಗೊಂಡಾಗ ಅದರಿಂದ ನಮ್ಮಲ್ಲಿ ಉದ್ಭವಿಸಿದ ಅಲೆಗಳು ನಮ್ಮ ಪ್ರತಿಕ್ರಿಯೆ ಅಥವಾ ನಡತೆಯಿಂದಾಗಿ ಮತ್ತೆ ಕೆಲವು ಸನ್ನಿವೇಶಗಳಿಗೆ ಅವಕಾಶ ಮಾಡಿಕೊಡುತ್ತವೆ. ಕೃಷ್ಣ ಈ ಚಕ್ರಗತಿಯ ಪ್ರಕ್ರಿಯೆಯನ್ನು ದುಃಖದ ನೆಲೆಯೆಂದು ಕರೆದಿದ್ದಾನೆ. ಆದರೆ ಯಾರು ಪರಮಾತ್ಮನನ್ನು ಪಡೆದಿದ್ದಾರೋ ಅವರಿಗೆ ಈ ಇಂದ್ರಿಯಾಗಳಿತವಾದದ್ದು ಮಹಾಸಾಗರದಲ್ಲಿ ನದಿಗಳು ಅದೃಶ್ಯವಾಗುವಂತೆ ಇಲ್ಲವಾಗುತ್ತವೆ ಆದ್ದರಿಂದ ಹೊಸ ಸನ್ನಿವೇಶಗಳ ಸೃಷ್ಟಿಗೆ ಅವಕಾಶವೇ ಇರುವುದಿಲ್ಲ. ಆದರೆ ಅಸ್ತಿತ್ವವು ಅವುಗಳನ್ನು ಸೃಷ್ಟಿಸುವ ಕೆಲಸವನ್ನು ಮುಂದುವರಿಸುತ್ತದೆ. ಹೊರಗಿನ ಸನ್ನಿವೇಶಗಳ ಮೇಲೆ ನಮಗೆ ಯಾವುದೇ ನಿಯಂತ್ರಣ ಇರುವುದಿಲ್ಲ. ಆದರೆ ನಾವು ನಮ್ಮನ್ನು ಪರಿವರ್ತಿಸಿಕೊಳ್ಳಬಹುದು. ಆಗ ಅವು ದುರ್ಬಲವಾಗುತ್ತದೆ ಮತ್ತು ನಾವು ಕೇವಲ ಸಾಕ್ಷಿಗಳಾಗಿ ಉಳಿಯುತ್ತೇವೆ. ಪರಿವರ್ತನೆಯ ಈ ಮಾರ್ಗವನ್ನು ಬಹಳ ಸಾರೆ ಪರಮ ಪಥವೆಂದು ಹೇಳಲಾಗುತ್ತದೆ. ಈ ಮಾರ್ಗಕ್ಕೆ ಪ್ರವೇಶ ದ್ವಾರವು ವೀತರಾಗ ಅಥವಾ ಮೋಹ ಮುಕ್ತವಾದದ್ದು ಎನ್ನುತ್ತಾರೆ. (8.11) ಇದು ಸನ್ನಿವೇಶದ ಬಗ್ಗೆ ಹಾಗೂ ಜನರ ಬಗ್ಗೆ ಇರುವ ಆಸೆ ಮತ್ತು ದ್ವೇಷ ಎರಡನ್ನು ತ್ಯಜಿಸುವುದಾಗಿದೆ (7.27). ಮುಂದಿನ ಹೆಜ್ಜೆ ಎಂದರೆ ಮನಸ್ಸನ್ನು ಹೃದಯಕ್ಕೆ ಪರಿಮಿತಗೊಳಿಸಿ ಭಗವಂತನನ್ನು ಸ್ಮರಿಸುತ್ತಾ ಇಂದ್ರಿಯಗಳ ನಿಯಂತ್ರಣ ಮಾಡುವುದಾಗಿದೆ. (8.12, 8,13) ಈ ಮಾರ್ಗವನ್ನು ಅನುಸರಿಸಿದರೆ ತಾನು ಸುಲಭವಾಗಿ ಲಭ್ಯನಾಗುತ್ತೇನೆ ಎಂದು ಕೃಷ್ಣ ಭರವಸೆ ಕೊಡುತ್ತಾನೆ.(8.14) ನಮ್ಮ ದುಃಖಕ್ಕೆ ಜನರು ಮತ್ತು ಸನ್ನಿವೇಶಗಳು ಕಾರಣ ಎಂದು ನಾವು ತಿಳಿದು ಅವುಗಳನ್ನು ಬದಲಿಸುವ ಪ್ರಯತ್ನ ಮಾಡುತ್ತೇವೆ ಮತ್ತು ಅವುಗಳನ್ನು ದೂಷಿಸುತ್ತೇವೆ. ನಿಜವಾದ ಬದಲಾವಣೆ ನಮ್ಮೊಳಗೆ ಆಗತಕ್ಕದ್ದು. ಆಗ ಸನ್ನಿವೇಶಗಳು ಅಥವಾ ಜನರು ನಮ್ಮನ್ನು ಪ್ರಭಾವಿತಗೊಳಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಇದು ನಿಜವಾಗಿಯೂ ಪುನರ್ಜನ್ಮ ರಹಿತ ಸ್ಥಿತಿಯಾಗಿದೆ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ವಿಶ್ವವಾಣಿ IPL ಹಬ್ಬ 2025

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್ (Q)	12	09	03	18
ಬೆಂಗಳೂರು (Q)	12	08	03	17
ಪಂಜಾಬ್ (Q)	12	08	03	17
ಮುಂಬೈ (Q)	13	08	05	16
ಡೆಲ್ಲಿ	13	05	06	13
ಕೋಲ್ಕತ್ತಾ	13	05	06	12
ಲಖನೌ	12	05	07	10
ಹೈದರಾಬಾದ್	12	04	07	09
ರಾಜಸ್ಥಾನ್	14	04	10	08
ಚೆನ್ನೈ	13	03	10	06

ಇಂದಿನ ಪಂದ್ಯ

7.30 PM

ರಾಯಲ್ ಚಾಲೆಂಜರ್ಸ್ ಬೆಂಗಳೂರು VS ಸನ್‌ರೈಸರ್ಸ್ ಹೈದರಾಬಾದ್

ಏಕನಾ ಕ್ರಿಕೆಟ್ ಸ್ಟೇಡಿಯಂ, ಲಖನೌ

ಫ್ರಾಂಚೈಸಿಯ ಹಿತಾಸಕ್ತಿ ಮುಖ್ಯ

'ಕಳೆದ ಕೆಲವು ವರ್ಷಗಳಿಂದ ಧೋನಿ ಐಪಿಎಲ್‌ನಿಂದ ನಿವೃತ್ತಿ ಹೊಂದಲಿದ್ದಾರೆ ಎಂಬ ಸುದ್ದಿಗಳು ಕೇಳಿಬರುತ್ತಿವೆ. ಮುಂಬರುವ 2026ರ ಋತುವಿನಲ್ಲಿ ಧೋನಿ ಐಪಿಎಲ್‌ನಲ್ಲಿ ಆಡುತ್ತಾರೋ, ಇಲ್ಲವೋ ಎಂಬುದನ್ನು ಇನ್ನೂ ದೃಢಪಡಿಸಿಲ್ಲ. ಧೋನಿ ಸ್ಥಾನದಲ್ಲಿ ನಾನಿದ್ದರೆ, ಫ್ರಾಂಚೈಸಿಯ ಈಗಿನ ಹಿತಾಸಕ್ತಿಗಳಿಗೆ ತಕ್ಕಂತೆ ತಕ್ಷಣವೇ ನಿವೃತ್ತಿ ಹೊಂದಲು ನಿರ್ಧರಿಸುತ್ತಿದ್ದೆ. ನಾವು ತಂಡವನ್ನು ತೊರೆದರೂ ಸಹ, ಫ್ರಾಂಚೈಸಿ ಮುಂದೆ ಸಾಗುತ್ತದೆ ಎಂಬ ಅಂಶವನ್ನು ಪ್ರಬುದ್ಧ ಆಟಗಾರರು ಅರಿತುಕೊಳ್ಳಬೇಕು'

-ಸಂಜಯ್ ಬಂಗಾರ್ ಟೀಮ್ ಇಂಡಿಯಾ ಮಾಜಿ ಕೋಚ್

ವೈಭವ್ ಸೂರ್ಯವಂಶಿಗೆ ಸ್ಥಾನ

ದೆಹಲಿ: ಮುಂಬರುವ ಇಂಗ್ಲೆಂಡ್ ಪ್ರವಾಸದ ಭಾರತ 19ರ ವಯೋಮಿತ ಕ್ರಿಕೆಟ್ ತಂಡವನ್ನು ಗುರುವಾರ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಪ್ರಕಟಿಸಿದೆ. ಈ ಸಲದ ಐಪಿಎಲ್ ಟೂರ್ನಿಯಲ್ಲಿ ರಾಜಸ್ಥಾನ್ ರಾಯಲ್ಸ್ ಪರ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನದ ಮೂಲಕ ಎಲ್ಲರ ಗಮನ ಸೆಳೆದಿದ್ದ 14ರ ವಯಸ್ಸಿನ ಪೋರ ವೈಭವ್ ಸೂರ್ಯವಂಶಿ ಅಂಡರ್-19 ತಂಡದಲ್ಲಿ ಚೊಚ್ಚಲ ಅವಕಾಶವನ್ನು ಪಡೆದಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್ ತಂಡದ ಯುವ ಆರಂಭಿಕ ಆಯುಷ್ ಮ್ಹಾತ್ರೆ ಅವರನ್ನು ಭಾರತ ಕಿರಿಯರ ತಂಡಕ್ಕೆ ನಾಯಕನನ್ನಾಗಿ ನೇಮಿಸಲಾಗಿದೆ. ಜೂನ್ 24ರಿಂದ ಜುಲೈ 23ರ ವರೆಗೂ ಭಾರತ ತಂಡವು ಇಂಗ್ಲೆಂಡ್ ಪ್ರವಾಸವನ್ನು ಹಮ್ಮಿಕೊಳ್ಳಲಿದೆ. ಇಂಗ್ಲೆಂಡ್ ಹಾಗೂ ಭಾರತ ತಂಡಗಳು ಮೊದಲಿಗೆ ಅಭ್ಯಾಸವನ್ನು ಪಂದ್ಯವನ್ನು ಆಡಲಿದ್ದು, ನಂತರ ಐದು ಪಂದ್ಯಗಳ ಯುವ ಏಕದಿನ ಸರಣಿಯಲ್ಲಿ ಉಭಯ ತಂಡಗಳು ಕಾದಾಟ ನಡೆಸಲಿವೆ.

ಯುಎಇ ಹೊಸ ಇತಿಹಾಸ

ಶಾರ್ಜಾ: ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಕ್ರಿಕೆಟ್ ತಂಡವು ಶಾರ್ಜಾದ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬಾಂಗ್ಲಾದೇಶ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿಯನ್ನು 2-1 ಅಂತರದಿಂದ ಗೆದ್ದು, ಹೊಸ ದಾಖಲೆಯನ್ನು ಸೃಷ್ಟಿಸಿದೆ. ಈ ಗೆಲುವಿನೊಂದಿಗೆ, ಯುಎಇ ಟೆಸ್ಟ್ ಸ್ಥಾನಮಾನ ಹೊಂದಿರುವ ರಾಷ್ಟ್ರದ ವಿರುದ್ಧ ದ್ವಿಪಕ್ಷೀಯ ಟಿ20 ಸರಣಿಯನ್ನು ಗೆದ್ದ ಮೊದಲ ತಂಡವಾಗಿ ಹೊರಹೊಮ್ಮಿದೆ. ಮೇ 17ರಿಂದ 21ರವರೆಗೆ ಶಾರ್ಜಾದ ಕ್ರೀಡಾಂಗಣದಲ್ಲಿ ನಡೆದ ಈ ಸರಣಿಯು ಮೂಲತಃ ಎರಡು ಪಂದ್ಯಗಳನ್ನು ಒಳಗೊಂಡಿತ್ತು. ಆದರೆ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯ (ಬಿಸಿಬಿ) ವಿನಂತಿಯ ಮೇರೆಗೆ ಮೂರನೇ ಟಿ20 ಪಂದ್ಯವನ್ನು ಸೇರಿಸಲಾಯಿತು. ಪಾಕಿಸ್ತಾನ ಪ್ರವಾಸದ ಅನಿಶ್ಚಿತತೆಯಿಂದಾಗಿ 2 ಪಂದ್ಯಗಳ ಸರಣಿಯನ್ನು 3ಕ್ಕೆ ಏರಿಸಲಾಯಿತು. ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ 27 ರನ್‌ಗಳಿಂದ ಗೆಲುವು ಸಾಧಿಸಿತ್ತು. ಆದರೆ ಯುಎಇ ಎರಡನೇ ಮತ್ತು ಮೂರನೇ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಸರಣಿಯನ್ನು 2-1ರಿಂದ ತನ್ನದಾಗಿಸಿಕೊಂಡಿತು.

ಮಿಚೆಲ್ ಮಾರ್ಷ್ ಸಿಡಿಲಬ್ಬರದ ಶತಕ | ಪೂರನ್ ಬಿರುಸಿನ ಅರ್ಧ ಶತಕ

ಗುಜರಾತ್‌ಗೆ 236 ರನ್‌ಗಳ ಬೃಹತ್ ಗುರಿ

ಅಹಮದಾಬಾದ್: ಆರಂಭಿಕ ಆಟಗಾರ ಮಿಚೆಲ್ ಮಾರ್ಷ್‌ರವರ ಸಿಡಿಲಬ್ಬರದ ಶತಕ ಮತ್ತು ನಿಕೋಲಸ್ ಪೂರನ್ ಅವರ ಬಿರುಸಿನ ಅರ್ಧ ಶತಕಗಳ ನೆರವಿನಿಂದ ಇಲ್ಲಿನ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್ ಟೂರ್ನಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವು 2 ವಿಕೆಟ್ ನಷ್ಟಕ್ಕೆ 235 ರನ್ ಗಳಿಸಿ, ಗುಜರಾತ್ ಟೈಟನ್ಸ್ ತಂಡಕ್ಕೆ 236 ರನ್‌ಗಳ ಬೃಹತ್ ಗುರಿ ನೀಡಿದೆ.

ಟಾಸ್ ಗೆದ್ದ ಗುಜರಾತ್ ತಂಡವು ಮೊದಲು ಬೌಲಿಂಗ್ ಆಯ್ದುಕೊಂಡಿತು. ಲಖನೌ ಪರವಾಗಿ ಇನ್ನಿಂಗ್ಸ್ ಆರಂಭಿಸಿದ ಮರ್ಕ್ರಮ್ ಮತ್ತು ಮಿಚೆಲ್ ಮಾರ್ಷ್ ತಂಡಕ್ಕೆ ಉತ್ತಮ ಆರಂಭವನ್ನು ಕೊಟ್ಟರು. ಅವರಿಬ್ಬರೂ ಗುಜರಾತ್‌ನ ಬೌಲರ್‌ಗಳನ್ನು ಹಿಗ್ಗಾ ಮುಗ್ಗಾ ದಂಡಿಸಿದರು.

ಮರ್ಕ್ರಮ್ 24 ಬಾಲ್‌ಗಳಲ್ಲಿ 36 ರನ್ ಗಳಿಸಿ ಲಖನೌ ತಂಡದ ಮೊತ್ತ 91 ಆಗಿದ್ದಾಗ ಸಾಯಿ ಕಿಶೋರ್ ಬೌಲಿಂಗ್‌ನಲ್ಲಿ ಶಾರೂಕ್ ಖಾನ್‌ಗೆ ಕ್ಯಾಚ್ ನೀಡುವ ಮೂಲಕ ಔಟ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 2 ಸಿಕ್ಸರ್ ಮತ್ತು 3 ಬೌಂಡರಿಗಳಿದ್ದವು.

ಆ ಬಳಿಕ ಲಖನೌ ತಂಡದ ನಿಕೋಲಸ್ ಪೂರನ್ ಅವರು ಮಾರ್ಷ್ ಜತೆ ಸೇರಿಕೊಂಡು 2ನೇ ವಿಕೆಟ್‌ಗೆ 121 ರನ್ ಪೇರಿಸಿದರು. ತಂಡದ ಒಟ್ಟು ಮೊತ್ತ 212 ರನ್‌ಗಳಾಗಿದ್ದಾಗ 64 ಬಾಲ್‌ಗಳಲ್ಲಿ 117 ರನ್ ಗಳಿಸಿದ್ದ ಮಿಚೆಲ್ ಮಾರ್ಷ್ ಅವರು ಅರ್ಷದ್ ಖಾನ್ ಬೌಲಿಂಗ್‌ನಲ್ಲಿ ರುಧರ್‌ಫೋರ್ಡ್ ಅವರಿಗೆ ಕ್ಯಾಚ್ ನೀಡಿ

ಪೆವಿಲಿಯನ್ ಸೇರಿದರು. ಸಿಡಿಲಬ್ಬರದ ಶತಕ ಗಳಿಸಿದ್ದ ಮಾರ್ಷ್ ಅವರ ಇನ್ನಿಂಗ್ಸ್‌ನಲ್ಲಿ 8 ಸಿಕ್ಸರ್ ಮತ್ತು 10 ಬೌಂಡರಿಗಳಿದ್ದವು.

ನಂತರ ಲಖನೌ ನಾಯಕ ರಿಷಬ್-ನಿಕೋಲಸ್ ಪೂರನ್ ಜತೆಯಾಟ ಮುಂದುವರಿಯಿತು. 27 ಬಾಲ್‌ಗಳನ್ನು ಎದುರಿಸಿದ್ದ ಪೂರನ್ 56 ರನ್ ಗಳಿಸಿ ಅಜೇಯರಾಗಿ ಉಳಿದರು. ಅವರ ಇನ್ನಿಂಗ್ಸ್‌ನಲ್ಲಿ 5 ಸಿಕ್ಸರ್ ಮತ್ತು 4 ಬೌಂಡರಿಗಳಿದ್ದವು.

ರಿಷಬ್ ಪಂತ್ 6 ಬಾಲ್‌ಗಳನ್ನು ಎದುರಿಸಿ 2 ಬೌಂಡರಿ ಸಹಿತ 16 ರನ್ ಗಳಿಸಿ ಅಜೇಯರಾಗಿ ಉಳಿದರು.

ಗುಜರಾತ್ ಪರ 36 ರನ್‌ಗಳನ್ನು ನೀಡಿದ ಮೊಹಮ್ಮದ್ ಸಿರಾಜ್ 1 ವಿಕೆಟ್, 34 ರನ್ ನೀಡಿದ ಸಾಯಿ ಕಿಶೋರ್ 1 ವಿಕೆಟ್ ಪಡೆದರು.

ಐಪಿಎಲ್‌ನಲ್ಲಿ ಬೆಂಗಳೂರು ತಂಡಕ್ಕೆ ಜೇಕಬ್ ಬೆಥೆಲ್ ಜಾಗಕ್ಕೆ ನ್ಯೂಜಿಲೆಂಡ್ ಆಟಗಾರ ಆಯ್ಕೆ

ಆರ್‌ಸಿಬಿಗೆ ಟಿಮ್ ಸೀಫರ್ಟ್ ಸೇರ್ಪಡೆ

ದೆಹಲಿ: ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯು ನಿರ್ಣಾಯಕ ಹಂತವನ್ನು ತಲುಪಿದ್ದು, ಆರ್‌ಸಿಬಿ ತಂಡವು ಈ ಟೂರ್ನಿಯ ಪ್ಲೇಆಫ್ಸ್‌ಗೆ ಅರ್ಹತೆ ಪಡೆದಿವೆ. ಇದೀಗ ಬೆಂಗಳೂರು ತಂಡದಲ್ಲಿ ಮಹತ್ತರ ಬದಲಾವಣೆಯೊಂದು ಆಗಿದೆ. ವೆಸ್ಟ್ ಇಂಡೀಸ್ ವಿರುದ್ಧದ ಏಕದಿನ ಸರಣಿಯ ನಿಮಿತ್ತ ಜೇಕಬ್ ಬೆಥೆಲ್ ಆರ್‌ಸಿಬಿಯನ್ನು ತೊರೆಯುತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಅವರ ಸ್ಥಾನಕ್ಕೆ ನ್ಯೂಜಿಲೆಂಡ್ ವಿಕೆಟ್ ಕೀಪರ್ ಟಿಮ್ ಸೀಫರ್ಟ್ ಅವರನ್ನು ಬೆಂಗಳೂರು ಫ್ರಾಂಚೈಸಿ ತಾತ್ಕಾಲಿಕವಾಗಿ ಕರೆಸಿಕೊಂಡಿದೆ, ಆ ಬಗ್ಗೆ ಆರ್‌ಸಿಬಿ ತನ್ನ ಅಧಿಕೃತ ಸೋಶಿಯಲ್ ಮೀಡಿಯಾ ಖಾತೆಗಳಲ್ಲಿ ಪ್ರಕಟಿಸಿದೆ.

ಆರ್‌ಸಿಬಿಗೆ ಇನ್ನೂ ಎರಡು ಲೀಗ್ ಪಂದ್ಯಗಳು ಬಾಕಿಯಿದ್ದು, ಶುಕ್ರವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಕಾದಾಟ ನಡೆಸಲಿದೆ. ಅದಾದ ಬಳಿಕ ಅಂತಿಮ ಲೀಗ್



ಪಂದ್ಯಕ್ಕೂ ಮುನ್ನ ಜೇಕಬ್ ಬೆಥೆಲ್ ಇಂಗ್ಲೆಂಡಿಗೆ ತೆರಳಲಿದ್ದಾರೆ. ಹಾಗಾಗಿ ಅವರ ಸ್ಥಾನದಲ್ಲಿ ಟಿಮ್ ಸೀಫರ್ಟ್ ಮೇ 24ರಿಂದ ಆರ್‌ಸಿಬಿಗೆ ಲಭ್ಯವಾಗಲಿದ್ದಾರೆ. ಕಿವೀಸ್ ವಿಕೆಟ್ ಕೀಪರ್ ಆಗಿರುವ ಸೀಫರ್ಟ್ ಈಗಾಗಲೇ 66 ಅಂತಾರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ 133.07ರ ಸ್ಟ್ರೈಕ್‌ರೇಟ್‌ನಲ್ಲಿ 5,800ಕ್ಕೂ ಹೆಚ್ಚು ರನ್ ಗಳಿಸಿದ್ದಾರೆ. ಆರ್‌ಸಿಬಿ ಅವರನ್ನು ರು. 2 ಕೋಟಿ ರೂ ಮೂಲ ಬೆಲೆಗೆ ಸಹಿ ಮಾಡಿಸಿಕೊಂಡಿದೆ.

ಟಿಮ್ ಸೀಫರ್ಟ್ ಕೊನೆಯ ಬಾರಿ 2022ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಪರ ಆಡಿದ್ದರು. ಅದಕ್ಕಿಂತ ಮೊದಲು ಕೋಲ್ಕತ್ತಾ ನೈಟ್‌ರೈಡರ್ಸ್ ತಂಡದ ಪರ ಆಡಿದ್ದರು. ಪ್ರಸ್ತುತ ಪಾಕಿಸ್ತಾನ ಸೂಪರ್ ಲೀಗ್‌ನ ಕರಾಚಿ ಕಿಂಗ್ಸ್ ತಂಡದಲ್ಲಿ ಆಡುತ್ತಿದ್ದಾರೆ.

ಇಂದು ಬೆಂಗಳೂರು-ಹೈದರಾಬಾದ್ ಪಂದ್ಯ

ಆರ್‌ಸಿಬಿಗೆ ಟೇಬಲ್ ಟಾಪರ್ ಆಗುವ ತವಕ

ಹೈದರಾಬಾದ್

ಪ್ಯಾಟ್ ಕಮಿನ್ಸ್ (ನಾಯಕ)
ಅಭಿಷೇಕ್ ಶರ್ಮಾ
ನಿತೀಶ್ ರೆಡ್ಡಿ
ಹೆನ್ರಿಚ್ ಕ್ಲಾಸೆನ್
ಮೊಹಮ್ಮದ್ ಶಮಿ
ಹರ್ಷಲ್ ಪಟೇಲ್
ಇಶಾನ್ ಕಿಶನ್
ರಾಹುಲ್ ಚಹರ್
ಆ್ಯಡಂ ಝಂಪ
ಅಭಿನವ್ ಮನೋಹರ್
ಸಿಮ್ರನ್‌ಜಿತ್ ಸಿಂಗ್
ಜಯದೇವ್ ಉನಾದ್ಕತ್
ಕಮಿಂದು ಮೆಂಡಿಸ್
ಅನಿಕೇತ್ ವರ್ಮಾ

ಬೆಂಗಳೂರು ತಂಡ

ರಜತ್ ಪಾಟೀದಾರ್ (ನಾಯಕ)
ವಿರಾಟ್ ಕೊಹ್ಲಿ
ಯಶ್ ದಯಾಳ್
ಫಿಲ್ ಸಾಲ್ಟ್
ಜಿತೇಶ್ ಶರ್ಮಾ
ಎಲ್. ಲಿವಿಂಗ್‌ಸ್ಟೋನ್
ಸುಯಶ್ ಶರ್ಮಾ
ಭುವನೇಶ್ವರ್ ಕುಮಾರ್
ಕೃಣಾಲ್ ಪಾಂಡ್ಯ
ಜೇಕಬ್ ಬೆಥೆಲ್
ದೇವದತ್ ಪಡಿಕ್ಕಲ್
ನುವಾನ್ ತುಷಾರ
ಅಭಿನಂದನ್ ಸಿಂಗ್
ಮಯಾಂಕ್ ಅಗರ್ವಾಲ್

ಲಖನೌ: ಇಲ್ಲಿನ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ಶುಕ್ರವಾರ ನಡೆಯಲಿರುವ ಐಪಿಎಲ್ ಟೂರ್ನಿಯ ಲೀಗ್ ಪಂದ್ಯದಲ್ಲಿ ರಜತ್ ಪಾಟೀದಾರ್ ನಾಯಕತ್ವದ ಆರ್‌ಸಿಬಿ ತಂಡವು ಪಾಟ್ ಕಮಿನ್ಸ್ ನಾಯಕತ್ವದ ಹೈದರಾಬಾದ್ ತಂಡವನ್ನು ಎದುರಿಸಲಿದೆ. ಈಗಾಗಲೇ ಪ್ಲೇ ಆಫ್ ಪಂದ್ಯಗಳಿಗೆ ಅರ್ಹತೆ ಪಡೆದಿರುವ ಆರ್‌ಸಿಬಿ ತಂಡವು ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದು, ಈ ಪಂದ್ಯ ಗೆಲ್ಲುವ ಮೂಲಕ ಮೊದಲನೇ ಸ್ಥಾನಕ್ಕೆ ಏರುವ ತವಕದಲ್ಲಿದೆ. ಆದರೆ ಈ ಆವೃತ್ತಿಯ ಟೂರ್ನಿಯಿಂದಲೇ ಹೊರ ಬಿದ್ದಿರುವ ಹೈದರಾಬಾದ್ ತಂಡಕ್ಕೆ ಇದು ಕೇವಲ ಅನೌಪಚಾರಿಕ ಪಂದ್ಯ ಎಂದೆನಿಸಲಿದೆ.

'ಈ ಸಲ ಕಪ್ ನಮ್ದೇ' ಎಂಬ ಉಮೇದಿನಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಲೀಗ್ ಹಂತದಲ್ಲಿ ಈ ವರೆಗೆ ಆಡಿರುವ 12 ಪಂದ್ಯಗಳಲ್ಲಿ 8 ಪಂದ್ಯಗಳನ್ನು ಗೆದ್ದಿದ್ದು, 1 ಪಂದ್ಯದಲ್ಲಿ ಫಲಿತಾಂಶ ಕಾಣದ ಕಾರಣ 17 ಅಂಕಗಳನ್ನು ಸಂಪಾದಿಸಿದೆ. ಕೋಲ್ಕತ್ತಾ ಮತ್ತು ಚೆನ್ನೈ ತಂಡವನ್ನು ಸೋಲಿಸುವ ಮೂಲಕ ಆರ್‌ಸಿಬಿ ತಂಡವು ಈ ಐಪಿಎಲ್ ಟೂರ್ನಿಯ ಆರಂಭದ ಎರಡೂ ಪಂದ್ಯಗಳಲ್ಲಿ ಗೆಲ್ಲುವ ಮೂಲಕ ಶುಭಾರಂಭ ಮಾಡಿತ್ತು. ಆದರೆ ಆ ಬಳಿಕ ತವರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಗುಜರಾತ್ ವಿರುದ್ಧ ಸೋತಿತ್ತು, ಅದಾದ ಬಳಿಕ ಏಪ್ರಿಲ್-7ರಂದು ಮುಂಬೈ ವಿರುದ್ಧ ಗೆಲುವನ್ನು ಪಡೆದಿತ್ತು. ಏಪ್ರಿಲ್-10ರಂದು ಡೆಲ್ಲಿ ವಿರುದ್ಧ ತವರಿನಲ್ಲಿ ಸೋತರೂ, ಆ ನಂತರ ಏಪ್ರಿಲ್-13ರಂದು ರಾಜಸ್ಥಾನದ ವಿರುದ್ಧ ಗೆದ್ದು ಬೀಗಿತ್ತು. ಏಪ್ರಿಲ್-18ರಂದು ಪಂಜಾಬ್ ವಿರುದ್ಧ ಆರ್‌ಸಿಬಿ ಬೆಂಗಳೂರಿನಲ್ಲಿ ಸೋತು ಮುಖಭಂಗ ಅನುಭವಿಸಿತ್ತು.

ಆದರೆ ಆ ಬಳಿಕ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಗೆಲುವಿನ ಓಟವನ್ನು ಸತತ 4 ಪಂದ್ಯ ಗೆಲ್ಲುವ ಮೂಲಕ ಆರಂಭಿಸಿತು. ಏಪ್ರಿಲ್-20ರಂದು ಪಂಜಾಬ್ ವಿರುದ್ಧ 7 ವಿಕೆಟ್‌ಗಳಿಂದ ಗೆದ್ದರೆ, ಏಪ್ರಿಲ್-24ರಂದು ರಾಜಸ್ಥಾನದ ವಿರುದ್ಧ 11 ರನ್‌ಗಳಿಂದ ಜಯ ಗಳಿಸಿತು. ಡೆಲ್ಲಿ ವಿರುದ್ಧ ಏಪ್ರಿಲ್-23ರಂದು ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿ 6 ವಿಕೆಟ್‌ಗಳ ಜಯ ಪಡೆದರೆ, ಮೇ-3ರಂದು ನಡೆದ ಪಂದ್ಯದಲ್ಲಿ ಚೆನ್ನೈ ವಿರುದ್ಧ 2 ರನ್‌ಗಳ ರೋಚಕ ಜಯವನ್ನೂ ಪಡೆದಿತ್ತು.

ಆರ್‌ಸಿಬಿಯನ್ನು ಶುಕ್ರವಾರ ಎದುರಿಸಲಿರುವ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ಹೈದರಾಬಾದ್ ತಂಡವು ತನ್ನ ಮೊದಲ ಪಂದ್ಯದಲ್ಲಿ ರಾಜಸ್ಥಾನದ ವಿರುದ್ಧ ಗೆದ್ದರೂ, ಆ ಬಳಿಕದ ಪಂದ್ಯಗಳಲ್ಲಿ ಅದು ತೋರಿದ ಅಸ್ಥಿರ ಪ್ರದರ್ಶನವು ತಂಡಕ್ಕೆ ಮುಳುವಾಯಿತು, ಸತತ ನಾಲ್ಕು ಪಂದ್ಯಗಳನ್ನು ನಿರಂತರವಾಗಿ ಸೋತು ಅದು ಮುಖಭಂಗಕ್ಕೀಡಾಯಿತು.

ಏಪ್ರಿಲ್-12ರಂದು ಹೈದರಾಬಾದ್ ತಂಡವು ಪಂಜಾಬ್ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿದ್ದರೂ, ಬಳಿಕ ಮುಂಬೈ ವಿರುದ್ಧ ಸತತ ಎರಡು ಪಂದ್ಯಗಳನ್ನು ಕೈ ಚೆಲ್ಲಿತು. ಆದರೆ ಏಪ್ರಿಲ್-25ರಂದು ಹೈದರಾಬಾದ್ ತಂಡವು ಚೆನ್ನೈಯನ್ನು 5 ವಿಕೆಟ್‌ಗಳಿಂದ ಸೋಲಿಸಿತ್ತು. ಮೇ-2ರಂದು ಗುಜರಾತ್ ವಿರುದ್ಧದ ಪಂದ್ಯದಲ್ಲಿ ಸೋಲುವ ಮೂಲಕ ಹೈದರಾಬಾದ್ ಪಾಲಿಗೆ ಈ ಆವೃತ್ತಿಯಲ್ಲಿ ಪ್ಲೇ ಆಫ್ ಅವಕಾಶ ತಪ್ಪಿ ಹೋಯಿತು. ಮೇ-5ರಂದು ಡೆಲ್ಲಿ ವಿರುದ್ಧದ ಹೈದರಾಬಾದ್‌ನ ಪಂದ್ಯವು ಮಳೆಯಿಂದಾಗಿ ನಡೆಯಲಿಲ್ಲ. ಮೇ-19ರಂದು ಹೈದರಾಬಾದ್ ತಂಡವು 6 ವಿಕೆಟ್‌ಗಳಿಂದ ಪಂದ್ಯವನ್ನು ಗೆಲ್ಲುವ ಮೂಲಕ ಲಖನೌಗೆ ಸೋಲುಣಿಸಿತು.

ವಿಟಾಕೀಸ್

> ಇದೊಂದು ಸೂಲಗಿತ್ತಿಯ ಕುರಿತಾದ ಸಿನಿಮಾ ಎಂಬುದನ್ನು ಕೇಳಿ ಸಂತೋಷವಾಯಿತು. ಒಂದು ಕಾಲದಲ್ಲಿ ಗ್ರಾಮೀಣ ಭಾಗದಲ್ಲಿ ಮಹಿಳೆಯರಿಗೆ ದೇವರ ರೂಪದಲ್ಲಿದ್ದವರು. ತಾವು ಮಾಡುವ ಕೆಲಸಕ್ಕೆ ಯಾವುದೇ ಲಾಭದ ನಿರೀಕ್ಷೆ ಮಾಡದೆ, ಅದೊಂದು ಸಮಾಜ ಸೇವೆಯ ಕೆಲಸ ಎಂಬಂತೆ ಸೂಲಗಿತ್ತಿಯರು ಕೆಲಸ ಮಾಡುತ್ತಿದ್ದರು. ಅದೆಷ್ಟೋ ಜೀವಗಳನ್ನು ಭೂಮಿಗೆ ತಂದ ಇಂಥ ಸೂಲಗಿತ್ತಿಯರನ್ನು ಇಂಥದ್ದೊಂದು ಸಿನಿಮಾದ ಮೂಲಕ ಸ್ಮರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ.
>
> -ಕಾಮಿನಿ ರಾವ್ ವೈದ್ಯ

ತಾಯವ್ವನ ಸಾಮಾಜಿಕ ಕಳಕಳಿ

ಎರಡೂವರೆ ದಶಕಗಳ ಹಿಂದೆ, ಸುದೀಪ್ ಅಭಿನಯದ ತಾಯವ್ವ ಚಿತ್ರ ತೆರೆಗೆ ಬಂದಿತ್ತು. ಈಗ ತಾಯವ್ವ ಶೀರ್ಷಿಕೆಯಲ್ಲಿ ಮತ್ತೊಂದಯ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ.

ಹಿಂದೆ ಬಂದ ತಾಯವ್ವ ಚಿತ್ರದಲ್ಲಿ ಆ್ಯಕ್ಷನ್ ಜತೆಗೆ ಸೆಂಟಿಮೆಂಟ್ ಕೂಡ ಬೆರೆತಿತ್ತು. ಆದರೆ ಇಲ್ಲಿ ಸೆಂಟಿಮೆಂಟ್ ಇದೆ ಅದಕ್ಕೂ ಮಿಗಿಲಾಗಿ ಸಾಮಾಜಿಕ ಕಳಕಳಿ ಸಿನಿಮಾದ ಹೈಲೈಟ್ ಆಗಿದೆ. ತಾಯವ್ವ ಚಿತ್ರದ ಮೂಲಕ ಗೀತಾಪ್ರಿಯಾ ಚಿತ್ರರಂಗಕ್ಕೆ ಪ್ರವೇಶಿಸುತ್ತಿದ್ದಾರೆ.

> ಇದೊಂದು ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾಗಿದ್ದು, ಸೂಲಗಿತ್ತಿ ನರಸಮ್ಮ ಅವರಂಥ ನೂರಾರು ಸೂಲಗಿತ್ತಿಯರು ಈ ಸಿನಿಮಾ ಮಾಡಲು ನಮಗೆ ಪ್ರೇರಣೆ. ಹೆಣ್ಣುಮಕ್ಕಳನ್ನು ಉಳಿಸಿ, ಬೆಳೆಸಿ ಎಂಬ ಸಂದೇಶವನ್ನು ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ. ಶೀರ್ಷಿಕೆಯಲ್ಲಿ ಮತಾಯವ್ವ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಸಿನಿಮಾದಲ್ಲಿ ಒಂದು ಸಂದೇಶವಿದೆ. ಎಲ್ಲರಿಗೂ ತಲುಪುವಂಥ ವಿಷಯ ಈ ಸಿನಿಮಾದಲ್ಲಿದೆ.
>
> -ಗೀತಾಪ್ರಿಯಾ ನಟಿ

ತಾಯವ್ವ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಸಿನಿಪ್ರಿಯರ ಮನಗೆದ್ದಿದೆ. ಹಿರಿಯ ನಟ ಪ್ರಣಯರಾಜ ಶ್ರೀನಾಥ್ , ತಾಯವ್ವ ಸಿನಿಮಾದ ಟ್ರೇಲರ್ ನೋಡಿ ಮೆಚ್ಚಿ ಕೊಂಡಾಡಿದ್ದಾರೆ. ಪದ್ಮಶ್ರೀ ಪುರಸ್ಕೃತ ವೈದ್ಯೆ, ಡಾ. ಕಾಮಿನಿ ರಾವ್, ಲಹರಿ ವೇಲು, ಲಕ್ಷ್ಮೀ ನಾರಾಯಣ, ಹಿರಿಯ ನಿರ್ಮಾಪಕ ಭಾ.ಮ. ಹರೀಶ್, ಪದ್ಮಾವತಿ ಹೀಗೆ ಹಲವರು ಟ್ರೇಲರ್ ಗೆ ಮೆಚ್ಚುಗೆ ಸೂಚಿಸಿದ್ದಾರೆ.

ಸೂಲಗಿತ್ತಿ ತಾಯವ್ವ

ಇದೊಂದು ಸಾಮಾಜಿಕ ಕಳಕಳಿಯ ಸಿನಿಮಾವಾಗಿದ್ದು, ಸೂಲಗಿತ್ತಿಯ ಕಾರ್ಯ, ಹೆಣ್ಣಿನ ಮಹತ್ವ ಎರಡನ್ನೂ ಈ ಸಿನಿಮಾ ಹೇಳುತ್ತದೆ. ಈ ಸಿನಿಮಾದಲ್ಲಿ ಒಂದು ಸಂದೇಶವಿದೆ. ತಾಯವ್ವ ಎಂಬ ಹೆಸರಿನಲ್ಲೇ ಒಂದು ಭಾವನಾತ್ಮಕ ಸೆಳೆತವಿದೆ. ಎಲ್ಲರೂ ನೋಡಬೇಕಾದ ಸಿನಿಮಾ ಇದಾಗಿದೆ.

ಗ್ರಾಮೀಣ ಸೊಗಡಿನ ಗಾನ: ಅನಂತ ಆರ್ಯನ್ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ತಾಯವ್ವ ಚಿತ್ರದ ಗೀತೆಗಳಿಗೆ ಸ್ವತಃ ಗೀತಾಪ್ರಿಯಾ ಅವರೇ ದನಿಯಾಗಿದ್ದಾರೆ. ಅಪ್ಪಟ ಕನ್ನಡದ ಗ್ರಾಮೀಣ ಸೊಗಡಿನ ಜನಪದ ಗೀತೆಗಳ ಗುಚ್ಛವನ್ನು ತಾಯವ್ವ ಚಿತ್ರದಲ್ಲಿ ಹೊಸರೂಪದಲ್ಲಿ ತೆರೆಮೇಲೆ ತರಲಾಗುತ್ತಿದೆ.

ದಾಖಲೆ ಬರೆದ ಚೌಕಿದಾರ್

ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶನದ ಚೌಕಿದಾರ್ ಸಿನಿಮಾ ಈಗಾಗಲೇ ತನ್ನ ಕಂಟೆಂಟ್ ಮೂಲಕ ಸದ್ದು ಮಾಡುತ್ತಿದೆ.ಈಗ ಈ ಚಿತ್ರದ ಆಡಿಯೋ ರೈಟ್ಸ್ ಉತ್ತಮ ಮೊತ್ತಕ್ಕೆ ಸೇಲ್ ಆಗಿದೆ. ಚೌಕಿದಾರ್ ಸಿನಿಮಾದ ಆಡಿಯೊ ಹಕ್ಕು ಲಹರಿ ಸಂಸ್ಥೆಯ ಭಾಗವಾಗಿರುವ ಎಂಆರ್ ಟಿ ಮ್ಯೂಸಿಕ್ ಸಂಸ್ಥೆ ಪಾಲಾಗಿದೆ. ದಾಖಲೆ ಮೊತ್ತಕ್ಕೆ ಚಿತ್ರತಂಡ ಆಡಿಯೊ ರೈಟ್ಸ್ ಮಾರಾಟ ಮಾಡಿದೆ. ಆ ಮೂಲಕ ಚೌಕಿದಾರ್ ಸಿನಿಮಾ ಬಿಡುಗಡೆಗೂ ಮೊದಲೇ ಹೊಸ ದಾಖಲೆ ಬರೆದಿದೆ.

ಪೃಥ್ವಿ ಅಂಬರ್ ನಾಯಕನಾಗಿ ನಟಿಸಿದ್ದು ವಿಭಿನ್ನ ಲುಕ್ ನಲ್ಲಿ ಕಂಗೊಳಿಸಿದ್ದಾರೆ. ದೊಡ್ಮನೆಯ ಮೊಮ್ಮಗಳು ಧನ್ಯಾ ರಾಮ್ ಕುಮಾರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

ಚೈತ್ರದ ಪ್ರೇಮಾಂಜಲಿ ಚಿತ್ರದ ನಾಯಕಿ ಶ್ವೇತಾ ಕೂಡ ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಈ ಮೂಲಕ ಮತ್ತೊಮ್ಮೆ ದೊಡ್ಡ ಪರದೆಗೆ ಕಾಲಿಟ್ಟಿದ್ದಾರೆ. ಡೈಲಾಗ್ ಕಿಂಗ್ ಸಾಯಿಕುಮಾರ್ ಕೂಡ ಈ ಸಿನಿಮಾದಲ್ಲಿದ್ದಾರೆ. ನಟಿ ಸುಧಾರಾಣಿ ಈ ಚಿತ್ರದಲ್ಲಿ ಪೊಲೀಸ್ ಆಫೀಸರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಚೌಕಿದಾರ್ ಹಾಡುಗಳಿಗೆ ಸಚಿನ್ ಬಸ್ರೂರು ಸಂಗೀತ ಸಂಯೋಜಿಸಿದ್ದು, ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಸಾಹಿತ್ಯ ಬರೆದಿದ್ದಾರೆ. ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡುತ್ತಿರುವ ಚೌಕಿದಾರ್ ಪ್ಯಾನ್ ಇಂಡಿಯಾ ಸಿನಿಮಾವಾಗಿ ಮೂಡಿಬರುತ್ತಿದೆ.

30-05-2025 ರಾಜ್ಯಾದ್ಯಂತ